ವಿತ್ತೀಯ ಕಾರ್ಯಕಲಾಪಗಳು

1990-91 ನೇ ಸಾಲಿನ ಅನುದಾನ ಬೇಡಿಕೆಗಳ ಮೇಲೆ ಚರ್ಚೆ

† ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) :– ಸನ್ಮಾನ್ಯ ಅಧ್ಯಕ್ಷರೆ ನಾನು ನಿನ್ನೆ ದಿವಸ ಮುಖ್ಯ ಮಂತ್ರಿಗಳ ಬೇಡಿಕೆಗಳ ವಿಚಾರದಲ್ಲಿ ವಿರೋಧ ಮಾಡಿ ಮಾತನಾಡುತ್ತಾ, ಏನು ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಸರ್ಕಾರ ಬಂದ ಮೇಲೆ ರಾಜ್ಯದ ಜನತೆಗೆ ಆಶ್ವಾಸನೆ ಕೊಟ್ಟಿದ್ದರು, ಇಲ್ಲಿ ಆಡಳಿತವನ್ನು ಸರಿ ಮಾಡುತ್ತೇವೆ ಮತ್ತು ಬೆಳೆದಿರತಕ್ಕ ಬ್ಯೂರೋಕ್ರಸಿಯನ್ನು ಸರಿಯಾದ ದಾರಿಯಲ್ಲಿ ಹೋಗಲಿಕ್ಕೆ ಕೆಲಸ ಮಾಡುತ್ತೇವೆಂದು ಹೇಳಿದ್ದರು. ಇದು ಸುಳ್ಳಾಗಿದೆ, ನಮಗೆಲ್ಲ ಇದರಿಂದ ನಿರಾಶೆಯಾಗಿದೆ ಮತ್ತು ಈ ಸರ್ಕಾರ ಆ ನಿಟ್ಟಿನಲ್ಲಿ ಹೆಜ್ಜೆ ಹಾಕತಕ್ಕ ಯಾವ ಕೆಲಸವನ್ನೂ ಮುಖ್ಯ ಮಂತ್ರಿಗಳು ಮಾಡಿಲ್ಲವೆಂದು ಹೇಳಬೇಕಾಗುತ್ತದೆ. 20 ಅಂಶದ ಕಾರ್ಯಕ್ರಮದ ವಿಚಾರ ಇರಲಿ ಅಥವಾ ಸರ್ಕಾರದ ವಿವಿಧ ಇಲಾಖೆಗಳು ಯಾವ ರೀತಿ ಕೆಲಸ ಮಾಡುತ್ತಿವೆ ಎಂಬುದನ್ನು ರೆವ್ಯೂ ಮಾಡತಕ್ಕದ್ದಾಗಲಿ, ಬೋರ್ಡ್‌ಗಳು ಮತ್ತು ಕಾರ್ಪೋರೇಷನ್‌ಗಳ ಫಂಕ್ಷನಿಂಗ್ ಅನ್ನು ರೆವ್ಯೂ ಮಾಡತಕ್ಕದ್ದು, ಜಿಲ್ಲಾ ಆಡಳಿತವನ್ನು ರೆವ್ಯೂ ಮಾಡತಕ್ಕದ್ದರಲ್ಲಿ ಸಾಮಾನ್ಯವಾಗಿ ಜನ ಈ ಸರ್ಕಾರ ಇದೆಯೋ ಇಲ್ಲವೋ, ಈ ಸರ್ಕಾರಕ್ಕೆ ಜೀವವೇ ಇಲ್ಲ, ಇದು ಸತ್ತಿರತಕ್ಕ ಸರ್ಕಾರ ಅನ್ನತಕ್ಕ ಭಾವನೆ ಸರ್ಕಾರದ ಬಗ್ಗೆ ಬಂದಿದೆ. ಈ ಸರ್ಕಾರ ಬಂದು ಆರು ತಿಂಗಳಾಗಿದೆ. ನಾನಾದರೂ ಅಂದುಕೊಂಡಿದ್ದೇನೆ, ಮಾನ್ಯ ಮುಖ್ಯ ಮಂತ್ರಿಗಳು ಇನ್ನಾದರೂ ಸಹ ನಿಷ್ಕ್ರಿಯಗೊಂಡಿರತಕ್ಕ ಆಡಳಿತನ್ನು ಸರಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತಾರೆ ಎಂದು. ಆದ್ದರಿಂದ...

ಶ್ರೀ ಎನ್. ಚಿಕ್ಕೇಗೌಡ:– ಸರ್ಕಾರ ಇದೆಯೋ ಇಲ್ಲವೋ, ಬದುಕಿದೆಯೋ ಸತ್ತಿದೆಯೋ ಹೇಳಿ ಎಂದು ಹೇಳಿದಿರಿ. ಕೇಂದ್ರದಲ್ಲಿ ಅಲ್ಲಾಡುತ್ತಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಅದು ಅಲ್ಲಾಡಿದರೆ ನಾನೇನು ಮಾಡುವುದಕ್ಕಾಗುತ್ತದೆ ? ನಾನು ಸುಮ್ಮನಿರಬೇಕೆ? ನಾನೇನು ಲೋಕಸಭೆ ಗೆದ್ದುಹೋಗಿದ್ದೇನಾ ? ಅದಕ್ಕೂ ಇದಕ್ಕೂ ಏನು ಸಂಬಂಧ? ನಿಮ್ಮ ನಾಯಕರೇ ಹೇಳಿದ್ದಾರೆ it is an internal party affair. ನೀವು ಇಲ್ಲಿ ಸತ್ತಿರಬೇಕಾ?

ಶ್ರೀ ಡಿ.ಬಿ. ಚಂದ್ರೇಗೌಡ:– ಸ್ವಾಮಿ, ಗೌಡರೆ, ತಮಗೆ ಕೃತಜ್ಞತೆ ಅರ್ಪಿಸಬೇಕು. ಕೇಂದ್ರದಲ್ಲಿ ಅಲ್ಲಾಡುತ್ತಿದೆ ಸರ್ಕಾರ ಎಂದು ಹೇಳಿದಿರಿ. ಅಂದರೆ ಇದೆ ಎಂಬುದನ್ನೆ ಒಪ್ಪಿಕೊಂಡಿರಿ. ನಾವು ಇಲ್ಲಿ ಇಲ್ಲ ಎಂದು ಹೇಳುತ್ತಿದ್ದೇವೆ.

ಶ್ರೀ ಕೆ.ಎಸ್ ಈಶ್ವರಪ್ಪ:– ಅಲ್ಲಿ ಅಲ್ಲಾಡುತ್ತಿರಬಹುದು ಸತ್ಯ. ಇಲ್ಲಿ ಸತ್ತು ಹೋಗಿರುವುದು ಸತ್ಯವೇ ಹಾಗಾದರೆ ?

ಒಬ್ಬ ಮಾನ್ಯ ಸದಸ್ಯರು:– ಅಧ್ಯಕ್ಷರೇ, ಚೌತಾಲಾ ಬಂದರೆ ವಾಪಸ್ ಬರಬೇಕು.

ಅಧ್ಯಕ್ಷರು:– ಸಿಂಧ್ಯಾ ಅವರೆ, ನಾನು ಇದರ ಬಗ್ಗೆ ರೂಲಿಂಗ್ ಕೊಡಲೇಬೇಕು. ಏಕೆಂದರೆ ಅಲ್ಲಾಡುತ್ತಿದೆ ಎಂದು ಒಬ್ಬರು ಹೇಳುತ್ತಿದ್ದಾರೆ. ಸತ್ತಿದೆ ಎಂದು ಒಬ್ಬರು ಹೇಳುತ್ತಿದ್ದಾರೆ. ಎರಡೂ ಜೀವಂತವಾಗಿದೆ ಎಂಬುದು ನನ್ನ ರೂಲಿಂಗ್.

ಶ್ರೀ ಪಿ.ಜಿ.ಆರ್ .ಸಿಂಧ್ಯ:- ತಾವು ರೂಲಿಂಗ್ ಕೊಟ್ಟಮೇಲೆ ನಾನೇನೂ ಮಾತನಾಡುವುದಕ್ಕಾಗುವುದಿಲ್ಲ. ಮಾನ್ಯ ವೀರೇಂದ್ರ ಪಾಟೀಲರು ಒಳ್ಳೆಯ ಆಡಳಿತಗಾರರು, ಆಡಳಿತದಲ್ಲಿ ಬಿಗಿ ಮಾಡಿ ಚುರುಕು ಮಾಡುತ್ತಾರೆ, ಆಡಳಿತದಲ್ಲಿ ಏನೋ ಒಂದು ಬದಲಾವಣೆ ಮಾಡುತ್ತಾರೆ ಎಂದು ನಿರೀಕ್ಷೆ ಮಾಡಿದ್ದೆವು. ಅವರು ಮಾಡಿರುವ ಸುಧಾರಣೆ ಬಗ್ಗೆ ಚಿಕ್ಕೇಗೌಡರರಿಗೆ ಸಮಾಧಾನವಾಗಿದ್ದರೆ ನಮ್ಮ ತಕರಾರಿಲ್ಲ. ಜನ ಹೇಳುತ್ತಾರೆ ಸ್ವಾಮಿ. ಪ್ರತಿಯೊಂದು ಕಡೆ ಸಾಮಾನ್ಯ ಜನರು ಈ ಸರ್ಕಾರದಲ್ಲಿ ಏನೂ ಬದಲಾವಣೆಯನ್ನು ಕಾಣುತ್ತಿಲ್ಲವಲ್ಲ ಎಂದು ಹೇಳುತ್ತಾರೆ.

MR. SPEAKER:- May I interrupt you? ನಿನ್ನೆ ಮುಗಿಸುವಾಗ ಹೇಳಿದಿರಿ ಮುಖ್ಯಮಂತ್ರಿಗಳದು ಮುಗಿಯಿತು. ನಾಳೆ ಇವರದು ಶುರು ಮಾಡುತ್ತೇನೆಂದು. Your speech should be directed now towards the Agriculture Minister, Forest Minister and Minister for Rural Development.

SRI P.G.R. SINDHYA:- You have been very kind enough towards me.

MR. SPEAKER:- I would like to be.

ಶ್ರೀ ಪಿ.ಜಿ.ಆರ್. ಸಿಂಧ್ಯ :- ಪ್ರಾರಂಭ ಮಾಡಬೇಕಾದರೆ ಎಲ್ಲಿ ನಿಲ್ಲಿಸಿದ್ದೆ ಎಂಬುದನ್ನು ಜ್ಞಾಪಕ ಮಾಡಿಕೊಳ್ಳಬೇಕಲ್ಲ ಅದಕ್ಕೋಸ್ಕರವಾಗಿ ಹೇಳುತ್ತಿದ್ದೆ.

ಶ್ರೀ ಬಿ. ಬಸವಲಿಂಗಪ್ಪ:- ಫಾರೆಸ್ಟ್ ಡಿಪಾರ್ಟ್‌ಮೆಂಟಿನಿಂದ ಪ್ರಾರಂಭ ಮಾಡುತ್ತೇನೆ ಎಂದು ಹೇಳಿದ್ದಿರಿ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಈಗ ಆರು ತಿಂಗಳು ಕಾಲಹರಣವಾಗಿದೆ. ಆಡಳಿತ ಸುಧಾರಣೆ ಮಾಡುವ ಕಡೆ ಈಗಲಾದರೂ ತಾವು ಗಮನವನ್ನು ಕೊಡಬೇಕೆಂದು ಒತ್ತಾಯ ಮಾಡುತ್ತೇವೆ. ಅರಣ್ಯ ಇಲಾಖೆ ಬಗ್ಗೆ ಮಾನ್ಯ ಮಂತ್ರಿಗಳಾದ ಬಸವಲಿಂಗಪ್ಪನವರು ಪತ್ರಿಕೆಗಳಲ್ಲಿ ಹೇಳಿದ್ದಾರೆ. ಇನ್ನು ಒಂದು ತಿಂಗಳೊಳಗೆ ಗಂಧದ ಕಳ್ಳಸಾಗಾಣಿಕೆಯನ್ನು ನಿಲ್ಲಿಸಿಬಿಡುತ್ತೇವೆ ಎಂದು ಹೇಳಿದ್ದಾರೆ.

ಶ್ರೀ ವಾಟಾಳ್ ನಾಗರಾಜ್:- ಗಂಧ ಇದ್ದರೆ! ಗಂಧದ ಮರ ಇದ್ದರೆ! ಗಂಧದ ಮರಗಳೇ ಇಲ್ಲ ಇನ್ನು ಸಾಗಾಣಿಕೆ ಏನು ನಿಲ್ಲಿಸುವುದು? ಗಂಧದ ಮರ ಇಲ್ಲ ಎಂದು ಗೊತ್ತಾದಮೇಲೆ ಈ ಮಾತನ್ನು ಅವರು ಹೇಳಿರುವುದು. ಇವರಿಗೆ ಗಂಧದ ಬುಡವೂ ಸಿಗುವುದಿಲ್ಲ, ಬೇರೂ ಸಿಗುವುದಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಈಗೇನಾಗಿದೆ. ಬಸವಲಿಂಗಪ್ಪನವರು ಬಹಳ ಅನುಭವಿ ರಾಜಕಾರಣಿಗಳು. ಇಂಥ ದೊಡ್ಡ ಇಲಾಖೆಯ ಜವಾಬ್ದಾರಿಯನ್ನು ಹೊತ್ತಿದ್ದಾರೆ. ಆದರೆ ಇಂಥ ಹೇಳಿಕೆಗಳನ್ನು ಕೊಡುವ ಚಟ ಏಕೆ ಇದೆಯೋ ನನಗೆ ಅರ್ಥವಾಗುತ್ತಿಲ್ಲ. ಕಳ್ಳಸಾಗಾಣಿಕೆ ನಿಲ್ಲಿಸತಕ್ಕದ್ದು ಬಹಳ ಕಷ್ಟದ ಕೆಲಸ ಎಂದು ನೀವೇ ಹೇಳಿದ್ದೀರಿ. ವೀರಪ್ಪನನ್ನು ಎಂಟು ದಿವಸದೊಳಗೆ ಅರೆಸ್ಟ್ ಮಾಡುವುದಕ್ಕೆ ಅಧಿಕಾರಿಗಳಿಗೆ ಹೇಳಿದ್ದೇವೆ ಎಂದು ಹೇಳಿದ್ದಿರಿ. ಎಲ್ಲಾಯಿತು ನಿಮ್ಮ ಕೈಯಲ್ಲಿ ದಯವಿಟ್ಟು ಹೇಳಿ?

ಶ್ರೀ ಬಿ. ಬಸವಲಿಂಗಪ್ಪ:- ನಾನು ಹೇಳಿದ್ದುದು ಫಾರೆಸ್ಟ್ ಅಧಿಕಾರಿಗಳು ಯಾರಿದ್ದಾರೆ ಅವರಿಗೆ ಅವನ ಚಲನವಲನಗಳು ಗೊತ್ತಿರುತ್ತವೆ, ಆದ್ದರಿಂದ ೮ ದಿವಸದೊಳಗೆ ಹಿಡಿದುಕೊಡಿ ಎಂದು ಹೇಳಿದ್ದೆ. ಆದರೂ ಹಿಡಿದುಕೊಡಲಿಲ್ಲ. ಮುಂದಿನ ಕೆಲಸ ಮಾಡಿದ್ದೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಅವರು ಮಾಡುತ್ತಲೇ ಇರುತ್ತಾರೆ. ಮಾನ್ಯ ಅಧ್ಯಕ್ಷರೆ, ನಾನಾದರೂ ಅರಣ್ಯ ಇಲಾಖೆ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಬಹಳ ಮುಖ್ಯವಾಗಿ ಆನೆಗಳ ಹಾವಳಿಯಿಂದ ರೈತರಿಗೆ ತೊಂದರೆಯಾಗುತ್ತದೆ. ಆನೆಗಳು ರೈತರು ಬೆಳೆದ ಬೆಳೆಗಳನ್ನು, ಮಾವಿನ ಮರಗಳನ್ನು, ತೆಂಗಿನ ಮರಗಳನ್ನು ಹಾಳು ಮಾಡಿ ಬಹಳ ರೈತರಿಗೆ ಅನಾನುಕೂಲವಾಗುತ್ತಿದೆ. ಎಲ್ಲಾ ಜಿಲ್ಲೆಗಳಲ್ಲೂ ಅದು ಆಗುತ್ತಿದೆ. ಈ ಬಗ್ಗೆ ಅನೇಕ ಸದಸ್ಯರು ಹೇಳಿದ್ದಾರೆ.

ಈ ರೀತಿ ಆದಾಗ ಸರ್ಕಾರದಿಂದ ಪರಿಹಾರ ಕೊಡತಕ್ಕಂಥದ್ದು ಏನು ಇದೆ, ಬಹಳ ಕಡಿಮೆ ದುಡ್ಡು ಕೊಡುತ್ತಾರೆ. ಅವರು ಕೊಡತಕ್ಕಂತಹದ್ದು 4 ತೆಂಗಿನ ಮರಗಳನ್ನು ಹಾಳು ಮಾಡಿದರೆ, ಒಂದೊಂದು ಮರಕ್ಕೆ 200 ರೂಪಾಯಿಗಳ ಪ್ರಕಾರ 800 ರೂ.ಗಳನ್ನು ಕೊಡುತ್ತಾರೆ. ಈ ಹಣದಿಂದ ಆ ಮರವನ್ನು ಮತ್ತೆ ಬೆಳೆಸುವುದಕ್ಕಾಗುವುದಿಲ್ಲ. ದಯವಿಟ್ಟು ಆನೆ ಹಾವಳಿಯಿಂದ ರೈತರಿಗೆ ಆಗತಕ್ಕ ತೊಂದರೆಗೆ ಕೊಡತಕ್ಕ ಪರಿಹಾರದ ಹಣ ಏನು ಇದೆ, ಅದನ್ನು ಜಾಸ್ತಿ ಮಾಡುವುದಕ್ಕೆ ತಾವು ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡುತ್ತಿದ್ದೇನೆ.

ಸಾಮಾಜಿಕ ಅರಣ್ಯದ ಬಗ್ಗೆ ಏನು ಹಣ ದುರುಪಯೋಗವಾಗುತ್ತಿದೆ, ವಲಯ ಅರಣ್ಯಾಧಿಕಾರಿಗಳು ಏನು ಅವ್ಯವಹಾರ ನಡೆಸುತ್ತಿದ್ದಾರೆ, ಅದನ್ನು ತಡೆಗಟ್ಟುವುದಕ್ಕೆ ಬೇರೆ ರೀತಿಯ

ಕ್ರಮ ತೆಗೆದುಕೊಳ್ಳುತ್ತೇವೆಂದು, ನೇರವಾಗಿ ಪೇಮೆಂಟ್ ಮಾಡುವುದನ್ನು ನಿಲ್ಲಿಸುತ್ತೇವೆಂದು ನೀವೇ ಆಶ್ವಾಸನೆ ಕೊಟ್ಟಿದ್ದೀರಿ. ಅದನ್ನು ಈ ವರ್ಷದಲ್ಲೇ ಮಾಡುತ್ತೇನೆಂದು ಹೇಳಿದ್ದೀರಿ. ನಮ್ಮ ರಾಜ್ಯದಲ್ಲಿರತಕ್ಕ ಗ್ರಾನೈಟ್ ಕಲ್ಲಿನ ಸಾಗಾಣಿಕೆಯ ಬಗ್ಗೆ ಬಹಳ ಮುಖ್ಯವಾಗಿ ಈ ಸದನದಲ್ಲಿ ಬಹಳ ಚರ್ಚೆಯಾಗಿದೆ. ಆಡಳಿತ ಪಕ್ಷದ ಸದಸ್ಯರು ಮಾತನಾಡುವಾಗಲೂ ಹೇಳಿದ್ದಾರೆ. ಅದೇ ರೀತಿ ವಿರೋಧ ಪಕ್ಷದವರೂ ಸಹ ಹೇಳಿದ್ದಾರೆ. ಅದೇನೆಂದರೆ ಈ ಬಗ್ಗೆ ನೀವು ಏನು ನೋಟಿಫಿಕೇಷನ್ ಹೊರಡಿಸಿದ್ದೀರಿ ಆ ನೋಟಿಫಿಕೇಷನ್ ಅನ್ನು ರದ್ದು ಮಾಡಿ. ತಕ್ಷಣವೇ ನೀವು ಅದನ್ನು ರದ್ದು ಮಾಡಿ ಒಂದು ಸದನದ ಸಮಿತಿಯನ್ನು ರಚನೆ ಮಾಡಿ ಇದರೊಳಗೆ ಏನು ಇದೆ ಎಂಬುದನ್ನು ನಾವು ನೋಡುತ್ತೇವೆ ಎಂದು ಹೇಳಿದರೆ, ಇದರ ಬಗ್ಗೆ ಸಂಬಂಧಪಟ್ಟ ಮಂತ್ರಿಗಳು ಉತ್ತರ ಕೊಡುತ್ತಿಲ್ಲ. ಅವರು ವಿದೇಶಕ್ಕೆ ಹೋಗಿದ್ದಾರೆ. ಹಣಕಾಸಿನ ಮಂತ್ರಿಗಳೂ ಇದರ ಬಗ್ಗೆ ಉತ್ತರವನ್ನು ಕೊಡುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಿದರೆ ಅವರೂ ಇದರ ಬಗ್ಗೆ ಉತ್ತರವನ್ನು ಕೊಡುವುದಿಲ್ಲ. ಜನ ಏನು ಮಾತನಾಡಿಕೊಳ್ಳುತ್ತಿದ್ದಾರೆಂದರೆ, ಈ ಗ್ರಾನೈಟ್ ವ್ಯವಹಾರ ಏನು ನಡೆದಿದೆ, ಇದರಲ್ಲಿ ಅವ್ಯವಹಾರ ನಡೆದಿದೆ ಎನ್ನತಕ್ಕ ಮಾತನ್ನು ಹೇಳುತ್ತಿದ್ದಾರೆ. ಇವತ್ತು ನಮ್ಮ ರಾಜ್ಯದ ಸಂಪತ್ತು ಕೊಳ್ಳೆ ಹೋದ ಮೇಲೆ ನಾವು ಮಾಡ ತಕ್ಕಂತದ್ದು ಏನು? ಈ ಸದನದಲ್ಲಿ ತಾವೇ ಅಪ್ಪಣೆ ಕೊಟ್ಟು ಸುದೀರ್ಘವಾಗಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ. ಆದರೆ ಇದು ಈ ಸರ್ಕಾರಕ್ಕೆ, ಅವರ ಕಿವಿಗೂ ಅದು ಬೀಳುತ್ತಿಲ್ಲ. ಏಕೆ ಇದನ್ನು ನಿಲ್ಲಿಸಬಾರದು? ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ ಮಾನ್ಯ ಅರಣ್ಯ ಸಚಿವರು ತಾವು ಧೈರ್ಯ ಮಾಡಬೇಕು. ಅರಣ್ಯ ಇಲಾಖೆಗೆ ಸಂಬಂಧಪಟ್ಟ ಜಮೀನಿನಲ್ಲಿ ಇವತ್ತು ಬಹಳಷ್ಟು ಕಳ್ಳಸಾಗಾಣಿಕೆಯಾಗುತ್ತಿದೆ. ಅರಣ್ಯಕ್ಕೆ ಸಂಬಂಧಪಟ್ಟ ಜಮೀನಿನಲ್ಲಿ ಬಹಳಷ್ಟು ಕಲ್ಲಿನ ಕಳ್ಳ ಸಾಗಾಣಿಕೆಯಾಗುತ್ತಿದೆ. ತಾವು ದಯಮಾಡಿ ಫಾರೆಸ್ಟ್ ಕನ್ಸರ್ವೇಷನ್ ಆಕ್ಟ್ 1989 ರ ಪ್ರಕಾರ ಫಾರೆಸ್ಟ್‌ನಲ್ಲಿರತಕ್ಕ ಆಸ್ತಿಗೆಲ್ಲಾ ನೀವೇ ಒಡೆಯರಾಗಿದ್ದೀರಿ. ಅದನ್ನು ರಕ್ಷಣೆ ಮಾಡತಕ್ಕಂಥದ್ದು ನಿಮ್ಮ ಕೆಲಸ. ನಾವು ಇದ್ದಾಗಲೂ ಇದರ ಬಗ್ಗೆ ಸ್ಪಷ್ಟವಾದ ನಿಲುವನ್ನು ತೆಗೆದುಕೊಂಡು ಇದನ್ನು ರಾಷ್ಟ್ರೀಕರಣ ಮಾಡಿದ್ದೆವು ತಾವು ಆ ನೀತಿಯನ್ನು ಮುಂದು ವರಿಸಿಕೊಂಡು ಹೋಗಿದ್ದರೆ ಈ ಪರಿಸ್ಥಿತಿಯಾಗುತ್ತಿರಲಿಲ್ಲ. ಅದನ್ನು ಸಡಿಲ ಮಾಡಬೇಡವಾಗಿತ್ತು. ನೀವು ಸಡಿಲ ಮಾಡಿಬಿಟ್ಟಿದ್ದೀರಿ. ಏನಾದರೂ ಹೇಳಿ ಸಮಂಜಸವಾದ ಉತ್ತರ ಕೊಡಿ ಎಂದು ಕೇಳಿದರೆ, ಇವರು 180 ಜನ ಇದ್ದಾರೆ, ಇದನ್ನು ನೀವು ಮಾಡಿದ್ದೀರಿ ಎಂದು ಹೇಳುತ್ತಾರೆ. ಲಾಭ ಮಾಡಿ ಕೊಳ್ಳುತ್ತಿದ್ದಾರೆಂಬುದಕ್ಕೆ ನೀವು ಪುಷ್ಟೀಕರಣ ಕೊಡುತ್ತಿದ್ದೀರಿ. ತಾವು ಏನು ಅರಣ್ಯ ಇಲಾಖೆಯ ಮಂತ್ರಿಗಳಾಗಿದ್ದೀರಿ. ರಾಜ್ಯದ ಅರಣ್ಯ ಪ್ರದೇಶಗಳಲ್ಲಿ ಅದು ಮೈಸೂರು ಜಿಲ್ಲೆ ಇರಬಹುದು, ಬೆಂಗಳೂರು ಜಿಲ್ಲೆ ಇರಬಹುದು, ಬಿಜಾಪುರ ಜಿಲ್ಲೆ ಇರಬಹುದು. ಎಲ್ಲಾ ಕಡೆ ಏನು ಕಲ್ಲಿನ ಕಳ್ಳಸಾಗಾಣಿಕೆಯಾಗುತ್ತಿದೆ ಅದನ್ನು ತಪ್ಪಿಸುವುದಕ್ಕೆ ಕಾನೂನಿನಲ್ಲೇ ಅವಕಾಶ ಇದೆ. ಆದ್ದರಿಂದ ತಕ್ಷಣ ಇದನ್ನು ನಿಲ್ಲಿಸುವ ಬಗ್ಗೆ ನೀವು ಪ್ರಾಮಾಣಿಕ ಪ್ರಯತ್ನ ಮಾಡಿದರೆ ಆಗ ನಾನಾದರೂ ನಿಮ್ಮನ್ನು ಮೆಚ್ಚುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ಕಲ್ಲು ಸಾಗಾಣಿಕೆಯನ್ನು ತಡೆಗಟ್ಟುವ ಬಗ್ಗೆ ಮಾನ್ಯ ಸಿಂಧ್ಯಾರವರು ಬಹಳ ಗುರುತರವಾದ ವಿಚಾರವನ್ನು ತಮಗೆ ತಿಳಿಸಿದ್ದಾರೆ. ತಾವು ಮತ್ತು ಕಂದಾಯ ಸಚಿವರು ಇಬ್ಬರು ಮನಸ್ಸು ಮಾಡಿದರೆ ಈ ರಾಜ್ಯದಿಂದ ಹೋಗತಕ್ಕ ಗ್ರಾನೈಟ್ ಲೂಟಿಯನ್ನು ತಪ್ಪಿಸಬಹುದು. ಇಬ್ಬರಲ್ಲೂ ಪ್ರಮುಖವಾಗಿ ಅಂದರೆ 50 ಪರ್ಸೆಂಟ್ ನಡೆಯುತಕ್ಕಂತಹದ್ದು ಅರಣ್ಯ ಪ್ರದೇಶದಲ್ಲಿ ಇನ್ನುಳಿದ 50 ಪರ್ಸೆಂಟ್ ಕಂದಾಯ ಭೂಮಿಯಲ್ಲಿ. ನೀವಿಬ್ಬರೂ ಪ್ರಯತ್ನ ಪಟ್ಟರೆ 80 ಪರ್ಸೆಂಟ್ ಗ್ರಾನೈಟ್ ಹೋಗುವುದು ನಿಲ್ಲುತ್ತದೆ. ನಾನು ಸುಧೀರ್ಘವಾಗಿ ಅನೇಕ ವಿಚಾರಗಳನ್ನು ಹೇಳಿದ್ದೇನೆ. 20 ಕೋಟಿ ಉತ್ಪಾದನೆಯಾಗುತ್ತಿದೆ ಅಂತ ಹೇಳುತ್ತಾರೆ. 200 ಕೋಟಿಗಿಂತಲೂ ಉತ್ಪಾದನೆ ಜಾಸ್ತಿ ಬರುತ್ತದೆ. ಅಂತದ್ದರಲ್ಲಿ 20 ಕೋಟಿಗಾಗಿ ಅವರಿಗೆ ಪರ್ಮಿಷನ್ ಕೊಟ್ಟಿರುವುದರಿಂದ ನಿಮ್ಮ ಮೇಲೆ ಅನುಮಾನಾಸ್ಪದವಾಗಿದೆ. ಸರ್ಕಾರದ ಭ್ರಷ್ಟಾಚಾರ ಇದರಲ್ಲಿ ಕೈ ಹಾಕಿದೆ ಎಂಬ ನಂಬಿಕೆ ನಮಗೆ ಬರುತ್ತದೆ. ಏಕೆಂದರೆ ಇದಕ್ಕಿಂತಲೂ

ಜಾಸ್ತಿ ಹಣ ಬರಬೇಕಾದರೆ, ಈಗ ನೀವು ಏನು ಆಜ್ಞೆಯನ್ನು ಹೊರಡಿಸಿದ್ದೀರಿ, ಅದನ್ನು ರದ್ದು ಮಾಡಿ. ಅದನ್ನು ತಕ್ಷಣವೇ ರದ್ದು ಮಾಡಿ ಎಂದು ಹೇಳಿದರೆ, ನಮ್ಮ ಹಣಕಾಸಿನ ಸಚಿವರು ಹಾಗೂ ಗಣಿ ಮತ್ತು ಭೂ ವಿಜ್ಞಾನ ಸಚಿವರು ಏನು ಉತ್ತರ ಹೇಳುತ್ತಿದ್ದಾರೆಂದರೆ...

ನಮಗೆ ಗೊತ್ತಿರುವ ಪ್ರಕಾರ ಈ ಬಾಬಿನಲ್ಲಿ ಪ್ರತಿ ವರ್ಷ 100 ರಿಂದ 200 ಕೋಟಿ ರೂಪಾಯಿ ಉತ್ಪತ್ತಿ ಇದೆ ಎಂದು ನಾವು ಬಹಿರಂಗವಾಗಿ ಹೇಳುತ್ತಿದ್ದೇವೆ. ಬರೀ 20 ಕೋಟಿ ರಾಜ ಧನಕ್ಕೆ ಇದನ್ನು ಬಿಡುವುದಾದರೆ ಸರ್ಕಾರದಲ್ಲಿ ಏನೋ ಮಧ್ಯವರ್ತಿ ವ್ಯವಹಾರ ನಡೆದಿದೆ ಎಂದು ಗಮನಕ್ಕೆ ಬರುತ್ತದೆ. ದಯಮಾಡಿ ತಾವೂ ಮತ್ತು ಕಂದಾಯ ಸಚಿವರು ಮನಸ್ಸು ಮಾಡಿದರೆ ಈ ನಿಸರ್ಗ ಸಂಪತ್ತನ್ನು ಉಳಿಸಬಹುದು.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ಅಧ್ಯಕ್ಷರೇ, ಮಾನ್ಯ ವಾಟಾಳ್ ನಾಗರಾಜ್ ಅವರು 100 ಕೋಟಿ ರೂಪಾಯಿ ಕೊಡಿಸುತ್ತೇವೆಂದು ಹೇಳಿದರು. ಇದನ್ನು ಸರ್ಕಾರ ಏಕೆ ಒಪ್ಪುತ್ತಾ ಇಲ್ಲ. ಕೊನೆ ಪಕ್ಷ ನೋಟಿಫಿಕೇಷನ್ ಅನ್ನು ಹೊರಡಿಸಿದ್ದೀರಿ ಅದನ್ನಾದರೂ ತಡೆಗಟ್ಟಿ. ರೆವಿನ್ಯೂ ಮಂತ್ರಿಗಳಿಗಾದರೂ ಇದನ್ನು ಮಾಡುವುದಕ್ಕೆ ಇಚ್ಛೆ ಇದೆಯೆಂದುಕೊಂಡಿದ್ದೇನೆ. ತಾವು ಕನಕಪುರಕ್ಕೆ 17ನೇ ತಾರೀಖು ಬರುವುದು ಇತ್ತು. ಆದರೆ ಇನ್ನೊಂದು ಸಾರಿ ತಾವು ಬರುವವರಿದ್ದೀರಿ. ತಾವು ಅಲ್ಲಿಗೆ ಬಂದಾಗ ನೋಡಿ. ಅಲ್ಲಿರತಕ್ಕ ರೈತರ ಪಾಡನ್ನು ನೋಡಿ ನಿಮಗೇ ಅನಿಸುತ್ತದೆ. ಲೆಕ್ಕಾಚಾರದಲ್ಲಿ ಅವರು ಮಾನ್ಯ ಮೊಯ್ಲಿಯವರು ಅದೇನೋ 14 ಅಥವಾ 17 ಜನರ ಹೆಸರನ್ನು ಕೊಟ್ಟು ಇಂತಹವರಿಗೆ ಅಧಿಕೃತವಾಗಿ ಕ್ವಾರಿಯನ್ನು ಕೊಟ್ಟಿದ್ದೇವೆಂದು ಹೇಳಿದರು. ಆದರೆ ಇವತ್ತು 100 ರಿಂದ 150 ಕಡೆ ಕ್ವಾರಿ ನಡೆಯುತ್ತಿದೆ. ಇಷ್ಟು ದಿವಸ ಕಾಲ ಪವಿತ್ರವಾದ ಈ ಸದನದ ಸಮಯದಲ್ಲಿ ಚರ್ಚೆ ಮಾಡಿದ್ದೇವೆ, ಆಡಳಿತ ಮತ್ತು ವಿರೋಧ ಪಕ್ಷದ ಎಲ್ಲಾ ಸದಸ್ಯರೂ ಹೇಳಿದ್ದಾರೆ. ಸರ್ಕಾರ ಇದರ ಬಗ್ಗೆ ಏಕೆ ಕ್ರಮ ತೆಗೆದುಕೊಂಡಿಲ್ಲ? ಏನು ಆಸಕ್ತಿ ಇದರ ಬಗ್ಗೆ ಸರ್ಕಾರದಲ್ಲಿ ಇದೆ? ತಾವು ಇಬ್ಬರೂ ಸಮರ್ಥ ಇರುವ ಮಂತ್ರಿಗಳಿದ್ದೀರಿ. ತಮ್ಮ ಕಾಲದಲ್ಲಿ ಏನು ರೈತ ವಿರೋಧಿ ಕೆಲಸ, ರಾಜ್ಯದ ಸಂಪತ್ತು ಕೊಳ್ಳೆ ಹೋಗುವ ಕೆಲಸ ನಡೆಯುತ್ತಿದೆ ಅದನ್ನು ನಿಲ್ಲಿಸಬೇಕು. ಇದರಲ್ಲಿ ಬಹಳ ಲಾಬಿಗಳು ಕೆಲಸ ಮಾಡುತ್ತಿವೆ. ಇದರ ವಿರುದ್ಧ ಸರ್ಕಾರ ಇನ್ನು 8-10 ದಿವಸಗಳಲ್ಲಿ ಕ್ರಮ ತೆಗೆದುಕೊಳ್ಳದಿದ್ದರೆ ಏನೂ ಉಪಯೋಗ ಆಗುವುದಿಲ್ಲ. ಈಗಾಗಲೇ ನೋಟಿಫಿಕೇಷನ್ ಆಗಿದ್ದು ಬೇರೆಯವರಿಗೆ ಕ್ವಾರಿ ಕೊಡಲಾಗಿದೆ. ಆಮೇಲೆ ಕ್ರಮ ತೆಗೆದುಕೊಂಡರೆ ಅವರು ಹೈಕೋರ್ಟಿಗೆ ಹೋಗುತ್ತಾರೆ. ಅವರು ಅದರಲ್ಲಿ ನಿಸ್ಸೀಮರಿದ್ದಾರೆ.

ಶ್ರೀ ವಾಟಾಳ್ ನಾಗರಾಜ್:- ಇವತ್ತು ಆ ಜನ ಬೀದಿಗಳಲ್ಲಿ ಕೂಗಾಡುತ್ತಿದ್ದಾರೆ. ಈ ಶಾಸಕರು ಶಾಸನಸಭೆಯನ್ನು ನಮ್ಮ ಮೇಲೆ ಸುಮ್ಮನೆ ಕೂಗಾಡಿದರು, ಸರ್ಕಾರ ನಮ್ಮ ಪರ ಇದೆ, ನಾವು ಹೇಳಿದಹಾಗೆ ಕೇಳುತ್ತದೆಂದು ಈ 27 ಜನ ಅಕ್ರಮ ಗುತ್ತೇದಾರರು ಏನಿದ್ದಾರೆ ಅವರು ಬೀದಿ ಬೀದಿಗಳಲ್ಲಿ ನಮಗೆ ಅಗೌರವವಾದ ರೀತಿಯಲ್ಲಿ ಮಾತನಾಡುತ್ತಿದ್ದಾರೆ. ಅಸೆಂಬ್ಲಿಯಲ್ಲಿ ಕುಳಿತು ಏನು ಮಾಡಿದ್ದೀರಿ, ಸರ್ಕಾರ ನಮ್ಮ ಜೊತೆ ಇದೆ ಎನ್ನುವ ಮಾತನ್ನು ಅವರು ಬೀದಿಬೀದಿಗಳಲ್ಲಿ ಮಾತನಾಡುತ್ತಿದ್ದಾರೆ.

ಶ್ರೀ ಬಿ. ಬಸವಲಿಂಗಪ್ಪ:- ಮಾನ್ಯ ವಾಟಾಳ್ ನಾಗರಾಜ್ ಅವರು ಎತ್ತಿರುವ ಪ್ರಶ್ನೆಗೆ ಈಗಲೇ ಉತ್ತರ ಕೊಡುತ್ತೇನೆ. ಕನ್‌ಸರ್ವೇಷನ್ ಆಕ್ಟ್‌ನ್ನು ನಾನು ಓದಿಲ್ಲ ಎನ್ನುವ ಭಾವನೆ ಇಟ್ಟುಕೊಂಡು ಅವರು ಹೇಳಿದರು. ಅದರಲ್ಲಿನ ಸೆಕ್ಷನ್ 2ನ್ನು ಸಹಾ ನಾನು ಓದಿದ್ದೇನೆ. ಮಾನ್ಯ ವಾಟಾಳ್ ನಾಗರಾಜ್ ಅವರು ಈ ವಿಷಯದ ಬಗ್ಗೆ ಬಹಳ ವರ್ಷಗಳಿಂದ ಕಾದಾಡುತ್ತಿದ್ದಾರೆ. ಚಾಮರಾಜನಗರ, ಕೊಳ್ಳೇಗಾಲ ತಾಲ್ಲೂಕುಗಳಲ್ಲಿ ಏನು ಕೊಳ್ಳೆ ಇದೆ ಅದರ ಬಗ್ಗೆ ಮಾನ್ಯ ಸದಸ್ಯರು ವಿಧವಿಧವಾಗಿ ಬೇರೆ ಬೇರೆ ಚಾವಡಿಗಳಿಂದ ಮಾತನಾಡುತ್ತಿದ್ದಾರೆ. ನಾನು ಅದನ್ನು ಗಮನದಲ್ಲಿ ಇಟ್ಟುಕೊಂಡಿದ್ದೇನೆ. ಅದನ್ನು ನಿಲ್ಲಿಸಬೇಕು ಎಂದು ನಾನು ಆಗಲೇ ಹೇಳಿದ್ದೇನೆ. ಕನ್‌ಸರ್ವೇಷನ್ ಆಕ್ಟ್ ಪ್ರಕಾರ ನಾನ್ ಫಾರೆಸ್ಟ್ ಆಕ್ಟಿವಿಟಿ ಏನು ಇದೆ ಅದು ಯಾವ ಫಾರೆಸ್ಟ್‌ನಲ್ಲೂ ನಡೆಯಬಾರದೆಂದು ಪ್ರತಿಬಂಧಕ ಮಾಡಿದ್ದೇನೆ. ಇದು ಕೇಂದ್ರ ಸರ್ಕಾರದ ಪರವಾನಿಗೆಯೇ ವಿನಃ

ನಾವು ಇದಕ್ಕೆ ಕೊಡತಕ್ಕದ್ದು ಸರಿಯಲ್ಲ. ಈಗ ನಡೆಯುತಕ್ಕದ್ದು ಏನು ಇದೆ ಇದು ಬಹಳ ವರ್ಷಗಳಿಂದ, ಮಾನ್ಯ ಸಿಂಧ್ಯ ಅವರು ಮಂತ್ರಿಗಳಾಗಿದ್ದಾಗಿನಿಂದ ಇದೆ. ಹೋದ ಸರ್ಕಾರಗಳಂತೂ ಉತ್ತೇಜನ ಕೊಟ್ಟು ಪ್ರೋತ್ಸಾಹ ಕೊಟ್ಟು ಬಂದಿದ್ದಾವೆ. ಇದನ್ನು ನಿಲ್ಲಿಸದೆ ಪುನಃ ನಡೆಯುತ್ತಾ ಇವೆ. ಇನ್ನು ಒಂದು, ಎರಡು ತಿಂಗಳವರೆಗೆ ನಡೆಯುತ್ತವೆ, ಆಮೇಲೆ ನೋಡೋಣ. ಅವರು ಏನಾದರೂ ಕೇಂದ್ರ ಸರ್ಕಾರದ ಪರವಾನಿಗೆ ತಂದುಕೊಂಡು ನಡೆಸಿದರೋ, ನಡೆಸಿದರು. ಇಲ್ಲದಿದ್ದರೆ ನಾವು ಹೇಳುತ್ತಿದ್ದೇವೆ. ಇದರ ಬಗ್ಗೆ ನಾವು ಕಟ್ಟುನಿಟ್ಟಿನ ನಿಲುವು ತೆಗೆದುಕೊಂಡಿದ್ದೇವೆ. ಅದರ ಬಗ್ಗೆ ಸಂಶಯ ಬೇಕಾಗಿಲ್ಲ. 27 ಅಥವಾ 28 ಜನರು ನನ್ನ ಹತ್ತಿರ ಬಂದು ರೆಪ್ರೆಸೆಂಟೇಷನ್ ಕೊಟ್ಟರು. ಕೊಟ್ಟರೂ ಅವರ ಮುಖ ನಾನು ನೋಡಿಲ್ಲ. ರಾತ್ರಿ ನನ್ನ ಮನೆಗೆ ಬಂದರು. ನನ್ನ ಹತ್ತಿರ ಬರಕೂಡದು ಎಂದದಕ್ಕೆ ಸೆಕ್ರೆಟರಿ ಹತ್ತಿರ ಹೋದರು. ಬರುತ್ತಾರೆ ಪಾಪ. ವಾಡಿಕೆ ನೋಡಿ, ಪದ್ಧತಿ ಇದೆ. ಐದಾರು ವರ್ಷಗಳ ಪದ್ಧತಿ ಇದೆ. ಅದರ ಪ್ರಕಾರ ಅವರು ಬರುತ್ತಾರೆ. ವಾಡಿಕೆ ಪ್ರಕಾರ ಬರುತ್ತಾರೆ. ಅದು ತಪ್ಪಲ್ಲ. ನಾನು ಬೇಡ ಎಂದು ಹೇಳಿದರೆ ಬರುವುದಿಲ್ಲ. ಬಾ ಎಂದರೆ ಬರುತ್ತಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ಬಸವಲಿಂಗಪ್ಪನವರು ಬಹಳ ಸಹಾಯ ಮಾಡಿದ್ದಾರೆ. ನಾನು ಅದನ್ನೇ ಹೇಳುತ್ತಿದ್ದೇನೆ. Precisely it is that what we are demanding ನಮ್ಮ ರಾಷ್ಟ್ರೀಕರಣ ನೀತಿಗಳಲ್ಲಿ ಗಣಿ ಮತ್ತು ಭೂವಿಜ್ಞಾನ ಇಲಾಖೆಗೆ ಸೇರಿದ ಕಲ್ಲನ್ನು ಸಾಗಾಣಿಕೆ ಮಾಡಲಿಕ್ಕೆ, ನೀತಿಯನ್ನು ಸಡಿಲ ಮಾಡಲಿಕ್ಕೆ ನಾವು ಪ್ರಯತ್ನ ಮಾಡಿರಲಿಲ್ಲ. ಆದರೆ ಕಲ್ಲು ಕಳ್ಳಸಾಗಾಣಿಕೆ ನಿಂತಿತ್ತು ಎಂದು ನಾನು ಹೇಳುವುದಿಲ್ಲ, ಅದು ನಡೆಯುತ್ತಿತ್ತು ಎಂದು ಹೇಳುವುದಿಲ್ಲ. ತಾವು ಏನು ಮಾಡಿದ್ದೀರಿ ಅಂದರೆ ನೀತಿಯನ್ನು ಸಡಿಲಮಾಡಿ ಹೊಸ ನೀತಿಯನ್ನು ಮಾಡಿದ್ದೀರಿ. ಆರು ವರ್ಷಗಳಿಂದ ಮನೆಗಳಿಗೆ ಬರುತ್ತಿದ್ದರು ಎಂದು ತಾವು ಹೇಳಿದ್ದೀರಿ. ಹಾಗಾದರೆ ನೋಟಿಫಿಕೇಶನ್ ಮಾಡಬೇಕಾದರೆ ನಿಮ್ಮ ಹತ್ತಿರ ಎಷ್ಟು ಜನ ಬಂದಿದ್ದರು?

ಶ್ರೀ ಬಿ. ಬಸವಲಿಂಗಪ್ಪ:- ಮಾನ್ಯ ಅಧ್ಯಕ್ಷರೆ, ಮಾನ್ಯ ಸಿಂಧ್ಯಾರವರ ಬಗ್ಗೆ ನನ್ನ ದೃಷ್ಟಿಯಲ್ಲಿ ಗೌರವ ಸ್ಥಾನವಿದೆ. ಸಮಸ್ಯೆಗಳ ಬಗ್ಗೆ ನಿಮಗೆ ಕಮಿಟ್‌ಮೆಂಟ್ ಇದೆ. ಇದರಿಂದ ನನಗಂತೂ ಬಹಳ ಮೆಚ್ಚಿಗೆ. ನೀವು ನೋಟಿಫಿಕೇಶನ್ ಮಾಡಿದ್ದೀರಿ ಅಂದರೆ ಕಂದಾಯ ಭೂಮಿಯನ್ನು ನೋಟಿಫಿಕೇಶನ್ ಮಾಡಲಾಗಿದೆ. ಫಾರೆಸ್ಟ್ ಲ್ಯಾಂಡ್‌ಗೂ ಅದಕ್ಕೂ ಸಂಬಂಧವಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ನಾನು ಅದನ್ನು ಹೇಳುತ್ತಿರುವುದು. ಸರ್ಕಾರ ಅಂದರೆ ರೆವಿನ್ಯೂ ಇಲಾಖೆ, ಫಾರೆಸ್ಟ್ ಇಲಾಖೆ, ಚೀಫ್ ಮಿನಿಸ್ಟರ್ ಎಲ್ಲಾ ಸೇರಿದರೆ ಸರ್ಕಾರ. ಫಾರೆಸ್ಟ್ ಲ್ಯಾಂಡ್ ಡಿನೋಟಿಫಿಕೇಶನ್ ಹೊಸ ನೀತಿಯನ್ನು ಮಾಡಿದೆಯೆಂದು ನಾನು ಹೇಳುತ್ತಿಲ್ಲ. ಇಡೀ ಸರ್ಕಾರ ನೋಟಿಫಿಕೇಶನ್ ಮಾಡಿದೆ. ಅದನ್ನು ಏತಕ್ಕೆ ಮಾಡಿದ್ದೀರಿ? ಅದನ್ನು ಮೊದಲು ನಿಲ್ಲಿಸಿ. ಕಳೆದ ಒಂದು ವರ್ಷದಿಂದ ಮಾನ್ಯ ಅರಣ್ಯ ಮಂತ್ರಿಗಳು ಗಮನಿಸಬೇಕು. ತಾವು ದಯವಿಟ್ಟು ನನ್ನ ಜೊತೆಯಲ್ಲಿ ಬನ್ನೀ ನಮ್ಮ ತಾಲ್ಲೂಕಿಗೆ ಕರೆದುಕೊಂಡು ಹೋಗುತ್ತೇನೆ. ಕಳೆದ ಎಳೆಂಟು ತಿಂಗಳುಗಳಿಂದ ಒಂದು ವರ್ಷದಿಂದ ಎಂದು ಹೇಳಿದರೂ ತಪ್ಪಾಗುವುದಿಲ್ಲ. ಆವೊತ್ತು ಒಂದು ಲೋಡ್ ಹೋಗುತ್ತಿತ್ತು. ಇವತ್ತು 50 ಲೋಡುಗಳು ಹೋಗುತ್ತಿವೆ. ಕಾಡಿನಲ್ಲಿ ಪ್ರಾಣಿಗಳು ಇರುವುದಕ್ಕೆ ಆಗುತ್ತಿಲ್ಲ. ಕಾಡುಗಳು ಕಾಣಿಸುತ್ತಿಲ್ಲ, ಕಾಡಿನ ಮಧ್ಯದಲ್ಲಿರತಕ್ಕ ಕಲ್ಲುಗಳನ್ನು ಕಳ್ಳಸಾಗಾಣಿಕೆ ಮಾಡುತ್ತಿದ್ದಾರೆ.ಕೇಂದ್ರಸರ್ಕಾರದವರು ಪರ್ಮಿಶನ್ ಹೇಗೆ ಕೊಡುತ್ತಾರೆ? ನಮ್ಮ ರಾಜ್ಯದಲ್ಲಿರತಕ್ಕ ಅರಣ್ಯವನ್ನು ನಾಶಮಾಡಲಿಕ್ಕೆ ಪರ್ಮಿಶನ್ ಕೊಟ್ಟರೆ ನಾವು ಅದನ್ನು ಪ್ರತಿಭಟನೆ ಮಾಡೋಣ. ಇದು ರಾಜ್ಯ ಸರ್ಕಾರಕ್ಕೆ ಸಂಬಂಧಿಸಿದ್ದು, ಇದರಿಂದ ಅರಣ್ಯ ಲೂಟಿಯಾಗುತ್ತಿದೆಯೆಂದು ಪ್ರತಿಭಟನೆ ಮಾಡೋಣ. ಲೂಟಿಯಾಗುವುದನ್ನು ತಪ್ಪಿಸುವುದಕ್ಕೆ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು. ಅರಣ್ಯ ಇಲಾಖೆಯ ಮಂತ್ರಿಗಳು ಕೇವಲ ಗಂಧದಮರ ಮತ್ತು ದಂತ ಕಳ್ಳಸಾಗಾಣಿಕೆಯನ್ನು ತಡೆಗಟ್ಟುವುದು ಅಷ್ಟೇ ಅಲ್ಲ. ಕಲ್ಲಿನ ಕಳ್ಳಸಾಗಾಣಿಕೆಯನ್ನು ಸಹ ತಡೆಗಟ್ಟುವುದಕ್ಕೆ ತಕ್ಷಣ ಕ್ರಮವನ್ನು ತೆಗೆದು ಕೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ. ಆಕ್ಟನ್ನು ನೀವು ಓದಿಲ್ಲವೆಂದು ನಾನು ಹೇಳಲಿಲ್ಲ. ಫಾರೆಸ್ಟ್

ಕನ್ಸ್ವರ್ವೇಷನ್ ಆಕ್ಟನ್ನು ನಾನು ಪ್ರಸ್ತಾಪ ಮಾಡಿದ್ದೇನೆ. ಅದೇ ರೀತಿಯಲ್ಲಿ ಮಾನ್ಯ ಕಂದಾಯ ಮಂತ್ರಿಗಳು ಸಹ ಈ ಕಡೆಗೆ ಗಮನಹರಿಸಿ ತಕ್ಷಣ ಕ್ರಮ ತೆಗೆದುಕೊಳ್ಳಬೇಕೆಂದು ಅವರಲ್ಲಿಯೂ ಸಹ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ತೋಟಗಾರಿಕೆ ಇಲಾಖೆಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ತೋಟಗಾರಿಕೆ ಇಲಾಖೆಯ ಮಂತ್ರಿಗಳ ಗಮನಕ್ಕೆ ಒಂದೆರಡು ವಿಚಾರಗಳನ್ನು ತರುವುದಕ್ಕೆ ಇಚ್ಛೆ ಪಡುತ್ತೇನೆ. ತೋಟಗಾರಿಕೆ ಇಲಾಖೆಗೆ ಬಂದರೆ ನಮ್ಮ ರಾಜ್ಯದಲ್ಲಿ ನಾವು ಯಾರೂ ಸಹ ಮರೀಗೌಡನನ್ನು ಮರೆಯುವುದಕ್ಕೆ ಸಾಧ್ಯವಿಲ್ಲ. ಮರೀಗೌಡರು ಮಾಡಿ ಹೋಗಿರತಕ್ಕ ಕೆಲಸ ನಿಜವಾಗಿಯೂ ಬಹಳ ಪ್ರಶಂಸನೀಯ. ತೋಟಗಾರಿಕೆ ಇಲಾಖೆಯ ಉತ್ಪಾದನೆ ಹೆಚ್ಚು ಮಾಡಿ ಉತ್ಪಾದನೆಗೆ ಸರಿಯಾದ ಮಾರ್ಕೆಟ್ ವ್ಯವಸ್ಥೆ ಮಾಡಿದರೆ ರೈತರಿಗೆ ಬಹಳ ಉಪಯೋಗ ವಾಗುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ಈ ಸಂದರ್ಭದಲ್ಲಿ ಮಾನ್ಯ ಜಾಲಪ್ಪನವರು ಮಾಡಿರತಕ್ಕ ಕೆಲಸವನ್ನು ಪ್ರಸ್ತಾಪ ಮಾಡುವುದಕ್ಕೆ ಬಯಸುತ್ತೇನೆ. ಬೆಂಗಳೂರಿನ ಸುತ್ತಮುತ್ತ ಕೋಲಾರ ಜಿಲ್ಲೆಯಲ್ಲಿರಬಹುದು, ಹೊಸಕೋಟೆ ಇರಬಹುದು, ತುಮಕೂರಿನ ಕೆಲವು ಭಾಗದಲ್ಲಿ ಇರಬಹುದು. ತೋಟಗಾರಿಕೆ ಇಲಾಖೆಯವರು ಮತ್ತು ರೈತರು ಬೆಳೆಯತಕ್ಕ ತರಕಾರಿಗಳು ಏನಿವೆ, ಹಣ್ಣು ಹಂಪಲುಗಳು ಏನಿವೆ ಅವುಗಳಿಗೆ ಸರಿಯಾದ ಬೆಲೆ ಸಿಗುತ್ತಿರಲಿಲ್ಲ. ಮಧ್ಯಸ್ಥರು ಹಾವಳಿ ಮಾಡುತ್ತಿದ್ದರು. ಜಾಲಪ್ಪನವರು ಬೆಂಗಳೂರಿನ ಲಾಲ್‌ಬಾಗ್‌ನಲ್ಲಿರತಕ್ಕ ಸೊಸೈಟಿಗೆ ಹೊಸ ಜೀವ ಕೊಟ್ಟರು. ಹಾಪ್‌ಕಾಮ್ಸ್ ಎಂದು ಏನು ಹೇಳುತ್ತಾರೆ ಅದಕ್ಕೆ ಹೊಸ ಜೀವ ಕೊಟ್ಟರು. ಅಲ್ಲಿರತಕ್ಕ ಅಧಿಕಾರಿಗಳು ಬಹಳ ಉತ್ತಮವಾದ ಕೆಲಸಗಳನ್ನು ಕಳೆದ ಏಳೆಂಟು ವರ್ಷಗಳಲ್ಲಿ ಮಾಡಿದ್ದಾರೆ. ಇವತ್ತು ಹಾಪ್‌ಕಾಮ್ಸ್ ನಮ್ಮ ರಾಜ್ಯದ ಐದು ಜಿಲ್ಲೆಗಳಲ್ಲಿ ಮಾತ್ರ ಇದೆ. ಅದನ್ನು 19 ಜಿಲ್ಲೆಗಳಿಗೆ ವಿಸ್ತರಿಸತಕ್ಕ ಕೆಲಸವನ್ನು ತಮ್ಮ ಕಾಲದಲ್ಲಿ ಅದು ಆಗುತ್ತದೆನ್ನುವ ಆಶಯವನ್ನು ನಾನು ವ್ಯಕ್ತಪಡಿಸುತ್ತೇನೆ. ಅದರ ಜೊತೆಗೆ ಮಧ್ಯಸ್ಥರ ಹಾವಳಿ ಮತ್ತೆ ಹೆಚ್ಚಾಗಿದೆಯೆಂದು ನಾನು ಕೇಳಿದ್ದೇನೆ.

ಇವರು ಏನು ಮಾಡುತ್ತಾರೆ ಎಂದರೆ ರೈತರ ಹತ್ತಿರ ಹೋಗಿ ಅಡ್ವಾನ್ಸ್ ಕೊಟ್ಟುಬಿಟ್ಟು ಅವರು ಹೇಳಿದಂಥ ಬೆಲೆಗೆ ತೆಗೆದುಕೊಂಡುಬರತಕ್ಕಂಥ ಕೆಲಸ ಮಾಡುತ್ತಿದ್ದಾರೆ. ನಿಜ, ಸ್ಟೋರೇಜ್ ಫೆಸಿಲಿಟಿ ನಮ್ಮಲ್ಲಿ ಇಲ್ಲ. ಇದರಿಂದ ತೊಂದರೆಯಾಗಿದೆ ಎಂಬುದು ನಮಗೆ ಗೊತ್ತಿರತಕ್ಕಂಥ ವಿಚಾರ. ಆದ್ದರಿಂದ ದಯವಿಟ್ಟು ಮಧ್ಯಸ್ಥರ ಕಾಟವನ್ನು ತಪ್ಪಿಸುವುದರ ಜೊತೆಗೆ ಸ್ಟೋರೇಜ್ ಫೆಸಿಲಿಟಿ ಕಡೆಗೆ ಹೆಚ್ಚಿನ ಗಮನ ಕೊಡಬೇಕೆಂದು ಹೇಳಬಯಸುತ್ತೇನೆ. ಹೀಗೆ ಮಾಡಿದರೆ ಕರ್ನಾಟಕದ ರೈತರಿಗೆ ಇದು ಒಂದು ದೊಡ್ಡ ವರವಾಗುತ್ತದೆ.ಹೊರದೇಶಗಳಿಗೆ ಒಂದೇ ದಿವಸದಲ್ಲಿ ಕಳುಹಿಸುವ ವ್ಯವಸ್ಥೆ ಮಾಡುವುದು ಅಷ್ಟೇನೂ ಕಷ್ಟ ಅಲ್ಲ. ಬಿಜಾಪುರದಲ್ಲಿ ನಮ್ಮ ರಾಜ್ಯದಲ್ಲಿ ಅತ್ಯಂತ ಅಧಿಕ ಇಳುವರಿ ಬರತಕ್ಕಂಥ ದ್ರಾಕ್ಷಿಯನ್ನು ಬೆಳೆಯುತ್ತಿದ್ದಾರೆ. ಅದು ತಮಗೆ ಗೊತ್ತಿದೆ ನಮ್ಮ ರೈತರು ಹೆಮ್ಮೆ ಪಡತಕ್ಕಂಥ ದ್ರಾಕ್ಷಿಯನ್ನು ಅವರು ಬೆಳೆಯುತ್ತಿದ್ದಾರೆ. ಒಣದ್ರಾಕ್ಷಿ ಅವರು ಬೆಳೆಯುತ್ತಾರೆ. ಆದರೆ ಬೊಂಬಾಯಿಂದ ಬರತಕ್ಕಂಥ ವ್ಯಾಪಾರಸ್ಥರು ಅವರ ಶೋಷಣೆ ಮಾಡುವುದಕ್ಕೆ ಹೊರಟಿದ್ದಾರೆ. ಅಲ್ಲಿ ಕೋಲ್ಡ್ ಸ್ಟೋರೇಜ್ ಫೆಸಿಲಿಟಿ ಇಲ್ಲವೇ ಇಲ್ಲ,.ಒಣದ್ರಾಕ್ಷಿ ಮಾಡಿದಾಕ್ಷಣ ತೆಗೆದುಕೊಂಡು ಹೋಗಿ ಮಾರಬೇಕು. ಹಸಿ ದ್ರಾಕ್ಷಿಯನ್ನು ಎಕ್ಸ್‌ಪೋರ್ಟ್ ಮಾಡುವುದಕ್ಕೆ ಕೂಡ ಸಾಧ್ಯವಿದೆ. ತುಂಬಾ ಒಳ್ಳೆಯ ಹವಾಗುಣ ಇದೆ. ಇವತ್ತು ಏನು ಬಿಜಾಪುರ ಜಿಲ್ಲೆಯನ್ನು ಬ್ಯಾಕ್‌ವರ್ಡ್ ಏರಿಯಾ ಅಂತ ಹೇಳುತ್ತಾರೆ, ನನಗನ್ನಿಸುತ್ತದೆ, ಇನ್ನು ಹತ್ತು ವರ್ಷಗಳಲ್ಲಿ ಬಿಜಾಪುರ ಜಿಲ್ಲೆ ಮಂಡ್ಯ ಜಿಲ್ಲೆಗಿಂತ ಯಾವದೃಷ್ಟಿಯಿಂದಲೂ ಕಡಿಮೆ ಇರುವುದಿಲ್ಲ. ನಮಗೆ ಹೆಮ್ಮೆ ಇದು. ಅಲ್ಲಿ ಬೆಳೆಯತಕ್ಕಂಥ ದ್ರಾಕ್ಷಿ, ದ್ಳಾಳಿಂಬೆ ಅದರಲ್ಲೂ ಗಣೇಶ, ಜ್ಯೋತಿ ಇದು ನಿಜವಾಗಿ ಒಂದು ಎಕರೆಯಲ್ಲಿ 35-40 ಸಾವಿರ ರೂಪಾಯಿ ಹಣ ಒಬ್ಬ ರೈತ ಗಳಿಸಬಹುದು. ಇಂತಹ ದ್ರಾಕ್ಷಿಯನ್ನು ಬಿಜಾಪುರದಲ್ಲಿ ಬೆಳೆಸುತ್ತಿದ್ದಾರೆ. ನಾವು ರೈತರಿಗೆ ಸರಿಯಾದ ಬೆಲೆ ಕೊಡಲಿಕ್ಕೆ ಈ ಒಂದು ವ್ಯಾಪಾರ ಮಾರುಕಟ್ಟೆ ಬೆಳೆಸಿದರೆ ಸೂಕ್ತವೆಂದು ನಾನು ತಿಳಿದುಕೊಂಡಿದ್ದೇನೆ. ಈ ಬಿಜಾಪುರ ಮತ್ತು ಬಾಗಲಕೋಟೆ ಎಪಿಎಂಸಿ ಯವರು ಸರ್ಕಾರಕ್ಕೆ ಪ್ರಪೋಸಲ್ ಕಳಿಸಿದ್ದಾರೆ. ಈ ಕೋಲ್ಡ್ ಸ್ಟೋರೇಜ್ ಫೆಸಿಲಿಟೀಸ್‌ಗೆ

ಅವಕಾಶವನ್ನು ಎ ಪಿ ಎಂ ಸಿ ಅವರಿಗೆ ಮಾಡಿಕೊಡಬೇಕೆಂದು ಹೇಳಿ, ತಾವು ಆದರ ಕಡೆಗೆ ಗಮನ ಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತಿದ್ದೇನೆ. ಮತ್ತು ಈ ಕೆಲವು ಫಂಗಿಸೈಡ್ಸ್, ಕೆಮಿಕಲ್ಸ್ ದ್ರಾಕ್ಷಿ ಬೆಳೆಗೆ ಸಂಬಂಧಪಟ್ಟ ಹಾಗೆ ರೈತರಿಗೆ ಕಡಿಮೆ ಬೆಲೆಗೆ ಸಿಗುತ್ತಿಲ್ಲ. ಬೊಂಬಾಯಿಯಲ್ಲಿ ಯಾವುದೋ ಕಂಪನಿಗೆ ಇದನ್ನು ಇಂಪೋರ್ಟ್ ಮಾಡುವುದಕ್ಕೆ ಪರ್ಮಿಶನ್ ಇದೆ. ನಮ್ಮ ಹಾಫ್‌ಕಾನ್ಸ್‌ಗೆ ಅದು ಇಲ್ಲ. ತಾವು ದಯವಿಟ್ಟು ಇಂಪೋರ್ಟ್ ಲೈಸೆನ್ಸ್‌ನ್ನು ನಮ್ಮ ಹಾಫಕಾನ್ಸ್ ಸಂಸ್ಥೆಗೆ ಕೊಡಿಸಿ, ಈ ಕೆಮಿಕಲ್ಸ್, ಫಂಗಿಸೈಡ್ಸ್ ಸರಿಯಾಗಿ ಸಿಗುವ ರೀತಿಯಲ್ಲಿ ಮಾಡಿದರೆ ಬಹಳ ಉಪಯೋಗ ಆಗುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ. ಈ ಕಡೆಗೆ ತಾವು ಗಮನವನ್ನು ಹರಿಸಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಅದೇ ರೀತಿಯಲ್ಲಿ ತೆಂಗಿನ ಬೆಲೆ. ತಾವು ಈ ಸದನದಲ್ಲಿ ಮಾನ್ಯ ಸದಸ್ಯರು ಪ್ರಸ್ತಾಪಮಾಡಿದಾಕ್ಷಣ ತೆಂಗು ಬೆಳೆಯತಕ್ಕಂಥ ಕೃಷಿ ರೈತರನ್ನು ಕರೆಯಿಸಿ ಒಂದು ಸಭೆಯನ್ನು ಮಾಡಿ ತಮ್ಮ ಇಚ್ಛೆಯನ್ನು ವ್ಯಕ್ತಪಡಿಸಿದ್ದೀರಿ. ನಮ್ಮ ರೈತರಿಗೆ ಬಹಳ ತೊಂದರೆಯಾಗುತ್ತಿದೆ, ಏನಾದರೂ ಮಾಡಿ ಇದನ್ನು ಸರಿಯಾಗಿ ಮಾಡಬೇಕೆಂದು ತಾವುಹೇಳಿದ್ದೀರಿ. ನನಗೆ ನಿಜವಾಗಿ ಬಹಳ ಸಂತೋಷವಾಯಿತು. ಮಂಜುನಾಥರವರು, ಲೋಕಸಭಾ ಸದಸ್ಯರಾಗಿದ್ದ ಬಸವರಾಜರವರು ಮತ್ತು ಇತರೆ ಸದಸ್ಯರು ಮಾತನಾಡಿ ನಮಗೆ, ತೆಂಗಿನ ಬೆಳೆಗಾರರಿಗೂ ಸಹಿತ ಗೊತ್ತಿಲ್ಲದೆ ಇರತಕ್ಕಂಥ ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಈಗ ಪುನಃ ಮಂಗಳವಾರ ಸಭೆ ಕರೆಯುತ್ತೇನೆ ಎಂದು ಹೇಳಿದ್ದೀರಿ..

ನಾನಾದರೂ ಈ ಸಂದರ್ಭದಲ್ಲಿ ಹೇಳತಕ್ಕದ್ದು, ಕೇಂದ್ರ ಸರ್ಕಾರದವರು ಎಣ್ಣೆ ತೆಗೆಯತಕ್ಕಂಥ ಕೊಬ್ಬರಿಗೆ 1600 ರೂಪಾಯಿಗಳೆಂದು ರೇಟ್ ಫಿಕ್ಸ್ ಮಾಡಿದ್ದಾರೆ. ತಿನ್ನುವ ಕೊಬ್ಬರಿಗೆ 2500 ರೂಪಾಯಿ ಫಿಕ್ಸ್ ಮಾಡಬೇಕೆಂದು ಒತ್ತಾಯವನ್ನು ನಾವು ತರಬೇಕು. ಏಕೆಂದರೆ ಇಡೀ ದೇಶದಲ್ಲಿ ತಿನ್ನುವ ಕೊಬ್ಬರಿ ಕರ್ನಾಟಕದ್ದು. ಇದರ ಜೊತೆಗೆ ಈ ತಿನ್ನತಕ್ಕಂಥ ಕೊಬ್ಬರಿಯ ಈಲ್ಡ್ ಕೂಡ ಕಡಿಮೆಯಾಗುತ್ತಿದೆ. ತಮಗೆ ಗೊತ್ತಿರುವ ಹಾಗೆ ಈಗ ಮಳೆ ಕಡಿಮೆಯಾಗುತ್ತಿದೆ. ಮಳೆ ಕಡಿಮೆ ಯಾಗುವುದರಿಂದ ಇಳುವರಿ ಬರುವುದು ಸಹ ಕಡಿಮೆಯಾಗುತ್ತದೆ. ಆದ್ದರಿಂದ ದಯವಿಟ್ಟು ತಾವು ಏನು ಕ್ರಮ ತೆಗೆದುಕೊಳ್ಳಬೇಕೆಂದು ಹೊರಟಿದ್ದೀರಿ, ಇದಕ್ಕೆ ಹೆಚ್ಚಿನ ಒತ್ತು ಕೊಟ್ಟು ಆದಷ್ಟು ಬೇಗ ನಮ್ಮ ರೈತರಿಗೆ ಸರಿಯಾದ ಬೆಲೆ ಕೊಡತಕ್ಕಂಥ ಪ್ರಯತ್ನ ಮಾಡಬೇಕು. ಕೇಂದ್ರ ಸರ್ಕಾರದ ಮೇಲೆ ಒತ್ತಡ ತರಲಿಕ್ಕೆ ನಾವೆಲ್ಲರೂ ನಿಮಗೆ ಸಹಕಾರವನ್ನು ಕೊಡುತ್ತೇವೆ.

೧೧.೩೫ ಎ.ಎಂ.

ಕಪ್ಪುತಲೆ ಹುಳು ರೋಗ ಈಗ ಹೆಚ್ಚಾಗಿದೆ ಎಂದೂ ನನ್ನ ಗಮನಕ್ಕೆ ಈಗಾಗಲೇ ಬಂದಿದೆ. ರೈತರು ಯಾವುದೋ ಊರಿನಲ್ಲಿದೆ, ನಮ್ಮ ತೋಟಕ್ಕೆ ಇನ್ನೂ ಬಂದಿಲ್ಲ, ಎಂದು ಹೇಳಿಕೊಂಡು ಆ ರೋಗ ಅವರ ತೋಟಕ್ಕೆ ಬರುವ ತನಕ ಸುಮ್ಮನಿದ್ದು ಬಿಡುತ್ತಾರೆ. ನನಗಿಂತ ಹೆಚ್ಚಾಗಿ ಇದರ ಬಗ್ಗೆ ಶ್ರೀ ಮಂಜುನಾಥರವರು ತಿಳಿದುಕೊಂಡಿದ್ದಾರೆ. ಒಂದೊಂದು ಮರಕ್ಕೂ ಇಂಜೆಕ್ಷನ್ ಕೊಡತಕ್ಕದ್ದು ಅಗತ್ಯವಿದೆ, ಪ್ಯಾರಾಸೈಟ್ಸ್ ಹೆಚ್ಚು ಮಾಡತಕ್ಕದ್ದು ಅಗತ್ಯವಿದೆ. ಈ ಕೆಲಸ ಬಹಳ ಬೇಗ ಆಗಬೇಕಾಗಿದೆ. ಈ ತೆಂಗು ಬೆಳೆಯು ತಕ್ಕ ರೈತರ ಹತ್ತಿರ ಹಣವಿಲ್ಲ ಆದ್ದರಿಂದ ಎಂಟೈರ್ ಏರಿಯಾವನ್ನು ತಮ್ಮ ಡಿಪಾರ್ಟ್‌ಮೆಂಟಿನಿಂದ ಸ್ಪ್ರೇ ಮಾಡಿಸಿ ಇಂಜೆಕ್ಷನ್ ಕೊಡಿಸಿ, ಪ್ಯಾರಾಸೈಟ್ಸ್ ಹೆಚ್ಚು ಮಾಡಿಸುವ ಕ್ರಮ ಕೈಗೊಳ್ಳಬೇಕು. ಇದಕ್ಕೆ ಹಣ ಏನು ಖರ್ಚಾಗುತ್ತದೆ. ಅದರಲ್ಲಿ ಅರ್ಧ ಭಾಗವನ್ನು ರೈತರಿಂದ ಆರು ತಿಂಗಳಿಗೆ ಅಥವಾ ಒಂದು ವರ್ಷ ಸಮಯ ಕೊಟ್ಟು ವಸೂಲಿ ಮಾಡಿಕೊಳ್ಳಿ. ಇದರಿಂದ ನಿಮ್ಮ ಇಲಾಖೆಗೆ ಏನೂ ತೊಂದರೆಯಾಗುವುದಿಲ್ಲ. ಇದರಿಂದ ರೈತರಿಗೆ ಹೆಚ್ಚು ಅನುಕೂಲವಾಗುತ್ತದೆ. ಇವತ್ತು ಈ ತೆಂಗಿನ ಮರಗಳಿಗೆ ಬರತಕ್ಕ ಖಾಯಿಲೆ ಏನು ಇದೆ ಅದು ನಿಯಂತ್ರಣವಾಗುತ್ತದೆ. ಈ ಕೆಲಸವನ್ನು ತಾವು ಮಾಡಬೇಕು.

ಇನ್ನು ತೆಂಗನ್ನು ಉಪಯೋಗಿಸತಕ್ಕ ಕೈಗಾರಿಕೆಗಳು ಏನಿವೆ ಅವುಗಳಿಗೆ ಹೆಚ್ಚಿನ ಪ್ರೋತ್ಸಾಹವನ್ನು ಕೊಡಲು ತಾವು ಪ್ರಯತ್ನವನ್ನು ಮಾಡಬೇಕು.ಈಗ ಎಳನೀರಿನಿಂದ ನಾವು ಕೆಲವು ಕೋಲಾಗಳನ್ನು ಮಾಡಬಹುದೆಂಬ ಪ್ರಪೋಸಲ್ ಇದೆ. ಹಾಗೆಯೇ ತಿಳಿ ಗಂಜಿ ಕೊಬ್ಬರಿಯಿಂದ ಬೇಬಿ ಫುಡ್

ಮಾಡಬಹುದೆಂಬ ಪ್ರಪೋಸಲ್ ಇದೆ.ಇತ್ತೀಚಿನ ದಿನಗಳಲ್ಲಿ ಈ ತೆಂಗನ್ನು ಬೆಳೆಯುವುದು ಹೆಚ್ಚಾಗಿದೆ. ಇದೊಂದು ಕಮರ್ಷಿಯಲ್ ಕ್ರಾಪ್ ಎಂಬುದು ಎಲ್ಲರಿಗೂ ಗೊತ್ತಾಗಿದೆ. ತೆಂಗಿನ ಇಳುವರಿ ಜಾಸ್ತಿಯಾದಾಗ ಮತ್ತೆ ಬೆಲೆ ಕಮ್ಮಿಯಾಗಿ ಲಕ್ಷಾಂತರ ರೂಪಾಯಿ ಖರ್ಚು ಮಾಡಿದ ರೈತರಿಗೆ ಅನಾನುಕೂಲವಾಗುವುದು ಬೇಡ ಇದು ತಮ್ಮ ಕಾಲದಲ್ಲೇ ಆಗಬೇಕು. ತಮಗೆ ಅನುಭವ ಇದೆ ಕಾಳಜಿ ಇದೆ. ಹಿಂದೆ ನೀವೊಮ್ಮೆ ಕೃಷಿ ಇಲಾಖೆಯ ಮಂತ್ರಿಗಳಾಗಿ ಕೆಲಸ ಮಾಡಿದ್ದೀರಿ, ಇದರ ಬಗ್ಗೆ ನಿಮಗೆ ಹೆಚ್ಚಿನ ತಿಳುವಳಿಕೆ ಇದೆ. ಇದನ್ನು ತಾವು ಪ್ರಯತ್ನ ಮಾಡಿದರೆ, ಬಹುಶಃ ರೈತರಿಗೆ ಬಹಳ ಉಪಯೋಗವಾಗುತ್ತದೆ. ನಮ್ಮ ರಾಜ್ಯದ ತೆಂಗು ಬೆಳೆಗಾರರ ರೈತರಿಗೆ ಇದರಿಂದ ಬಹಳ ಉಪಯೋಗವಾಗುತ್ತದೆ.

ಶ್ರೀ ಟಿ.ಎಂ. ಮಂಜುನಾಥ್:- ತೆಂಗು ಬೆಳೆಗಾರರ ಪರವಾಗಿ ತಮಗೆ ಅಭಿನಂದನೆಗಳನ್ನು ಅಧ್ಯಕ್ಷರ ಮೂಲಕ ಅರ್ಪಿಸುತ್ತೇನೆ. ಈ ಸಂದರ್ಭದಲ್ಲಿ ಒಂದೇ ಒಂದು ಸಲಹೆಯನ್ನು ನಾನು ಕೊಡಬಯಸುತ್ತೇನೆ. ತೆಂಗಿನ ಬೆಳೆಗಾರರಿಗೆ ಇರತಕ್ಕದ್ದು, ರೋಗದ ಸಮಸ್ಯೆ ಒಂದಾಗಿದ್ದರೆ ಮತ್ತೊಂದು ಐ.ಪಿ. ಸೆಟ್ಟು ಗಳಿಗೆ ವಿದ್ಯುತ್ ಕೊಡದೆ ಇರುವುದರಿಂದ ಆಗಿರುವ ತೊಂದರೆಯನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಈ ಸಲವು ಹೆಚ್ಚು ತೆಂಗಿನ ಮರ ನಾಶವಾಗುತ್ತಿದೆ. ನೀರಿಲ್ಲದ ಕಡೆ ಎಲ್ಲಿ ಬೋರ್‌ವೆಲ್ ತೆಗೆಸಿದ್ದಾರೆ, ಅಲ್ಲಿ ರೈತರಿಗೆ ಐ.ಪಿ. ಸೆಟ್ಟುಗಳನ್ನು ಉಪಯೋಗಿಸಲು ವಿದ್ಯುಚ್ಛಕ್ತಿ ಕನೆಕ್ಷನ್ ಕೊಟ್ಟಿಲ್ಲ. ಆದ್ದರಿಂದ ಇವತ್ತು ತಾವು ಒಂದು ಆಜ್ಞೆಯನ್ನು ಹೊರಡಿಸಿ ತುಮಕೂರು ಜಿಲ್ಲೆ ಹಾಗೂ ಇತರೆ ಕಡೆಗಳಲ್ಲಿ ಎಲ್ಲೆಲ್ಲಿ ತೆಂಗಿನ ಬೆಳೆಗೆ ರೋಗವಿದೆ ಅಲ್ಲಿಯ ಐ.ಪಿ. ಸೆಟ್ಟುಗಳನ್ನು ಕೂಡಲೆ ಕನೆಕ್ಷನ್ ಕೊಡಿಸಬೇಕು.

ಶ್ರೀ ಬಿ.ಎಂ ಇದಿನಬ್ಬ:- ದಕ್ಷಿಣ ಕನ್ನಡ ಜಿಲ್ಲೆಯ ಕರಾವಳಿಯಲ್ಲಿ ಪೂರಾ ಹೋಗಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಅಗ್ರಿಕಲ್ಚರಲ್ ಡಿಪಾರ್ಟ್‌ಮೆಂಟ್‌ನಲ್ಲಿ ಇರತಕ್ಕ ಜನ ಯಾರಿದ್ದಾರೆ ಅವರ ಬಗ್ಗೆ ಒಂದೆರಡು ಮಾತನ್ನು ಹೇಳಬೇಕಾಗಿದೆ. ಈಗ ಒಂದು ತಾಲ್ಲೂಕಿನಲ್ಲಿ ಜ್ಯೂನಿಯರ್ ಕ್ಲಾಸ್ ಓನ್ ಆಫೀಸರ್, ಅಸಿಸ್ಟೆಂಟ್ ಡೈರೆಕ್ಟರ್ ಆಫ್ ಅಗ್ರಿಕಲ್ಚರಲ್ ಎಂದು ಇಟ್ಟುಕೊಂಡಿದ್ದಾರೆ. ಅವರ ಕೈಕೆಳಗೆ 35 ಜನ ಅಗ್ರಿಕಲ್ಚರ್ ಅಸಿಸ್ಟೆಂಟ್ ಇದ್ದಾರೆ, ಹತ್ತುಜನ ಅಸಿಸ್ಟೆಂಟ್ ಅಗ್ರಿಕಲ್ಚರಲ್ ಆಫೀಸರ್ಸ್ ಇದ್ದಾರೆ. ಮೂರು ಅಗ್ರಿಕಲ್ಚರಲ್ ಆಫೀಸರ್ಸ್ ಇದ್ದಾರೆ. ನನಗನ್ನಿಸುತ್ತದೆ ಸುಮಾರು 50-60 ಜನ ಈ ಅಗ್ರಿಕಲ್ಚರಲ್ ಡಿಪಾರ್ಟ್‌ಮೆಂಟ್‌ನಲ್ಲಿ ಅಧಿಕಾರಿಗಳು ಇದ್ದಾರೆ. ಇವರು ಕೆಳಮಟ್ಟ ದಲ್ಲಿ ಏನು ಮಾಡುತ್ತಾರೆಯೆಂದರೆ ಅವರು ಏನು ಒಂದು ಅಂಕಿ ಅಂಶಗಳನ್ನು ಬರೆದುಕೊಂಡು ಬರುತ್ತಾರೆ ಅದನ್ನು ಅಸಿಸ್ಟೆಂಟ್ ಡೈರೆಕ್ಟರಿಗೆ ಕಳುಹಿಸುತ್ತಾರೆ. ಅಲ್ಲಿಂದ ಡೆಪ್ಯೂಟಿ ಡೈರೆಕ್ಟರ್, ಜಾಯಿಂಟ್ ಡೈರೆಕ್ಟರ್, ಡೈರೆಕ್ಟರ್ ನಂತರ ವಿಧಾನ ಸಭೆಗೆ ಬರುತ್ತದೆ.ಈ ಅಂಕಿ ಅಂಶಗಳನ್ನು ಬರೆಯುವುದನ್ನು ಬಿಟ್ಟು ಮತ್ತೆ ಯಾವ ಕೆಲಸವನ್ನು ಅವರು ಮಾಡುವುದಿಲ್ಲವೆಂದು ನನಗನ್ನಿಸುತ್ತದೆ. ಇವರು ಯಾವ ಸಂದರ್ಭದಲ್ಲಿ ನಮಗೆ ಕಾಣಿಸಿಕೊಳ್ಳುತ್ತಾರೆಂದರೆ ಎಸ್.ಸಿ.ಪಿ. ಪ್ರೋಗ್ರಾಂ ಮಾರ್ಚಿ ತಿಂಗಳಿನಲ್ಲಿ ಆಗುವಾಗ ಈ ಕೃಷಿ ಇಲಾಖೆಯ ಅಧಿಕಾರಿಗಳು ನಮ್ಮ ಕಣ್ಣಿಗೆ ಕಾಣಿಸಿಕೊಳ್ಳುತ್ತಾರೆ. ನಾವು ಬಹಳ ದೀರ್ಘವಾಗಿ ಯೋಜನೆ ಮಾಡಬೇಕಾಗಿದೆ, ಕೋಟ್ಯಾಂತರ ರೂಪಾಯಿಗಳನ್ನು ಇವರ ಸಂಬಳಕ್ಕಾಗಿ ಪ್ರತಿ ವರ್ಷ ಖರ್ಚು ಮಾಡುತ್ತಿದ್ದೇವೆ.ರೂರಲ್ ಡೆವಲಪ್ ಮೆಂಟ್‌ಗೆ ಇದು ಸಂಬಂಧ ಇರುವುದರಿಂದ ತಾವು ಯಾವರೀತಿ ಇವರ ವರ್ಕ್ ಲೋಡ್ ಅನ್ನು ಬದಲಾವಣೆ ಮಾಡಬೇಕು ಎಂಬುದರ ಬಗ್ಗೆ ವಿಚಾರಣೆ ಮಾಡಬೇಕು. ಇದು ತಮ್ಮ ಕಾಲದಲ್ಲೇ ಆಗಬೇಕು. ಇವತ್ತು ಗ್ರಾಮೀಣ ಪ್ರದೇಶದಲ್ಲಿ ವ್ಯವಸಾಯ ಇಲಾಖೆಯನ್ನು ಸಂಪೂರ್ಣವಾಗಿ ಮುಚ್ಚತಕ್ಕದ್ದು ಸರಿಯೆಂದು ನನಗನ್ನಿಸುತ್ತದೆ. ಇದರಿಂದ ರೈತರು ಕಲಿಯಬೇಕಾದದ್ದು ಏನೂ ಇಲ್ಲ. ಯಾವಾಗ ಯಾವ ಮಳೆ ಬೀಳುತ್ತದೆ, ಯಾವ ಮಳೆ ಬಂದರೆ ಏನಾಗುತ್ತದೆಂಬುದು ಇವರಿಗೆ ಏನೂ ಗೊತ್ತಿಲ್ಲ. ಮತ್ತು ನಾವು ಇವರಿಗೆ ಕೊಡತಕ್ಕ ಟ್ರೈನಿಂಗ್ ಪ್ರೋಗ್ರಾಂ ಏನೂ ಉಪಯೋಗವಾಗಿಲ್ಲ. ಯಾವ ಪುಣ್ಯಾತ್ಮ ಅಧಿಕಾರಿ, ಯಾವ ಉದ್ದೇಶದಿಂದ ಅಗ್ರಿಕಲ್ಚರಲ್ ಎಂದು ಹೇಳಿ ವರ್ಲ್ಡ್ ಬ್ಯಾಂಕ್ ಎಯ್ಡ್ ತೆಗೆದುಕೊಂಡು ಬಂದರೂ ನನಗೆ ಗೊತ್ತಿಲ್ಲ. ಬರೀ ಜೀಪು ಬಿಲ್ಡಿಂಗ್‌ಗಳು ಇದರಿಂದ ಜಾಸ್ತಿಯಾಗಿದೆ.

ರೇಷ್ಮೆ ಇಲಾಖೆಯಲ್ಲಿ ಇದ್ದಹಾಗೆ ಇವುಗಳು ಮಾತ್ರ ಜಾಸ್ತಿಯಾಗಿದೆಯೇ ಹೊರತು ಮತ್ತೇನೂ ಜಾಸ್ತಿಯಾಗಿಲ್ಲ.

ತಾವು ಬೇಕಾದರೆ ಒಂದು ರಿವ್ಯೂ ಮಾಡಿಸಿ. ಅಗ್ರಿಕಲ್ಚರ್ ಎಕ್ಸ್‌ಟೆನ್ಸನ್ ಪ್ರೋಗ್ರಾಂಗೆ ವರ್ಲ್ಡ್ ಬ್ಯಾಂಕ್ ಏಡ್ ತೆಗೆದುಕೊಂಡ ಮೇಲೆ, ಆರು ನೂರು ಜನಕ್ಕೆ ಒಬ್ಬ ಅಗ್ರಿಕಲ್ಚರ್ ಅಸಿಸ್ಟೆಂಟ್. ಬಹುಶಃ ತಮ್ಮ ಕಾಲದಲ್ಲಿ ಇದು ಆಗಿದೆಯೆಂದು ಕಾಣುತ್ತದೆ. ಆರು ನೂರು ಜನ ರೈತ ಕುಟುಂಬಕ್ಕೆ ಒಬ್ಬ ಅಗ್ರಿಕಲ್ಚರ್ ಅಸಿಸ್ಟೆಂಟ್. ಇವರು ರೈತರಿಗೆ ನಾಮ ಹಾಕುವುದಕ್ಕೆ ಇರತಕ್ಕಂಥಾದ್ದು. ಇದಕ್ಕೆ ತಾವು ಒಂದು ಇವಾಲ್ಯುಯೇಷನ್ ಮಾಡಿಸಿ; ಅಗ್ರಿಕಲ್ಚರ್ ಯೂನಿವರ್ಸಿಟಿಯಲ್ಲಿ ಬೇಕಾದಷ್ಟು ರೀಸರ್ಚ್ ವರ್ಕ್ ಆಗುತ್ತಿದೆ. ನಾವೆಲ್ಲರೂ ಭಾಷಣದಲ್ಲಿ ಹೇಳುತ್ತೇವೆ, The research work must go from Lab to the Land.

ಇವತ್ತು ಲ್ಯಾಬ್‌ನಲ್ಲಿ ಎಲ್ಲಾ ರಾಜಕೀಯ ಆಗಿ ಹೋಗಿದೆ. ನನಗಿಂತ ಹೆಚ್ಚಿಗೆ ಪ್ರೊ. ನಂಜುಂಡಸ್ವಾಮಿಯವರು ಬೋರ್ಡಿನಲ್ಲಿ ಸ್ವಲ್ಪದಿವಸ ಕೆಲಸ ಮಾಡಿದ್ದಾರೆ. ಅವರು ಈ ವಿಷಯದಲ್ಲಿ ಮಾತನಾಡುತ್ತಿರೆಂದು ನಾನು ತಿಳಿದಿದ್ದೇನೆ. ಅಗ್ರಿಕಲ್ಚರ್ ಯೂನಿವರ್ಸಿಟಿಯಲ್ಲಿ ಲ್ಯಾಬ್‌ಗಿಂತ ರಾಜಕೀಯ ಜಾಸ್ತಿ. ಅಲ್ಲಿ ಸ್ವಲ್ಪ ಇರತಕ್ಕ ಲ್ಯಾಂಡನ್ನೂ ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್‌ನವರು ಉಳಿಸುವುದಿಲ್ಲ. ಇದು ತಮ್ಮ ಕಾಲದಲ್ಲಿ ಆಗಿದೆ, ಇದಕ್ಕೆ ಒಂದು ಕಾಯಕಲ್ಪವನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೀರೆಂದು ನಂಬಿದ್ದೇನೆ. ಏಕೆಂದರೆ ವರ್ಗಾವಣೆ ಕಾಲದಲ್ಲಿ ತಮಗೆ ಒತ್ತಡ ಬಂದಿರಬಹುದು. ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್‌ನಲ್ಲಿ ಸಾಯಿಲ್ ಕನ್‌ಸರ್ವೇಷನ್ ಒಂದು ಚಿನ್ನದ ಗಣಿ. ಸಾಯಿಲ್ ಕನ್‌ಸರ್ವೇಷನ್‌ಗೇ ಪೋಸ್ಟಿಂಗ್ಸ್ ಕೊಡಿ ಎಂದು ಎಲ್ಲರೂ ಕೇಳುತ್ತಾರೆ. ನ್ಯಾಷನಲ್ ಹೈವೇಗೆ, ಸ್ಟೇಟ್ ಹೈವೇಗೆ, ಸಬ್ ಇನ್‌ಸ್ಪೆಕ್ಟರುಗಳು ಪೋಸ್ಟಿಂಗ್ಸ್ ಕೊಡಿ ಎಂದು ಕೇಳಿದ ಹಾಗೆ, ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್‌ನಲ್ಲಿ ಸಾಯಿಲ್ ಕನ್‌ಸರ್ವೇಷನ್ ಕೊಡಿ ಎಂದು ಎಲ್ಲರೂ ಕೇಳುತ್ತಾರೆ. ಈ ಸಾಯಿಲ್ ಕನಸರ್ವೇಷನ್‌ನಲ್ಲಿ ಏನು ಕೆಲಸ ನಡೆಯುತ್ತಿದೆ ಎಂಬುದನ್ನು ತಾವು ಅರ್ಥಮಾಡಿಕೊಳ್ಳಬೇಕು. ದಯಾಮಾಡಿ ಇಡೀ ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್ ವರ್ಕ್‌ಲೋಡ್ ಏನಿದೆ, ಏನು ಕೆಲಸ ಮಾಡುತ್ತಿದ್ದಾರೆ ಎಂಬುದರ ಬಗ್ಗೆ ರಿವ್ಯೂ ಮಾಡಬೇಕು. ಇದರ ರಿಸಲ್ಟ್ ಬಗ್ಗೆ ಒಂದು ಇವಾಲ್ಯೂಯೇಷನ್ ಆಗಬೇಕು. ರೈತರಿಗೆ ಏನು ಬೇಕು, ಅದನ್ನು ಕೊಡುವುದಕ್ಕೆ ತಮ್ಮ ಕಾಲದಲ್ಲಿ ನಿರ್ದೇಶನ ಹಾಕಿದರೆ, ಇದು ಸಾರ್ಥಕವಾಗುತ್ತದೆಂದು ತಿಳಿದಿದ್ದೇನೆ. ಇದಕ್ಕೆ ಸಂಬಂಧಪಟ್ಟ ಹಾಗೆ ಡ್ರೈಲ್ಯಾಂಡ್ ಡೆವಲಪ್‌ಮೆಂಟ್ ಪ್ರೋಗ್ರಾಂ...

ಶ್ರೀ ಎನ್. ಚಿಕ್ಕೇಗೌಡ:- ಸಾಯಿಲ್ ಕನ್‌ಸರ್ವೇಷನ್ ವರ್ಕ್ಸ್‌ಗೆ ಹಣ ಇಲ್ಲದೆ ಈಗ ಸ್ಥಗಿತವಾಗಿದೆ..

ಶ್ರೀ ಪಿ.ಜಿ.ಆರ್. ಸಿಂಧ್ಯ:- ಅದರ ಬಗ್ಗೆ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಈ ಡ್ರೈಲ್ಯಾಂಡ್ ಡೆವಲಪ್‌ಮೆಂಟ್ ಪ್ರೋಗ್ರಾಂ ನಮ್ಮ ತಾಲ್ಲೂಕಿನಲ್ಲಿ ಕಪಾಲ್ ನಾಲಾ ಯೋಜನೆ ಆಶ್ರಯದಲ್ಲಿ ವರ್ಲ್ಡ್‌ಬ್ಯಾಂಕ್ ಸಹಾಯವನ್ನು ತೆಗೆದುಕೊಂಡು ಕೆಲಸಗಳನ್ನು ಮಾಡಿದ್ದಾರೆ. ಇದರಲ್ಲಿ ಬೇಕಾದಷ್ಟು ದುರುಪಯೋಗವಾಗಿರಬಹುದು. ಆದರೆ, ಇದರಿಂದ ರೈತರಿಗೆ ಒಳ್ಳೆಯ ಅನುಕೂಲವಾಗಿದೆ. ತಾವು ಒಂದು ಸಾರಿ ಬಂದು ನೋಡಿ. ಪ್ರತಿಯೊಂದು ಎಕರೆಯಲ್ಲಿಯೂ ಸಹಿತ ಅದು ಶೇಂಗಾ ಇರಬಹುದು, ರಾಗಿ ಇರಬಹುದು, ಜೋಳ ಇರಬಹುದು, ಏನು ಇಳುವರಿ ಇತ್ತು, ಆ ಇಳುವರಿ ಇವತ್ತು ಹೆಚ್ಚಾಗಿದೆ. ಕಡಿಮೆ ಮಳೆಯಲ್ಲಿ, ಒಳ್ಳೆಯ ಬೀಜಗಳನ್ನು ಹಾಕಿ, ಬರತಕ್ಕ ನೀರನ್ನು ಶೇಖರಣೆ ಮಾಡಿ, ಕೆಲವು ಭಾಗಗಳಲ್ಲಿ ಯಾವರೀತಿ ಹೆಚ್ಚಿನ ಬೆಳೆ ಬೆಳೆಯಬಹುದು ಎನ್ನುವುದಕ್ಕೆ ನಿಜವಾಗಿಯೂ ನಮ್ಮ ರಾಜ್ಯ ಆದರ್ಶ ರಾಜ್ಯ ಎಂದು ಹೇಳಬಹುದು.

(ಮಾನ್ಯ ಶ್ರೀ ಜಿ. ಸ್ವಾಮಿರಾವ್‌ರವರು ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಾದರು.)

ಆದ್ದರಿಂದ ಈ ಡ್ರೈಲ್ಯಾಂಡ್ ಡೆವಲಪ್‌ಮೆಂಟ್ ಬಗ್ಗೆ ತಾವು ಹೆಚ್ಚಿನ ಗಮನ ಕೊಡಬೇಕು. ನಾವು ನೀರಾವರಿ ಬಗ್ಗೆ ಬಹಳ ಮಾತನಾಡುತ್ತೇವೆ, ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡಿದರೂ ಸಹಿತ, ನಮ್ಮ ಇಡೀ ರಾಜ್ಯದಲ್ಲಿ ಶೇಕಡ 17 ರಷ್ಟು ಜಮೀನಿಗೆ ನೀರು

ಕೊಡಬಹುದೇ ವಿನಹ ಉಳಿದಿರತಕ್ಕಂಥ 80 ರಷ್ಟು ಭೂಮಿಯನ್ನು ನೀರಾವರಿ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಹೈದರಾಬಾದ್ ಕರ್ನಾಟಕ ಏರಿಯಾ ಡೆವಲಪ್‌ಮೆಂಟ್ ಆಗಿಲ್ಲ, ಮತ್ತೊಂದು ಏರಿಯಾ ಡೆವಲಪ್‌ಮೆಂಟ್ ಆಗಿಲ್ಲವೆಂದು, ಶಾಸಕರು ಒತ್ತಾಯ ಮಾಡುತ್ತೇವೆ. ಹಾಗೆಯೇ ಒಣಭೂಮಿ ಪ್ರದೇಶದ ರೈತರೂ ಸಂಘಟನೆ ಆಗಿ, ನಾವು ಹಿಂದುಳಿದಿದ್ದೇವೆ, ನಮ್ಮ ಪ್ರಗತಿ ಕಡೆ ಗಮನ ಕೊಟ್ಟಿಲ್ಲ ಎಂಬ ಮಾತೂ ಬರಬಹುದು. ತಾವು ವಿಚಾರ ತಿಳಿದು ಕೊಂಡಿರುವವರು, ಇದರ ಬಗ್ಗೆ ಹೆಚ್ಚಿನ ಗಮನ ಕೊಡಬೇಕು. ಪ್ರತಿ ಜಿಲ್ಲೆಯಲ್ಲೂ ವಿಶೇಷವಾದ ಕಾರ್ಯಕ್ರಮವನ್ನು ಪ್ರಾರಂಭ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಮತ್ತೆ ನಮ್ಮ ರಾಜ್ಯದ ಹೈದರಾಬಾದ್ ಕರ್ನಾಟಕ, ಮುಂಬೈ ಕರ್ನಾಟಕ ಏರಿಯಾ ಏನಿದೆ, ಇಲ್ಲಿ ಎಣ್ಣೆ ಬೀಜಗಳನ್ನು ಹೆಚ್ಚು ಉತ್ಪಾದನೆ ಮಾಡುತ್ತಿದ್ದಾರೆ. ನಮ್ಮ ರಾಷ್ಟ್ರದಲ್ಲಿಯೇ ಅಲ್ಲ ಎಣ್ಣೆ ಬೀಜಗಳನ್ನು ಉತ್ಪಾದನೆ ಮಾಡುವುದಕ್ಕೆ ವಿಶೇಷವಾದ ಸ್ಥಾನ ಇದೆ. ಇದರ ಕಡೆ ತಾವು ಹೆಚ್ಚಿನ ಗಮನ ಕೊಡಬೇಕು. ಎಣ್ಣೆ ಬೀಜದ ಉತ್ಪಾದನೆ ಹೆಚ್ಚು ಆಗಲಿ ಇದಕ್ಕೆ ತಾವು ಪುರಸ್ಕಾರವನ್ನು ಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಮತ್ತೆ ಮಲಪ್ರಭಾ, ಘಟಪ್ರಭಾ, ತುಂಗಭದ್ರಾ ಏರಿಯಾ, ಮತ್ತು ಶಿವಮೊಗ್ಗ ಹಾಗೂ ಚಿತ್ರದುರ್ಗ ಜಿಲ್ಲೆಗಳಲ್ಲಿ ಸಹಿತ ಇತ್ತೀಚಿನ 5-6 ವರ್ಷಗಳಲ್ಲಿ ಹತ್ತಿಯನ್ನು ಬೆಳೆಯುವ ಪ್ರಮಾಣ ಬಹಳ ಪ್ರಮಾಣದಲ್ಲಿ ಹೆಚ್ಚುತ್ತಿದೆ ಎಂಬುದು ತಮಗೂ ಕೂಡ ಗೊತ್ತಿದೆ. ಈಗ ರೈತರು ಹೆಚ್ಚು ತಿಳುವಳಿಕಸ್ಥರಾಗಿದ್ದಾರೆ. ಕಮರ್ಷಿಯಲ್ ಕ್ರಾಪ್ ಅನ್ನು ಹೆಚ್ಚು ಮಾಡುತ್ತಿದ್ದಾರೆ. ಈಗಿರತಕ್ಕಂಥ ಡಿ.ಸಿ. ಹೆಚ್. 32 ತಳಿ ಏನು ಇದೆ ಇದು ಸುಮಾರು 10 ವರ್ಷದಿಂದ ಬಂದಿದೆ. ಇದರ ಈಲ್ಡ್ ಈಗ ಕಡಿಮೆಯಾಗುವುದಕ್ಕೆ ಪ್ರಾರಂಭವಾಗಿದೆ. ಇದು ಡೀ-ಜನರೇಟ್ ಆಗುತ್ತಿದೆ. ಹೊಸ ಡಿ.ಸಿ.ಎಚ್ 32 ತಳಿಯನ್ನು ಅಪ್ ಗ್ರೇಡ್ ಮಾಡುವುದಕ್ಕೆ ಸಹ ಕ್ರಮಗಳನ್ನು ತೆಗೆದು ಕೊಳ್ಳಬೇಕು. ಈ ಕೆಲಸ ಮಾಡಿದರೆ ಹತ್ತಿ ಬೆಳೆಯತಕ್ಕಂತ ರೈತರಿಗೆ ಉಪಕಾರಗಳನ್ನು ಮಾಡಿದಂತಾಗುತ್ತದೆ. ಆ ರೀತಿಯ ಕೆಲಸವನ್ನು ತಾವು ಮಾಡಬೇಕು. ವ್ಯವಸಾಯ ಇಲಾಖೆ ಬರೀ ಸಂಬಳವನ್ನು ಕೊಡತಕ್ಕಂಥದ್ದು ಮತ್ತು ಅಂಕಿ ಅಂಶಗಳನ್ನು ಕೊಡತಕ್ಕಂಥಾದ್ದಕ್ಕೆ ಸೀಮಿತವಾಗಬಾರದು. ವ್ಯವಸಾಯ ಇಲಾಖೆಯಲ್ಲಿ ಅನುಭವ ಇರತಕ್ಕಂತಹ ತಾವು ಇದಕ್ಕೆ ಒಂದು ಹೊಸ ಕಾಯಕಲ್ಪವನ್ನು ಕೊಡಬೇಕೆಂದು ಇಲ್ಲಿ ಹೇಳಬಯಸುತ್ತೇನೆ. ನನಗೆ ಕೊಟ್ಟ ಸಮಯವಾಗುತ್ತಾ ಬಂದಿದೆ ಎಂದು ನನಗೆ ಗೊತ್ತಿದೆ. ಇಲ್ಲಿ ಬೇಕಾದಷ್ಟು ವಿಷಯಗಳನ್ನು ಮಾತನಾಡುವುದಕ್ಕೆ ಇದ್ದರೂ ಕೂಡ ಹೆಚ್ಚು ಮಾತನಾಡುವುದಕ್ಕೆ ಅವಕಾಶವಿಲ್ಲದಂತಾಗಿದೆ. ಗ್ರಾಮೀಣಾಭಿವೃದ್ಧಿ ಬಗ್ಗೆ ಕೆಲವು ವಿಚಾರಗಳನ್ನು ಹೇಳಬಯಸುತ್ತೇನೆ. ಮೂರು ದಿನಗಳಿಂದ ಆ ಮಂತ್ರಿಗಳು ಇಲ್ಲಿಯೇ ಕುಳಿತಿದ್ದರು ಇಂದು ಇಲ್ಲ. ಬಹಳಷ್ಟು ಜನ ಸದಸ್ಯರು ಮಾತನಾಡುವಾಗ ಗ್ರಾಮೀಣಾಭಿವೃದ್ಧಿ ಎಂದರೆ ಜಿಲ್ಲಾ ಪರಿಷತ್ತನ್ನು ಏನು ಇದೆ ಇದು ಹೋಗಬೇಕೆಂದು ಹೇಳುತ್ತಿದ್ದಾರೆ.

ಶ್ರೀ ಎಂ. ಮಹದೇವ:- ಹೋಗಬೇಕೆಂದು ಹೇಳಲಿಲ್ಲ, ಲೋಪದೋಷವಿದೆ ಅದನ್ನು ಸರಿಪಡಿಸಿ ಎಂದು ಹೇಳಿದ್ದೇನೆ.

ಶ್ರೀ ಕೆ.ಹೆಚ್ ಪಾಟೀಲ್:- ಸರಕಾರದ ಉದ್ದೇಶ ಸ್ಪಷ್ಟವಾಗಿದೆ. ಜಿಲ್ಲಾ ಪರಿಷತ್ತುಗಳು ಹೋಗಬೇಕೆಂದು ನಾವು ಹೇಳುತ್ತಿಲ್ಲ. ನಮ್ಮ ಪಕ್ಷದ ನಾಯಕರಾದ ಶ್ರೀ ರಾಜೀವಗಾಂಧಿಯವರು ಜಿಲ್ಲಾಪರಿಷತ್ತಿಗೆ ಹೆಚ್ಚು ಜೀವಕಳೆಯನ್ನು ಕೊಡಬೇಕೆಂದು ಹೇಳಿ ಕಾನ್‌ಸ್ಟಿಟ್ಯೂಷನ್ ಅಮೆಂಡ್‌ಮೆಂಟ್ ತಂದಿದ್ದರು ಅದನ್ನು ಫೇಲ್ ಮಾಡಿದವರು ನೀವು. ಈಗ ಅದನ್ನೇ ಅಕ್ಸೆಪ್ಟ್ ಮಾಡಬೇಕೆಂದು ನಡೆಸಿದ್ದೀರಿ. ಜಿಲ್ಲಾ ಪರಿಷತ್ತುಗಳಿಗೆ ಈಗಿರುವುದಕ್ಕಿಂತ ಹೆಚ್ಚು ಪ್ರಬಲವಾಗಿ ಪ್ರಮಾಣಿಕವಾಗಿ ಕೆಲಸ ಮಾಡುವುದಕ್ಕೆ ಯಾವ ರೀತಿ ಮಾಡಬೇಕೆನ್ನುವದನ್ನು ವಿಚಾರ ಮಾಡುತ್ತಿದೆ. ಇದು ಹೋಗಬೇಕೆಂದು ಯಾರ ಇಚ್ಛೆ ಕೂಡ ಇಲ್ಲ.

ಮಾನ್ಯ ರೆವಿನ್ಯೂ ಮಂತ್ರಿಗಳಿಗೆ ಗೊತ್ತಿದೆ ನಾನು ಈ ವಿಚಾರಗಳಲ್ಲಿ ರಾಜಕೀಯ ಬೆರೆಸುವುದಿಲ್ಲ ಎಂದು. ನಾವು ಪ್ರಯತ್ನವನ್ನು ಮಾಡಿದ್ದೇವೆ ಈ ಪ್ರಯತ್ನ ಯಶಸ್ವಿಯಾಗಿದೆ ಎಂದು ನಾನು ಹೇಳುವುದಕ್ಕೆ ತಯಾರಿಲ್ಲ. ಮಾನ್ಯ ಚಿಕ್ಕೇಗೌಡರು ಏನು ಇದ್ದಾರೆ ಅವರು ತಾಲ್ಲೂಕು ಬೋರ್ಡ್

ಸದಸ್ಯರಾಗಿ ಅಧ್ಯಕ್ಷರಾಗಿ, ಶಾಸಕನಾಗಿ ಮಂತ್ರಿಗಳಾಗಿ ಕೆಲಸ ಮಾಡಿ ನಿನ್ನೆ ಕೃಷಿ ಇಲಾಖೆಯ ಬಗ್ಗೆ ಬಹಳ ಪ್ರಾಕ್ಟಿಕಲ್ ಆಗಿ ಬಹಳ ಚೆನ್ನಾಗಿ ಮನದಟ್ಟಾಗುವಂತೆ ಮಾತನಾಡಿದರು. ಅಲ್ಟಿಮೇಟಲೀ ಈ ಒಂದು ಸಿಸ್ಟಂನಲ್ಲಿ ಬರೀ ಬದಲಾವಣೆಯೇ ಹೊರತು ಪ್ರೊಡಕ್ಟಿವಿಟಿಯನ್ನು ಜಾಸ್ತಿ ಮಾಡತಕ್ಕಂಥದಾದ್ದು ಕೂಡ ಆಗಿಲ್ಲ, ಮೆಥಡ್ ಆಫ್ ಗವರ್ನಿಂಗ್‌ನಲ್ಲಿ ಬದಲಾವಣೆ ಅಷ್ಟೇ. ಬಹಳ ಹಿಂದೆಯೂ ಕೂಡ ಪಂಚಾಯತಿ, ತಾಲ್ಲೂಕು ಬೋರ್ಡ್, ಡಿ.ಡಿ.ಸಿ. ಇತ್ತು ಈಗ ಅದನ್ನು ತೆಗೆದು ಮಂಡಲ ಪಂಚಾಯಿತಿ, ಜಿಲ್ಲಾ ಪರಿಷತ್ ಮಾಡಿದ್ದೇವೆ. ಇದರಲ್ಲಿ ಮಧ್ಯದಲ್ಲಿರತಕ್ಕಂತಹ ಶಾಸಕರಾಗಲೀ ಇಲ್ಲವೇ ಮತ್ಯಾರಿಗಾಗಲೀ ಅಧಿಕಾರ ಇಲ್ಲ. ಒಟ್ಟಿನಲ್ಲಿ ಇದನ್ನು ಈ ಅಧಿಕಾರಗಳನ್ನು ಯಾರು ಚಲಾಯಿಸಬೇಕು ಎನ್ನುವದರ ಕಡೆಗೆ ನಮ್ಮ ದೃಷ್ಟಿ ಇದೆಯೇ ಹೊರತು ಗ್ರಾಮೀಣ ಪ್ರದೇಶಗಳಲ್ಲಿರತಕ್ಕಂತಹ ಜನಗಳ ಬದುಕಿನಲ್ಲಿ ಆಲ್ಟರ್‌ನೇಟೀವ್ ಸಿಸ್ಟಂ ಅನ್ನು ತರಬೇಕು. ಮೆಥಡ್ ಆಫ್ ಗವರ್ನಿಂಗ್ ಅನ್ನು ತರಬೇಕೆಂದು ಅಲ್ಲ. ಅಲ್ಲಿರತಕ್ಕಂತಹ ಸಮಸ್ಯೆಗಳನ್ನು ಬಗೆಹರಿಸಲಿಕ್ಕೆ ನಾವು ಸದುದ್ದೇಶದಿಂದ ಇದನ್ನು ಮಾಡಿದ್ದೇವೆ. 1962ರಲ್ಲಿ ಜವಹರಲಾಲ ನೆಹರೂರವರು ಪ್ರಧಾನಿ ಗಳಾಗಿದ್ದಾಗ ಎಸ್. ಕೆ. ರೇ ಅವರು ಗ್ರಾಮೀಣಾಭಿವೃದ್ಧಿಯ ಕಾನೂನನ್ನು ತಂದರು, ಅದು ಸಂಪೂರ್ಣವಾಗಿ ಯಶಸ್ವಿಯಾಯಿತೇ? ಪ್ರತಿ 5-10-15 ವರ್ಷಕ್ಕೆ ಕಾನೂನನ್ನು ಮಾಡುತ್ತಾ ಹೋಗುತ್ತೇವೆ, ಅದರಲ್ಲಿ ಬದಲಾವಣೆಗಳನ್ನು ಕೂಡ ತರಬೇಕಾಗುತ್ತದೆ. ಮಂಡಲ ಪಂಚಾಯಿತಿ ಜಿಲ್ಲಾಪರಿಷತ್ತಿನ ಕಾನೂನಿನಲ್ಲಿ ಏನು ಹೇಳಿದ್ದೇವೆಂದರೆ ಪ್ರತಿ ಹಳ್ಳಿಯಲ್ಲೂ, ಪ್ರತಿ ಗ್ರಾಮ ಮಟ್ಟದಲ್ಲಿಯೂ ಸಹ ಗ್ರಾಮ ಸಭೆಗಳನ್ನು ನಡೆಸಿ, ಅಲ್ಲಿ ಬೆನಿಫಿಷರೀಸ್ ಯಾರು ಇದ್ದಾರೆ ಎಂಬುದನ್ನು ಸೆಲೆಕ್ಟ್ ಮಾಡಬೇಕೆಂದು ನಾವು ಹೇಳಿದ್ದೇವೆ. ಯಾವ ಪಕ್ಷವೇ ಇರಲಿ ಎಲ್ಲಿಯಾದರೂ ಯಾವುದಾದರೂ ಒಂದು ಕಡೆ ಈ ಸಭೆ ನಡೆದಿದೆಯೇ ಎಂದು ಪ್ರಶ್ನೆ ಮಾಡಿದರೆ ನಡೆದಿಲ್ಲವೆಂದು ಹೇಳಬೇಕಾಗುತ್ತದೆ; ಈ ಸಭೆಯನ್ನು ನಡೆಸುವುದಕ್ಕೆ ಇತ್ತೀಚಿನ ಸ್ಥಿತಿಯಲ್ಲಿ ಸಾಧ್ಯವಿಲ್ಲ ಇದು ನಮಗೆ ಮನವರಿಕೆಯಾಗಿರತಕ್ಕಂತಹ ವಿಚಾರ ಗ್ರಾಮ ಸಭೆಗಳು ಇಡೀ ರಾಜ್ಯದಲ್ಲಿ ನಡೆಯಬೇಕೆಂದು ಕಾನೂನಲ್ಲಿ ಹೇಳಿದ್ದರೂ ಕೂಡ ಗ್ರಾಮದ ಹೆಸರಿನಲ್ಲಿ ಈ ಸಭೆಗಳನ್ನು ಅಲ್ಲಿ ನಡೆಸುವುದಕ್ಕಾಗಿಲ್ಲ.

ಇವತ್ತು ಏನಾಗಿದೆ? ರಾಜಕೀಯ ಎಲ್ಲಾ ಕಡೆ ಇದೆ. ಆ ಪಕ್ಷದವರು ಈ ಪಕ್ಷದವರು ಅವರು ಹೇಳಿದರು ಮಾಡುತ್ತಾರೆಂದು, ಇವರು ಹೇಳಿದರು ಮಾಡುತ್ತಾರೆಂದು ಅವರು ಇಲ್ಲಿ ಸಸಿ ನೆಡಿಸಿದರೆ ಇವರು ಅಲ್ಲಿ ಸಸಿ ನಡೆಸುವುದು ಈ ಒಂದು ಕಿತ್ತಾಟದಲ್ಲಿ ಇದ್ದಾರೆಯೇ ವಿನಃ ಬೇರೆ ಕೆಲಸ ಮಾಡುತ್ತಿಲ್ಲ. ಈಗ ಚೀಫ್ ಸೆಕ್ರಟರಿಗೆ ತಾವು ಎಗ್ಜಿಕ್ಯೂಟಿವ್ ಪವರ್ಸ್ ಕೊಡಬೇಕೆಂದು ಹೇಳುತ್ತಿದ್ದೀರಿ. ಚೀಫ್ ಸೆಕ್ರಟರಿ ಏನು ಸತ್ಯ ಹರಿಶ್ಚಂದ್ರನ ಮೊಮ್ಮಗನೇ? ಅವರು ನಮಗಿಂತ ಒಳ್ಳೆಯವರೋ. ಇದು ಏನಾಗುತ್ತದೆ. ಈ ಸಿಸ್ಟಂ ಬಗ್ಗೆ ನಮ್ಮ ಬಗ್ಗೆ ಜನರು ಚುನಾಯಿತ ಪ್ರತಿನಿಧಿಗಳನ್ನು ಆರಿಸಿ ಕಳುಹಿಸಿದ್ದಾರೆ. ನಾವು ಆರಿಸಿ ಬಂದಿದ್ದೇವೆ. ನಮ್ಮ ಬಗ್ಗೆ ಜನ ಸಾಮಾನ್ಯರು ವಿಶ್ವಾಸ ಕಳೆದುಕೊಳ್ಳುವ ರೀತಿಯಲ್ಲಿ ವರ್ತನೆ ನಾವು ಮಾಡುತ್ತಿದ್ದೇವೆ.

ಶ್ರೀ ಎನ್. ಚಿಕ್ಕೇಗೌಡ:- ಈಗ ತಮ್ಮ ಅಭಿಪ್ರಾಯ ಏನು? ಗ್ರಾಮ ಮಟ್ಟದಲ್ಲಿ ಪಕ್ಷಾತೀತವಾಗಿ ಇರಬೇಕೇ ಅಥವಾ ಪಕ್ಷಗಳು ಮಂಡಲ ಸದಸ್ಯತ್ವಕ್ಕೆ ಸ್ಪಂದಿಸಬೇಕೆ? ಇದರಲ್ಲಿ ತಮ್ಮ ನಿಲುವು ಏನು?

ಶ್ರೀ ಪಿ.ಜಿ.ಆರ್. ಸಿಂಧ್ಯ:- ನನ್ನ ವೈಯುಕ್ತಿಕ ಅಭಿಪ್ರಾಯದಲ್ಲಿ ಪಕ್ಷಗಳು ಅಲ್ಲಿ ಇರಲೇಬಾರದು. ಇದು ನನ್ನ ವೈಯಕ್ತಿಕ ಅಭಿಪ್ರಾಯ. ನಮ್ಮ ಪಕ್ಷದ್ದು ಎಂದು ನಾನು ಹೇಳುವುದಿಲ್ಲ. ಇಲ್ಲದಿದ್ದರೆ ನಾವು ಗ್ರಾಮ ಸ್ವರಾಜ್ಯ ಮಾಡುವುದಕ್ಕೆ ಆಗುತ್ತದೆಯೇ? ಯಾವ ಗ್ರಾಮದಲ್ಲಿ ಗ್ರಾಮ ಸಭೆಯನ್ನು ಇವತ್ತು ಮಾಡುವುದಕ್ಕೆ ಆಗುತ್ತದೆ. ಆ ಗ್ರಾಮ ಸಭೆಯಲ್ಲಿ ಬೆನಫಿಷರೀಸ್‌ಗಳನ್ನು ಗುರುತಿಸುವುದಕ್ಕೆ ಯಾರು ಇದ್ದಾರೆ? ಮೈಕ್ರೋ ಲೆವೆಲ್ ಪ್ಲಾನ್ ಕೆಳಮಟ್ಟದಲ್ಲಿ ಇರಲಿ ಎನ್ನುವ ದೃಷ್ಟಿಯಿಂದ ಇದನ್ನು ಮಾಡಬೇಕೆಂದು ನಾವು ಮಾಡಿದ್ದೇವೆ. ಈ ದೃಷ್ಟಿಯಿಂದ ಆಕ್ಟ್‌ಗೆ ತಿದ್ದುಪಡಿ ತರಬಾರದು ಎಂಬು ಹೇಳತಕ್ಕಂಥವನು ನಾನು ಅಲ್ಲ. ಈ ಒಂದು ರೊಟೇಶನ್ ಸಿಸ್ಟಂನಲ್ಲಿ ಎಲ್ಲರೂ ಸಹ ಪ್ರೆಸಿಡೆಂಟ್ ವೈಸ್ ಪ್ರೆಸಿಡೆಂಟ್ ಮಂಡಲ ಪ್ರಧಾನಗಿರಿ ಉಪಪ್ರಧಾನಗಿರಿ ತರುವುದಕ್ಕೆ ಪ್ರಯತ್ನ ಮಾಡಬೇಕೆಂದು

ನಾನೇ ಮಾನ್ಯ ಬಸವಲಿಂಗಪ್ಪನವರಿಗೆ ಹೇಳಿದ್ದೇನೆ. ಇದನ್ನು ನೀವು ಮಾಡಿ ಎಂದು. ಇವತ್ತು ನಾವು ಯಾವ ಒಂದು ದೃಷ್ಟಿಯಿಂದ ಇದನ್ನು ಅಧಿಕಾರ ವಿಕೇಂದ್ರೀಕರಣ ಮಾಡತಕ್ಕಂಥಾದ್ದು Basically what for we decentralise the power?

ಯಾವ ಒಂದು ಉದ್ದೇಶದಿಂದ ಅಧಿಕಾರ ವಿಕೇಂದ್ರೀಕರಣ ಮಾಡಬೇಕೆಂದು ನಾವು ಮಾಡಿದೆವೋ ಅದು ಸರಿಯಾಗಿದೆ. ಆದರೆ ಹಿಂದಿನ ಕಾಲದಲ್ಲಿ ರಾಜ ಮಹಾರಾಜರುಗಳು ಇದ್ದರು. ಈ ರಾಷ್ಟ್ರದಲ್ಲಿ ಪ್ರಧಾನ ಮಂತ್ರಿಗಳು, ರಾಷ್ಟ್ರಾಧ್ಯಕ್ಷರು ಇದ್ದರು ಅವರಿಗೆ ಈ ಅಧಿಕಾರ ಕೊಡಬಹುದಿತ್ತು. ಆದರೆ ಕೊಡಲಿಲ್ಲ. ಆ ದೃಷ್ಟಿಯಿಂದ ಇದನ್ನು ಮಾಡಿದ್ದುದು ಅಲ್ಲ. ಮೂಲಭೂತವಾದ ಉದ್ದೇಶ ಏನೆಂದರೆ ಇದರಲ್ಲಿ ಪೀಪಲ್ಸ್ ಪಾರ್ಟಿಸಿಪೇಶನ್ ಆಗಬೇಕು. ನಮ್ಮ ಸರ್ಕಾರದ ಎಕ್ಸೈಜ್‌ನಿಂದ 5 ವರ್ಷಗಳಲ್ಲಿ ನಾವು ಕೊಳ್ಳೆ ಹೊಡೆದಿರುವುದು 1500 ಕೋಟಿ ರೂಪಾಯಿಗಳು ಎಂದು ಏನು ಹೇಳುತ್ತಿದ್ದರು, ಈಗ 500 ಕೋಟಿ ರೂಪಾಯಿಗಳು ಏನು ಒಂದು ವರ್ಷದಲ್ಲಿ ಹೆಚ್ಚು ಬರುತ್ತಿದೆ. ಆ 500 ಕೋಟಿ ರೂಪಾಯಿಗಳಲ್ಲಿ ಎಲ್ಲಾ ಹಳ್ಳಿಗಳ ಅಭಿವೃದ್ಧಿ ಮಾಡುವುದಕ್ಕೆ ಆಗುತ್ತದೆಯೇ? ಸ್ವಾಮಿ, ಸಾಧ್ಯವಿಲ್ಲ. ಈ ರಿಸೋರ್ಸ್ ಪ್ರಾಬ್ಲಮ್ ಕೇವಲ ಕರ್ನಾಟಕ ರಾಜ್ಯಕ್ಕೆ ಅಥವಾ ಒಂದು ರಾಜ್ಯಕ್ಕೆ ಒಂದು ರಾಷ್ಟ್ರಕ್ಕೆ ಇಲ್ಲ. ಇಡೀ ದೇಶದಲ್ಲಿಯೇ ಈ ವಾತಾವರಣ ಇದೆ. ಬರತಕ್ಕಂಥ ಹಣದಲ್ಲಿ ನಾವು ಹಂಚಿಕೆ ಮಾಡತಕ್ಕಂತದ್ದರ ಬಗ್ಗೆ ಮಾತನಾಡತಕ್ಕಂಥಾದ್ದು ಬೇಡ. ನಾವು ಜನರನ್ನು ಸೋಮಾರಿಗಳನ್ನಾಗಿ ಮಾಡತಕ್ಕಂಥ ದೃಷ್ಟಿಯಿಂದ ನಾವು ಯಾರೂ ಪ್ರಯತ್ನವನ್ನು ಮಾಡತಕ್ಕಂಥ ಅಗತ್ಯ ಇಲ್ಲ. ಇಲ್ಲಿ ಜನಗಳು ಪಾರ್ಟಿಸಿಪೇಶನ್ ಹೇಗೆ ಮಾಡುತ್ತಾರೆ ಅಧಿಕಾರದ ವಿಕೇಂದ್ರೀಕರಣದ ಅಗತ್ಯ ಇದೆಯೇ ವಿನಹಃ ಯಾರನ್ನೋ ಜಿಲ್ಲಾ ಪರಿಷತ್ತು ಅಧ್ಯಕ್ಷರನ್ನಾಗಿ ಮಾಡಬೇಕು ಅಥವಾ ಸದಸ್ಯರನ್ನು ಮಾಡಬೇಕು. ಆ ದೃಷ್ಟಿಯಿಂದ ಅಲ್ಲ ಅಥವಾ ಯಾವುದೋ ಜನಗಳ ಕೈಗೆ ಕೆಲವು ವ್ಯಕ್ತಿಗಳ ಕೈಗೆ ಕೆಲವು ಪಕ್ಷಗಳಿಗೆ ಅಧಿಕಾರವನ್ನು ಕೊಡಬೇಕೆಂದು ತಂದಿದ್ದುದು ಅಲ್ಲ. ಇವತ್ತು ಮೂಲಭೂತವಾಗಿ ನಾವು ಯೋಚನೆ ಮಾಡೋಣ. ಒಂದು ಹಳ್ಳಿಯಲ್ಲಿ ನಾವು ಗುಂಡುತೋಪು ಬೆಳೆಸಬೇಕೆಂದು ಎಷ್ಟು ಜನರು ಯೋಚನೆ ಮಾಡುತ್ತಿದ್ದಾರೆ. ಫಾರೆಸ್ಟ್ ಬೆಳೆಸಬೇಕೆಂದು ಎಷ್ಟು ಜನರು ಯೋಚನೆ ಮಾಡುತ್ತಿದ್ದಾರೆ? ಇರತಕ್ಕಂತಹ ಮರಗಳನ್ನು ಹಾಳು ಮಾಡುತ್ತಿದ್ದಾರೆ. ನಮ್ಮ ಊರಿಗೆ ಬೇಕಾದಂತಹ ಗುಂಡು ತೋಪನ್ನು ನಾವು ಬೆಳೆಸಿಕೊಳ್ಳಬೇಕು ಎನ್ನುವ ಒಂದು ಭಾವನೆ ಜನಗಳಲ್ಲಿ ಬರಬೇಕು. ಹಿಂದಿನ ಕಾಲದಲ್ಲಿ ಗೋಡು ಹೊಡೆಯುತ್ತಿದ್ದರು. ಮಳೆಗಾಲ ಮತ್ತು ಬೇಸಿಗೆ ಕಾಲ ಬಂತೆಂದರೆ ಪ್ರತಿಯೊಬ್ಬರು ನಮ್ಮ ಊರಿನ ಕುಂಟೆಗಳಿಂದ ಮತ್ತು ಕೆರೆಗಳಿಂದ ಗೋಡು ಮಣ್ಣು ಹೊಡಿಯುತ್ತಿದ್ದರು. ಇವತ್ತು ನೀವೇ ಯೋಚನೆ ಮಾಡಿ ಯಾರು ಗೋಡು ಮಣ್ಣು ತಮ್ಮ ಹೊಲಗಳಿಗೆ ಹೊಡೆಯುತ್ತಾರೆ? ಮಳೆ ಬಂದ ತಕ್ಷಣ ಮುಂಚಿತವಾಗಿ ಯಾರೂ ಬೀಜ ಬಿತ್ತನೆ ಮಾಡುವುದಕ್ಕೆ ಹೋಗುವುದಿಲ್ಲ. ಅಲ್ಲಿ ಮೊದಲು ಚವರಿಗಳನ್ನು ಸರಿ ಮಾಡಿಕೊಳ್ಳುತ್ತಾರೆ. ಆಮೇಲೆ ನೀರಿನ ಎಕ್ಕರೆಗಳನ್ನು ಸರಿ ಮಾಡುವುದಕ್ಕೆ ಹೋಗುತ್ತಾರೆ. ಇದೆ ಸಾಯಿಲ್ ಕನ್‌ಜರವೇಶನ್. ಇದರ ಬಗ್ಗೆ ಎಷ್ಟು ವಿಚಾರ ನಡೆಸಿದ್ದೇವೆ? ಇನ್ನು ವಾಟರ್ ಕನ್‌ಜರ್‌ವೇಶನ್ ಬಗ್ಗೆ ನಾವು ಎಷ್ಟು ಯೋಚನೆ ಮಾಡಿದ್ದೇವೆ. ಹಿಂದೆ ಎಲ್ಲಾದರೂ ಜಾಗ ಇದ್ದರೆ ಅಲ್ಲಿ ಒಂದು ಕುಂಟೆ ಕಟ್ಟಲಿಕ್ಕೆ ಹೋಗುತ್ತಿದ್ದೆವು. ಏತಕ್ಕೆ? ಈಗ ನಾವು ಯಾವ ದೃಷ್ಟಿಯಲ್ಲೂ ಸಹ ಯೋಚನೆ ಮಾಡಲಿಕ್ಕೆ ಆಗದೆ ಇರುವ ಪರಿಸ್ಥಿತಿ ಇದೆ. ಇನ್ನು ಆಲ್ಟರ್‌ನೇಟೀವ್ ಎನರ್ಜಿ ಬಗ್ಗೆ ನಾವ್ಯಾರು ಯೋಚನೆ ಮಾಡುತ್ತಿದ್ದೇವೆ? ದಯಾಮಾಡಿ ಹೇಳಿ. ಇವತ್ತು ಸಹ ಈ ಬಗ್ಗೆ ಯೋಚನೆ ನಡೆಯುತ್ತಿಲ್ಲ. ಇನ್ನು ಅಗ್ರಿಕಲ್ಚರ್ ಪ್ರೊಡಕ್ಷನ್ ಜಾಸ್ತಿ ಮಾಡುವುದು ಡೈರಿ ಮಾಡತಕ್ಕಂಥಾದ್ದು ಯೂನಿವರ್ಸಲ್ ಎಜುಕೇಶನ್ ಕೊಡತಕ್ಕಂಥಾದ್ದು ಹೆಲ್ತ್ ಕೇರ್, ಇದನ್ನು ನಾವು ಗ್ರಾಮಗಳಲ್ಲಿ ಮಾಡಿದರೆ ಮಾತ್ರ ಆಗ ಗ್ರಾಮಗಳ ಸರ್ವಾಂಗೀಣ ಅಭಿವೃದ್ಧಿ ಪ್ರಗತಿ ಆಗುತ್ತದೆ. ಅದು ಆಗಬೇಕೆನ್ನುವ ದೃಷ್ಟಿಯಿಂದ ನಾವು ವಿಚಾರ ಮಾಡಬೇಕಾದರೆ ಜನಗಳ ಒಂದು ಪಾರ್ಟಿಸಿಪೇಶನ್ ಬೇಕಾಗುತ್ತದೆ. ಮಾನ್ಯ ಅಬ್ದುಲ್ ನಜೀರ್‌ಸಾಬ್‌ರವರ ಕನಸು ಅದು ಇತ್ತು ನನಗೆ ಗೊತ್ತಿದ್ದಹಾಗೆ ಜನಗಳು ಭಾಗವಹಿಸದೆ ಹೋದರೆ ಯಾವ ಕಾರ್ಯಕ್ರಮ ಸಹ ಮಾಡಲಿಕ್ಕೆ ಆಗುವುದಿಲ್ಲ.

ಇವತ್ತು ಅನೇಕ ಮಾನ್ಯ ಮಿತ್ರರು ಜಿಲ್ಲಾ ಪರಿಷತ್ತು ಅಂದ ತಕ್ಷಣವೇ, ಮಂಡಲ ಪಂಚಾಯಿತಿ ಅಂದ ತಕ್ಷಣವೇ, ಇದಕ್ಕೆ ರಾಜಕೀಯವನ್ನು ಬೆರಸಲಿಕ್ಕೆ ಹೋಗುತ್ತಾರೆಂದು ಹೇಳುತ್ತಾರೆ. ಜನತಾದಳ ದವರು ಅಲ್ಲಿದ್ದಾರೆ, ನಮಗೆ ಅನ್ಯಾಯ ಮಾಡುತ್ತಿದ್ದಾರೆ ಅನ್ನತಕ್ಕಂತಾದ್ದು ಒಂದು ಕಡೆ, ಇವರು ನಮ್ಮ ಅಧಿಕಾರವನ್ನು ಕಿತ್ತುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆಂದು ಮತ್ತೊಂದು ಕಡೆ. ಈ ಚರ್ಚೆಯಲ್ಲಿ ಹೋಗುತ್ತಿದೆಯೇ ವಿನಹ ಎಲ್ಲರೂ ಇದರಲ್ಲಿ ರಾಜಕೀಯವನ್ನು ಬೆರೆಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆಯೇ ವಿನಹ ಗ್ರಾಮೀಣಾಭಿವೃದ್ಧಿ ಬಗ್ಗೆ ಚರ್ಚೆ ಮಾಡುವುದಕ್ಕೆ ನಾವು ಹೆಚ್ಚು ಒತ್ತು ಕೊಡುವುದಕ್ಕೆ ಪ್ರಯತ್ನ ಮಾಡುತ್ತಿಲ್ಲ. ಸ್ವಾಮಿ, ಒಂದು ಪ್ರಯತ್ನವನ್ನು ನಮ್ಮ ಸರ್ಕಾರ ಮಾಡಿತ್ತು, ಜಿಲ್ಲಾಪರಿಷತ್ತುಗಳನ್ನು ಮಂಡಲ ಪಂಚಾಯಿತಿಗಳನ್ನು ತೆಗೆದುಕೊಂಡು ಬಂದು ಒಂದು ಆಲ್ಟರ್‌ನೇಟಿವ್ ಸಿಸ್ಟಮ್ ತರುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಇವತ್ತು ಜನ ನಿಮ್ಮ ಕೈಗೆ ಅಧಿಕಾರ ಕೊಟ್ಟಿದ್ದಾರೆ. ಈ ಸಿಸ್ಟಂನ್ನು ಸ್ಟ್ರೆಂಗ್ತನ್ ಮಾಡಿ. ಗ್ರಾಮಾಂತರ ಪ್ರದೇಶಗಳಲ್ಲಿರ ತಕ್ಕಂಥ ಜನಗಳು ಇದರಲ್ಲಿ ಭಾಗವಹಿಸಲಿ. ಇದರ ಬಗ್ಗೆ ಏನು ಮಾಡಬೇಕೆಂಬುದರ ಬಗ್ಗೆ ನಾವೂ ನೀವೂ ಹೆಚ್ಚಿನ ಗಮನವನ್ನು ಕೊಡೋಣ.

ಶ್ರೀ ಎನ್. ಚಿಕ್ಕೇಗೌಡ:- ಜಿಲ್ಲಾಪರಿಷತ್ತು ಮತ್ತು ಮಂಡಲ ಪಂಚಾಯಿತಿ ಬಂದು ಮೂರುವರೆ ವರ್ಷ ಆಯಿತು. ಮೂರುವರೆ ವರ್ಷದಲ್ಲಿ ಏನು ಅನುಭವ ಆಗಿದೆ? ಅಲ್ಲಿ ಏನು ದುರುಪಯೋಗವಾಗುತ್ತಿದೆ, ಅಲ್ಲಿ ಏನು ದುರಾಡಳಿತವಾಗುತ್ತಿದೆ ಅಲ್ಲಿ. ಏನು ಆಗಿಲ್ಲವೆಂದು ತಾವು ಹೇಳುವುದಾದರೆ ತಮ್ಮನ್ನು ನಾನು ಏನು ಪ್ರಶ್ನೆ ಮಾಡುವುದಿಲ್ಲ. ಈ ಮೂರೂವರೆ ವರ್ಷದಲ್ಲಿ ಏನಾಗಿದೆ ಎಂಬುದನ್ನು ನೋಡಿಕೊಂಡು ಈ ಕಾಯಿದೆಗೆ ತಿದ್ದುಪಡಿ ತರುತ್ತೇವೆ. ನಮ್ಮ ಪಕ್ಷದ ಮತ್ತು ನಮ್ಮ ಚಿಂತನೆ ಈ ಮೂರೂವರೆ ವರ್ಷದಲ್ಲಿ ಏನು ಅನುಭವ ಆಗಿದೆ, ತಾವೇ ಹೇಳಿದಿರಿ, ಗ್ರಾಮ ಸಭೆ ನಡೆಯುವುದಿಲ್ಲ, ಪೀಪಲ್ಸ್ ಇದರಲ್ಲಿ ಪಾರ್ಟಿಸಿಪೇಷನ್ ನಡೆಯುತ್ತಿಲ್ಲ, ಇಲ್ಲಿ ಮೂರು ಜನ ಸೇರಿಕೊಳ್ಳುತ್ತಾರೆ. ಒಬ್ಬ ಅಧಿಕಾರಿ, ಒಬ್ಬ ಸದಸ್ಯ ಮತ್ತೊಬ್ಬ ಕಾರ್ಯದರ್ಶಿ, ಸೇರಿಕೊಂಡು ಎಲ್ಲರೂ ರೋಜ್‌ಗಾರ್ ಯೋಜನೆಯಲ್ಲಿ ನಮ್ಮ ರಾಜೀವ್‌ಗಾಂಧಿಯವರು ನೇರವಾಗಿ ಕೊಟ್ಟಂಥ 7-8 ಲಕ್ಷ ರೂಪಾಯಿಗಳನ್ನು ಒಂದೊಂದು ಪಂಚಾಯಿತಿಗೆ ಕೊಟ್ಟರು. ಅವರು ಏನು ಮಾಡಿದರು? ಒಂದು ಕಡೆಗೂ ಮಣ್ಣು ಹಾಕಲಿಲ್ಲ ಒಂದು ಕಡೆಯೂ ಅಭಿವೃದ್ಧಿಯಾಗಲಿಲ್ಲ. ಯಾರೊಬ್ಬರೂ ಇದರಲ್ಲಿ ಪಾರ್ಟಿಸಿಪೇಟ್ ಮಾಡಲಿಲ್ಲ.

ಶ್ರೀ ವಾಟಾಳ್ ನಾಗರಾಜ್:- ಮಂಡಲ ಪಂಚಾಯಿತಿ ಅಧ್ಯಕ್ಷರು, ರೋಜ್‌ಗಾರ್ ಹಣವನ್ನು ತಿಂದರು ಎಂದು ನಿನ್ನೆಯೂ ಇದರ ಪ್ರಸ್ತಾಪ ಬಂತು ಅದು ಸರಿಯಲ್ಲ. ಇದು ಸರಿಯಾದ ವಾದ ಅಲ್ಲ. ಎಲ್ಲೋ ಒಂದು ಕಡೆ ಅನ್ಯಾಯ ಆಗಿರಬಹುದು, ಎಲ್ಲಾ ಮಂಡಲ ಪಂಚಾಯಿತಿಯವರು ರೋಜ್‌ಗಾರ್ ಹಣವನ್ನು ತಿಂದರು ಎಂದು ಹೇಳುವುದಾದರೆ ಇದು ಸಮಂಜಸವಲ್ಲ.

ಶ್ರೀ ಎಲ್.ಆರ್. ಶಿವರಾಮೇಗೌಡ:- ಎಲ್ಲಾ ಅಲ್ಲ, ನೂರಕ್ಕೆ 95 ಮಂಡಲ ಪಂಚಾಯಿತಿಯವರು ತಿಂದಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಜಿಲ್ಲಾ ಪರಿಷತ್ತಿನಲ್ಲಿ ತೆಗೆದುಕೊಂಡಿರತಕ್ಕ ಕೆಲಸಗಳ ಕ್ವಾಲಿಟಿ ಬಹಳ ಚೆನ್ನಾಗಿದೆಯೆಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಕ್ವಾಲಿಟಿ ಆಫ್ ವರ್ಕ್ ಇಂಪ್ರೂವ್‌ಮೆಂಟ್ ಆಗಿದೆಯೆಂದು ನಾನು ಹೇಳಲಿಲ್ಲ. ಮಂಡಲ ಪಂಚಾಯಿತಿ ಮತ್ತು ಜಿಲ್ಲಾಪರಿಷತ್ತುಗಳು ಬಂದ ಮೇಲೆ ಗ್ರಾಮಾಂತರ ಪ್ರದೇಶಗಳಲ್ಲಿ ನಡೆಯತಕ್ಕಂಥ ಅಭಿವೃದ್ಧಿ ಕೆಲಸ ಏನಿದೆ, ಅದು ಸೇತುವೆ ಇರಬಹುದು, ರಸ್ತೆ ಕೆಲಸ ಇರಬಹುದು, ಮತ್ತೊಂದು ಇರಬಹುದು, ಕ್ವಾಲಿಟಿ ಆಫ್ ವರ್ಕ್ ಇಂಪ್ರೂವ್‌ಮೆಂಟ್ ಆಗಿದೆಯೆಂದು ನಾನು ಹೇಳುತ್ತಿಲ್ಲ. ತಾವು ಅದನ್ನು ಕೇಳುವುದಕ್ಕೆ ತಯಾರಿಲ್ಲ. ನೀವು ರಾಜೀವ್ ಗಾಂಧಿಯವರ ಹೆಸರು ಹೇಳಿದರೆ ನಾವು ವಿ.ಪಿ.ಸಿಂಗ್‌ರ ಹೆಸರು ಹೇಳುತ್ತೇವೆ, ಅಥವಾ ರಾಮಕೃಷ್ಣ ಹೆಗಡೆಯವರ ಹೆಸರು ಹೇಳುತ್ತೇವೆ. ಅವರು ಎಷ್ಟು ಕೊಟ್ಟಿದ್ದಾರೆಂದು ಅಂಕಿ ಅಂಶಗಳನ್ನು ಕೊಡಿ, ನಾವು ಒಂದಷ್ಟು ಅಂಕಿ ಅಂಶಗಳನ್ನು ಕೊಡುತ್ತೇವೆ. ಅಂಕಿ ಅಂಶಗಳ ಗುದ್ದಾಟದಲ್ಲೇ ನಾವು ಇರೋಣವೆ? ಅಥವಾ ಅತಿ ಕೆಳಮಟ್ಟಕ್ಕೆ ಹೋಗಿ ನೋಡೋಣವೆ? 1968 ರಲ್ಲೂ ಇದೇ ತರದ

ಒಂದು ಪ್ರಯತ್ನ ನಡೆದಿತ್ತು. ಅದೇ ರೀತಿಯಲ್ಲಿ ಇವತ್ತು ಒಂದು ಪ್ರಯತ್ನವನ್ನು ನಾವು ಗ್ರಾಮಾಂತರ ಪ್ರದೇಶಗಳ ಅಭಿವೃದ್ಧಿ ದೃಷ್ಟಿಯಿಂದ ಜನರು ಪಾರ್ಟಿಸಿಪೇಷನ್ ಮಾಡಬೇಕು, ಡೆವಲಪ್‌ಮೆಂಟ್ ವರ್ಕ್ ಮಾಡಬೇಕೆನ್ನುವ ಉದ್ದೇಶದಿಂದ ಮಾಡಿದ್ದೇವೆ. ಅದರಲ್ಲಿ ಅಡಚಣೆಗಳಿದ್ದರೆ, ಎಡರು ತೊಡರುಗಳಿದ್ದರೆ, ಸಮಾಜದ ಸರ್ವಾಂಗೀಣ ಪ್ರಗತಿ ಆಗದೇ ಹೋದಲ್ಲಿ ಬೇಕಾದ ಬದಲಾವಣೆಗಳನ್ನು ತರೋಣ. ನಾವು, ನೀವೂ ಕುಳಿತು ಏನು ಬದಲಾವಣೆ ತರಬೇಕೆಂದು ಪಕ್ಷಾತೀತವಾಗಿ ವಿಚಾರ ಮಾಡೋಣ. ಈಗ ಚಿತ್ರದುರ್ಗದ ಜಿಲ್ಲೆಯಲ್ಲಿ ಒಂದು ಪಕ್ಷದ ಆಡಳಿತ ಇದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಂದು ಪಕ್ಷದ ಆಡಳಿತ ಇದೆ. ಕೊಡಗು ಜಿಲ್ಲೆಯಲ್ಲಿ ಒಂದು ಪಕ್ಷದ ಆಡಳಿತ ಇದೆ. ಜಿಲ್ಲಾ ಪರಿಷತ್ತುಗಳು ಕಳೆದ ಮೂರ್‍ನಾಲ್ಕು ವರ್ಷಗಳಲ್ಲಿ ಏನಾಗಿವೆ ಎಂಬುದನ್ನು ತಾವು ಗಮನದಲ್ಲಿ ಇಟ್ಟುಕೊಳ್ಳಬೇಕು.ಕೇವಲ ಬೆಂಗಳೂರು ಗ್ರಾಮಾಂತರ ಜಿಲ್ಲೆ, ಕೋಲಾರ ಜಿಲ್ಲೆಯಷ್ಟೇ ಗಮನದಲ್ಲಿಟ್ಟುಕೊಳ್ಳುವುದು ಬೇಡ. ಇವೆಲ್ಲವನ್ನೂ ಸಮಗ್ರವಾಗಿ ವಿಚಾರ ಮಾಡಿ ಜನಗಳ ಪಾರ್ಟಿಸಿಪೇಷನ್ ಮಾಡಲಿಕ್ಕೆ ಇದರ ಬೇಸಿಕ್ ಕಾನ್‌ಸೆಪ್ಟ್ ಏನಿದೆ, ನಮ್ಮ ರಿಸೋರ್ಸ್‌ಗಳನ್ನು ಹೆಚ್ಚು ಮಾಡಲಿಕ್ಕೆ, ಇರತಕ್ಕಂಥ ರಿಸೋರ್ಸ್‌ನ್ನು ಸಂಪೂರ್ಣವಾಗಿ ಹಂಚಿಕೊಳ್ಳಲಿಕ್ಕೆ ಏನು ಪ್ರಯತ್ನ ಮಾಡಬೇಕು? ಯಾವ ದಿಕ್ಕಿನಲ್ಲಿ ಸಾಗಿದರೆ ಗ್ರಾಮೀಣಾಭಿವೃದ್ಧಿ ಸಾಧ್ಯ ಎಂದು ಯೋಚನೆ ಮಾಡಬೇಕು. ಈ ದೃಷ್ಟಿಯನ್ನು ಇಟ್ಟುಕೊಂಡು ಮಾನ್ಯ ಸಚಿವರು ಈ ಮಸೂದೆಗೆ ತಿದ್ದುಪಡಿ ತಂದರೆ ಅದನ್ನು ನಾವು ಗಮನದಲ್ಲಿಟ್ಟುಕೊಂಡು ವಿಚಾರ ಮಾಡುತ್ತೇವೆಂದು ಹೇಳುತ್ತೇನೆ. ಈ ಮೂರು ಜನ ಮಂತ್ರಿಗಳು ಏನು ಇಲಾಖೆಯ ಬೇಡಿಕೆಗಳನ್ನು ಮಂಡಿಸಿದ್ದಾರೆ, ಅದನ್ನು ನಾನು ವಿರೋಧ ಮಾಡುತ್ತೇನೆ, ರಾಜ್ಯಪಾಲರ ಆಡಳಿತಕ್ಕೂ ಈಗಿರುವ ಚುನಾಯಿತ ಸರ್ಕಾರಕ್ಕೂ ಯಾವುದೇ ರೀತಿಯ ವ್ಯತ್ಯಾಸ ಇಲ್ಲವೆಂದು ಜನಗಳು ಬೀದಿ ಬೀದಿಯಲ್ಲಿ ಹೇಳುತ್ತಿದ್ದಾರೆ. ಈ ಸರ್ಕಾರಕ್ಕೆ ಜೀವವೇ ಇಲ್ಲವೆಂದು ಹೇಳಿ ಇನ್ನೊಂದು ಕಡೆ ದುರ್ಬಲ ವರ್ಗದವರ ಮೇಲೆ, ಬಡವರ ಮೇಲೆ ಏನು ಹಿಂದೆ ನಡೆಯುತ್ತಿತ್ತೋ ಅದನ್ನು ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. ಯಾವುದೇ ರೀತಿಯ ಒಂದು ಬದಲಾವಣೆಯಾಗಿದೆ ಎಂದು ನಾನು ತಿಳಿದಿಲ್ಲ.

೧೧.೦೫ ಎ.ಎಂ.

ಸರಕಾರಿ ಆಡಳಿತ ಯಂತ್ರದ ದಿಕ್ಕು ತಪ್ಪಿ ಹೋದ ಹಾಗೆ ಆಗಿವೆ. ಅಧಿಕಾರಿಶಾಹಿಯು ತನ್ನ ಪ್ರಾಬಲ್ಯವನ್ನು ಹೆಚ್ಚಿಗೆ ಮಾಡುತ್ತಾ ಇದೆ. ಈ ಸರಕಾರದವರು ಏನೇನು ಘೋಷಣೆಗಳನ್ನು ಮಾಡಿದ್ದಾರೋ ಅವುಗಳೆಲ್ಲವೂ ಪೊಳ್ಳು ಘೋಷಣೆಗಳು ಎಂದು ಹೇಳಿ, ಮಾನ್ಯ ಮುಖ್ಯಮಂತ್ರಿಯವರು ಮಂಡಿಸಿದ ಬೇಡಿಕೆಗಳನ್ನು ಸಂಪೂರ್ಣವಾಗಿ ವಿರೋಧಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ವಿನಯ್‌ಕುಮಾರ್ ಸೊರಕೆ (ಪುತ್ತೂರು):- ಮಾನ್ಯ ಅಧ್ಯಕ್ಷರೆ, ನಿನ್ನೆಯ ದಿವಸ ಮಾನ್ಯ ಗ್ರಾಮೀಣ ಅಭಿವೃದ್ಧಿ ಸಚಿವರು, ಮಾನ್ಯ ಅರಣ್ಯ ಸಚಿವರು, ಮಾನ್ಯ ಕೃಷಿ ಸಚಿವರು ಹಾಗೂ ಮಾನ್ಯ ಮುಖ್ಯಮಂತ್ರಿಯವರು ಮಂಡಿಸಿದಂಥ ಬೇಡಿಕೆಗಳನ್ನು ಸ್ವಾಗತಿಸುತ್ತಾ ಕೆಲವು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಗ್ರಾಮೀಣ ಆಡಳಿತ ಇಲಾಖೆಯ ಮಟ್ಟಿಗೆ ಈಗಾಗಲೇ ನಮ್ಮ ವಿರೋಧಿ ಪಕ್ಷದ ಮಾನ್ಯ ಸದಸ್ಯರುಗಳು, ಹಾಗೂ ನಮ್ಮ ಪಕ್ಷದ ಅನೇಕ ಮಾನ್ಯ ಸದಸ್ಯರುಗಳು ಅವರವರ ಅನಿಸಿಕೆಗಳನ್ನು ವ್ಯಕ್ತ ಮಾಡಿದ್ದಾರೆ. ಇರುವಂಥ ವಿಚಾರಗಳನ್ನು ಸ್ಪಷ್ಟವಾಗಿ ಅವಲೋಕಿಸಿದರೆ, ಮಹಾತ್ಮಾ ಗಾಂಧೀಜೀಯವರ ಕನಸನ್ನು ನನಸುಮಾಡುವಂಥ ಈ ಒಂದು ಪಂಚಾಯತ್‌ರಾಜ್ ವ್ಯವಸ್ಥೆಯನ್ನು ಕಾರ್ಯ ರೂಪಕ್ಕೆ ತರುವಂಥ ಪ್ರಯತ್ನ ನಾವು ಇಳಿದಿದ್ದೇವೋ ಅದರ ಅನುಷ್ಠಾನ ಯಾವ ರೀತಿಯಾಗಿ ಆಯಿತು? ಮತ್ತು ಅದೇ ರೀತಿಯಾಗಿ ಅದು ನಡೆದು ಬಂದಂಥ ದಾರಿ ಯಾವುದು? ಮತ್ತು ಅದು ಇಲ್ಲಿಯವರೆಗೆ ಯಾವರೀತಿಯ ಪರಿಣಾಮವನ್ನು ಜನತೆಯ ಮೇಲೆ ಬೀರಿದೆ ಎಂದು ಅವಲೋಕಿಸಿದರೆ ನಮ್ಮ ಅನಿಸಿಕೆಗಳ ಪ್ರಕಾರ ಈ ಪಂಚಾಯತ್‌ರಾಜ್ ವ್ಯವಸ್ಥೆಯನ್ನು ಈ ರಾಜ್ಯದಲ್ಲಿ ತರಬೇಕೆಂಬ ಆ ಒಂದು ತೀರ್ಮಾನವನ್ನು ತೆಗೆದುಕೊಂಡ ಸಂದರ್ಭದಲ್ಲಿ ಹೆಚ್ಚಾಗಿ ರಾಜ್ಯದಲ್ಲಿ ಮಾತ್ರವಲ್ಲ,

ರಾಷ್ಟ್ರಮಟ್ಟದಲ್ಲಿಯೂ ಆ ದಿನಗಳಲ್ಲಿ ದೊಡ್ಡ ಪ್ರಚಾರ ನಡೆಯಿತು. ರಾಜ್ಯದಲ್ಲಿ ಎರಡು ಸಾರಿ ಜನತೆಯು ಆ ಸರಕಾರಕ್ಕೆ ಬಹುಮತವನ್ನು ಕೊಟ್ಟರು ಎನ್ನುವಂಥ ಒಂದು ಪ್ರಚಾರವನ್ನು ರಾಷ್ಟ್ರಮಟ್ಟದಲ್ಲಿ ಮಾಡಿದ್ದರು. ಈ ವ್ಯವಸ್ಥೆಯ ಮಟ್ಟಿಗೆ ನಮ್ಮ ಅನಿಸಿಕೆ ಏನೆಂದರೆ, ಪಂಚಾಯತ್‌ರಾಜ್ ವ್ಯವಸ್ಥೆಗೆ ನಿಜವಾಗಿಯೂ ಒಂದು ಅರ್ಥ ಬರಬೇಕೆನ್ನುವ ರೀತಿಯಲ್ಲಿ ಕಾರ್ಯಕ್ರಮಗಳನ್ನು ಹಾಕಿಕೊಂಡು ತಂದಿಲ್ಲ. 1985ನೇ ಇಸವಿಯಲ್ಲಿ ಶ್ರೀ ರಾಮಕೃಷ್ಣ ಹೆಗಡೆಯವರ ನೇತೃತ್ವದಲ್ಲಿ ಜನತಾಪಕ್ಷದ ಸರಕಾರ ಬಂದಂಥ ಸಂದರ್ಭದಲ್ಲಿ 139 ಜನ ಶಾಸಕರು ಆರಿಸಿ ಬರುತ್ತಾರೆ ಎಂಬಂಥ ಒಂದು ವಿಶ್ವಾಸದ ಅನಿಸಿಕೆ ಆಗ ಅವರಲ್ಲಿಯೂ ಇಲ್ಲವಾಗಿತ್ತು. ಈ ಒಂದು ಹೆಚ್ಚಿಗೆ ಬಹುಮತ ಬಂದಂಥ ಪಕ್ಷಕ್ಕೆ ಮುಕ್ತಾಯ ಹಾಕಬೇಕೆನ್ನುವ ರೀತಿಯಲ್ಲಿ ಪಂಚಾಯತ್‌ರಾಜ್ ವ್ಯವಸ್ಥೆಯನ್ನು ಅನುಷ್ಠಾನಕ್ಕೆ ತಂದರೂ ಎಂಬ ಅಭಿಪ್ರಾಯ ನಮ್ಮಲ್ಲಿ ಬರುತ್ತಾ ಇದೆ. ಕೇಂದ್ರ ಸರಕಾರದ ವತಿಯಿಂದ ಬರುತ್ತಿದ್ದಂಥ ಯೋಜನೆಗಳನ್ನು ಅವುಗಳು ಯಾವುದೇ ಇರಲಿ, ಎನ್‌ಆರ್‌ಇಪಿ, ಐಆರ್‌ಡಿಪಿ., ಯಾವುದೇ ಇರಲಿ, ಅವುಗಳನ್ನು ರಾಜೀವ್‌ಗಾಂಧೀಯವರು ಅನುಷ್ಠಾನಗೊಳಿಸುತ್ತಿದ್ದ ಸಂದರ್ಭದಲ್ಲಿ, ಅವುಗಳನ್ನು ರಾಜ್ಯಗಳಿಗೆ ಅನುಷ್ಠಾನಕ್ಕಾಗಿ ಕಳುಹಿಸುತ್ತಿದ್ದ ಸಂದರ್ಭದಲ್ಲಿ ಯಥೇಚ್ಛವಾಗಿ ಅವುಗಳನ್ನು ರಾಜ್ಯ ಸರಕಾರದವರು ಬಳಸಿಕೊಂಡು ಪ್ರಚಾರವನ್ನು ತಮ್ಮ ಕಡೆಗೆ ಮಾಡಿಕೊಂಡು; ಆ ಒಂದು ಉದ್ದೇಶದಿಂದ ಈ ಪಂಚಾಯತ್‌ರಾಜ್ ವ್ಯವಸ್ಥೆಯ ಕಾರ್ಯಕ್ರಮವನ್ನು ಹಾಕಿದ್ದಾರೋ ಏನೋ ಎನ್ನುವ ಒಂದು ಭಾವನೆಯು ಬರುತ್ತದೆ. ಅದೇ ರೀತಿಯಲ್ಲಿ ಆಗ ನಾವೆಲ್ಲರೂ ವಿರೋಧ ಪಕ್ಷದವರು ಮತ್ತು ಆಡಳಿತ ಪಕ್ಷದವರು ಈ ಪಂಚಾಯತ್‌ರಾಜ್ ವ್ಯವಸ್ಥೆಯು ಅನುಷ್ಠಾನಕ್ಕೆ ಸಂಪೂರ್ಣವಾದಂಥ ಸಹಕಾರವನ್ನು ಬೆಂಬಲವನ್ನು ಕೊಟ್ಟಿದ್ದೇವೆ. ಆವೊತ್ತು ಈ ವ್ಯವಸ್ಥೆಯ ಅನುಷ್ಠಾನ ಆಗುವಂಥ ಸಂದರ್ಭದಲ್ಲಿ ಇತರ ಚುನಾವಣೆಗಳು ಯಾವ ರೀತಿಯಲ್ಲಿ ನಡೆಯಲ್ಪಟ್ಟಿತು ಎಂದು ಹೇಳುವುದಕ್ಕೆ ಬೇಸರವಾಗುತ್ತದೆ. ಅದರ ಹಿಂದಿನ ರಾತ್ರಿ ಮತ್ತು ದಿನಗಳ ಚಟುವಟಿಕೆಗಳನ್ನು ಅವಲೋಕಿಸಿದರೆ ಚರಿತ್ರೆಯಲ್ಲಿ ಅಂಥ ಒಂದು ಕರಾಳ ರಾತ್ರಿ ಬಂದಿರಲಾರದು ಮತ್ತು ಬರುವುದು ಬೇರೆ ಎಂದು ಹೇಳ ಬಯಸುತ್ತೇನೆ. ಆವೊತ್ತು ಯಾವ ಅಬಕಾರಿ ದೊರೆಗಳು ಇದ್ದಾರೆ ಅವರುಗಳು ವಿಪುಲವಾಗಿ, ಯಥೇಚ್ಛವಾಗಿ ಹೆಂಡ-ಸಾರಾಯಿಗಳನ್ನು ಸರಬರಾಜು ಮಾಡುವುದರ ಮೂಲಕ ಹಣ ಹಂಚಿಕೆಯ ಮೂಲಕ ಮಾಡಿದ ಕಾರ್ಯಗಳನ್ನು ನಾವು ಇನ್ನೂ ಮರೆತಿಲ್ಲ. ಯಾರ್‍ಯಾಗಿಗೆ ಶಕ್ತಿ ಇದೆ, ಕೈಬಲ ಇದೆ ಅವರು ತಮಗಾಗಿ ಅಧಿಕಾರವನ್ನು ಗಿಟ್ಟಿಸಿಕೊಳ್ಳುವುದಕ್ಕೆ ಪಟೇಲ್‌ಗಿರಿಯನ್ನು ಉಳಿಸಿಕೊಳ್ಳುವುದಕ್ಕೆ ಮಾಡಿದ ಪ್ರಯತ್ನಗಳು ಹಲವಾರು. ಅಂಥ ಶಕ್ತಿಗಳ ಕೈಗೆ, ಯಾರು ಪಂಚಾಯತ್‌ರಾಜ್ ವ್ಯವಸ್ಥೆಗೆ ವಿರೋಧವಾಗಿದ್ದರು ಅಂಥವರ ಕೈಗೆ ಇವೊತ್ತು ಅಧಿಕಾರ ಹೋಗಿದೆ. ಈವೊತ್ತಿನ ದಿನಗಳಲ್ಲಿ ವಿರೋಧ ಪಕ್ಷದವರಾಗಿರಲಿ, ಆಡಳಿತ ಪಕ್ಷದವರಾಗಲಿ, ಈ ವ್ಯವಸ್ಥೆಯ ಕುರಿತು ಒಂದೇ ರೀತಿಯ ಅಭಿಪ್ರಾಯಗಳನ್ನು ಕೊಡುತ್ತಿದ್ದಾರೆ. ಯಾವ ಉದ್ದೇಶವನ್ನು ಇಟ್ಟುಕೊಂ ಈ ಪಂಚಾಯತ್‌ರಾಜ್ ವ್ಯವಸ್ಥೆಯನ್ನು ತರಬೇಕಾಗಿತ್ತೋ ಅದು ಗ್ರಾಮೀಣ ಮಟ್ಟದಲ್ಲಾಗಲಿ, ಜಿಲ್ಲಾಮಟ್ಟದಲ್ಲಾಗಲಿ, ತಾಲ್ಲೂಕು ಮಟ್ಟದಲ್ಲಾಗಲಿ, ಅದು ಈಡೇರದೇ ಅದಕ್ಕೆ ತದ್ವಿರುದ್ಧವಾದ ಅಭಿಪ್ರಾಯಗಳು ಇಲ್ಲಿ ಮೂಡಿ ಬರುತ್ತಿವೆ. ಆದುದರಿಂದ ನಾನು ಪಂಚಾಯತ್‌ರಾಜ್ ಮಂತ್ರಿಯವರಲ್ಲಿ ವಿನಂತಿಸಿಕೊಳ್ಳುವುದೇನೆಂದರೆ ಈ ದಿಸೆಯಲ್ಲಿ ವಿರೋಧಿ ಪಕ್ಷದವರು ಆಡಳಿತ ಪಕ್ಷದವರು ಒಂದೇ ರೀತಿಯಾದ ಅಭಿಪ್ರಾಯಗಳನ್ನು ಏನು ಕೊಟ್ಟಿದ್ದಾರೆ, ಯಾವ ಸಲಹೆ ಸೂಚನೆಗಳನ್ನು ಕೊಟ್ಟಿದ್ದಾರೆ, ಅವುಗಳನ್ನು ಸದುದ್ದೇಶಪೂರ್ವಕವಾಗಿ ಪರಿಗಣಿಸಿ ಕೊಂಡು, ಈವರೆಗೆ ಯಾವ ಉದ್ದೇಶ ಸಾಧನೆಯಾಗಿಲ್ಲವೋ ಅದನ್ನು ನೆರವೇರಿಸುವುದಕ್ಕೆ ಪ್ರಯತ್ನ ಮಾಡುವ ದಿಶೆಯಲ್ಲಿ ಅದರಲ್ಲಿ ಇರುವ ಲೋಪದೋಷಗಳನ್ನು ಕಂಡುಹಿಡಿದುಕೊಂಡು ಈ ಒಂದು ವ್ಯವಸ್ಥೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತರುವುದಕ್ಕೆ ತಾವುಗಳು ಪ್ರಯತ್ನಪಡುತ್ತೀರಿ ಎಂದು ವಿಶ್ವಾಸವನ್ನು ಹೊಂದಿರುತ್ತೇನೆ.

ಇವೊತ್ತು ತಮ್ಮ ಬೇಡಿಕೆಗಳಲ್ಲಿ ನೀರು ಸರಬರಾಜು ಬಗ್ಗೆ ವಿಚಾರವನ್ನು ಇಟ್ಟಿದ್ದೀರಿ. ನಮ್ಮ ಭಾಗದಲ್ಲಿ ನೀರು ಸರಬರಾಜು ಯಾವರೀತಿಯಲ್ಲಿ ನಡೆಯುತ್ತಾ ಇದೆ, ನಮ್ಮ ಹಳ್ಳಿಗಳಲ್ಲಿ ಒಂದು

ಕಡೆ ಪಂಚಾಯತ್ ಇರುವಂಥ ಸಂದರ್ಭದಲ್ಲಿ, ತಾಲ್ಲೂಕು ಬೋರ್ಡ್ ವ್ಯವಸ್ಥೆ ಇರತಕ್ಕಂಥ ಸಂದರ್ಭದಲ್ಲಿ ತೆರೆದ ಬಾವಿಗಳನ್ನು ಅಲ್ಲಿ ಮಾಡಿಸಿದ್ದರು. ಆ ಮೇಲೆ ಹೊಸದಾಗಿ ಬೋರ್‌ವೆಲ್ ಬಂದಮೇಲೆ ಅವುಗಳನ್ನು ಕೂಡ ಅದೇ ಪ್ರದೇಶಗಳಲ್ಲಿ ತೆಗೆಸಿದ ಕಾರಣ ತೆರೆದ ಬಾವಿಗಳು ಒಂದು ರೀತಿಯಲ್ಲಿ ವೇಸ್ಟ್ ಆಯಿತು. ಬೋರ್‌ವೆಲ್‌ನ ನಂತರ ಮಿನಿವಾಟರ್ ಸಪ್ಲೈ ಸ್ಕೀಮ್ ಬಂತು. ಇದು ಬಂದ ನಂತರ ಬೋರ್‌ವೆಲ್‌ಗಳಿಗೆ ಹೋಗುವವರು ಯಾರು ಇಲ್ಲವಾದರು. ಇನ್ನು ನಲ್ಲಿ ನೀರು ಸರಬರಾಜು ಯೋಜನೆಯು ಅನುಷ್ಠಾನವಾಯಿತು ಅಂದರೆ ಮಿನಿವಾಟರ್‌ಸಪ್ಲೈ ಸ್ಕೀಮ್‌ಗೆ ಯಾರೂ ಹೋಗುವುದಿಲ್ಲ. ನಾವು ನಮ್ಮಲ್ಲಿ ಒಂದೇ ಒಂದು ಖಾಯಂ ನೀರು ಸರಬರಾಜು ಯೋಜನೆಯನ್ನು ತಂದು ಶಾಶ್ವತ ಪರಿಹಾರವನ್ನು ಮಾಡಿಕೊಳ್ಳುವುದಿಲ್ಲ ಮತ್ತು ಇಂಥ ಬೋರವೆಲ್‌ಗಳಿಂದಾಗಲಿ, ಮಿನಿವಾಟರ್‌ಸಪ್ಲೈ ಸ್ಕೀಮ್‌ನಿಂದಾಗಲಿ, ತೆರೆದ ಬಾವಿಗಳಿಂದಾಗಲಿ, ಕುಡಿಯುವ ನೀರಿನ ಶಾಶ್ವತ ಸರಬರಾಜು ಆಗುವುದಿಲ್ಲ ಇವುಗಳಿಗೆ ಖಾಯಂ ವ್ಯವಸ್ಥೆಯಾಗಬೇಕಾದರೆ ನದಿಗಳ ಮೂಲಕ ನೀರು ಸರಬರಾಜು ಆಗುವ ಒಂದು ವ್ಯವಸ್ಥೆಯಾಗಬೇಕು ಅದು ಮಾತ್ರ ಖಾಯಂ ಪರಿಹಾರವನ್ನು ಕೊಡುತ್ತದೆ ಅದನ್ನು ದಯವಿಟ್ಟು ಮಾಡಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ. ಅದನ್ನು ಬಿಟ್ಟು ಇಂಥ ಸಣ್ಣ ಸಣ್ಣ ಯೋಜನೆಗಳಿಗೆ ಹಣವನ್ನು ಖರ್ಚು ಮಾಡುವುದರಿಂದ ಅದು ಅಷ್ಟು ಪ್ರಯೋಜನಕಾರಿಯಾಗಲಾರದು ಎಂದು ಪ್ರಾಯೋಗಿಕವಾಗಿ ನಾವು ಇಂದು ಮನಗಂಡಿದ್ದೇವೆ.

ಕಳೆದ ವಾರ್ಷಿಕ ವರ್ಷದಲ್ಲಿ ಜವಾಹರ್ ರೋಜ್‌ಗಾರ್ ಯೋಜನೆಯು ಅನುಷ್ಠಾನವಾಯಿತು. ನಮ್ಮ ಜಿಲ್ಲೆಗೆ ಬೇರೆ ಬೇರೆ ಜಿಲ್ಲೆಗಳಿಂದ ವಿಶೇಷತಃ ಬಿಜಾಪುರ, ರಾಯಚೂರು, ಗುಲ್ಬರ್ಗ ಭಾಗಗಳಿಂದ ಜನರು ಕೂಲಿಗಾಗಿ ಬರುತ್ತಿದ್ದರು, ಒಳ್ಳೆಯ ದಿನಗೂಲಿಯು ಅವರಿಗೆ ಇಲ್ಲಿ ಸಿಗುತ್ತಾ ಇತ್ತು. ಜವಾಹರ್ ರೋಜ್‌ಗಾರ್ ಯೋಜನೆಯು ಬಂದ ನಂತರ ಅವರು ಹೀಗೆ ಬೇರೆ ಜಿಲ್ಲೆಗಳಿಗೆ ಹೋಗುವುದು ಕಡಿಮೆಯಾಗಿದೆ. ಅದರಂತೆ ಗ್ರಾಮೀಣ ಜನರಿಗೆ ಉದ್ಯೋಗವನ್ನು ಕೊಟ್ಟಲ್ಲಿ ಅಂಥ ಒಂದು ಖಾಯಂ ಉದ್ಯೋಗ ಸಿಗುವಂಥ ಯೋಜನೆಗಳನ್ನು ಹಮ್ಮಿಕೊಂಡಲ್ಲಿ ಮಂಡಳಗಳ ಮಟ್ಟದಲ್ಲಿಯೂ ಇಂಥ ಕಾರ್ಯಕ್ರಮಗಳು ಹೆಚ್ಚು ಹೆಚ್ಚಾಗಿ ಮಾಡುವಂತಾದಲ್ಲಿ ಗ್ರಾಮೀಣ ಜನತೆಗೆ ಉದ್ಯೋಗ ಸಿಕ್ಕಿ ಅಭಿವೃದ್ಧಿಯಾಗುತ್ತಾರೆಯಾದುದರಿಂದ ಅಂಥ ಕಾರ್ಯಗಳನ್ನು ಹೆಚ್ಚು ಹೆಚ್ಚಾಗಿ ಹಮ್ಮಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಐಆರ್‌ಡಿಪಿ ಕಾರ್ಯಕ್ರಮದ ಬಗ್ಗೆ ಹೇಳುವುದಾದರೆ, ಇದರಲ್ಲಿ ಫಲಾನುಭವಿಗಳನ್ನು ಗುರುತಿಸುವಂಥ ಕಾರ್ಯವು ಗ್ರಾಮಸಭೆಗಳಿಂದ ಆಗಬೇಕಾಗುತ್ತದೆ. ಆದರೆ ಇದು ಗ್ರಾಮಸಭೆ ಗಳಲ್ಲಿಯೂ ಆಗುವುದಿಲ್ಲ. ಇದರಲ್ಲಿಯೂ ಸಾಕಷ್ಟು ಪಕ್ಷ ಪಾತಗಳು ನಡೆದು ಯಾರಿಗೆ ಇದರ ಪ್ರಯೋಜನ ಸಿಗಬೇಕೋ ಅವರಿಗೆ ಸಿಗುತ್ತಾ ಇಲ್ಲ. ಮಂಡಳ ಪ್ರಧಾನರಿಗೆ ಯಾರು ನಿಕಟವರ್ತಿಗಳಾಗಿರುತ್ತಾರೋ ಅಂಥವರಿಗೆ ಮಾತ್ರ ಈ ಕಾರ್ಯಕ್ರಮದ ಪ್ರಯೋಜನ ಸಿಗುವಂತಾಗಿದೆ. ಆದುದರಿಂದ ಯಾವ ಜನತೆಗೆ ಈ ಪ್ರಯೋಜನ ಸಿಗಬೇಕಾಗಿದೆಯೋ ಅವರಿಗೇ ಲಭ್ಯವಾಗುವಂತೆ ಒಂದು ಹಂಚಿಕೆಯ ರೀತಿಯನ್ನು ರೂಪಿಸಿಕೊಂಡು ಆ ಮೂಲಕ ಇದರ ಅನುಷ್ಠಾನ ಮಾಡಬೇಕೆಂದು ಕೇಳಿಕೊಳ್ಳುತ್ತೇವೆ.

ಫಾರೆಸ್ಟ್ ಇಲಾಖೆಯ ಬಗ್ಗೆ ಹೇಳುವುದಾದರೆ, ನಮ್ಮ ಕ್ಷೇತ್ರಗಳು ಕೂಡ ಫಾರೆಸ್ಟ್‌ಗಳಿಂದ ಆವೃತವಾದಂಥ ಪ್ರದೇಶಗಳಿರುವ ಕಾರಣ ಮಾನ್ಯ ಮಂತ್ರಿಗಳು ಫಾರೆಸ್ಟ್ ಇಲಾಖೆಯ ಬಗ್ಗೆ ಹೆಚ್ಚಿಗೆ ಗಮನವನ್ನು ತೆಗೆದುಕೊಳ್ಳಬೇಕಾಗುತ್ತದೆ. ಫಾರೆಸ್ಟ್‌ಗಳು ಮೊದಲು ನಾವು ಕಂಡಂಥ ರೀತಿಯಲ್ಲಿ ಉಳಿದಿಲ್ಲ. ಎಲ್ಲಾ ನಶಿಸಿ ಹೋಗಿವೆ. ಏತಕ್ಕೆ ಈ ರೀತಿ ಆಗಿವೆ ಎಂದರೆ ಒಂದು ಕಡೆ ಬೆಂಕಿ ಹಚ್ಚಿ ನಾಶವಾಗಿದ್ದರೆ, ಇನ್ನೊಂದುಕಡೆ ಬೇರೆ ಬೇರೆ ರೀತಿಯಲ್ಲಿ ಕಳ್ಳತನ ಕೂಡಾ ಆಗುತ್ತಿದೆ. ಇದಕ್ಕೆ ಡಿಪಾರ್ಟ್‌ಮೆಂಟ್ ಕೂಡಾ ಶಾಮೀಲಾಗಿ ಮಾಡುತ್ತಿದ್ದಾರೆಯೇ ಎನ್ನುವ ಒಂದು ರೀತಿಯ ಸಂಶಯ ಕೂಡಾ ಬರುತ್ತಿದೆ. ನಮ್ಮಲ್ಲಿ ಶಿರಾಳಿಘಾಟ್, ಸುಬ್ರಹ್ಮಣ್ಯಘಾಟ್ ಆ ವಲಯಗಳಲ್ಲಿ ಬೆಂಕಿ ಹಚ್ಚಿ ಯತೇಚ್ಛವಾಗಿ ಎರಡು ಮೂರು ವರ್ಷಗಳಲ್ಲಿ ಅರಣ್ಯ ಸುಟ್ಟುಹೋಗಿದೆ. ಈ ರೀತಿ ಬೆಂಕಿ ಬಿದ್ದು ಅರಣ್ಯಗಳು ಒಂದು ತಿಂಗಳ ಒಳಗಡೆಯೇ ಇವತ್ತು ಪೂರ್ತಿ ಸುಟ್ಟು ಹೋಗುವಂಥ ಒಂದು

ಪರಿಸ್ಥಿತಿಯನ್ನು ನಾವು ಕಾಣುತ್ತಿದ್ದೇವೆ. ಇದಕ್ಕೆ ಮಾನ್ಯ ಮಂತ್ರಿಗಳು ಸರಿಯಾದ ಕಾರ್ಯಕ್ರಮವನ್ನು ಹಾಕಿಕೊಂಡು ಅದನ್ನು ಅನುಷ್ಠಾನಕ್ಕೆ ತರಬೇಕು. ಈ ರೀತಿ ಬೆಂಕಿ ಬಿದ್ದು ನಾಶವಾಗುವಂಥ ಪರಿಸ್ಥಿತಿಯನ್ನು ಸುಧಾರಿಸಲು ಮಾನ್ಯ ಮಂತ್ರಿಗಳು ಅರಣ್ಯಕ್ಕೆ ಬೆಂಕಿ ಹಚ್ಚದ ರೀತಿಯಲ್ಲಿ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ಕೃಷಿ ಮಂತ್ರಿಗಳು ಅವರ ಬೇಡಿಕೆಯನ್ನು ಇವತ್ತು ತಮ್ಮ ಮುಂದಿಟ್ಟಿದ್ದಾರೆ. ಈ ಬಗ್ಗೆ ಪ್ರಸ್ತಾಪ ಮಾಡಲಿಕ್ಕೆ ಹೋಗದೆ ರೈತರಿಗೆ ಪ್ರತಿ ವರ್ಷ ಕೂಡಾ ಸಹಕಾರಿ ಕ್ಷೇತ್ರದಿಂದ ಸಿಗತಕ್ಕಂಥ ಒಂದು ಸವಲತ್ತು ಏನು ಇತ್ತು, ಆ ಸವಲತ್ತು ಈ ವರ್ಷ ಸಿಗದೇ ಇರತಕ್ಕಂಥ ಒಂದು ಪರಿಸ್ಥಿತಿಯನ್ನು ನಾವು ಕಾಣುತ್ತಿದ್ದೇವೆ. ಚುನಾವಣೆಯಾದ ಪ್ರಥಮ ಹಂತದಲ್ಲಿಯೇ ಬಿ.ಜೆ.ಪಿ.ಪಕ್ಷದ ಮುಖಂಡರಾದಂಥ ಶ್ರೀಮಾನ್ ಯಡಿಯೂರಪ್ಪನವರು ಸಾಲ ಮನ್ನಾ ಮಾಡಬೇಕು ಎಂದು ಧರಣಿ ಮಾಡಿದರು. ಸಹಕಾರಿ ಕ್ಷೇತ್ರವನ್ನು ಪೂರ್ತಿಯಾಗಿ ನಿಷ್ಕ್ರೀಯವಾಗಿ ಮಾಡಬೇಕು ಎನ್ನುವ ಒಂದು ಛಲವನ್ನು ವ್ಯಾಪಾರಸ್ಥರು ಏನಾದರೂ ತೊಟ್ಟಿದ್ದಾರೆಯೇ ಏನು ಎನ್ನುವ ಒಂದು ಸಂಶಯ ಬರುತ್ತದೆ, ಏಕೆಂದು ಹೇಳಿದರೆ ಇದರ ಬಗ್ಗೆ ಒಂದು ರಾಜ್ಯ ಮಟ್ಟದಲ್ಲಿ ರ್‍ಯಾಲಿಯನ್ನು ಕೂಡ ಮಾಡಿದರೂ. ಅದರಲ್ಲಿ ಹಲವಾರು ಜನ ವ್ಯಾಪಾರಸ್ಥರು ಕೂಡಾ ರೈತರ ರ್‍ಯಾಲಿಯಲ್ಲಿ ಬಂದಿದ್ದರು, ಆದ್ದರಿಂದ ಇವತ್ತು ಒಂದು ರೀತಿಯ ಪರಿಸ್ಥಿತಿ ಉಂಟಾಗಿದೆ. ಸಾಲವನ್ನು ಮನ್ನಾ ಮಾಡಬೇಕು ಎಂದು ಭಾಷಣಗಳ ಮೂಲಕ ಹೇಳುತ್ತೇವೆ. ಆ ಮುಖಾಂತರ ರೈತರುಗಳಿಗೆ ಆಸೆಯನ್ನು ಮೂಡಿಸಿ ಸಹಕಾರಿ ಕ್ಷೇತ್ರಕ್ಕೆ ಅವರು ಸಾಲವನ್ನು ವಾಪಸ್ ಕೊಡುವಂಥ ಅವಕಾಶವೇ ಆಗಿಲ್ಲ. ಎಷ್ಟೋ ವರ್ಷಗಳಿಂದ ಸಾಲ ವಸೂಲಾತಿಯಾಗದೆ ಸಹಕಾರ ಕ್ಷೇತ್ರ ಇವತ್ತು ಸಂಪೂರ್ಣವಾಗಿ ನಿಷ್ಕ್ರೀಯವಾಗುವಂಥ ಪರಿಸ್ಥಿತಿ ಬಂದಿದೆ. ಈ ದೃಷ್ಟಿಯಲ್ಲಿ ರೈತರಿಗೆ ಯಾವ ರೀತಿಯ ಸವಲತ್ತು ಸಿಗುತ್ತಿತ್ತು, ಆ ರೀತಿ ಸಿಗತಕ್ಕಂಥ ಸವಲತ್ತು ಕೂಡಾ ಸಿಗದೆ ತಪ್ಪಿಹೋಗಿದೆ. ಇದರಿಂದ ಹಲವಾರು ರೈತರುಗಳಿಗೆ ಎಷ್ಟೋ ತೊಂದರೆಯಾಗಿದೆ. ಈ ರೀತಿಯ ಒಂದು ಕಾರ್ಯಕ್ರಮವನ್ನು ಮಾನ್ಯ ಮಂತ್ರಿಗಳೂ ರೂಢಿಸಿಕೊಳ್ಳಬೇಕು ಎಂದು ಕೇಳಿಕೊಳ್ಳುತ್ತೇನೆ. ಒಂದು ಒಳ್ಳೆಯ ಕಾರ್ಯಕ್ರಮವನ್ನು ರೈತರ ದೃಷ್ಟಿಯಿಂದ ಅಳವಡಿಸಿಕೊಂಡು ಬರಬೇಕು ಎಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಅದೇ ರೀತಿಯಾಗಿ ಪೋಲೀಸ್ ಇಲಾಖೆಯ ಮಟ್ಟಿಗೆ ಹೇಳುವುದಾದರೆ ಹಲವಾರು ವರ್ಷಗಳಿಂದ ಇದ್ದಂಥ ಒಂದು ವ್ಯವಸ್ಥೆಯಲ್ಲಿ ಕಾನ್‌ಸ್ಟೇಬಲ್‌ಗಳು ಹಿಂದೆ ಯಾವ ರೀತಿಯ ಲೆಕ್ಕ ಇತ್ತೋ ಅದೇ ಲೆಕ್ಕದಲ್ಲಿ ಇವತ್ತೂ ಮುಂದುವರಿಯುವಂಥ ಒಂದು ಅವಕಾಶ ಇದೆ. ಅದಕ್ಕೆ ಹೆಚ್ಚಾಗಿ ಮಾನ್ಯ ಮುಖ್ಯಮಂತ್ರಿಗಳು ಗಮನವನ್ನು ಕೊಡಬೇಕು. ಅದೇ ರೀತಿಯಲ್ಲಿ ಇನ್ನು ಹೆಚ್ಚಾಗಿ ಠಾಣೆಗಳನ್ನು ಕೂಡಾ ತೆರೆಯುವ ಬಗ್ಗೆ ಕೂಡ ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು ಎಂದು ಕೇಳಿ ಕೊಳ್ಳುತ್ತೇನೆ. ನಮ್ಮ ಪುತ್ತೂರು ತಾಲ್ಲೂಕು ಸಬ್ ಡಿವಿಜನ್ ಸೆಂಟರ್ಸ್‌ನಲ್ಲಿ ಜಾಗ ಇದೆ. ಅಲ್ಲಿ ಫೈರ್ ಸರ್ವೀಸ್ ಸ್ಟೇಷನ್ ಆಗಬೇಕು, ಅದಕ್ಕಾಗಿ ಜಾಗವನ್ನು ಇಟ್ಟಿದ್ದಾರೆ. ನಮ್ಮಲ್ಲಿ ಒಂದು ಕಾಮ್ಕೊ ಚಾಕಲೇಟ್ ಫ್ಯಾಕ್ಟರಿ ಅಂತರಾಷ್ಟ್ರೀಯ ಮಟ್ಟದ ಒಂದು ಕಾರ್ಖಾನೆ ಇದೆ. ಅಲ್ಲಿ ರಿಸರ್ಚ್ ಸೆಂಟರ್ಸ್ ಕೂಡಾ ಇದೆ. ಕ್ಯಾಸ್ಯೂ ರಿಸರ್ಚ್ ಸೆಂಟರ್ಸ್ ಇದೆ. ಪೆಪ್ಪರ್ ಬೆಳೆಯುವಂಥ ಅವಕಾಶ ನಮ್ಮಲ್ಲಿದೆ. ಆದ್ದರಿಂದ ನಮ್ಮಲ್ಲಿ ಅನಿರೀಕ್ಷತವಾಗಿ ಅರಣ್ಯಕ್ಕೆ ಬೆಂಕಿ ಬಿದ್ದರೆ ಬೆಂಕಿಯನ್ನು ಆರಿಸುವುದಕ್ಕೆ ಮಂಗಳೂರಿನಿಂದ ಬಂದು ಅಲ್ಲಿ ಬೆಂಕಿಯನ್ನು ನಂದಿಸಬೇಕಾದಂಥ ಒಂದು ಪರಿಸ್ಥಿತಿ ಇದೆ.

ಇದು ತುಂಬಾ ಕಷ್ಟಕರವಾದ ಕಾರಣ ಸುಳ್ಯ, ಪುತ್ತೂರು, ಬೆಳ್ತಂಗಡಿ ಈ ಪರಿಸರಗಳಿಗೆ ಹೊಂದಿಕೊಂಡು ಒಂದು ಫೈರ್ ಸರ್ವೀಸ್ ಸ್ಟೇಷನ್ ಅನ್ನು ಕೊಡಬೇಕೆಂದು ಸರ್ಕಾರದ ಮುಂದೆ ಬೇಡಿಕೆ ಇಟ್ಟಿದ್ದೇವೆ ಅದಕ್ಕೆ ಹೆಚ್ಚಿನ ರೀತಿಯ ಒತ್ತು ಕೊಟ್ಟು ಈ ಬೇಡಿಕೆಯನ್ನು ಈಡೇರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಟೂರಿಸಂ ವಿಚಾರದಲ್ಲಿ ಹೇಳುವುದಾದರೆ ನಮ್ಮ ಜಿಲ್ಲೆಯಲ್ಲಿ ಎಷ್ಟೋ ಅವಕಾಶಗಳು ಇದ್ದರೂ ಕೂಡ ಹೆಚ್ಚಿನ ರೀತಿಯ ಗ್ರಾಮೀಣ ಪರಿಸರಗಳಲ್ಲಿ ಯಾವುದೇ ರೀತಿಯ ಒಂದು ಜಾಗವನ್ನು ಅಳವಡಿಸಿಕೊಳ್ಳುವ ಕೆಲಸ ಕಾರ್ಯಗಳು ನಡೆದಿಲ್ಲ. ನಮ್ಮ ಪುತ್ತೂರು ತಾಲ್ಲೂಕಿನಲ್ಲೆ ಚಂದ್ರ ತೀರ್ಥ ಎನ್ನುವ ಸ್ಥಳ ಇದೆ. ಇದಕ್ಕೆ ಅಭಿವೃದ್ಧಿಗೆ ಅವಕಾಶ ಇದ್ದರೂ ಯಾವುದೇ ಕೆಲಸ ಆಗಿಲ್ಲ. ಅದೇ ರೀತಿಯಾಗಿ ನಮ್ಮಲ್ಲಿ ಹಿರಿಯ ಸಾಹಿತಿಗಳಾದ ಶ್ರೀ ಶಿವರಾಮ

ಕಾರಂತ ಅವರು ಹುಟ್ಟಿದಂತಹ ಊರು. ಅವರು ಹುಟ್ಟಿದಂತಹ ಊರಿನಲ್ಲಿ "ಬಾಲವನ" ಎಂಬ ಒಂದು ಜಾಗದಲ್ಲಿ ಎಷ್ಟೋ ರೀತಿಯ ಕಾರ್ಯಕ್ರಮವನ್ನು ಹಾಕಿಕೊಳ್ಳುವಂಥ ಅವಕಾಶ ಇದ್ದರೂ ಸಹ ಅದರ ಮಟ್ಟಿಗೆ ಗಮನ ಕೊಟ್ಟಿಲ್ಲ. ಅದಕ್ಕೆ ಹೆಚ್ಚಿನ ಗಮನ ಕೊಟ್ಟು ಕಾರ್ಯಕ್ರಮವನ್ನು ಅಳವಡಿಸಿಕೊಂಡು ಹೋಗಬೇಕೆಂದು ತಮ್ಮ ಮುಖಾಂತರ ಕೋರಿಕೊಂಡು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದುಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಪ್ರೊ: ಎಂ.ಡಿ. ನಂಜುಂಡ ಸ್ವಾಮಿ (ಧಾರವಾಡ ಗ್ರಾಮಾಂತರ):- ಸನ್ಮಾನ್ಯ ಅಧ್ಯಕ್ಷರೇ, ತಮ್ಮಲ್ಲಿ ಒಂದು ಪ್ರಾರ್ಥನೆ. ಕೃಷಿಯ ಬಗ್ಗೆ ಒಂದು ವಿಶೇಷ ಚರ್ಚೆ ಮಾಡಬೇಕು ಸನ್ಮಾನ್ಯ ಕೃಷಿ ಮಂತ್ರಿಗಳು ಹೇಳಿದ್ದಾರೆ. ಆ ಕಾರಣ..

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೇ, ಪ್ರೊ: ನಂಜುಂಡಸ್ವಾಮಿ ಅವರು ಚರ್ಚೆ ಪ್ರಾರಂಭ ಮಾಡುವುದಕ್ಕೆ ಮುನ್ನ ಒಂದು ವಿಷಯ ಗಮನಕ್ಕೆ ತರುತ್ತಿದ್ದೇನೆ. ಹದಿನೈದು ಬೇಡಿಕೆಗಳಿಗೆ ಸಂಬಂಧಪಟ್ಟಂತೆ ಐದು ಜನ ಮಂತ್ರಿಗಳ ಬೇಡಿಕೆಗಳನ್ನು ಮಂಡಿಸಿದ್ದಾರೆ. ಅದರಲ್ಲಿ ಒಬ್ಬರೋ ಇಬ್ಬರೋ ಮಂತ್ರಿಗಳು ಇದ್ದಾರೆ. ಇಲ್ಲಿ ಪಾಪ ಇರುವವರು ಸಹ ಏನೋ ಓದುತ್ತಿದ್ದಾರೆ, ಅದರ ಬಗ್ಗೆ ನಾನು ಏನು ಹೇಳುವುದಿಲ್ಲ ಮಿಕ್ಕ ಮಂತ್ರಿಗಳು ಎಲ್ಲಿಗೆ ಹೋಗಿದ್ದಾರೆ. ಈ ಬೇಡಿಕೆ ಬಗ್ಗೆ ಚರ್ಚೆಯನ್ನು ಕೇಳುತ್ತಾ ಇದರ ಬಗ್ಗೆ ಉತ್ತರ ಕೊಡುವಾಗ ಯಾರಾದರೂ ಅವರ ಸಮಸ್ಯೆಗಳು ಏನು ಎಂದು ತಿಳಿದುಕೊಳ್ಳಬೇಕು. ಇದು ಅತ್ಯಂತ ಶೋಚನೀಯ ಪರಿಸ್ಥಿತಿ. ದಯವಿಟ್ಟು ಸಂಬಂಧ ಪಟ್ಟ ಒಬ್ಬಿಬ್ಬರು ಮಂತ್ರಿಯನ್ನಾದರೂ ಕರೆಯಿಸಬೇಕು. ಒಬ್ಬರು ಮಂತ್ರಿ ಇದ್ದಾರೆ, ಅವರು ಏನು ಬರೆದುಕೊಳ್ಳುತ್ತಾ ಇಲ್ಲ. ನಾನು ನೋಡಿದ್ದೇನೆ. ನೀವು ಬೇರೆ ಏನೋ ಓದುತ್ತಿದ್ದೀರಿ. ನಮ್ಮ ಸದಸ್ಯ ಮಿತ್ರರು ಮಾತನಾಡುವಾಗ ಒಂದು ಅಕ್ಷರ ಸಹ ಬರೆದುಕೊಂಡಿಲ್ಲ. ಮೂರು ಜನ ಮಂತ್ರಿಗಳು ಎಲ್ಲೋ ಕುಳಿತು ಮಾತನಾಡುತ್ತಾ ಇದ್ದಾರೆ. ನಾನೂ ನೋಡಿದೆ. ಸೊರಕೆಯವರು ಸುಮ್ಮನೇ ಹೇಳುತ್ತಿದ್ದರು. ನೀವು ಕೇಳುವ ಮಟ್ಟದಲ್ಲಿ ಇಲ್ಲ. ಪ್ರೊ ನಂಜುಂಡಸ್ವಾಮಿಯವರು ವ್ಯವಸಾಯ ವಿಚಾರಕ್ಕೆ ಸಂಬಂಧಪಟ್ಟಂತೆ ಚರ್ಚೆ ಮಾಡತಕ್ಕ ಪರಿಸ್ಥಿತಿ ಇದೆ. ನಾವು ಎಲ್ಲವನ್ನೂ ಯಾರಿಗೆ ಹೇಳಬೇಕು. ಬರೀ ಖಾಲಿ ಕುರ್ಚಿಗಳಿವೆ, ಅದಕ್ಕೆ ಹೇಳೋಣವೇ? ಯಾರಿಗೆ ಹೇಳಬೇಕು ಎಂಬ ಪ್ರಶ್ನೆ ಬೇಕಲ್ಲ. ಆ ಕುರ್ಚಿಗೆ ಈ ಬೇಡಿಕೆ, ಈ ಕುರ್ಚಿಗೆ ಆ ಬೇಡಿಕೆ ಬಗ್ಗೆ ಹೇಳೋಣವೇ? ಈ ಕುರ್ಚಿ ಆ ಬೇಡಿಕೆಗೆ ಎಂದು ತೀರ್ಮಾನ ತೆಗೆದುಕೊಂಡು ಹೇಳೋಣವೇ? ಅಥವಾ ಕುರ್ಚಿಗೆ ಉತ್ತರ ಕೊಡತಕ್ಕ ಸಂಪ್ರದಾಯ ಇದೆಯೇ? ದಯವಿಟ್ಟು ಸಂಬಂಧಪಟ್ಟ ಮಂತ್ರಿಗಳನ್ನು ಕರೆಸಿ, ಏಕೆಂದರೆ ಇಷ್ಟೊಂದು ಬೇಡಿಕೆಗಳನ್ನು ಒಟ್ಟಿಗೆ ನೀವು ಇಟ್ಟು, 15 ಬೇಡಿಕೆಗಳಿಗೆ ಒಂದೂವರೆ ದಿವಸದಲ್ಲಿ ಎಲ್ಲಾ ಮಾತನಾಡಿ ಎಂದರೆ ಮಾಯಮಂತ್ರ ಮಾಡುವುದಕ್ಕೆ ಸಾಧ್ಯ ಇದೆಯೇ? ಸಾಧ್ಯ ಇಲ್ಲ. ಮಾಯ ಮಂತ್ರ ಆಗುವುದಾದರೆ ನಾವು ಒಂದು ಕೈ ನೀವು ಒಂದು ಕೈಯಿಂದ ಎಂದು ಮಾಡಬಹುದಿತ್ತು...

ಶ್ರೀ ಕೆ. ಶಿವಮೂರ್ತಿ:- ಮಾನ್ಯ ಮಂತ್ರಿಗಳು ಬಂದಿದ್ದಾರೆ..

ಪ್ರೊ: ಎಂ.ಡಿ. ನಂಜುಂಡಸ್ವಾಮಿ:- ನಾನು ಅರಣ್ಯದ ಬಗ್ಗೆ ಮಾತನಾಡುತ್ತಾ ಇಲ್ಲ. ಏಕೆಂದರೆ ಅದು ಮಾಯ ಆಗುತ್ತಾ ಇರುವುದರಿಂದ ನಾನು ಅರಣ್ಯ ಇಲಾಖೆ ಬಗ್ಗೆ ಮಾತನಾಡುವುದಿಲ್ಲ. ಆದರೆ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ, ಪಂಚಾಯತ್ ಇದರ ಬಗ್ಗೆ ಮಾತನಾಡಬೇಕು. ನಾನು ಏಕೆ ವಿಶೇಷ ಪ್ರಾರ್ಥನೆ ಮಾಡುತ್ತೇನೆ ಅಂದರೆ ಕೃಷಿ ಮಂತ್ರಿ ಅವರು ಕೃಷಿ ಬೆಲೆ ನಿಗದಿಯ ಬಗ್ಗೆ ಒಂದು ವಿಶೇಷ ಚರ್ಚೆ ಮಾಡೋಣ ಎಂದು ಹೇಳಿದ್ದರು. ಒಂದು ವಿಶೇಷ ಚರ್ಚೆ ನಮ್ಮ ಕಾರ್ಯಕ್ರಮದಲ್ಲಿ ಬರುತ್ತಾ ಇತ್ತು. ಆದರೆ ಚರ್ಚೆ ಮಾಡುವುದಕ್ಕೆ ಅವಕಾಶ ಆಗಿರಲಿಲ್ಲ. ಈ ಒಂಭತ್ತನೇ ವಿಧಾನ ಸಭೆಯ ಮೂರನೇಯ ಅಧಿವೇಶನದಲ್ಲಿ ಕೃಷಿಕನ ಬಗ್ಗೆ ಬಹಳ ಚರ್ಚೆ ಆಗಿದೆ. ರೈತರ ಸಮಸ್ಯೆಗಳ ಬಗ್ಗೆ ಸನ್ಮಾನ್ಯ ಎಲ್ಲಾ ಸದಸ್ಯರು ಚರ್ಚೆ ಮಾಡುತ್ತಿದ್ದಾರೆ. ರೈತನ ಬಗ್ಗೆ ಎಲ್ಲರಿಗೂ ಬಹಳ ಪ್ರೀತಿ ಬಂದಿದೆ. ಎಲ್ಲರೂ ನಾವು ರೈತನ ಮಕ್ಕಳು ಎಂದು ಹೇಳುತ್ತಿದ್ದಾರೆ. ಇದು ಬಹಳ ಸಂತೋಷದ ಬೆಳವಣಿಗೆ..

ಆದರೆ ನಾವು ಅದನ್ನು ವಿಪರ್ಯಾಸವೆಂದು ಹೇಳಬೇಕೊ ಅಥವಾ ವಿರೋಧಾಭಾಸವೆಂದು ಹೇಳಬೇಕೊ ಅಥವಾ ಯಾವ ಭಾಷೆಯಲ್ಲಿ ವರ್ಣನೆ ಮಾಡಬೇಕೊ ನನಗೆ ಗೊತ್ತಾಗಲಿಲ್ಲ. ಏಕೆಂದರೆ ನಾನು ವಿವರ ಹೇಳಿದ ಮೇಲೆ ತಾವು ನನಗೆ ಸಹಾಯ ಮಾಡಬಹುದು. ಈ ಅಧಿವೇಶನದಲ್ಲಿ ಬಹಳ ಜನ ಸದಸ್ಯರುಗಳು ರೋಗ ಪೀಡಿತ ಕೈಗಾರಿಕೆಗಳ ಬಗ್ಗೆ ಪ್ರಶ್ನೆಗಳನ್ನು ಕೇಳಿದ್ದರು. ಅದಕ್ಕೆ ಸರ್ಕಾರ ಅಂಕಿ ಅಂಶಗಳನ್ನು, ರೋಗ ಪೀಡಿತ ಕೈಗಾರಿಕೆಗಳ ಪಟ್ಟಿಗಳನ್ನು ಈ ಸಭೆಯಲ್ಲಿ ಮಂಡಿಸಿದರೂ. ಸನ್ಮಾನ್ಯ ಸಭಾಧ್ಯಕ್ಷರೆ, ತಮಗೆ ಗೊತ್ತಿದೆ. ಈ ರೋಗ ಪೀಡಿತ ಕೈಗಾರಿಕೆಗಳನ್ನು ಯಾರು ನಡೆಸುತ್ತಾ ಇದ್ದರು ಅವರು ಬಹಳ ಆರೋಗ್ಯದಿಂದ ಇದ್ದಾರೆ. ಯಾರನ್ನು ಎಂಟ್ರೊಪ್ರೊನರ್ ಎಂದು ಹೇಳುತ್ತೇವೆ, ಈ ಹಣವನ್ನು ತಂದವರು, ಅವರನ್ನು ಅದೇ ಪಥದಲ್ಲಿ ಬಣ್ಣಿಸಬೇಕಾಗಿದೆ. ತಾವು ಯಾರು ಅಂದರೆ ಎಂಟ್ರೊಪ್ರನರ್ ಎಂದು ಫ್ರಾನ್ಸ್‌ನಿಂದ ಇಳಿದು ಬಂದ ಹಾಗೆ ಮಾತನಾಡುತ್ತಾರೆ. ಇದನ್ನು ಏಕೆ ಹೇಳುತ್ತಿದ್ದೇನೆ ಎಂದರೆ, ನಮ್ಮ ಕೈಗಾರಿಕಾ ಕ್ಷೇತ್ರದಲ್ಲಿ ಯಾವುದನ್ನು ರೋಗಪೀಡಿತ ಎಂದು ಹೇಳುತ್ತೇವೆ, ಕೈಗಾರಿಕೆ ರೋಗಪೀಡಿತವಾಗಿದೆ, ಆದರೆ ಕೈಗಾರಿಕೋದ್ಯಮಿ ಎಂದು ಯಾವನು ಇದ್ದಾನೆ ಅವನು ಬಹಳ ಆರೋಗ್ಯದಿಂದ ಓಡಾಡುತ್ತಾ ಇದ್ದಾನೆ. ಆದರೆ ನಮ್ಮ ಕ್ಷೇತ್ರ, ಕೃಷಿಕ್ಷೇತ್ರ ಬಹಳ ಆರೋಗ್ಯಕರವಾಗಿದೆ. ನಮ್ಮ ಕೃಷಿಕ ರೋಗಪೀಡಿತನಾಗಿದ್ದಾನೆ. ತಮ್ಮ ಕೃಷಿ ಇಲಾಖೆಯ ವರದಿಯನ್ನು ನೋಡಬೇಕು. ಅವರು 1947ನೇ ಇಸವಿಯಿಂದ ಅಂಕಿಅಂಶಗಳನ್ನು ಕೊಟ್ಟಿಲ್ಲ, ಕೊಟ್ಟಿದ್ದರೆ ಇನ್ನೂ ಚೆನ್ನಾಗಿತ್ತು. ಕರ್ನಾಟಕ ರಾಜ್ಯದ ಕೃಷಿ ಉತ್ಪಾದನೆಗಳ ಅಂಕಿ ಅಂಶಗಳನ್ನು ಕೊಟ್ಟಿದ್ದಾರೆ, 1956-57ರಿಂದ ಕೊಟ್ಟಿದ್ದಾರೆ, ಅದನ್ನು 1947ರಿಂದ ಕೊಡಬೇಕಾಗಿತ್ತು. ಸನ್ಮಾನ್ಯ ಚಿಕ್ಕೇಗೌಡರು ನಮಗೆ ಅದನ್ನು ಜ್ಞಾಪಿಸಿದ್ದಾರೆ. ಯಾವರೀತಿ ನಾವು ಬೇರೆ ದೇಶಕ್ಕೆ ಹೋಗಿ ಅಲ್ಲಿ ಹಂದಿಗಳಿಗೆ ಹಾಕುತ್ತಿದ್ದಂಥ ಜೋಳವನ್ನು ತಂದು ಇಲ್ಲಿ ಜನಗಳಿಗೆ ಹಂಚುತ್ತಾ ಇದ್ದೆವು, ಅಂತಹ ಒಂದು ಕಾಲ ಇತ್ತು; ಇವತ್ತು ನಾವು 80 ಕೋಟಿ ಜನರಿಗೆ ಆಹಾರ ಬೆಳೆಯುತ್ತಾ ಇದ್ದೇವೆ, ಸಾಕಷ್ಟು ಬಫರ್ ಸ್ಟಾಕ್ ಇಟ್ಟಿದ್ದೇವೆ, ಬೇರೆ ರಾಜ್ಯಗಳಿಗೂ ಕಳಿಸಿಕೊಡುತ್ತಾ ಇದ್ದೇವೆ ಎನ್ನುವ ಮಾತನ್ನು ನಿನ್ನೆ ಮಾನ್ಯ ಚಿಕ್ಕೇಗೌಡರು ಹೇಳಿದರು. ಈ ಸಾಧನೆಯನ್ನು ಯಾರು ಮಾಡಿದರು ಎಂದು ನಾನು ಕೇಳುತ್ತಾ ಇದ್ದೇನೆ. 1956-57 ರಲ್ಲಿ ನಮ್ಮ ಏಕದಳ ಧಾನ್ಯದ ಉತ್ಪಾದನೆ 30 ಲಕ್ಷ ಟನ್ ಇತ್ತು, ಇವತ್ತು ಅದು 68 ಲಕ್ಷ ಟನ್ ಆಗಿದೆ. ಇನ್ನು ಮಿಕ್ಕ ಎಲ್ಲದರ ಬಗ್ಗೆ ತಮ್ಮ ವರದಿಯಲ್ಲಿ ನೋಡಬಹುದು.ಯಾವ ರೀತಿ ಕೃಷಿ ಕ್ಷೇತ್ರ ಆರೋಗ್ಯಕರವಾಗಿ ಬೆಳೆದಿದೆಯೆಂದು. ಇದನ್ನು ಮಾಡಿದವರು ಈ ದೇಶದ ರೈತರು. ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ರೈತನ ಬಗ್ಗೆ ಚರ್ಚೆಯಾಗುವಾಗ ನಮಗೆ ಮುಖ್ಯಮಂತ್ರಿಗಳು ಮತ್ತು ಕಂದಾಯ ಮಂತ್ರಿಗಳು ಹೇಳಿದಂಥ ಬುದ್ಧಿವಾದವನ್ನು ಜ್ಞಾಪಿಸಿಕೊಂಡು ಹೇಳುತ್ತಾ ಇದ್ದೇನೆ. ಅವರು ಏನು ಬುದ್ಧಿವಾದ ಹೇಳುತ್ತಾ ಇದ್ದರು ಅಂದರೆ ರೈತರ ಸಾಲ ಮನ್ನಾ ಮಾಡುವುದು ಒಳ್ಳೆಯದಲ್ಲ ಅಸಾದು, ಸಾಲ ಮನ್ನಾ ಮಾಡಿದರೂ ಎಷ್ಟು ಜನ ರೈತರಿಗೆ ಅನುಕೂಲವಾಗುತ್ತದೆ, ಮಾಡಕೂಡದು ಎನ್ನುವ ಅಭಿಪ್ರಾಯವನ್ನು ಮಾನ್ಯ ಕಂದಾಯ ಮಂತ್ರಿಗಳು ಹೇಳಿದರು. ಈಗ ತಾನೆ ಯಾರೋ ಸದಸ್ಯರು ಮಾತನಾಡುತ್ತಾ, ಸಹಕಾರ ಇಲಾಖೆಯನ್ನೇ ನಾಶ ಮಾಡುವಂಥ, ಸಹಕಾರಿ ವ್ಯವಸ್ಥೆಯನ್ನೇ ನಾಶ ಮಾಡುವಂಥ ಒತ್ತಾಯ ಇದು ಎಂದು ನಾನು ಇವತ್ತು ಹೇಳುತ್ತಾ ಇದ್ದೇನೆ, ನಮಗೆ ನಿಮ್ಮ ಸಾಲ ಬೇಕಾಗಿಲ್ಲ, ನಮಗೆ ಏನು ಮೋಸ ಮಾಡುತ್ತಿದ್ದೀರಿ ಅದನ್ನು ಮೊದಲು ನಿಲ್ಲಿಸಬೇಕು. ಆ ಕಾರಣ ಸದನದಲ್ಲಿ ವಿವರವಾಗಿ ಚರ್ಚೆಯಾಗಬೇಕು ಎಂದು ನಾನು ಹೇಳಿದೆ. ಇಲ್ಲಿ ನಿಮ್ಮ ಸರ್ಕಾರ ಒಂದೇ ಅಲ್ಲ, ಕೇಂದ್ರ ಸರ್ಕಾರ ಕೂಡ ಇದರ ಬಗ್ಗೆ ವಿವರವಾಗಿ ಚರ್ಚೆ ಮಾಡುವುದಕ್ಕೆ ಹೆದರುತ್ತಾ ಇದೆ. ಏಕೆ ಹೆದರಿಕೆ ಅಂದರೆ, ರೈತನಿಗೆ ಯಾವ ಪ್ರಮಾಣದಲ್ಲಿ ನಾವು ಮೋಸ ಮಾಡಿದ್ದೇವೆ ಎನ್ನುವುದು ರೈತನಿಗೆ ಗೊತ್ತಾಗಿಬಿಡುತ್ತದೆ ಎಂದು. ಗೊತ್ತಾದರೆ ಆಗ ಯಾವ ಸರ್ಕಾರಗಳೂ ಉಳಿಯುವುದಿಲ್ಲ. ಆ ಕಾರಣ, ಹೆಚ್ಚು ಕೃಷಿ ಬೆಲೆ ನಿಗದಿ ಬಗ್ಗೆ ವಿವರವಾಗಿ ಚರ್ಚೆಯಾಗಬೇಕೆಂದು ಮಾತನಾಡಿದೆ, ಒತ್ತಾಯ ಮಾಡಿದ್ದೆ. ಆದರೆ, ಇವತ್ತು ಕೇಂದ್ರ ಸರ್ಕಾರವಾಗಲಿ, ರಾಜ್ಯ ಸರ್ಕಾರವಾಗಲೀ ಇದರ ಬಗ್ಗೆ ವಿವರವಾಗಿ ಚರ್ಚೆ ಮಾಡುವುದಕ್ಕೆ ಧೈರ್ಯ ಇಲ್ಲ. ಅದಕ್ಕೆ ಕಾರಣ,

ಅವರು ಏನು ಮೋಸ ಮಾಡಿದ್ದಾರೆ ಅದೇ ಕಾರಣ. ಕೃಷಿ ಉತ್ಪಾದನೆಗಳಿಗೆ ಬೆಲೆ ನಿಗದಿ ಮಾಡುವಂಥ ಯಾವ ವಿಧಾನವನ್ನು ಅನುಸರಿಸಿದ್ದಾರೆ, ಯಾವ ರೀತಿ ಅನಕ್ಷರಸ್ಥ ಮುಗ್ಧ ಜನರನ್ನು ಮೋಸ ಮಾಡಿದ್ದಾರೆ ಎನ್ನುವುದನ್ನು ವಿವರಿಸಿ ಹೇಳಬೇಕು ಎನ್ನುವ ಆಸೆಯಿಂದ ಚರ್ಚೆಗೆ ಒತ್ತಾಯ ಮಾಡಿದ್ದೆ. ಮಿನಿಮಮ್ ವೇಜಸ್ ಅಗ್ರಿಕಲ್ಚರ್ ವರ್ಕರ್ಸ್ ನಿಗದಿಮಾಡಿಕೊಂಡು ಬಂದಿದ್ದೇವೆ. ಎಷ್ಟು? 6 ರಿಂದ ಪ್ರಾರಂಭ ಮಾಡಿ 12 ರೂಪಾಯಿ ತಲುಪಿದ್ದೇವೆ. ಏತಕ್ಕೆ ಮಾಡಿದರು? ಕೃಷಿ ವಸ್ತುಗಳ ಬೆಲೆಗಳನ್ನು ನಿಗದಿ ಮಾಡುವಾಗ, while calculating the cost of cultivation, the Farm Management Cell of the Agriculture Department of the States and the Agricultural Prices Commission, which now has a different name, should take that Minimum Wage into consideration. ಅಲ್ಲವೆ ಸಭಾಧ್ಯಕ್ಷರೆ. ಮಿನಿಮಮ್ ವೇಜಸ್ ಫಾರ್ ಅಗ್ರಿಕಲ್ಚರ್ ವರ್ಕರ್ಸ್ ಎಂದು ನಿಗದಿ ಮಾಡಿದ ಮೇಲೆ ನಮ್ಮ ಕೃಷಿ ಉತ್ಪಾದನೆ ಬೆಲೆ ನಿಗದಿ ಮಾಡುವಾಗ ಇದನ್ನು ಗಮನಕ್ಕೆ, ಗಣನೆಗೆ ತೆಗೆದುಕೊಂಡು ಗುಣಿಸಬೇಕು ತಾನೆ. ಅದನ್ನು ತಾವು ಮಾಡಿದಿರಾ? ಮಾಡಲಿಲ್ಲ. ಏನು ಮಾಡಿದರು, ಆಯಾಯಾ ಪ್ರದೇಶದಲ್ಲಿ ಏನೇನು ಕೂಲಿ ಇದೆ, ಆ ಕೂಲಿಯನ್ನು ಗಮನಕ್ಕೆ ತೆಗೆದುಕೊಳ್ಳುತ್ತೇವೆಂದು ಹೇಳಿದರು. I am holding the costing methodology adopted by the Agricultural Prices Commission. ಆಮೇಲೆ ಫ್ಯಾಮಿಲಿ ಲೇಬರ್, ನಾನು ಏನು ನನ್ನ ಭೂಮಿಯಲ್ಲಿ ಕೆಲಸ ಮಾಡುತ್ತೇನೆ, ಅದಕ್ಕೆ ನನಗೆ ಕೊಡುವಂಥ ಕೂಲಿ. ಫ್ಯಾಮಿಲಿ ಲೇಬರ್ ಅಂದರೆ, ಅಗ್ರಿಕಲ್ಚರ್ ಪ್ರೈಸ್ ಕಮಿಷನ್ ಏನು ಹೇಳಿದೆ. "On the basis of wages of attached farm servants.. ಅಟ್ಯಾಚ್ಡ್‌ಸರ್ವೆಂಟ್ಸ್ ಅಂದರೆ ತಮಗೆ ಗೊತ್ತಿದೆ, ಜೀತದಾಳುಗಳು. "Since not all the farmers have attached servants, the average per day rate has been estimated for the cluster as a whole by relating total wages of the attached servants to their employment and then use for evaluation of family labour." ಜೀತ ಪದ್ಧತಿ ಇದ್ದಾಗ, ಈಗಲೂ ಇದೆ. ಒಂದು ವರ್ಷಕ್ಕೆ ಜೀತದಾಳುಗಳಿಗೆ ಏನು ಕೊಡುತ್ತಿದ್ದರು, ಅದನ್ನು ಲೆಕ್ಕ ಹಾಕಿ, ಭಾಗ ಮಾಡಿ, ಆ ಕೂಲಿ ನನಗೂ ಕೊಡುತ್ತಿದ್ದರು. ಇಂಥ ಕೂಲಿಯ ಆಧಾರದ ಮೇಲೆ ಕೃಷಿ ಬೆಲೆ ನಿಗಧಿಯಾಗುತ್ತದೆ. ಇದು ಮೊದಲನೆಯ ಮೋಸ ಆದರೆ, 2ನೇ ಮೋಸ Interest on owned fixed capital. ನಮ್ಮ ಫಾರಂ ಮ್ಯಾನೇಜ್‌ಮೆಂಟ್ ಸೆಲ್‌ಗಳೂ ಏನು ಮಾಡುತ್ತೇವೆಂಬುದನ್ನು ಆಮೇಲೆ ಹೇಳುತ್ತೇನೆ. Interest on the present value of fixed assets excluding land such as farm building, implements, and machinery, irrigation structures and equipments, livestock and only draught animals has been charged at 6% per annum.ಬೇರೆ ಕ್ಷೇತ್ರಗಳಲ್ಲಿ, ಎಷ್ಟು ಪರ್ಸೆಂಟೇಜ್ ಉಪಯೋಗಿಸುತ್ತಾರೆ. What is the percentage while calculating interest on owned fixed capital in an industry and commerce? Is it 6% per annum?ಅದು ಅಷ್ಟೇ ಮೋಸ ಅಲ್ಲ ಸಭಾಧ್ಯಕ್ಷರೆ, ಇಂಟರೆಸ್ಟ್, ವರ್ಕಿಂಗ್ ಕ್ಯಾಪಿಟಲ್, ದಯವಿಟ್ಟು ಸಹಕಾರ ಮಂತ್ರಿಗಳು ಇದ್ದಾರೋ ಇಲ್ಲವೋ ಇದನ್ನು ಗಮನಿಸಬೇಕು. ಏಕೆಂದರೆ ವರ್ಕಿಂಗ್ ಕ್ಯಾಪಿಟಲ್ ಎಂದರೆ ಸಹಕಾರಿ ಸಾಲ ಅಥವಾ ವಾಣಿಜ್ಯ ಬ್ಯಾಂಕ್ ಸಾಲ ಆ ಸ್ಥಿತಿಗೆ ತಂದು ಬಿಟ್ಟಿದ್ದೀರಿ ತಾವು. ಆದರೆ ಇಲ್ಲಿ ಏನು ಮಾಡುತ್ತಿದ್ದೀರಿ, ಇಂಟರೆಸ್ಟ್ ಆನ್ ವರ್ಕಿಂಗ್ ಕ್ಯಾಪಿಟಲ್, interest has been charged at the rate of 10% per annum, for a period of 3 months on the working capital. ಮೂರು ತಿಂಗಳಿಗೆ ಮಾತ್ರ ಬಡ್ಡಿ ಲೆಕ್ಕ ಹಾಕುತ್ತಾರೆ. ನಮ್ಮ ಕೃಷಿ ಬೆಲೆಯ ವಸ್ತುಗಳ ಬೆಲೆ ನಿಗದಿ ಮಾಡುವಾಗ at what percent? It is 10% p.a.ಇದಕ್ಕೆ ನಾನು ಮೊದಲು ಹೇಳಿದ್ದುದು ರೈತನಿಗೆ ಸಾಲ ಆಗುವುದಕ್ಕೆ, ರೈತ ಅಲ್ಲ ಕಾರಣ, ಸಾಲ ಬರುವುದಕ್ಕೆ ರೈತ ಕಾರಣ ಆದರೆ ಸಾಲ ರದ್ದು ಮಾಡಬೇಡಿ ಅಂತ ನಾನೇ ಹೇಳುತ್ತೇನೆ ಎಂದು ನಾನು ಮೊದಲನೆಯ ದಿವಸವೇ ಹೇಳಿದ್ದೆ. ನೀವು ಕಾರಣ ಆದರೆ ನಮ್ಮ ಅನ್ನದ ಋಣ ತೀರಿಸಿ ಎಂದೂ ಹೇಳಿದ್ದೇನೆ. ಆದರ ವಿವರ ಕೊಡುತ್ತೇನೆ. ಎಷ್ಟು ಚಾಣಾಕ್ಷತನ

ಉಪಯೋಗಿಸಿದ್ದಾರೆ ಎನ್ನುವುದನ್ನು ಹೇಳುತ್ತೇನೆ. ಇದರಲ್ಲಿ ಅಗ್ರಿಕಲ್ಚರಲ್ ಪ್ರೈಸ್ ಕಮಿಷನ್‌ನಲ್ಲಿ ಈ ಕಾಸ್ಟಿಂಗ್‌ಗೆ ಆಧಾರ ಏನು, ನಮ್ಮ ಬೇರೆ ಬೇರೆ ರಾಜ್ಯಗಳ ಫಾರಮ್ ಮ್ಯಾನೇಜ್‌ಮೆಂಟ್ ಸೆಲ್ ಏನು ಲೆಕ್ಕ ಹಾಕಿ ಕಳುಹಿಸಿಕೊಡುತ್ತಾರೆ. ಅದನ್ನು ಇಟ್ಟುಕೊಂಡು ಅನಂತರ ಪ್ರಕಟಣೆ ಮಾಡುವಂಥ ಬೆಲೆಗಳು ಇವು. ಎಷ್ಟರಮಟ್ಟಿಗೆ ಇವರು ಮೋಸ ಮಾಡುತ್ತಿದ್ದಾರೆ ಅಂದರೆ ಡಿಪ್ರಿಷಿಯೇಷನ್ ಲೆಕ್ಕ ಹಾಕುವಾಗ, ಇದನ್ನು ನೋಡಿ ನಗಬೇಕೋ ಅಥವಾ ಇವರನ್ನು ಏನು ಮಾಡಬೇಕೋ ಗೊತ್ತಾಗುವುದಿಲ್ಲ, .ಡಿಪ್ರಿಸಿಯೇಷನ್ ಒನ್ಡ್ ಬುಲಕ್ ಒನ್ಡ್ ಬುಲಕ್ಸ್ ಬಗ್ಗೆ ಡಿಪ್ರಿಸಿಯೇಷನ್ ಲೆಕ್ಕ ಹಾಕುವಾಗ from the total of the above components cost of green and dry fodder, cost of concentration depreciation on animals and cattle sheds deducting labour charges, others, etc., ಎಂದು ಹೇಳಿ, ಕೊನೆಯಲ್ಲಿ ಬುಲಕ್ಸ್ ಡಿಪ್ರಿಸಿಯೇಷನ್ ಲೆಕ್ಕಹಾಕುವಾಗ, the value of dung produced by the bullock is deducted. ಎತ್ತನ್ನು ಡಿಪ್ರಿಸಿಯೇಷನ್ ಲೆಕ್ಕ ಹಾಕುವಾಗ ಅದು ಎಷ್ಟು ಸಗಣಿ ಹಾಕಿತ್ತು ಅದನ್ನು ಆದಾಯ ಎಂದು ಕಳೆದು ಲೆಕ್ಕ ಹಾಕಿದ್ದಾರೆ. ಇದು ಯಾವ ಮಟ್ಟದ ಕುತಂತ್ರ ಎನ್ನುವುದಕ್ಕೆ ಇನ್ನೊಂದು ಹೇಳುತ್ತೇನೆ. ಇಲ್ಲಿ ಎಷ್ಟೆಷ್ಟು ಕುತಂತ್ರಗಳು ನಡೆಯುತ್ತದೆ ಎನ್ನುವುದಕ್ಕೆ ಹೇಳುತ್ತೇನೆ. ಕಾಸ್ಟ್ ಆಫ್ ಕಲ್ಟಿವೇಷನ್ ಆಫ್ ಪ್ಯಾಡಿ ಇದನ್ನು ಲೆಕ್ಕ ಹಾಕುವಾಗ, ದಿ ವ್ಯಾಲ್ಯೂ ಆಫ್ ಬಯ್‌ಪ್ರಾಡೆಕ್ಟ್, ಪ್ಯಾಡಿನಲ್ಲಿ ಬಯ್‌ಪ್ರಾಡೆಕ್ಟ್‌ನಲ್ಲಿ ಬ್ರಾಕೆಟ್‌ನಲ್ಲಿ ಬೂಸ ಅಂತ...the Value of by-product (boosa) has been deducted from the gross cost of cultivation to get the cost of cultivation of the main product. ಆಗಬಹುದು, ಸಂತೋಷ ನಿನ್ನೆ ಕಬ್ಬಿನ ಬೆಲೆ ನಿಗದಿ ಮಾಡಿದರು ಸನ್ಮಾನ್ಯ ಆತ್ಮಾನಂದ ಅವರು ಇಲ್ಲೇ ಇದ್ದಾರೆ, ಕಬ್ಬಿನ ಬೆಲೆ ನಿಗದಿಮಾಡುವಾಗ ಚರ್ಚೆಯಲ್ಲಿ ಭಾಗವಹಿಸಿದ್ದರು ಮಂಡ್ಯ ವಿಚಾರದಲ್ಲಿ ಕಬ್ಬಿನ ಬೆಲೆ ನಿಗದಿ ಮಾಡುವಾಗ ಇದ್ದರು. ನಮ್ಮ ಕಾಸ್ಟ್ ಆಫ್ ಕಲ್ಟಿವೇಷನ್ 515 ರೂಪಾಯಿ ಎಂದು ನಾವು ಹೇಳಿದೆವು. ಮಂಡ್ಯ ಜಿಲ್ಲೆಯ ಕಬ್ಬಿಗೆ. ಈಗ ಅವರು 375 ರೂಪಾಯಿ ಕೊಡುತ್ತೇವೆಂದು ಚೌಕಾಸಿ ನಡೆಯುತ್ತಿದೆ. ಇವೊತ್ತು ಮತ್ತೆ 11-30 ಗಂಟೆಗೆ ಚೌಕಾಸಿ ಪ್ರಾರಂಭ ವಾಗುತ್ತದೆ. ಈಗ ನಾನು ಭಾಷಣ ಮುಗಿಸಿ ಚೌಕಾಸಿಗೆ ಹೋಗಬೇಕಾಗಿದೆ. ಅಲ್ಲಿ ಬಯ್ ಪ್ರಾಡಕ್ಟ್ ಬಗ್ಗೆ ಮಾತನಾಡುತ್ತಿಲ್ಲ. ಅಲ್ಲಿ ಬಯ್‌ಪ್ರಾಡೆಕ್ಟ್ ಮಲಾಸಿಸ್ ಬಗ್ಗೆ ಮಾತನಾಡುತ್ತಿಲ್ಲ. ಮಲಾಸಿಸ್ ರಾಜಶೇಖರ ಮೂರ್ತಿಯವರ ಸ್ವತ್ತು. ಬಗಾಸ್ ಬಗ್ಗೆ ಮಾತನಾಡುತ್ತಾರೆ. ಅಧ್ಯಕ್ಷರೇ, ತಮಗೆ ಗೊತ್ತಿದೆ, ಸಕ್ಕರೆ ಕಾರ್ಖಾನೆಗಳು ನಮ್ಮ ಬಗಾಸ್ ಅನ್ನು ಸೌಧೆಗಾಗಿ ಉಪಯೋಗಿಸುತ್ತಿದ್ದಾರೆ. ಸೌದೆ ಬೆಲೆ ಎಷ್ಟು ಇದೆ ಶಿವಮೊಗ್ಗ ನಗರದಲ್ಲಿ. 600 ರೂಪಾಯಿ ಟನ್ ಇದೆಯಲ್ಲವೆ? ಕಬ್ಬಿಗೆ .375 ರೂಪಾಯಿ ಕೊಡುತ್ತಾರಂತೆ; ನಾವು ಒಂದು ವರ್ಷಬೆಳೆಸಿರುವ ಕಬ್ಬಿಗೆ 375 ರೂಪಾಯಿ ನಮ್ಮ ಕಬ್ಬಿನ ಸಿಪ್ಪೆಗೆ ಒಂದು ಟನ್‌ಗೆ 600 ರೂಪಾಯಿ ಆಗುತ್ತದೆ. ಆ ಬೈ ಪ್ರಾಡಕ್ಟ್ ನನ್ನದು ಅಲ್ಲ. ಒಂದು ಎಕ್ಸೈಸ್ ಮಂತ್ರಿಗಳಿಗೆ ಸೇರುತ್ತದೆ ಮತ್ತೊಂದು ಅಂದರೆ ಸೌದೆ ಬಸವಲಿಂಗಪ್ಪನವರಿಗೆ ಸೇರುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ:- ನಾವು ಒಂದು ಕಡೆ ಬಟ್ಟೆ ಪರ್ಚೇಸ್ ಮಾಡಿದರೆ ನಾವು ಪರ್ಚೇಸ್ ಮಾಡಿದ ಮೇಲೆ ಯಾವುದಾದರೂ ಒಂದುಭಾಗ ಕೆಟ್ಟು ಹೋಗಿದ್ದರೆ ಅದು ನಮಗೆ ಸೇರುತ್ತದೆಯೇ ಹೊರತು ಮಾರಾಟ ಮಾಡಿದವನಿಗೆ ಸೇರುವುದಿಲ್ಲ. ಹಾಗೆಯೇ ಕಬ್ಬಿನ ಕಾರ್ಖಾನೆಯವರು ಕೂಡ ನೇರವಾಗಿ ಕಬ್ಬನ್ನು ಪರ್ಚೇಸ್ ಮಾಡಿದ ಮೇಲೆ ಅದು ಅವರಿಗೇ ಸೇರುತ್ತದೆ.

ಪ್ರೊ: ಎಂ.ಡಿ. ನಂಜುಂಡಸ್ವಾಮಿ:- ಕೊಂಡು ಕೊಂಡ ಮೇಲೆ ಅವರು ಅದನ್ನು ಪ್ರೊಸೆಸ್ ಮಾಡಿದಾಗ ಸಿಗುವಂತ ಎಲ್ಲಾ ವಸ್ತುಗಳೂ ಕೂಡ ಅವರಿಗೇ ಸೇರುತ್ತವೆ. ಅದಕ್ಕೆ ನಾನು ಬರುತ್ತಿದ್ದೆ ಮಧ್ಯೆ ತಾವು–ಮಾತನಾಡಿದಿರಿ. ಎಕ್ಸೈಸ್–ಮಂತ್ರಿಗೆ ಎಷ್ಟು ಲಾಭ ಇದೆ, ಸಾರಾಯಿ ಮಾಡುವವರಿಗೆ ಎಷ್ಟು ಲಾಭ ಇದೆ ಎಂದು ವಿಚಾರ ಮಾಡಬೇಕಾಗುತ್ತದೆ. ಒಂದು ಟನ್ ಕಬ್ಬು ಅರೆದರೆ 40 ಕೆ.ಜಿ. ಮೊಲ್ಯಾಸಸ್ ಸಿಗುತ್ತದೆ 40 ಕೆ.ಜಿ. ಮಾಲ್ಯಾಸಸ್‌ನಿಂದ 10 ಲೀಟರ್ ರೆಕ್ಟಿಫೈಡ್ ಸ್ಪಿರಿಟ್ ಸಿಗುತ್ತದೆ ಅದಕ್ಕೆ 30 ಲೀಟರ್ ನೀರು ಸೇರಿದರೆ 40 ಲೀಟರ್ ಸಾರಾಯಿಯಾಗುತ್ತದೆ. ಇದರ ಬೆಲೆ ಸುಮಾರು

1600 ರೂಪಾಯಿಯಾಗಬಹುದು ನನಗೆ ಸರಿಯಾಗಿ ಗೊತ್ತಿಲ್ಲ. ಕಬ್ಬಿನ ಮೊಲ್ಯಾಸಸ್‌ನಲ್ಲಿ ಯಾರ್‍ಯಾರಿಗೆ ಎಷ್ಟೆಷ್ಟು ಹೋಗುತ್ತದೆಂಬುದನ್ನು ವಿಚಾರ ಮಾಡಬೇಕಾಗುತ್ತದೆ. ಹಾಗೇ ಸೌದೆಯನ್ನಾಗಿ ಬಗಾಸ್ ಅನ್ನು ಉಪಯೋಗಿಸಿದರೆ 600 ರೂಪಾಯಿಯಾಗುತ್ತದೆ. ಅದನ್ನೇ ಕಾಗದ ಕಾರ್ಖಾನೆಗೆ ಕೊಟ್ಟರೆ ಅಂದರೆ ಕಾಸ್ಟ್ ಆಫ್ ಕನ್‌ವರ್ಷನ್ ತೆಗೆದು ನಾನು ಹೇಳುತ್ತಿದ್ದೇನೆ. ಒಂದು ಟನ್ ಸಿಪ್ಪೆಯಲ್ಲಿ 1200 ರೂಪಾಯಿಯ ಕಾಗದ ಆಗುತ್ತದೆ. ಕಾಸ್ಟ್ ಆಫ್ ಕನ್ವರ್ಷನ್ ಬಿಟ್ಟು ಅಷ್ಟು ಆಗುತ್ತದೆ. ಇದು ಯಾರ ಕಾಲದ ಕಾನೂನುಗಳೋ ಗೊತ್ತಿಲ್ಲ. ಮೊಲ್ಯಾಸಸ್ ನನ್ನದು ಎಂದು ಹೇಳುವ ಕಾನೂನು ಯಾರದು ಎಂದರೆ ಈ ದೇಶಕ್ಕೆ ಬ್ರಿಟಿಷರು ಬಂದು ಸಕ್ಕರೆ ಕಾರ್ಖಾನೆ ಮಾಡಿದ್ದು ಸಕ್ಕರೆಯನ್ನು ತಯಾರು ಮಾಡುವುದಕ್ಕೆ ಅಲ್ಲ. ಕುಡಿತವನ್ನು ತಯಾರು ಮಾಡುವುದಕ್ಕೂ ಅವರು ಕಾನೂನನ್ನು ಮಾಡಿದರು. ಈಗ ನೀವು ಕೂಡ ಅದೇ ಹೇಳುತ್ತಿದ್ದೀರಿ. ನಾನು ಪ್ರತಿ ಭಾಷಣದಲ್ಲಿ ಹೇಳಬೇಕು ನಿಮಗೂ ಬ್ರಿಟಿಷರಿಗೂ ಏನೂ ವ್ಯತ್ಯಾಸವಿಲ್ಲ ಎಂದು ಆ ರೀತಿ ಮಾಡುತ್ತಿದ್ದೀರಿ. ಬಹಿರಂಗ ಸಭೆಯಲ್ಲಿ ಇದೇ ಭಾಷೆಯನ್ನು ಉಪಯೋಗಿಸುತ್ತೇನೆ ಇಲ್ಲಿ ಆ ಭಾಷೆ ಉಪಯೋಗಿಸುವುದು ಬೇಡ. ಮೊಲ್ಯಾಸಸ್ ರೈತನಿಗೆ ಸಿಗಬೇಕು ಮೊಲ್ಯಾಸಸ್‌ನ ಹಣ ರೈತನಿಗೆ ಬರಬೇಕು. ಕಬ್ಬಿನ ಬಗಾಸ್‌ನ ಹಣ ರೈತನಿಗೆ ಸಿಗಬೇಕು. ಕಾಸ್ಟಿಂಗ್ ಬಗ್ಗೆ ಸಂಪೂರ್ಣವಾಗಿ ಬದಲಾವಣೆಯಾಗಬೇಕು. ಇದನ್ನು ನಾವು ಒತ್ತಾಯ ಮಾಡಿದ ಮೇಲೆ 79 ರಲ್ಲಿ ಒಂದು ಸಮಿತಿಯನ್ನು ಮಾಡಿದರು.

SRI KAGODU THIMMAPPA:- You are a teacher. You are teaching the Sale of Goods act. Under the Sale of Goods Act, there will be a wholesale trade and change of ownership is there. Once you sell your articles, your goods, then the purchaser becomes the owner of the property. Is he not entitled under the Sale of Goods Act to use it as per his wish? The moment he purchases the goods from anybody, as a owner is he not entitled to enjoy according to his own whims?

ಪ್ರೊ: ಎಂ.ಡಿ. ನಂಜುಂಡಸ್ವಾಮಿ:- ಮಾನ್ಯ ಸಭಾಧ್ಯಕ್ಷರೇ ಮಾನ್ಯ ಕಾಗೋಡು ತಿಮ್ಮಪ್ಪನವರು ಕಬ್ಬಿನ ಮಾರಾಟವಾದ ಮೇಲೆ ಈ ಮಾತನ್ನು ಹೇಳುತ್ತಿದ್ದಾರೆ. ಆದರೆ ಮಾರಾಟ ಮಾಡುವುದಕ್ಕೆ ಮುಂಚಿತವಾಗಿ ಏನು ಮಾಡಬೇಕೆಂದು ನಾನು ಹೇಳುತ್ತಿದ್ದೇನೆ. ಅವರು ಮಾರಾಟ ಮಾಡಬೇಕಾಗಿದೆ. ಏಕೆಂದರೆ ನಮ್ಮ ಕಬ್ಬು ಒಣಗಿ ಹೋಗುತ್ತಿದೆ. ಇವತ್ತು ನಮ್ಮ ದೌರ್ಬಲ್ಯವನ್ನು ನೀವೆಲ್ಲರೂ ದುರುಪಯೋಗ ಮಾಡಿಕೊಳ್ಳುತ್ತಿದ್ದೀರಿ. ನಮ್ಮ ಕಬ್ಬು ಒಣಗಿ ಹೋಗುತ್ತಿದೆ. ಏನೇ ಆಗಲಿ ನಾವು ಕಬ್ಬನ್ನು ಕತ್ತರಿಸಲೇಬೇಕು. ನಾವು ಅಕ್ಷರಸ್ಥರಾದ ಮೇಲೆ ಕೇಂದ್ರ ಸರ್ಕಾರದವರು ಒಂದು ಸಮಿತಿಯನ್ನು 1979 ರಲ್ಲಿ ನೇಮಕ ಮಾಡಿದರು, i.e., Special Expert Committee on Cost of Production Estimates ಅದರಲ್ಲಿ ಡಾ: ಎಸ್.ಆರ್.ಸೇನ್ ಅಧ್ಯಕ್ಷರು, ಮತ್ತು ಹನುಮಂತರಾವ್ ಇತ್ಯಾದಿ ಇತ್ಯಾದಿ ಸದಸ್ಯರಿದ್ದರು. ಅವರು ಏನು ಶಿಫಾರಸು ಮಾಡಿದ್ದಾರೆ. ಇತ್ತೀಚೆಗೆ ಒಂದು ಮಾತಿನ ಮಟ್ಟದಲ್ಲಿ ಒಂದು ಬದಲಾವಣೆ ಬರುತ್ತಿದೆ. ಅಂದರೆ ಪ್ಯಾರಿಟ್ ಪ್ರೈಸಸ್ ಎಂದು. ಇದರಲ್ಲಿ ಏನು ಅರ್ಥ ಇದೆ ಎಂಬುದರಲ್ಲೂ ಚಾಣಾಕ್ಷತನ, ಜಾಣತನ ಕಾಣುತ್ತಿದೆ. Parity price approach. "The Committee recommends that to begin with the parity index of income in terms of trade between agriculture and manufacturing sectors..." ಇದನ್ನು ನಾನು ವಿವರಿಸಿ ಹೇಳಿದ್ದೇನೆ. ಇನ್ನೊಂದು ಕಡೆ ಕೂಡ ಇದನ್ನೇ ಹೇಳುತ್ತಾರೆ.

"The Committee favours costing of inputs on the basis of actual paid out expenses... values are to be based as far as possible on the principle of opportunity costs. Based on this criterion some modifications have been

recommended and the modification recommended is the parity price approach."
ಈ ಸಮಿತಿ 79ರಲ್ಲಿ ನೇಮಕವಾಯಿತು, ಮತ್ತು 80 ರಲ್ಲಿ ಇದರ ವರದಿ ಬಂತು. ನಮ್ಮ ರಾಜ್ಯ ಸರ್ಕಾರದವರೂ ಕೂಡ ಇಂತದ್ದೇ ಒಂದು ಕೆಲಸವನ್ನು ಮಾಡಿದರು. ನಮ್ಮ ಅದೃಷ್ಟಕ್ಕೆ ಇವತ್ತು ಯಾರು ಕೃಷಿ ಮಂತ್ರಿಯಾಗಿದ್ದಾರೋ ಇವರೇ ಅವತ್ತೂ ಕೂಡ ಕೃಷಿ ಮಂತ್ರಿಯಾಗಿದ್ದರು. ಕೃಷಿ ಉತ್ಪನ್ನಗಳ ಬೆಲೆ ಸಮಿತಿಗೆ ಮಾನ್ಯ ಬಂಗಾರಪ್ಪನವರೇ ಅಧ್ಯಕ್ಷರಾಗಿದ್ದರು. ಇದು ತನ್ನ ಶಿಫಾರಸನ್ನು ಮಾಡಿದೆ. ಪ್ರೈಸಸ್‌ನ್ನು ರೆಕಮಂಡ್ ಮಾಡಿದಮೇಲೆ ideally the support price should be fixed on the parity price approach. The parity price is the price which would give agricultural commodities the equivalent purchasing power over commodities which farmers brought during the period. It is a price which would purchase for the farmer a unit of the commodity as much of other things and services he can purchase with the same unit during the given base year. ಇದನ್ನೇ ಈ ಸದನದಲ್ಲಿ ಮಾತನಾಡುವಾಗ ಮಾನ್ಯ ಸದಸ್ಯರಾದ ಬಾಬಾಗೌಡ ಪಾಟೀಲರು ಹೇಳಿದರು. 1977ನೇ ಇಸವಿಯಲ್ಲಿ ಮೊರಾರ್ಜಿ ದೇಸಾಯಿಯವರು ಪ್ರಧಾನಮಂತ್ರಿಗಳಾಗುವುದಕ್ಕೆ ಮುಂಚೆ ನಮಗೆ 300 ರೂಪಾಯಿಗೆ ಒಂದು ತೊಲ ಚಿನ್ನ ಸಿಕ್ಕುತ್ತಿತ್ತು, 3 ಚೀಲ ಜೋಳವನ್ನು ಮಾರಾಟ ಮಾಡಿದರೆ ಒಂದು ತೊಲ ಚಿನ್ನ ಬರುತ್ತಿತ್ತು. ಈಗಲೂ ಅಷ್ಟೇ ಮಾಡಿದರೆ ಸಾಕು. ನಮಗೆ ಬೆಲೆಯನ್ನು ಏನೂ ಹೆಚ್ಚಿಗೆ ಮಾಡುವುದು ಬೇಡ. ಮೊದಲು 18 ಸಾವಿರ ರೂಪಾಯಿಗೆ ಒಂದು ಜೆಟಾರ್ ಟ್ರ್ಯಾಕ್ಟರ್ ಸಿಕ್ಕುತ್ತಿತ್ತು, ಅಂದರೆ 180 ಚೀಲ ಜೋಳವನ್ನು ಮಾರಾಟ ಮಾಡಿದ್ದರೆ ಈ ಟ್ರ್ಯಾಕ್ಟರ್ ಬರುತ್ತಿತ್ತು; ಈಗಲೂ ಕೂಡ ಅದರಂತೆಯೇ ಮಾಡಿದರೆ ಸಾಕು ನಮ್ಮ ಕೃಷಿ ಉತ್ಪನ್ನಗಳಿಗೆ ಸರ್ಕಾರದವರು ಹೆಚ್ಚು ಬೆಲೆಯನ್ನು ಕೊಡುವುದೇ ಬೇಡವೆಂದು ಹೇಳುತ್ತಿದ್ದಾರೆ. ಇದನ್ನೇ ಪ್ಯಾರಿಟಿ ಪ್ರೈಸಸ್ ಅಪ್ರೋಚ್ ಎಂದು ಹೇಳುವುದು: ಈ ಬಂಗಾರಪ್ಪ ಸಮಿತಿಯವರೇ ಇದನ್ನು ಶಿಫಾರಸ್ಸು ಮಾಡಿದ್ದುದು. ಇದಾದಮೇಲೆ 1984 ರಲ್ಲಿ ನಮ್ಮ ರಾಜ್ಯ ಸರ್ಕಾರದವರು ಮತ್ತೊಂದು ಸಮಿತಿಯನ್ನು ರಚನೆ ಮಾಡಿದರು. ಆಗಿನ ಕೃಷಿ ಮಂತ್ರಿ ಎಂ.ಪಿ. ಪ್ರಕಾಶರವರ ಅಧ್ಯಕ್ಷತೆಯಲ್ಲಿ ಮಾಡಿದ್ದುದು. ನಾನು ಮಾನ್ಯ ಮೊರಾರ್ಜಿ ದೇಸಾಯಿಯವರ ಹೆಸರನ್ನು ಏತಕ್ಕೆ ಹೇಳಿದೆ ಎಂದರೆ ಅಲ್ಲಿಂದಲೇ ಈ ಕೃಷಿ ಕ್ಷೇತ್ರವನ್ನು ಕೈಗಾರಿಕಾ ಕ್ಷೇತ್ರವನ್ನು ಒಡೆಯುವಂಥ ಒಂದು ಪದ್ಧತಿ ಜಾರಿಗೆ ಬಂದಿದ್ದುದು. ಶ್ರೀ ಎಂ. ಪಿ. ಪ್ರಕಾಶ್ ಮತ್ತು ಮುರಾರ್ಜಿ ದೇಸಾಯಿಯವರು ಇಬ್ಬರು ಕೂಡ ಒಂದೇ ಕುಟುಂಬಕ್ಕೆ ಸೇರಿದವರು. ಆದ್ದರಿಂದ ನಾನು ಇದನ್ನು ಹೇಳಬೇಕಾಗಿ ಬಂತು. He did not have any business to go back on an earlier report of the Government which was totally scientific. The Committee decided to evolve a formula for costing and pricing of these three commodities on the basis of parity price ಪ್ಯಾರಿಟಿ ಪ್ರೈಸ್ ಎಂದರೆ ಎಂ.ಪಿ. ಪ್ರಕಾಶ್ ಸಮಿತಿ, or say the Committee constituted in 1984. I request the Press also not to mention the name. ಪ್ಯಾರಿಟಿ ಪ್ರೈಸ್ ಎಂದರೆ ಈ ಕಮಿಟಿಯ ಪ್ರಕಾರ ಪ್ರೊಕ್ಯೂರ್‌ಮೆಂಟ್ ಇನ್ ದಿ ಓಪನ್ ಮಾರ್ಕೆಟ್, ಹೋಲಸೇಲ್ ಪ್ರೈಸಸ್. What are your procurement prices? ಮತ್ತೊಂದು ದಿವಸ ಮಾತನಾಡುತ್ತಾ ನಾನು ಹೇಳಿದ್ದೆ. ಅತ್ಯುತ್ತಮವಾದ ಅಕ್ಕಿಯನ್ನು 3.19 ಪೈಸೆಯಲ್ಲಿ ರೈತನಿಂದ ತೆಗೆದುಕೊಳ್ಳುತ್ತಿದ್ದೀರಿ. ನಿಮ್ಮ ಲೆವಿ ಪದ್ಧತಿಯಂತೆ Do you consider it as a scientific basis for calculating agricultural procurement prices? ಅತ್ಯುತ್ತಮವಾದ ಅಕ್ಕಿ 8 ರೂಪಾಯಿ ಬೆಲೆ ಅಂಗಡಿಯಲ್ಲಿ ಇದೆ. ನಮ್ಮ ಹತ್ತಿರ ಮೂರು ರೂಪಾಯಿ ಹತ್ತೊಂಬತ್ತು ಪೈಸೆಗೆ ತೆಗೆದುಕೊಂಡು ಆಮೇಲೆ ನಿಮ್ಮ ಬೆಲೆಯನ್ನು ನಿಗದಿ ಮಾಡಿದ್ದೀರಿ. Whole-sale price index. what is that? ವೈಜ್ಞಾನಿಕವಾದ ಇಂಡೆಕ್ಸ್ ಅದು or I call it as a Dallali index. ಇಂಡೆಕ್ಸ್ ಆಧಾರದ ಮೇಲೆ ನನ್ನ ಕೃಷಿ ವಸ್ತುಗಳಿಗೆ ಬೆಲೆ ನಿಗದಿ ಮಾಡುತ್ತೀರಿ. ಆ ಕಾರಣ ಈ ನಮ್ಮ

ಸರ್ಕಾರಕ್ಕೆ ಒತ್ತಾಯ ಮಾಡುವುದು. ಕೇಂದ್ರ ಸರ್ಕಾರಕ್ಕೆ ಈಗ ಬುದ್ಧಿ ಬರುತ್ತಿದೆ. ಈಗ ಹೇಳುತ್ತಿದ್ದಾರೆ, from now on we will include the managerial cost. ಅಂದರೆ ನನಗೆ ಇನ್ನು ಮೇಲೆ ಕೂಲಿ ಕೊಡುತ್ತಿರುವುದು. From now on we will include family labour while calculating the cost of cultivation. ಆ ಕಾರಣಕ್ಕಾಗಿ ಸ್ಟಾಂಡಿಂಗ್ ಕಮಿಟಿ ಆನ್ ಅಗ್ರಿಕಲ್ಚರ್ ಪಾಲಿಸಿ ಎಂದು ಅವರು ಒಂದು ಮಾಡಿದ್ದಾರೆ 1980ರಲ್ಲಿ ಮಾನ್ಯ ಬಂಗಾರಪ್ಪನವರ ಸಮಿತಿ ರೆಕಮೆಂಡ್ ಮಾಡಿದೆ. It says::

"The Committee recommends to the Government to have a permanent Standing Committee to calculate parity prices of different commodities. This standing committee should submit its recommendation about parity prices of various produce before one month in advance of the sowing season.."

Such a standing committee is absolutely necessary now. ಈಗಲೂ ನಾನು ಸರ್ಕಾರವನ್ನು ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ ತಾವು ಒಂದು ಸ್ಟಾಂಡಿಂಗ್ ಕಮಿಟಿಯನ್ನು ರಚನೆ ಮಾಡಬೇಕು. ರೈತರ ಸಾಲಕ್ಕೆ ಕಾರಣ ರೈತರಲ್ಲವೆಂದು ಸನ್ಮಾನ್ಯ ಮಂತ್ರಿಗಳಿಗೂ ಮತ್ತು ಸನ್ಮಾನ್ಯ ಎಲ್ಲಾ ಸದಸ್ಯರಿಗೂ ಈಗಾಗಲೇ ಸ್ಪಷ್ಟವಾಗಿರಬಹುದು.

ಶ್ರೀ ಕಾಗೋಡು ತಿಮ್ಮಪ್ಪ:- ಮಾನ್ಯ ಅಧ್ಯಕ್ಷರೇ ಈ ಸಂದರ್ಭದಲ್ಲಿ ಒಂದು ಮಾತನ್ನು ನಾನು ಹೇಳುವುದೇನೆಂದರೆ ಈಗ ಕೃಷಿ ಕ್ಷೇತ್ರದ ಉತ್ಪಾದನೆಗೆ ಅವರ ವೆಚ್ಚಕ್ಕೆ ಅನುಸಾರವಾಗಿ ಬೆಲೆ ನಿಗದಿ ಮಾಡಬೇಕೆಂದು ಹೇಳುವುದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಅದನ್ನು ಮಾಡುವುದಕ್ಕೆ ಈ ರಾಜ್ಯ ಸರ್ಕಾರಕ್ಕೆ ಅಧಿಕಾರವಿದೆಯೇ ಎನ್ನುವುದು ಒಂದು, ಮಾಡುವುದಾದರೆ ಕಾರ್ಯಗತ ಮಾಡುವುದಕ್ಕೆ ಆಗುತ್ತದೆಯೇ?

ಪ್ರೊ. ಎಂ.ಡಿ. ನಂಜುಂಡಸ್ವಾಮಿ:- ಅದಕ್ಕೆ ಬರುತ್ತಿದ್ದೇನೆ. ನಾವು ಹೇಳಿದಾಗಲೆಲ್ಲ ನೀವು ಹೇಳುತ್ತೀರಿ, ನಮಗೆ ಅಧಿಕಾರವಿಲ್ಲವೆಂದು. ನಾವು ಎಷ್ಟೋ ಬಾರಿ ಕೇಳಿದಾಗಲೆಲ್ಲ ಲೆವಿ ಬಗ್ಗೆ ಮಾತನಾಡಿದಾಗಲೆಲ್ಲ ಆಹಾರ ಮಂತ್ರಿಗಳು ಕೇಂದ್ರ ನೀತಿಯ ಬಗ್ಗೆ ಹೇಳುತ್ತಿದ್ದರು. I am asking whether you have reduced yourself to the level of municipality or a state government in federation? You are a state Government in federation; you are not a municipality ನನಗೆ ಇಷ್ಟೇ ಬೇಕು, ನೀವು ಲೆವಿ ಪಾಲಿಸಿ ತಪ್ಪು ಎಂದು ಹೇಳಿ ಸಾಕು. ಆಮೇಲೆ ನಾವು ಏನು ಮಾಡಬೇಕು ಅದನ್ನು ಮಾಡುತ್ತೇವೆ. ಬೆಲೆ ನಿಗದಿ ಮಾಡುತ್ತಿರತಕ್ಕದ್ದು ತಪ್ಪು ಎಂದು ಹೇಳಿ. I know you have no powers. Alright, you are a municipality. But what is obstructing you to say that these policies are bad anti-farmer?

SRI AZEEZ SAIT:- As far as I am concerned, if you want my personal view, I am against these levies and against this rationing because nobody is benefited except black-marketeers and departmental officials.

ಪ್ರೊ: ಎಂ.ಡಿ. ನಂಜುಂಡಸ್ವಾಮಿ :- ಈ ರೀತಿ ರಾಜಕಾರಣ ನನಗೆ ಗೊತ್ತಿಲ್ಲ. ಸಿಂಧ್ಯರವರು ಮಾತನಾಡುವಾಗ ಹೇಳಿದರು, ಇದನ್ನು ಹೇಳಲೇಬೇಕು ಎಂದು ಹೇಳಿದ್ದರಿಂದ ಹೇಳುತ್ತಿದ್ದೇನೆ. ಏಕೆಂದರೆ ಚಿಕ್ಕೇಗೌಡರು ಕೆಳಮಟ್ಟದ ಸಂಸ್ಥೆಗಳಲ್ಲಿ ಪಕ್ಷದ ಆಧಾರದ ಮೇಲೆ ಚುನಾವಣೆ ನಡೆಸಬೇಕೆ ಎಂದು ಕೇಳಿದರು. ಅದು ಅವರ ವೈಯಕ್ತಿಕ ಅಭಿಪ್ರಾಯ ಇರಬಹುದು. I would say you should not remain in the party at all. I would never do that. I have never joined a political party because the policies of all the political parties are defective from my stand point of view. ಅವರು ಹೇಳುತ್ತಿದ್ದರು ನನ್ನ ಪರ್ಸನಲ್ ವ್ಯೂ

ಎಂದು. You have to quit not only the post but also your party. That is the kind of politics I believe in.

ಶ್ರೀ ವಾಟಾಳ್ ನಾಗರಾಜ್:- ಅವರ ಆರೋಗ್ಯ ಸರಿಯಿಲ್ಲ. ಹೀಗಿರುವಾಗ ನೀವು ರಾಜೀನಾಮೆ ಕೊಡಿ ಎಂದರೆ ಅವರ ಗತಿ ಏನು? ಈ ಸಂದರ್ಭದಲ್ಲಿ ರಾಜೀನಾಮೆ ಕೊಡಬಾರದು.

SRI AZEEZSAIT:- He is saying I am not well. I am quite competent and challenge at any stage and at any level.

ಪ್ರೊ. ಎಂ.ಡಿ. ನಂಜುಂಡಸ್ವಾಮಿ :- ಈ ಬಗ್ಗೆ ತಾವೇ ತೀರ್ಪು ಕೊಡಬೇಕು. ಯಾವ ಕಾಲದಲ್ಲಿ ಏನೂ ಬೇಕಾದರೂ ಯಾವ ವಿಷಯ ಹೇಳಿದರೂ....

SRI AZEEZ SAIT:- I can challenge at any level.

ಶ್ರೀ ವಾಟಾಳ್ ನಾಗರಾಜ್:- ಕೆಲವು ವಿಚಾರದಲ್ಲಿ ಆಗುವುದಿಲ್ಲ.

ಶ್ರೀ ಕೆ. ರಮಾನಾಥ್ ರೈ:- ಗಂಭೀರವಾಗಿ ಚರ್ಚೆಯಾಗುತ್ತಿದೆ. ಇದರಲ್ಲಿ ಏಕೆ ಮಧ್ಯೆ ಪ್ರವೇಶ ಮಾಡುತ್ತೀರಿ? ಗುಪ್ತ ವ್ಯವಹಾರಗಳು ಯಾರದ್ದು ಯಾರಿಗೂ ಗೊತ್ತಾಗುವುದಿಲ್ಲ. ವೇದಿಕೆಯಲ್ಲಿ ನಾವು ಮಾಡಿಲ್ಲ. ಅವರೂ ಮಾಡಿಲ್ಲ. ಅದು ಅವರಿಗೆ ಮಾತ್ರ ಗೊತ್ತು.

ಪ್ರೊ. ಎಂ.ಡಿ. ನಂಜುಂಡಸ್ವಾಮಿ:- ಬೆಲೆ ನಿಗದಿಯಿಂದ ಆಗಿರತಕ್ಕ ಮೋಸದಿಂದ ನಾನು ಹೇಳಿದ್ದುದು, ರೈತರು ಸಾಲಗಾರರು ಅಲ್ಲ, ಅವರು ಸಾಲ ಕೊಡಬೇಕಾಗಿಲ್ಲ. ಅವರಿಗೆ ನಿಮ್ಮಿಂದಲೇ ಬಾಕಿ ಬರಬೇಕು. ಆ ಕಾರಣದಿಂದಲೇ ರೈತ ಸಂಘ ಸ್ಥಾಪನೆಯಾಗಿರುವುದೇ ಹೊರತು ಸಾಲವನ್ನು ರದ್ದು ಮಾಡಿಸುವುದಕ್ಕಲ್ಲ ರೈತರಿಗೆ ಬಾಕಿ ಬರಬೇಕಾದುದನ್ನು ವಸೂಲ್ಮಾಡುವುದಕ್ಕೆ ಸಂಘವನ್ನು ಸ್ಥಾಪಿಸಿದ್ದೇವೆ. ನಾವು ಭಿಕ್ಷೆ ಬೇಡುವವರು ಅಲ್ಲವೆಂದು ಈಗಾಗಲೇ ಹೇಳಿದ್ದೇನೆ. ಒಂದೇ ಸಾರಿ ನಾನು ಸಾಲ ರದ್ದಾಗಬೇಕೆಂದು ಹೇಳಿದ್ದುದು. ಮತ್ತೆ ಹೇಳುತ್ತಿದ್ದೇನೆ, ನೀವು ಮಾಡುತ್ತೀರೋ ಬಿಡುತ್ತೀರೋ.... ನೀವು ಮಾಡದಿದ್ದರೆ ನಾವು ಮಾಡುತ್ತೇವೆ. ನಾವು ಮಾಡಿ ಆಗಿದೆ. ವಸೂಲಿ 11 ಪರ್ಸೆಂಟ್ ಎಂದು ಗೊಳೋ ಎಂದು ಅಳುತ್ತಿದ್ದೀರಿ. ಏತಕ್ಕೆ ಹಾಗಾಗಿದೆ ಎಂದು ಪ್ರಾಮಾಣಿಕವಾಗಿ ನೋಡಬೇಕು. ನಮಗೆ ಸಾಲ ಬೇಡ. ನಾವು ಸಾಲಗಾರರಾಗಿ ಸಾಯಬೇಕೆಂದು ಇಷ್ಟವಿಲ್ಲ. ಸಾಲಗಾರ ಎಂದು ಹೆಸರನ್ನು ಶಾಶ್ವತವಾಗಿ ಇಟ್ಟುಕೊಂಡಿರಬೇಕೆಂದು ಇಷ್ಟವಿಲ್ಲ. ನಾವು ಬೆಳುದುದಕ್ಕೆ ವೈಜ್ಞಾನಿಕವಾಗಿ ಲೆಕ್ಕ ಹಾಕಿ ಬೆಲೆ ನಿಗದಿ ಮಾಡಿ, ಸಾಕು. ನಾವೇ ನಿಮಗೆ ಸಾಲ ಕೊಡುತ್ತೇವೆ. ಏಕೆಂದರೆ ನಾವು ಅತ್ಯಂತ ಸರಳಜೀವಿಗಳು. ದುಂದುವೆಚ್ಚ ಮಾಡುವವರಲ್ಲ. ಆ ಕಾರಣದಿಂದ ನಿಮಗೆ ನಾವು ಸಾಲ ವಾಪಸ್ ಕೊಡುವ ಸ್ಥಿತಿಗೆ ಬರುತ್ತೇವೆ. ನಮಗೆ ವೈಜ್ಞಾನಿಕವಾಗಿ ವ್ಯವಸಾಯದ ವೆಚ್ಚ ಲೆಕ್ಕ ಹಾಕಿ ನಮ್ಮ ಬೆಳೆಗೆ ಒಳ್ಳೆಯ ಬೆಲೆ ಕೊಡುವ ಪದ್ಧತಿ ಜಾರಿಗೆ ತನ್ನಿ. ಇದನ್ನು ಏತಕ್ಕೆ ಹೇಳುತ್ತೇನೆಂದರೆ ಸಹಕಾರಿ ಸಂಸ್ಥೆಗಳನ್ನು ನಾಶ ಮಾಡಬೇಕು ಎಂಬ ಆಸೆ ನಮಗಿಲ್ಲ. ರೈತನನ್ನು ನಾಶ ಮಾಡತಕ್ಕ ಸಹಕಾರಿ ವ್ಯವಸ್ಥೆ ದೇಶಕ್ಕೆ ಬೇಕಾಗಿಲ್ಲ. ಸಹಕಾರಿ ಸಂಸ್ಥೆಗಳನ್ನು ಉತ್ತಮಪಡಿಸಬೇಕು ಎಂದು ಸಲಹೆ ಕೊಡುತ್ತಿದ್ದೇನೆ. ಇವತ್ತು ಸಹಕಾರಿ ಸಂಸ್ಥೆಗಳು ಕೇವಲ ಸಾಲ ಕೊಡುವ ಮಾರ್ವಾಡಿ ಸಂಸ್ಥೆಗಳಾಗಿವೆ: ಅವಕ್ಕೆ ಬೇರೆ ಕೆಲಸ ಇವೆ. They should get into co-operative non-agricultural activities. ಯಾವಾಗ ನಾವು ಬೇರೆ ಕ್ಷೇತ್ರಕ್ಕೆ ಪ್ರವೇಶ ಮಾಡುವುದು? ಸಹಕಾರಿ ಸಂಸ್ಥೆಗಳು ಬರೀ ಸಾಲ ಕೊಡುವ ಸಂಸ್ಥೆಗಳೇ? We have got to get into other activities through the co-operative movement. ಸಹಕಾರ ಕ್ಷೇತ್ರ ಬೇರೆ ಬೇರೆ ಕ್ಷೇತ್ರಗಳಿಗೆ ಕೈಹಾಕಬೇಕು. ಯಾವಾಗ ಹಾಕಬೇಕು? Only when the need to advance co-operative loans is put an end to.

ಕಾರಣದಿಂದ ನಾನು ಹೇಳುತ್ತಾ ಇದ್ದೇನೆ, ಒಂದು ವೈಜ್ಞಾನಿಕವಾದ ಜೀವನ ಪ್ರಾರಂಭ ಮಾಡೋಣ. ಮುಂದಿನ ಬೇಡಿಕೆ ಗ್ರಾಮಾಭಿವೃದ್ಧಿ ಸಚಿವರದು. ಗ್ರಾಮಾಭಿವೃದ್ಧಿ ಸಚಿವರು ಏನಾದರೂ ಪರಿಣಾಮಕಾರಿಯಾಗಿ ಕೆಲಸ ಮಾಡಬೇಕಾದರೆ ಅವರಿಗೆ ಇನ್ನೂ ಒಂದೆರಡು ಖಾತೆಗಳನ್ನು ಕೊಡಬೇಕು, ಗ್ರಾಮಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಮಂತ್ರಿಗಳು ಎಂದು ಹೆಸರು.

ವಿಕೇಂದ್ರೀಕರಣದ ಬಗ್ಗೆ ಬಹಳ ಚರ್ಚೆಯಾಯಿತು. ಯಾವ ನಮೂನೆಯ ವಿಕೇಂದ್ರೀಕರಣ ಆಗಿದೆ ಜಿಲ್ಲಾ ಪರಿಷತ್ ಆಕ್ಟ್‌ನಲ್ಲಿ ? Can you call it as decentralisation at all? ಮಂಡಲ ಪಂಚಾಯಿತಿಗೆ, ಬೇಸಿಕ್ ಯೂನಿಟ್ ಎಂದರೆ ಅದಕ್ಕೆ ಶಕ್ತಿ ಇರಬೇಕೋ ಬೇಡವೋ? The basic unit of democracry now in Karnataka is Mandal Panchayat. ಅದಕ್ಕೆ ಶಕ್ತಿ ಇರಬೇಕೋ ಬೇಡವೋ? ಶಕ್ತಿ ಏನು ಕೊಟ್ಟಿದ್ದೇವೆ? ಅದಕ್ಕೆ ಶಕ್ತಿ ಎಲ್ಲಿಂದ ಬರುತ್ತದೆ? ಏನು ಆಸ್ತಿ ಕೊಟ್ಟಿದ್ದೇವೆಯೇ? ಅದಕ್ಕೆ ಏನು ತೆರಿಗೆ ಶಕ್ತಿ ಕೊಟ್ಟಿದ್ದೇವೆ? For an administrative unit these two are very important. ಆ ಪ್ರಾಥಮಿಕ ಘಟಕಕ್ಕೆ ಏನು ತೆರಿಗೆ ಶಕ್ತಿ ಕೊಟ್ಟಿದ್ದೇವೆ? ಮಂಡಲಪಂಚಾಯಿತಿಯ ಪ್ರಾಪರ್ಟಿ ಏನು? ನನಗೆ ದುಃಖವಾಗುತ್ತದೆ ಫೋರ್ಪಡೆಯರವನ್ನು ನೋಡಿದರೆ. ಪಂಚಾಯತಿ ಮಂತ್ರಿಗಳ ಪಂಚಾಯತಿ ಆಸ್ತಿ ಏನೆಂದರೆ rubbish and carcasses of dead animals. ಜಿಲ್ಲಾ ಪರಿಷತ್ ಆಕ್ಟ್‌ನಲ್ಲಿ ಮಂಡಲ ಪಂಚಾಯಿತಿ ಪ್ರಾಪರ್ಟಿಯನ್ನು ಡಿಫೈನ್ ಮಾಡಿದ್ದೇವೆ. Rubbish of the villages and carcasses of dead animals. ಅಕಸ್ಮಾತ್ ದೇವಸ್ಥಾನ ಇದ್ದರೆ ಜಾತ್ರೆ ಆದರೆ ತೆರಿಗೆ ವಸೂಲು ಮಾಡುವುದು. You call it a basic unit of democracy. ಆ ಕಾರಣದಿಂದ ಜಿಲ್ಲಾ ಪರಿಷತ್ ಆಕ್ಟ್‌ಗೆ ಆಮೂಲಾಗ್ರವಾಗಿ ಬದಲಾವಣೆ ತರಬೇಕು. ಏನೋ ಎಕ್ಸರ್‌ಸೈಸ್ ಮಾಡಿದರು. ಪಶ್ಚಿಮ ಬಂಗಾಳಕ್ಕೆ ಹೋಗಿ ನೋಡಿಕೊಂಡು ಬಂದು ಅಲ್ಲಿ ಇರುವುದನ್ನು ಕಾಪಿ ಹೊಡೆದು ಕಾನೂನು ಮಾಡಿದ್ದಾರೆ. ನಜೀರ್‌ಸಾಹೇಬರು ನನ್ನ ಜೊತೆ ಚರ್ಚೆ ಮಾಡಿದರು. ನಾನು ಅವರನ್ನು ಭೇಟಿ ಮಾಡಿದ್ದೆ. ಆದರೆ ನನ್ನ ಸಲಹೆಯನ್ನು ಅವರು ತೆಗೆದುಕೊಳ್ಳಲಿಲ್ಲ. ಅವರೂ ಪಶ್ಚಿಮ ಬಂಗಾಳಕ್ಕೆ ಹೋಗಿದ್ದರು. ಆ ಕಾರಣ ಪಂಚಾಯತ್ ರಾಜ್ಯ ವ್ಯವಸ್ಥೆಯನ್ನು ಇನ್ನೂ ಉತ್ತಮಪಡಿಸುವ ಕೆಲಸ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಇನ್ನೂ ಶಕ್ತಿಯುತವಾಗಿ ಮಾಡುವುದಕ್ಕೆ ಕೆಲಸ ಮಾಡಬೇಕು. ಸದಸ್ಯರು ಮಾತನಾಡುತ್ತಿದ್ದರು ಬಹಳ ಭ್ರಷ್ಟಾಚಾರ ಬಂದಿದೆ ಎಂದು. ಮತ್ತೊಬ್ಬರು ಮಾತನಾಡುತ್ತಿದ್ದರು ಪೀಪಲ್ಸ್ ಪಾರ್ಟಿಸಿಪೇಷನ್ ಬಗ್ಗೆ. ಹಳ್ಳಿ ಹಳ್ಳಿಗೆ ಹೋದಾಗ ಚರ್ಚೆ ನಡೆಯುತ್ತಿದೆ. ಅವನ್ಯಾವನೋ ಪಂಚಾಯಿತಿಗೆ ಸಂಬಂಧಪಟ್ಟ ಜೆಲ್ಲಿ ಗುಡ್ಡಿಯನ್ನು ಅಲ್ಲಿ ತೆಗೆದುಕೊಂಡುಹೋಗಿ ಹಾಕಿದ್ದಾನೆ ಎಂದು ಮಾತನಾಡುತ್ತಿದ್ದರು. I would say that is peoples participation. People are participating in such discussion. That is democratic activity. ಪ್ರಾರಂಭದಲ್ಲಿ ಒಂದು ವರ್ಷ ಎರಡು ವರ್ಷ ಅದಾಗುತ್ತದೆ. ಆದರೆ ಡೆಮಾಕ್ರೆಟಿಕ್ ಆಕ್ಟಿವಿಟಿ ಸರಿಪಡಿಸುವ ಮಟ್ಟಕ್ಕೆ ಏರುತ್ತದೆ. ಅದರಲ್ಲಿ ಅನುಮಾನ ಇಟ್ಟುಕೊಳ್ಳಬೇಕಾಗಿಲ್ಲ. What I mean is, the powers we have given to the panchayat now is very very meagre. ಇನ್ನೂ ಹೆಚ್ಚಿನ ಅಧಿಕಾರಗಳನ್ನು ಅವರಿಗೆ ವರ್ಗಾವಣೆ ಮಾಡಬೇಕು. ಏಕೆ ನಮ್ಮ ಜನ ಬೇ-ಜವಾಬ್ದಾರಿಯಿಂದ ಚುನಾವಣೆಗಳಲ್ಲಿ ಭಾಗವಹಿಸುತ್ತಿದ್ದಾರೆ. ಮಂಡಲ್ ಪಂಚಾಯಿತಿ ಮತ್ತು ಜಿಲ್ಲಾ ಪರಿಷತ್ತಿನಲ್ಲಿ ಬೇ-ಜವಾಬ್ದಾರಿಯಿಂದ ಸ್ವಲ್ಪ ಸ್ವಲ್ಪ ಚುನಾವಣೆಗಳಲ್ಲಿ ಭಾಗವಹಿಸುತ್ತಿದ್ದಾರೆ. ಇದಕ್ಕೆ ಕಾರಣ ಇಷ್ಟೆ. ಮಂಡಲ ಪಂಚಾಯಿತಿಯಲ್ಲಿ 3 ಕಾಸು ತಿನ್ನುವುದಕ್ಕೆ ಅವಕಾಶ ಸಿಕ್ಕಿದೆ. ಜಿಲ್ಲಾ ಪರಿಷತ್ತಿನಲ್ಲಿ 6 ಕಾಸು ತಿನ್ನುವ ಅವಕಾಶ ಸಿಕ್ಕಿದೆ. 3 ಕಾಸು, 6 ಕಾಸು ತಿನ್ನುತ್ತಿದ್ದಾರೆ ಯಾವನು ಬಂದರೆ ಏನು ಎಂದು ಹೇಳುತ್ತಿದ್ದಾರೆ. ಆದರೆ ಹೆಚ್ಚಿನ ಅಧಿಕಾರಗಳನ್ನು ಕೊಟ್ಟರೆ ಹೆಚ್ಚು ಭಾಗವಹಿಸುತ್ತಾರೆ. ತಾವು ಗಾಂಧೀಜಿ ಹೇಳಿದ ತತ್ವದ ಮಟ್ಟಕ್ಕೆ ಹೋಗುವವರಲ್ಲ. ನಮಗೆ ಗೊತ್ತಿದೆ, ಹೋಗಬೇಕೆಂಬುದು ನನ್ನ ಆಸೆ. Even the police powers and magisterial powers should be devolved. ಆಗ ಜನಗಳು ಇನ್ನೂ ಹೆಚ್ಚು ಜವಾಬ್ದಾರಿಯಿಂದ ಚುನಾವಣೆಗಳಲ್ಲಿ ಭಾಗವಹಿಸುತ್ತಾರೆ. ಆಗಲಿ ಒಂದು ವರ್ಷ, ಎರಡು ವರ್ಷ ಅಧಿಕಾರ ದುರುಪಯೋಗವಾಗಬಹುದು. ಅದು ಆಗುತ್ತದೆಂದು ಹೇಳಿ ಅಧಿಕಾರ ವಿಕೇಂದ್ರೀಕರಣದ ಕಲ್ಪನೆಯನ್ನು ಕೈಬಿಡುವುದಾದರೆ ಅದು ಬಹಳ ಕೆಟ್ಟ ತೀರ್ಮಾನವಾಗುತ್ತದೆ. ವಿಕೇಂದ್ರೀಕರಣದ ವಿರುದ್ಧ ಮಾತನಾಡುವವರು, ಅವರು ಯಾರು ಮಂಡಲ್ ಪಂಚಾಯಿತಿ ಚೇರ್ಮನ್? ಅವನು ಯಾರು ಜಿಲ್ಲಾ ಪರಿಷತ್ತಿನ ಅಧ್ಯಕ್ಷ ಎನ್ನುವಂಥ ಮಾತುಗಳು

ಬಂದಿವೆ. ಕೆಲವು ಅಧಿಕಾರಿಗಳು, ಸಂಬಳದ ನೌಕರರನ್ನು ವರ್ಗಾವಣೆ ಮಾಡುವ ಅಧಿಕಾರ ಅವರಿಗೆ ಏಕೆ ಬೇಕು ಎನ್ನತಕ್ಕಂತಹ ಮಾತೂ ಬಂತು. ಇದು ಅಪಾಯದ ಮಾತು. ಮಂಡಲ್ ಪಂಚಾಯತಿ ಪ್ರಧಾನ ಮತ್ತು ಜಿಲ್ಲಾ ಪರಿಷತ್ತಿನ ಅಧ್ಯಕ್ಷನಾಗಿರುವವನು ಭ್ರಷ್ಟನಾಗಿ ಕಾಣಬಹುದು. ಆದರೆ ಅವರನ್ನು ಸರಿಪಡಿಸುವಂತಹ ಅಧಿಕಾರವನ್ನು ಅಧಿಕಾರಿಗಳಿಗೆ ಕೊಡಿ ಎಂದು ಹೇಳತಕ್ಕಂತದ್ದು ಅಪಾಯದ ವಿಚಾರ. ಈಗ ನಮ್ಮ ಮುಖ್ಯಮಂತ್ರಿಗಳು ಅಧ್ಯಕ್ಷರಾಗಿ ಕಾಣುತ್ತಾರೆ ಎಂದು ಇಟ್ಟುಕೊಳ್ಳೋಣ. ಆಗ ಅವರ ಅಧಿಕಾರವನ್ನು ಮುಖ್ಯಕಾರ್ಯದರ್ಶಿಗಳಿಗೆ ಕೊಡಿ ಎಂದು ಹೇಳುವಂತಹ ಅವಕಾಶ ಬರಬಹುದು. It is a very bad trend. Please do not do that. Have confidence in the elected officers and not in salaried officers. I am a man who believe in the antithesis of democracy and bureaucracy living together. ಬ್ಯೂರೋಕ್ರಸಿಯನ್ನು ಎಲ್ಲಿ ಇಟ್ಟುಕೊಳ್ಳಬೇಕೋ ಅಲ್ಲಿ ಇಟ್ಟುಕೊಳ್ಳಬೇಕು. ಆಗ ಮೊದಲನೆಯ ಸ್ಥಾನ ಪ್ರಜಾಪ್ರಭುತ್ವಕ್ಕೆ ಇರಬೇಕು. ಆ ಕಾರಣ ಜಿಲ್ಲಾ ಪರಿಷತ್ತಿನ ಕಾನೂನಿಗೆ ಏನೇನು ತಿದ್ದುಪಡಿಗಳು ಬೇಕೋ ಅದನ್ನು ಮಾಡೋಣ. ಅದನ್ನು ಮಾಡಲೇಬೇಕು. ಆದರೆ ಪಕ್ಷದ ಆಧಾರದ ಮೇಲೆ ಚುನಾವಣೆ ಜರುಗಿಸುವುದನ್ನು ಮೊದಲು ರದ್ದು ಮಾಡಬೇಕು. ಒಂದು ಚರಂಡಿ ಕಟ್ಟುವುದಕ್ಕೆ ಹಳ್ಳಿಗಳನ್ನು ಕ್ಲೀನ್ ಮಾಡುವುದಕ್ಕೆ ಪಕ್ಷ ಬೇಕಾಗಿಲ್ಲ. ಎಷ್ಟೋ ಹಳ್ಳಿಗಳಲ್ಲಿ ಇದು ಕಾಂಗ್ರೆಸ್‌ನ ಚರಂಡಿ. ಇದು ಜನತಾದಳದ ಚರಂಡಿ ಎಂದು ಜನ ಹೇಳುತ್ತಾರೆ. ಆ ಹೆಸರನ್ನು ಇಟ್ಟುಕೊಳ್ಳಬೇಕೇ? ನಾವು ಅಲ್ಲಿಗೆ ಹೋದಾಗ ಜನರು ತೋರಿಸುತ್ತಾರೆ. ಇದು ಕಾಂಗ್ರೆಸ್ ಚರಂಡಿ ಅಂತ. ಇದು ಜನತಾದಳದ ಚರಂಡಿ ಅಂತ ತೋರಿಸುತ್ತಾರೆ. ಆಗಬಹುದೇ? ಆ ಕಾರಣ ಪಕ್ಷದ ಆಧಾರದ ಮೇಲೆ ಏನು ಚುನಾವಣೆಯನ್ನು ಮಾಡುತ್ತಿದ್ದೇವೆ. ಅದನ್ನು ದಯಮಾಡಿ ತೆಗೆದು ಹಾಕಿ. ಯಾವ ಯಾವ ಹಂತದಲ್ಲಿ ತೆಗೆಯಬೇಕೋ ಅದನ್ನು ತೀರ್ಮಾನ ಮಾಡೋಣ. ಏಕೆ ಪಕ್ಷ ಪಕ್ಷ ಎಂದು ಮಾತನಾಡುತ್ತೀರೋ ನನಗೆ ಅರ್ಥವಾಗುತ್ತಿಲ್ಲ. ನೀವು ಏನು ಮಂಡಲ್ ಪಂಚಾಯಿತಿಯಲ್ಲಿ ಎಷ್ಟು ಹೊಲಸು ಇದೆ ಅಂತ ಹೇಳುತ್ತಿದ್ದೀರೋ, ರಾಜ್ಯ ಮಟ್ಟದಲ್ಲೂ ಅಷ್ಟೇ ಹೊಲಸು ಇದೆ. ಇಲ್ಲ ಅಂತ ಹೇಳುತ್ತೀರಾ? We have bigger problems at the state level than Mandal Panchayat level ಸುಮ್ಮನೆ ಅರ್ಥ ಇಲ್ಲದ ಹಾಗೆ ಪಕ್ಷ ಪಕ್ಷ ಅಂತ ಹೇಳುತ್ತೇವೆ. ಅದು ಬೇರೆ ವಿಚಾರ. ಈಗ ಗ್ರಾಮಾಭಿವೃದ್ಧಿ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯಿತಿ ರಾಜ್ ಸಚಿವರಿಗೆ ಕೊಟ್ಟಿರುವ ಹಣವಾಗಲಿ ಅಥವಾ ಅಧಿಕಾರವಾಗಲಿ ಸಾಲದು. ಏಕೆಂದರೆ ನೀವು ಕೊಟ್ಟಿರುವ ವರದಿಯನ್ನು ನೋಡಿದರೆ ಗ್ರಾಮಾಭಿವೃದ್ಧಿಗಾಗಿ ಬಹಳ ದಿವಸಗಳಿಂದ ಈ ಕಾರ್ಯಕ್ರಮಗಳು ನಡೆಯುತ್ತಿವೆ ಅವು ಏನೇನು ಸಾಲದು. I have been calling them as invisible programmes. ಇಲ್ಲಿ ಇರುವ ಎಲ್ಲಾ ಕಾರ್ಯಕ್ರಮಗಳೂ ಅದೃಷ್ಯ ಕಾರ್ಯಕ್ರಮಗಳು. ಆದರೆ ನಿಮಗೆ ಗ್ರಾಮೀಣ ಅಭಿವೃದ್ಧಿ ನಿಜವಾಗಿ ಮಾಡಬೇಕೆಂದು ಆಸೆ ಇದ್ದರೆ ಈಗ ನಾನು ಹೇಳುವ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಸ್ವಲ್ಪ ಗಮನ ಇಟ್ಟು ಕೇಳಬೇಕು. ಗ್ರಾಮೀಣಾಭಿವೃದ್ಧಿ ಸಚಿವರು ಪರಿಣಾಮಕಾರಿಯಾಗಿ ಕೆಲಸ ಮಾಡಬೇಕಾದರೆ ಅವರಿಗೆ ಇನ್ನೆರಡು ಖಾತೆಗಳನ್ನು ವರ್ಗಾವಣೆ ಮಾಡಬೇಕು. ಒಂದನೆಯದು, ಸಣ್ಣ ಕೈಗಾರಿಕೆ. ಇನ್ನೊಂದು, ಮೈಕ್ರೋ ಇರಿಗೇಷನ್, ಇದಕ್ಕೆ ಒಂದು ಖಾತೆ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ. Micro irrigation should be handled by a minister which should be a fulfledged portfolio attached to RDPR ಗ್ರಾಮಾಭಿವೃದ್ಧಿ. ಮೈಕ್ರೋ ಇರಿಗೇಷನ್ ಇಲ್ಲ ಎಂದರೆ ತಾವು ಗ್ರಾಮೀಣ ಅಭಿವೃದ್ಧಿ ಎಂದು ಏನು ಹೇಳುತ್ತಿದ್ದೀರೋ ಅದಕ್ಕೆ ಅರ್ಥವಿಲ್ಲ ಎಂದು ನನ್ನ ಭಾವನೆ. Creation of assets in the villages... I do not know how you can create assets. You have to create assets either in Agriculture or in industry. What is the programme you have. ಮತ್ತೊಂದು, ಡ್ರೈ ಲ್ಯಾಂಡ್ ಡೆವೆಲಪ್‌ಮೆಂಟನ್ನು ದಯವಿಟ್ಟು ಗ್ರಾಮೀಣಾಭಿವೃದ್ಧಿ ಸಚಿವರಿಗೆ ವರ್ಗಾವಣೆ ಮಾಡುವುದು

ಒಳ್ಳೆಯದು. ಡ್ರೈಲ್ಯಾಂಡ್ ಡೆವಲಪ್‌ಮೆಂಟ್‌ಗೆ ತಾವು ಕೊಟ್ಟಿರುವ ಹಣ ಎಷ್ಟು? ಶೇಕಡ 80 ಭಾಗ ನಾವು ಖುಷ್ಕಿ ಬೇಸಾಯ ಮಾಡುತ್ತಿದ್ದೇವೆ. ಈ ವರ್ಷದ 1040 ಕೋಟಿ ರೂಪಾಯಿ ಯೋಜನಾ ಹಣದಲ್ಲಿ ಕೇವಲ 8 ಕೋಟಿ ರೂಪಾಯಿಗಳನ್ನು ಡ್ರೈಲ್ಯಾಂಡ್ ಡೆವಲಪ್‌ಮೆಂಟ್‌ಗೆ ಕೊಟ್ಟರೆ ಯಾವ ಡ್ರೈಲ್ಯಾಂಡ್ ಡೆವಲಪ್ ಆಗುತ್ತದೆ? ಶೇಕಡ 80 ರಷ್ಟು ಭಾಗ ಭೂಮಿ ಕರ್ನಾಟಕದಲ್ಲಿ ಖುಷ್ಕಿ ಬೇಸಾಯ. 1040 ಕೋಟಿಯಲ್ಲಿ 8 ಕೋಟಿ ಡ್ರೈಲ್ಯಾಂಡ್ ಡೆವಲಪ್‌ಮೆಂಟ್‌ಗೆ. ಏನು ಆಗುತ್ತದೆ? ಇನ್ನೂ ಹೆಚ್ಚಿಗೆ ಹಣ ವರ್ಗಾವಣೆ ಮಾಡಬೇಕು. ಮತ್ತು ಮೈಕ್ರೋ ಇರಿಗೇಷನ್ ಎಂದು ಖಾತೆ ತೆಗೆಯಬೇಕು. ಜೊತೆಗೆ ಸಣ್ಣ ಕೈಗಾರಿಕೆಯನ್ನು ಕೊಡಬೇಕು. ನಾನು ರೇಷ್ಮೆ ಬಗ್ಗೆ ಮಾತನಾಡುತ್ತಾ ಹೇಳಿದ್ದೆ. ಕೇವಲ ಗೂಡು ಮಾರುವುದನ್ನು ತಪ್ಪಿಸಿ ರೇಷ್ಮೆ ನೂಲನ್ನು ಮಾರುವ ವ್ಯವಸ್ಥೆ ಮಾಡಿದರೆ ರೇಷ್ಮೆ ಬೆಳೆಗಾರರಿಗೆ 2 ಸಾವಿರ ಕೋಟಿ ರೂಪಾಯಿ ಉಳಿಯುತ್ತದೆ.

ಶ್ರೀ ಸಿ. ಬೈರೇಗೌಡ:- ಅದು ಕಷ್ಟ ಆಗುತ್ತದೆ.

ಪ್ರೊ: ಎಂ.ಡಿ. ನಂಜುಂಡಸ್ವಾಮಿ:- ಮನಸ್ಸು ಇದ್ದರೆ ಕಷ್ಟವಾಗುವುದಿಲ್ಲ. ಸ್ವಲ್ಪ ಸುಮ್ಮನೆ ಇರಿ. ಏಕೆ ಕಷ್ಟವಾಗುತ್ತದೆ? ಮತ್ತೆ ನಾವು ಜಿಲ್ಲಾಪರಿಷತ್ ಆಕ್ಟ್, ಪಂಚಾಯಿತಿ ರಾಜ್ಯ, ಗಾಂಧೀಜಿ, ವಿಕೇಂದ್ರೀಕರಣ ಎಲ್ಲಾ ಮಾತನಾಡುತ್ತೇವೆ. ವಿಕೇಂದ್ರೀಕರಣ ಎಂದರೆ ಬರೀ ರಾಜಕೀಯ ವಿಕೇಂದ್ರೀಕರಣ, ಆರ್ಥಿಕ ವಿಕೇಂದ್ರೀಕರಣ ಅಷ್ಟೇ ಅಲ್ಲ ಗಾಂಧೀಜಿ ಹೇಳಿದ್ದುದು. He also talked of technological decentralisation. ತಾಂತ್ರಿಕ ವಿಕೇಂದ್ರೀಕರಣ. ಅದನ್ನು ಗಾಂಧೀಜಿ ಹೇಳಿದ್ದುದು. ಗಾಂಧೀಜಿಯವರನ್ನು ಒಪ್ಪುತ್ತೀರೋ ಇಲ್ಲವೋ ಅದಲ್ಲ. ಆದರೆ ಇವತ್ತಿನ ಅವಶ್ಯಕತೆ, ಸಣ್ಣ ಕೈಗಾರಿಕೆಗಳ ಮೂಲಕ ಗ್ರಾಮಾಂತರ ಪ್ರದೇಶದಲ್ಲಿ ಉದ್ಯೋಗ ಸೃಷ್ಟಿ ಮಾಡುವುದು. ದೊಡ್ಡ ಕೈಗಾರಿಕೆಗಳು ರೈತರನ್ನು ಯಾವ ಪ್ರಮಾಣದಲ್ಲಿ ಮೋಸ ಮಾಡುತ್ತಿವೆ. ಆ ಮೋಸವನ್ನು ನಿಲ್ಲಿಸಬೇಕಾದರೂ ಗ್ರಾಮದಿಂದ ಹೊರಗೆ ಸಿದ್ಧ ವಸ್ತುಗಳು ಹೋಗುವ ವ್ಯವಸ್ಥೆಯಾಗಬೇಕು ಕಚ್ಚಾವಸ್ತುವಿನ ಲೂಟಿ ನಿಲ್ಲಬೇಕು. ಸಿದ್ಧವಸ್ತುಗಳು ತಯಾರಾಗಿ ಗ್ರಾಮಾಂತರದಿಂದ ಆಚೆ ಹೊರ ಹೋಗುವ ವ್ಯವಸ್ಥೆ ಮಾಡಿದಾಗ ನೀವು ನಮ್ಮ ಗ್ರಾಮಗಳಲ್ಲಿ ಇರುವ ಬಡತನ ಆಚೆ ಕಳುಹಿಸುವುದಕ್ಕೆ ಸಾಧ್ಯ. ಈ ಕೆಲಸವನ್ನು ಯಾವುದಾದರೂ ಒಂದು ತಾಲ್ಲೂಕಿನಲ್ಲಿ ಪ್ರಾರಂಭ ಮಾಡೋಣವೆಂದು ನನಗೆ ಗ್ರಾಮೀಣ ಅಭಿವೃದ್ಧಿ ಮಂತ್ರಿಗಳು ಭರವಸೆ ಕೊಟ್ಟಿದ್ದಾರೆ. ದಯವಿಟ್ಟು ಈ ವರ್ಷ ಒಂದು ತಾಲ್ಲೂಕಿನಲ್ಲಿ ಪ್ರಯೋಗ ಮಾಡೋಣ. ಆದರೆ ಮುಂದಿನ ವರ್ಷಕ್ಕೆ ನಿಮ್ಮ ಸರ್ಕಾರದ ನೀತಿ ಬದಲಾವಣೆ ಆಗಬೇಕು. ಇದು ಇಡೀ ರಾಜ್ಯಕ್ಕೆ ಅನ್ವಯಿಸಬೇಕು. ನಿಮ್ಮ ನೀರಾವರಿ ನೀತಿ ಕೈಗಾರಿಕಾ ನೀತಿ ಬದಲಾವಣೆ ಆಗಬೇಕು. ಹಾಗೆಯೇ ನಿಮ್ಮ ಕೃಷಿ ಬೆಲೆ ನಿಗಧಿತ ನೀತಿ ಏನು ಇದೆ ಇದು ಸರಿ ಇಲ್ಲ ತಪ್ಪು ಎಂದು ಒಂದು ಮಾತು ಹೇಳಿ. ನಿಮಗೆ ಅಧಿಕಾರವಿಲ್ಲವೆಂದು ನೆಪ ಹೇಳಬೇಡಿ ಕೇಂದ್ರ ಬೆಲೆ ನಿಗದಿ ಮಾಡುತ್ತಿರುವಂಥಾದ್ದು ಏನು ಇದೆ ಇದು ಸರಿ ಇಲ್ಲ ತಪ್ಪು ಎಂದು ಹೇಳಿ ಆ ಮಾತು ಹೇಳುತ್ತೀರಾ ಕೃಷಿ ಮಂತ್ರಿಗಳೇ? ಬೆಲೆ ನಿಗದಿ ಮಾಡುವ ಅಧಿಕಾರ ನಿಮಗೆ ಇಲ್ಲ ಆಹಾರ ಮಂತ್ರಿಗಳೂ ಕೂಡ ಲೆವಿ ನೀತಿ ತಪ್ಪು ಎಂದು ಹೇಳಿ ಅಷ್ಟು ಸಾಕು. You are a State Government. You are not a Municipality to say that you have no powers. You have powers to say that it is a bad policy. Then, we can start re-defining Centre-State relations. ನಾವು ಇಲ್ಲಿ ಇಲ್ಲದೇ ಸೆಂಟ್ರಲ್ ಇಲ್ಲ ನಾವೂ ಕೂಡ ಇರಬೇಕಾಗುತ್ತದೆ. It is the responsibility of the State Governments to re-define Centre-State relations also and these are some of the methods by which we can be define Centre-State relations.

ಇನ್ನು ಕೃಷಿ ಶಿಕ್ಷಣದ ಬಗ್ಗೆ ಒಂದೆರಡು ಮಾತನ್ನು ಹೇಳಬೇಕು. ಎರಡು ಕೃಷಿ ವಿಶ್ವ ವಿದ್ಯಾನಿಲಯ ನಮ್ಮಲ್ಲಿ ಇವೆ. ಹಿಂದಿನ ಮುಖ್ಯ ಮಂತ್ರಿಗಳು ನಾನು ರೈತ ಅಲ್ಲವೆಂದು ಹೇಳಿದ್ದರೂ ಕಾನೂನು ಕಾಲೇಜಿನಲ್ಲಿ ನಾನು ಬೇಸಾಯ ಮಾಡುತ್ತೇನೆಂದು ಕೂಡ ಹೇಳಿದ್ದರು, ಆದರೆ ರಾಜ್ಯಪಾಲರು ನನ್ನನ್ನು ರಾಜ್ಯದ ಒಬ್ಬ ಪ್ರೊಗ್ರೆಸೀವ್ ರೈತ ಎಂದು ಹೇಳಿ ಹೆಬ್ಬಾಳದ

ವಿಶ್ವವಿದ್ಯಾನಿಲಯಕ್ಕೆ ಎರೀಜೆಂಟ್ ಆಗಿ ನೇಮಕ ಮಾಡಿದ್ದೇವೆಂದು ನನಗೆ ಪತ್ರ ಬರೆದರು ನನಗೆ ಅದರಲ್ಲಿ ಆಸಕ್ತಿ ಇರಲಿಲ್ಲ. ಮುಖ್ಯ ಮಂತ್ರಿಗಳು ನಾನು ರೈತ ಅಲ್ಲವೆಂದು ಹೇಳುತ್ತಿದ್ದು ಅದೇ ರಾಜ್ಯಪಾಲರು ನನ್ನನ್ನು ಪ್ರೊಗ್ರೆಸೀವ್ ಫಾರ್ಮರ್ ಎಂದು ಹೇಳುತ್ತಿದ್ದರು, ಇದರಿಂದಾಗಿ ನಾನು ಒಪ್ಪಿಕೊಂಡೆ. ಒಪ್ಪಿಕೊಂಡಾದ ಮೇಲೆ ನನಗಾದ ಅನುಭವವನ್ನು ಹೇಳುತ್ತೇನೆ. The required academic atmosphere in our Agricultural University is not there. ನಮ್ಮ ವಿಜ್ಞಾನಿಗಳ ಬಗ್ಗೆ ನನಗೆ ಗೌರವವನ್ನು ಕಳೆದುಕೊಂಡಿದ್ದೇನೆ. ಅವರ ಸಂಶೋಧನೆ ಬಗ್ಗೆ ಅವರು ಕಾಲವನ್ನು ವ್ಯಯ ಮಾಡುತ್ತಿಲ್ಲ ಅದಕ್ಕೆ ಹಲವಾರು ಕಾರಣಗಳು ಇವೆ ಆ ಕಾರಣಗಳನ್ನು ತಾವು ಪತ್ತೆ ಹಚ್ಚಿ ಮತ್ತೆ ಸರಿ ಮಾಡಬೇಕು. There is no scientific or academic atmosphere at all in both the Universities, particularly so in our Bangalore Agricullural University. ಅದಕ್ಕೆ ಕಾರಣಗಳು ಏನು ಎಂಬುದು ತಮಗೂ ಗೊತ್ತಿದೆ. ಸದನದಲ್ಲಿ ಅದನ್ನು ಹೇಳುವುದಕ್ಕೆ ನನಗೆ ಇಷ್ಟವಿಲ್ಲ. ಆದರೂ ಒಂದೇ ಒಂದು ಸಲಹೆ ಕೊಡುತ್ತಿದ್ದೇನೆ. ಕರ್ನಾಟಕ ಯೂನಿವರ್ಸಿಟಿ ಕಾನೂನು ಎಂದು ನಾವು ಮಾಡಿದ್ದೇವೆ. ಅದೇ ರೀತಿಯಾಗಿ 2 ಯೂನಿವರ್ಸಿಟಿಯನ್ನೂ ಸೇರಿಸಿ ಕರ್ನಾಟಕ ಅಗ್ರಿಕಲ್ಚರ್ ಯೂನಿವರ್ಸಿಟೀಸ್ ಆಕ್ಟ್ ಎಂದು ಮಾಡಿ ಇಂಟರ್ ಯೂನಿವರ್ಸಿಟಿ ಟ್ರಾನ್ಸಫರ್ಸ್‌ಗಳಿಗೆ ಅವಕಾಶ ಕಲ್ಪಿಸಿಕೊಂಡರೆ ಸುಮಾರು ಮಟ್ಟಿಗೆ ಈ ವಿಶ್ವವಿದ್ಯಾನಿಲಯು ಎರಡನ್ನೂ ಸರಿ ಮಾಡಬಹುದು, ಇದನ್ನು ದಯಮಾಡಿ ಮಾಡಬೇಕು.

ಇನ್ನು ಪೋಲೀಸ್ ಬಗ್ಗೆ ಕೊನೆಯ ಒಂದೇ ಒಂದು ಮಾತನ್ನು ಹೇಳುತ್ತೇನೆ. ಪೋಲೀಸನ್ನು ನೀವು ಸರಿ ಮಾಡುವಂತಹ ಸ್ಥಿತಿಯಲ್ಲಿ ಇಲ್ಲ. ಪೋಲೀಸ್ ಇಲಾಖೆ ಬಗ್ಗೆ ಬಹಳ ಜನ ಮಾತನಾಡಿದರು. ಎಲ್ಲಿಯವರೆಗೂ ಅವರಿಗೆ ಈಗ ಕೊಡುತ್ತಿರುವಂತಹ ತರಬೇತಿ ವ್ಯವಸ್ಥೆಯನ್ನು ಸಂಪೂರ್ಣವಾಗಿ ಬದಲಾಯಿಸುವುದಿಲ್ಲವೋ ಅಲ್ಲಿಯವರೆಗೆ ನಮ್ಮ ಪೋಲೀಸರು ಸರಿ ಹೋಗುವುದಿಲ್ಲ. ತಮಗೆ ಗೊತ್ತಿದೆಯೋ ಇಲ್ಲವೋ ಈಗಿರುವ ತರಬೇತಿ ವ್ಯವಸ್ಥೆ ಏನು ಇದೆ ಇದು ಬ್ರಿಟಿಷರದ್ದು, ಅವರು ರೂಪಿಸಿದ್ದುದು. ಲಾರ್ಡ್ ಆಟಿನ್‌ಬರೋರವರು ಇಂಗ್ಲೆಂಡ್‌ಗೆ ಬರೆದಂತಹ ಪತ್ರ ನನ್ನ ಹತ್ತಿರ ಇದೆ ತಮಗೆ ಬೇಕಿದ್ದರೆ ತೋರಿಸುತ್ತೇನೆ. ಈ ದೇಶದ ಪೋಲೀಸರನ್ನು ತರಬೇತಿ ಮಾಡುವುದಕ್ಕೆ ಆತ ಏನು ಗೈಡ್ ಲೈನ್ಸ್ ಹಾಕಿಕೊಟ್ಟಿದ್ದ ಬ್ರಿಟಿಷ್‌ರ ಕಾಲದಲ್ಲಿ ಎಂದರೆ “to prepare an Indian to beat an Indian”. That was the guidance. That is the training being given even now. ಅಂದರೆ ಅವನನ್ನು ಮೃಗದ ರೀತಿಯಲ್ಲಿ ಬೆಳೆಸಬೇಕು. ಅವನ ಮೆದುಳನ್ನು ಸಂಪೂರ್ಣ ನಾಶ ಮಾಡಬೇಕು ಎಂದು ಹೇಳುತ್ತಿದ್ದರು ಯಾರೋ ಒಬ್ಬರು ಸದಸ್ಯರು ಮಾತನಾಡುತ್ತಾ ಹೇಳುತ್ತಿದ್ದರು ವ್ಯಾನ್ ಅನ್ನು ಬಿಟ್ಟಕೂಡಲೇ ಸಿಕ್ಕವರಿಗೆ ಹೊಡೆಯುತ್ತಾರೆ ಮನೆ ಮಂದಿಗೆಲ್ಲಾ ಹೊಡೆಯುತ್ತಾರೆಂದು ಹೇಳುತ್ತಿದ್ದರು. That is how our police has trained; his brain is damaged to such an extent that he is coverted into an animal because he was expected to best an Indian. An Indian was trained to beat an Indian. ಅದೇ ಟ್ರೈನಿಂಗ್ ಮುಂದುವರಿಸುತ್ತಿದ್ದೇವೆ. ನಾವು ಅವಿವೇಕಿಗಳು ಬೇರೆ ದೇಶಕ್ಕೆ ಹೋಗಿದ್ದೀರಿ. Even if a foreigner approaches a Policeman say in other countries, in Europe or USA, he will first salute you and before leaving you, he salutes once again. That is People's Police. ಅವರನ್ನು ಪೀಪಲ್ಸ್ ಪೋಲೀಸ್ ಎಂದು ಕರೆಯುತ್ತಾರೆ. ಇದರ ಬಗ್ಗೆ ನಮ್ಮ ಗೃಹ ಮಂತ್ರಿಗಳು ಏನಾದರೂ ಆಲೋಚನೆ ಮಾಡಿದ್ದಾರೆಯೇ ಎಂದು ಕೇಳುತ್ತಿದ್ದೇನೆ. ಈಗ ಪೋಲೀಸ್ ಠಾಣೆಗೆ ಹೋದರೆ ಕುರ್ಚಿ ಕೊಡುವುದಿಲ್ಲ.. ನಾನು ಹೋದಾಗಲೂ ನನ್ನ ಸ್ಟುಡೆಂಟ್ಸ್ ಆಗಿದ್ದ ಪೋಲಿಸರು ಕೆಲವರು "ನೀವು ಗುರುಗಳು ಕೊಡುತ್ತಿದ್ದೇವೆ ಬೇರೆಯುವರು ಬಂದರೆ ನಿಲ್ಲಿಸುತ್ತೇವೆ" ಎಂದು ನನಗೆ ಹೇಳಿದರು. ವಾಟ್ ಈಸ್ ದಿಸ್? Are we living in a democratic set up? ಈ ದೇಶದ ಮಾಲೀಕ ಪೋಲೀಸ್ ಠಾಣೆಗೆ ಹೋದರೆ ಅಲ್ಲಿ ತನನ್ನು ನಿಲ್ಲಿಸುತ್ತಾರೆ. Do you want to continue these

practices? If you continue these practices, I have to coninue calling you as the adopted children of the British. ಇದನ್ನೆಲ್ಲ ನೀವು ಹೀಗೆ ಮುಂದುವರಿಸಿದರೆ. ಬ್ರಿಟಿಷರ ದತ್ತು ಪುತ್ರರು ಎಂದು ನಿಮ್ಮನ್ನು ಕರೆಯಬೇಕಾಗುತ್ತದೆ; ಒಂದೇ ಒಂದು ವಿಚಾರವನ್ನು ರೈತನ ಚಳುವಳಿ ಬಗ್ಗೆ ಪೋಲೀಸ್ ಇಲಾಖೆಯ ವರದಿಯಲ್ಲಿ ಈ ರೀತಿ ಬರೆದಿದ್ದಾರೆ.

ರೈತರ ಚಟುವಟಿಕೆಗಳ ಬಗ್ಗೆ ಟಿಪ್ಪಣಿ

"ರಾಜ್ಯ ಘಟಕದ ಕರೆಯಾನುಸಾರ ಕರ್ನಾಟಕ ರಾಜ್ಯ ರೈತ ಸಂಘದವರು ರಾಜ್ಯಾದ್ಯಂತ ಜನತಾದಳ ಸರ್ಕಾರದ ವಜಾ, ಶ್ರೀ ಬಾಬುಗೌಡ ಪಾಟೀಲರ ವಿರುದ್ಧ ದಾಖಲಾದ ಕ್ರಿಮಿನಲ್ ಮೊಕದ್ದಮೆಗಳನ್ನು ಹಿಂತೆಗೆದುಕೊಳ್ಳುವುದು ಹಾಗೂ ತಮ್ಮ ಮಾಮೂಲು ಬೇಡಿಕೆಗಳಾದ ಸಾಲ ಮನ್ನಾ ಸಹಕಾರಿ ನಿಯಮ 101 (c) ರದ್ದತಿ ಮುಂತಾದವುಗಳಿಗಾಗಿ ಒತ್ತಾಯಿಸಿ ಏಪ್ರಿಲ್ 10 ರಿಂದ ಚಳುವಳಿಯನ್ನು ನಡೆಸಿದ್ದರು ಶ್ರೀ ಬಾಬುಗೌಡ ಪಾಟೀಲರ ವಿರುದ್ಧ ಹೂಡಲಾದ ಮೊಕದ್ದಮೆಗಳನ್ನು ಹಿಂತೆಗೆದುಕೊಳ್ಳುವ ಸರ್ಕಾರದ ಭರವಸೆಯೊಂದಿಗೆ ಏಪ್ರಿಲ್ 12 ರಂದು ಚಳುವಳಿಯನ್ನು ಹಿಂತೆಗೆದುಕೊಳ್ಳಲಾಯಿತು. ಒಟ್ಟಾರೆ ಚಳುವಳಿಯಲ್ಲಿ 17 ಸಾವಿರ ಪ್ರತಿಭಟನಾಕಾರರ ರೈತರನ್ನು ಬಂಧಿಸಲಾಗಿತ್ತು. ಶ್ರೀ ಬಾಬುಗೌಡರ ವಿರುದ್ಧ ಮಾಡಿದಂತಹ ಮೊಕದ್ದಮೆಗಳನ್ನು ಹಿಂತೆಗೆದುಕೊಳ್ಳುವ ಸರ್ಕಾರದ ಭರವಸೆಯೊಂದಿಗೆ ಈ ಚಳುವಳಿಯನ್ನು 12 ರಂದು ಹಿಂತೆಗೆದುಕೊಳ್ಳಲಾಗಿದೆಯೆಂದು ಹೇಳಲಾಗಿದೆ.

(ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಸುಮಾರು, ಆ ವೇಳೆಯಲ್ಲಿ 2-3 ಲಕ್ಷ ಜನ ರಸ್ತೆ ರೋಖೋ ಪ್ರತಿ ದಿವಸ ಮಾಡುತ್ತಿದ್ದರು. ನಾವೇ ವಿಧಾನ ಸೌಧವನ್ನು ನಿಮಗೆ ಖಾಲಿ ಮಾಡಿಸಿಕೊಟ್ಟವರು ಜನತಾ ದಳದ ಸರ್ಕಾರದ ವಿರುದ್ಧ ಏಪ್ರಿಲ್ 10 ರಂದು ಚಳುವಳಿ ಪ್ರಾರಂಭ ಮಾಡಿದೆವು, ಏಪ್ರಿಲ್ 20 ರಂದು ವಿಧಾನ ಸೌಧ ಖಾಲಿಯಾಯಿತು ತಮಗೋಸ್ಕರ, ನಾವು ಖಾಲಿ ಮಾಡಿಸಿ ಕೊಟ್ಟೆವು; ನಿಮ್ಮ ವರದಿಯ ಪ್ರಕಾರ ಬಾಬುಗೌಡರ ಮೇಲಿನ ಮೊಕದ್ದಮೆಗಳನ್ನು ವಾಪಸ್ಸು ತೆಗೆದುಕೊಳ್ಳುವುದು ಹಾಗಿರಲಿ, 17 ಸಾವಿರ ರೈತರ ಮೇಲೆ ಏನು ಮೊಕದ್ದಮೆಗಳನ್ನು ಹಾಕಿದ್ದಾರೆ ಆ ಮೊಕದ್ದಮೆಗಳನ್ನು ಕೂಡ ವಾಪಸ್ಸು ತೆಗೆದುಕೊಂಡಿಲ್ಲ. ನಾನು ಕೇಳುವುದು ಇಷ್ಟೇ, ತಮಗೋಸ್ಕರ ಖಾಲಿ ಮಾಡಿಸಿ ಕೊಟ್ಟವರು ನಾವು ರೈತರಿಗೆ ಕೃತಜ್ಞತೆಯಿಂದ ಆ ಮೊಕದ್ದಮೆಗಳನ್ನು ವಾಪಸ್ಸು ತೆಗೆದುಕೊಳ್ಳಬೇಕು. ಇಷ್ಟು ಹೇಳಿ ಸನ್ಮಾನ್ಯ ಸಭಾಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ ನಮಸ್ಕಾರ.

ಅಧ್ಯಕ್ಷರು:- ಶ್ರೀ ನಾಗರಾಜ್‌ರವರು ಮಾತನಾಡಬೇಕು; ಮಾನ್ಯಸದಸ್ಯರುಗಳು ಹೆಸರು ಕೊಡುತ್ತಾರೆ ಕರೆದಾಗ ಇರತಕ್ಕ ತಾಳ್ಮೆ ಇಲ್ಲ. ಆಮೇಲೆ ಬಂದು ಒಂದು ನನಗೆ ಅವಕಾಶ ಕೊಡಲಿಲ್ಲವೆಂದು ಹೇಳುತ್ತಾರೆ. ಈಗ ಶ್ರೀ ಗುರುದೇವ್‌ರವರು ಮಾತನಾಡಬೇಕು.

† ಶ್ರೀ ಗುರುದೇವ್ (ಸಕಲೇಶಪುರ):- ಮಾನ್ಯ ಅಧ್ಯಕ್ಷರೆ, ಈ ಎಲ್ಲಾ ಬೇಡಿಕೆಗಳನ್ನು ನಾನು ತುಂಬು ಹೃದಯದಿಂದ ಸ್ವಾಗತಿಸುತ್ತಾ ಕೆಲವು ವಿಚಾರಗಳನ್ನು ಸರ್ಕಾರದ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಮೊಟ್ಟಮೊದಲನೆಯದಾಗಿ ನಾನು ಈ ಸಭೆಯ ಸದಸ್ಯನಾಗುವುದಕ್ಕೆ ಮೊದಲು ಜಿಲ್ಲಾ ಪರಿಷತ್ತಿನ ಸದಸ್ಯನಾಗಿದ್ದೆ, ಜಿಲ್ಲಾ ಪರಿಷತ್ತಿನ ಸದಸ್ಯನಾಗಿ ನನ್ನ ಕೆಲವು ಅನಿಸಿಕೆಗಳನ್ನು ಸರ್ಕಾರದ ಗಮನಕ್ಕೆ ತರಲು ಪ್ರಯತ್ನ ಮಾಡುತ್ತೇನೆ. ನಾನು ಜಿಲ್ಲಾ ಪರಿಷತ್ತಿನ ಮೆಂಬರ್ ಆಗಿದ್ದೆ ಆದರೆ, ನನ್ನ ಕ್ಷೇತ್ರದಲ್ಲಿ ಬರತಕ್ಕ ಏನು 5 ಮಂಡಲಗಳು ಇದೆ, ಆ 5 ಮಂಡಲಗಳಲ್ಲಿ ನಾನು ಆವತ್ತಿನ ದಿವಸ ಜಿಲ್ಲಾಪರಿಷತ್ತಿನ ಸದಸ್ಯನಾಗಿದ್ದಾಗ ಮಂಡಲ್‌ನಿಂದ ಒಂದೂ ಮೀಟಿಂಗ್ ಇನ್‌ವಿಟೇಷನ್ ಬರುತ್ತಿರಲಿಲ್ಲ, ಕೇಳಿದಾಗ ಆಕ್ಟ್‌ನಲ್ಲಿ ಇದಕ್ಕೆ ಅವಕಾಶ ಇಲ್ಲ ಎನ್ನತಕ್ಕ ಅಭಿಪ್ರಾಯವನ್ನು ಜಿಲ್ಲಾಪರಿಷತ್ತಿನ ಸೆಕ್ರೆಟರಿಯವರು ಕೊಡುತ್ತಿದ್ದರು. ದಯಮಾಡಿ ಈ ಒಂದು ಆಕ್ಟ್ ಏನಿದೆ, ಇದರಲ್ಲಿ ಜಿಲ್ಲಾ ಪರಿಷತ್ತು ಸದಸ್ಯನಿಗೆ, ಆತನ ಕ್ಷೇತ್ರದಲ್ಲಿ ಬರುವ ಮಂಡಲಗಳ ಬಗ್ಗೆ ಕಾಳಜಿ ಇರುತ್ತದೆ, ಅದಕ್ಕೆ ಆ ಒಂದು ಮಂಡಲ ಮಟ್ಟಿಗೆ ಮೀಟಿಂಗ್ ಅಟೆಂಡ್ ಆಗುವ

ಸೌಕರ್ಯವನ್ನು ಒದಗಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಹಾಗೆಯೇ ಈ ಮಂಡಲಗಳ ಪ್ರಧಾನರಿಗೆ ಜಿಲ್ಲಾ ಪರಿಷತ್ ಸೆಕ್ರೆಟರಿಯವರು ಸರ್ಕಾರದಿಂದ ಬರುವ ಸವಲತ್ತುಗಳ ಬಗ್ಗೆ ಸರ್ಕ್ಯುಲರ್‌ಗಳನ್ನು ಕಳಿಸಿಕೊಡುತ್ತಾರೆ. ಅವುಗಳು ಜಿಲ್ಲಾ ಪರಿಷತ್ ಸದಸ್ಯನಿಗೆ ಬರುವುದಿಲ್ಲ. ಜಿಲ್ಲಾ ಪರಿಷತ್ ಸದಸ್ಯನಿಗೆ, ಅವನು ತನ್ನ ಕ್ಷೇತ್ರದಲ್ಲಿ ಓಡಾಡಬೇಕಾದರೆ ಕ್ಷೇತ್ರದ ಜನತೆ .ಕೆಲವು ಬೇಡಿಕೆಗಳನ್ನು ಆತನಿಗೆ ಸಲ್ಲಿಸಿರುತ್ತಾರೆ. ಆದರೆ ಸರ್ಕಾರದಿಂದ ಏನು ಮಂಡಲಕ್ಕೆ ಬಂದಿದೆ, ಅದನ್ನು ತಾನು ಮಾಡಬೇಕೆಂಬ ಅಭಿಪ್ರಾಯದಲ್ಲಿ ಆತ ಇರಬೇಕಾದರೆ, ಈ ಒಂದು ಸರ್ಕಾರದಿಂದ ಬರುವಂಥ ಸರ್ಕ್ಯುಲರ್‌ಗಳು ಅವನಿಗೆ ಬರುವುದಿಲ್ಲ. ಇದನ್ನು ಸರ್ಕಾರ ಗಮನಿಸಿ ಮಂಡಲದವರಿಗೆ ಬರುವ ಸರ್ಕ್ಯುಲರ್‌ಗಳನ್ನು ಜಿಲ್ಲಾ ಪರಿಷತ್ತಿನ ಸದಸ್ಯರಿಗೆ ಕೂಡ ಕಳಿಸಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಹಾಗೆಯೇ ಜಿಲ್ಲಾ ಪರಿಷತ್ ಆಕ್ಟ್‌ನಲ್ಲಿ ಮಂಡಲಗಳನ್ನು ಸೂಪರ್‌ಸೀಡ್ ಮಾಡಬಹುದು ಎಂಬ ಪದವನ್ನು ಸೇರಿಸಿದ್ದಾರೆ. ಆದರೆ ಇದು ಯಾವ ಆಧಾರದ ಮೇಲೆ ಮಾಡಬಹುದು? ಇದು ತಪ್ಪು ಎಂದು ನನ್ನ ಅಭಿಪ್ರಾಯ ಯಾವ ಕಾರಣಕ್ಕೂ ಜನರಿಂದ ಆರಿಸಲ್ಪಟ್ಟಂಥ ಮಂಡಲಗಳನ್ನು ಸೂಪರ್‌ಸೀಡ್ ಮಾಡುವುದು ತಪ್ಪು ಎಂದು ನನ್ನ ಅಭಿಪ್ರಾಯ. ದಯವಿಟ್ಟು ಇದನ್ನು ರದ್ದುಪಡಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇದೇ ರೀತಿ ಈ ಜಿಲ್ಲಾ ಪರಿಷತ್ತಿನಲ್ಲಿ ಮತ್ತು ಮಂಡಲಿಗಳಿಗೆ ಏನು ಮಿನಿವಾಟರ್ ಎಂದು ಕೊಡುತ್ತೇವೆ, ನನ್ನ ಕ್ಷೇತ್ರದಲ್ಲಿ ಹನ್‌ಬಾಳ್ ಹತ್ತಿರ ಅವರೆಕಾಡು ಅಂತ ಒಂದುಹಳ್ಳಿ ಇದೆ. ಇಲ್ಲಿ ಮಿನಿವಾಟರ್ ಸಲುವಾಗಿ ಬೋರ್‌ವೆಲ್ ತೆಗೆದಿದ್ದಾರೆ. ಎಲೆಕ್ಟ್ರಿಸಿಟಿಯವರು ಕಂಬ ತಂದು ನಿಲ್ಲಿಸಿದ್ದಾರೆ. ನಾಲ್ಕು ವರ್ಷಗಳಾಯಿತು, ಇದವರೆಗೂ ಪಂಪನ್ನು ಕೊಡಿಸಿಲ್ಲ. ಈ ರೀತಿ ನನ್ನ ಕ್ಷೇತ್ರದಲ್ಲಿ ತುಂಬಾ ಆಗಿದೆ. ಹಾಗೆಯೇ ಇಲ್ಲಿ ಇನ್ನೊಂದು ವಿಷಯವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಮಿನಿವಾಟರ್ ಸ್ಕೀಮ್‌ನಲ್ಲಿ ಇವತ್ತಿನ ದಿವಸ ಎಂ.ಬಿ.ಎಚ್. ಪಂಪುಗಳನ್ನು ಕೊಡಿಸುತ್ತಿದ್ದಾರೆ. ಇವುಗಳು ತಿಂಗಳಿಗೊಮ್ಮೆ ಕೆಟ್ಟುಹೋಗುತ್ತಿರುತ್ತವೆ. ಆದೇ ನಮ್ಮ ಕ್ಷೇತ್ರದಲ್ಲಿ ಕೆಲವು ಕಡೆ ಬಜಾಜ್, ಅಟ್ಲಾಂಟಿಕ್ ಪಂಪುಗಳನ್ನು ಕೊಡಿಸಿದ್ದಾರೆ. ಮೂರು ವರ್ಷಗಳಾದರೂ ಅವುಗಳು ಚೆನ್ನಾಗಿ ನಡೆಯುತ್ತಿವೆ. ಇನ್ನೊಂದು ಕಲೋಫಾ ಅಂತ ಪಂಪನ್ನು ಕೊಡಿಸುತ್ತಿದ್ದಾರೆ, ಅದು ಸಹ ಚೆನ್ನಾಗಿ ಕೆಲಸ ಮಾಡುತ್ತಿದೆ. ಆದರೆ ಇಡೀ ತಾಲ್ಲೂಕಿಗೆ ಸೇರಿದಂತೆ ಈ ಎಂಬಿಹೆಚ್ ಪಂಪು ಏನಿದೆ, ಇದು ತಿಂಗಳಿಗೊಂದು ಸಾರಿ ರಿಪೇರಿ ಆಗುತ್ತಿರುತ್ತದೆ. ದಯಮಾಡಿ ಒಳ್ಳೆಯ ಕ್ವಾಲಿಟಿಯ ಪಂಪನ್ನು ಕೊಂಡುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಕೆಲವು ಕಡೆ ಏನು ಮಿನಿವಾಟರ್ ಯೋಜನೆ ಮಾಡುತ್ತಾರೆ, ಅಲ್ಲೆ ಕೆ.ಇ.ಬಿ. ಯವರ ಮೆಟೀರಿಯಲ್ಸ್ ಸಪ್ಲೈ ಇಲ್ಲದೆ ಕರೆಂಟ್ ಕೊಡುವುದಕ್ಕೆ ಆಗುವುದಿಲ್ಲ ಎಂದು ರೂರಲ್ ಡೆವಲಪ್‌ಮೆಂಟ್ ಇಂಜನಿಯರ್ ಹೇಳುತ್ತಾರೆ. ಆದ್ದರಿಂದ ಏನು ಮಿನಿವಾಟರ್ ಸ್ಕೀಂಗಳಿಗೆ ಕೂಡಲೇ ಕರೆಂಟನ್ನು ಕೊಡುವ ವ್ಯವಸ್ಥೆಯನ್ನು ದಯವಿಟ್ಟು ಮಾಡಿಕೊಡಬೇಕು. ಇನ್ನು, ನಾವು ನಮ್ಮ ಕ್ಷೇತ್ರದಲ್ಲಿ ಬೋರ್‌ವೆಲ್ ತೆಗೆಸುತ್ತೇವೆ, ಬೋರ್‌ವೆಲ್ ತೆಗೆಸುವುದು ದೊಡ್ಡದಲ್ಲ. ಅಥವಾ ಸಂಖ್ಯೆಗಳ ಆಧಾರ ಇಟ್ಟುಕೊಂಡು ಹೇಳುವುದು ದೊಡ್ಡದಲ್ಲ ಎಂದು ನನ್ನ ಅಭಿಪ್ರಾಯ. ಸುಮಾರಾಗಿ ಒಂದು ಬೋರ್‌ವೆಲ್‌ಗೆ 20 ಸಾವಿರ ರೂಪಾಯಿ ಖರ್ಚಾಗುತ್ತದೆ. ಇಷ್ಟುಖರ್ಚು ಮಾಡಿದ ಮೇಲೆ ಇದನ್ನು ಮೇಂಟೇನ್ ಮಾಡುವ ಜವಾಬ್ದಾರಿಯನ್ನು ಹಳ್ಳಿಗಳ ಜನರಿಗೆ ತಿಳಿಸಬೇಕಾದದ್ದು ನಮ್ಮ ಕರ್ತವ್ಯ. ನಮ್ಮ ಇಡೀ ತಾಲ್ಲೂಕಿಗೆ ಒಂದೇ ಮೇಂಟೆನ್ಸ್ ಲಾರಿ ಇರುತ್ತದೆ. ಒಂದು ತಾಲ್ಲೂಕಿನಲ್ಲಿ ಎಷ್ಟು ಬೋರ್‌ವೆಲ್‌ಗಳು ಇರುತ್ತವೆ ಎಂಬುದು ತಮಗೆಲ್ಲರಿಗೂ ಗೊತ್ತಿದೆ. ನನ್ನ ಅನಿಸಿಕೆ ಏನೆಂದರೆ, ಕೆಲವು ಹಳ್ಳಿಗಳಲ್ಲಿ ಈ ಪ್ರಯೋಗ ಮಾಡಿದ್ದೇವೆ. ಬೋರ್‌ವೆಲ್ ಹೊಡೆಸಿದ ಮೇಲೆ ಅದಕ್ಕೆ ಅಳವಡಿಸಿದ ಪಂಪನ್ನು ಕೆಲವು ಹುಡುಗರು ಮೇಲಕ್ಕೆ ಕೆಳಕ್ಕೆ ಎತ್ತುತ್ತಾರೆ. ತೀರಾ ಕೆಳಕ್ಕೆ ಅದನ್ನು ಎಳೆದಾಗ ಚೈನು ಕಟ್ ಆಗುತ್ತದೆ. ಇಂತಹ ಸಂದರ್ಭ ಇರುವುದರಿಂದ 20 ರೂಪಾಯಿ ಖರ್ಚುಮಾಡಿ 'ವಿ' ಆಕಾರದ ಒಂದು ಕಬ್ಬಿಣದ ಸಲಾಕೆಯನ್ನು ನೆಟ್ಟು ಅಲ್ಲಿ ಟೈರು ಅಥವಾ ರಬ್ಬರ್ ಹಾಕಿದರೆ ಪಂಪನ್ನು ಕೆಳಗೆ ಎಳೆದರೂ ಅದು ತೀರಾ ಕೆಳಕ್ಕೆ ಹೋಗುವುದಿಲ್ಲ. ಚೈನ್ ಕೂಡ ಕಟ್ ಆಗುವುದಿಲ್ಲ. ದಯಮಾಡಿ

20-30 ರೂಪಾಯಿ ಜಾಸ್ತಿ ಖರ್ಚಾಗಬಹುದು, ಆದರೂ ಈ ಬೋರ್‌ವೆಲ್ ಉಪಯೋಗ ಮತ್ತು ಜಾಸ್ತಿ ದಿವಸ ರಿಪೇರಿ ಇಲ್ಲದ ಹಾಗೆ ನಡೆಯುತ್ತವೆ. ದಯಮಾಡಿ ಸರ್ಕಾರ ಈ ಬಗ್ಗೆ ಆಲೋಚಿಸಬೇಕೆಂದು ಕೇಳಿಕೊಳ್ಳುತ್ತೇನೆ. ಹಾಗೆಯೇ ಮಾನ್ಯ ವಾಟಾಳ್ ನಾಗರಾಜ್‌ರವರು ಮಾತನಾಡುತ್ತಾ ಹೇಳಿದರು ಮಂಡಲದಲ್ಲಿ ಬರತಕ್ಕ ಸ್ಕೂಲುಗಳ ಪಕ್ಕದಲ್ಲಾದರೂ ಕನಿಷ್ಟ ಪಕ್ಷ ಒಂದು ಶೌಚಾಲಯ ಕಟ್ಟಿಸಬೇಕೆಂದು ನಿಜವಾಗಿಯೂ ಇದು ಯೋಚಿಸಬೇಕಾದ ಕೆಲಸ. ದಯಮಾಡಿ, ಸರ್ಕಾರ ಮಂಡಲದ ಸಭೆ ಎಲ್ಲಿ ನಡೆಯುತ್ತದೆ ಅಲ್ಲಿ ಮತ್ತು ಸ್ಕೂಲುಗಳು ಎಲ್ಲಿ ಬರುತ್ತವೆ, ಅಲ್ಲಿ ಒಂದು ಲೆಟ್ರಿನ್ ಕಟ್ಟಿಸುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಹಾಗೆಯೇ ಸ್ಕೂಲುಗಳ ಹತ್ತಿರ, ಬೋರ್‌ವೆಲ್ ತೆಗೆಸುವ ವ್ಯವಸ್ಥೆಯನ್ನು ಕೆಲವು ಜಿಲ್ಲಾಪರಿಷತ್ತುಗಳು ತೆಗೆದುಕೊಂಡಿದ್ದಾರೆ. ಸರ್ಕಾರ ಎಲ್ಲಾ ಜಿಲ್ಲೆಗಳಲ್ಲೂ ಇದನ್ನು ಅನುಷ್ಠಾನಕ್ಕೆ ತಂದರೆ ಒಳ್ಳೆಯದಾಗುತ್ತದೆಂದು ಕೇಳಿಕೊಳ್ಳುತ್ತೇನೆ. ಹಾಗೆಯೇ ನನ್ನ ಅನಿಸಿಕೆ, ನನ್ನ ಕ್ಷೇತ್ರದಲ್ಲಿ ನಾನು ನೋಡಿದ ಹಾಗೆ ಎಲ್ಲೂ ಗ್ರಾಮಸಭೆ ನಡೆಯುತ್ತಾ ಇಲ್ಲ. ಗ್ರಾಮಸಭೆ ನಡೆಯದೇ ತೆಗೆದುಕೊಳ್ಳತಕ್ಕ ನಿರ್ಣಯ ಒಳ್ಳೆಯ ನಿರ್ಣಯ ಅಲ್ಲವೆಂದು ನನ್ನ ಅನಿಸಿಕೆ. ದಯಮಾಡಿ, ಪ್ರತಿ ಮಂಡಲದ ಪ್ರಧಾನರುಗಳಿಗೆ ಸುತ್ತೋಲೆ ಕಳುಹಿಸಿ, ಗ್ರಾಮಸಭೆ ನಡೆಸುವಂತೆ ಮಾಡಬೇಕು. ಮತ್ತು ಈ ಗ್ರಾಮಸಭೆಗಳಲ್ಲಿ ತೆಗೆದುಕೊಳ್ಳತಕ್ಕ ನಿರ್ಣಯ ಅಂತಿಮವಾಗಿರಬೇಕೆಂದು ಸುತ್ತೋಲೆ ಕಳುಹಿಸಿದರೆ ನಿಜವಾಗಿಯೂ ಜನಗಳ ಕೈಗೆ ಅಧಿಕಾರ ಕೊಟ್ಟಹಾಗೆ ಆಗುತ್ತದೆ. ಹಾಸನ ಜಿಲ್ಲಾ ಪರಿಷತ್ತಿನಲ್ಲಿ ಸದಸ್ಯನಾಗಿದ್ದಾಗ, ನನ್ನ ಅಭಿಪ್ರಾಯದಲ್ಲಿ ಒಳ್ಳೆಯ ಸ್ಕೀಮ್ ತಂದಿದ್ದರು. ಪ್ರತಿಯೊಬ್ಬ ಜಿಲ್ಲಾ ಪರಿಷತ್ ಸದಸ್ಯರಿಗೂ ಒಂದು ಮಿನಿ ವಾಟರ್ ಡಿಸ್ಪೋಸಲ್ ಅವರ ಕೈಗೆ ಕೊಟ್ಟಿದ್ದರು. ಅವರ ಕ್ಷೇತ್ರದಲ್ಲಿ ಎಲ್ಲಿ ಬೇಕೋ ಅಲ್ಲಿ ಮಿನಿ ವಾಟರ್ ಸ್ಕೀಮ್ ಕೊಡುವ ವ್ಯವಸ್ಥೆ ಮಾಡಿದರು. ಸರ್ಕಾರ ಈ ನಿಟ್ಟಿನಲ್ಲಿ ಯೋಚನೆ ಮಾಡಿದರೆ ಒಳ್ಳೆಯದಾಗುತ್ತದೆ ಮತ್ತು ಜಿಲ್ಲಾಪರಿಷತ್ ಸದಸ್ಯರಿಗೂ ಉಪಕಾರವಾಗುತ್ತದೆಂದು ನನ್ನ ಭಾವನೆ. ಮತ್ತೆ ಈಗಾಗಲೇ ಹಲವಾರು ಸದಸ್ಯರು ತಾಲ್ಲೂಕು ಸಮಿತಿಯ ಬಗ್ಗೆ ಮಾತನಾಡಿದ್ದಾರೆ. ಮೂರು ವರ್ಷದಲ್ಲಿ ಸುಮಾರು 160 ನಿರ್ಣಯಗಳನ್ನು ಸಕಲೇಶಪುರ ತಾಲ್ಲೂಕು ಸಮಿತಿಯಲ್ಲಿ ತೆಗೆದುಕೊಂಡಿದ್ದಾರೆ. ಈ ರೀತಿ ತಾಲ್ಲೂಕು ಸಮಿತಿಯಲ್ಲಿ ತೆಗೆದುಕೊಂಡ ನಿರ್ಣಯಗಳನ್ನು ಜಿಲ್ಲಾ ಪರಿಷತ್ತಿನವರು ಜಾರಿ ಮಾಡಿಲ್ಲ. ಆದ್ದರಿಂದ ತಾಲ್ಲೂಕು ಸಮಿತಿಯಲ್ಲಿ ಏನು ನಿರ್ಣಯ ತೆಗೆದುಕೊಳ್ಳುತ್ತೇವೆ, ಅದಕ್ಕೆ ಒತ್ತು ಕೊಟ್ಟು, ಆ ನಿರ್ಣಯಗಳನ್ನೇ ಅಂತಿಮವಾಗಿ ಕಾರ್ಯಗತ ಮಾಡಬೇಕೆಂದು ಸರ್ಕಾರದಿಂದ ಸುತ್ತೋಲೆ ಕಳುಹಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ನಾನು ಮಾನ್ಯ ಮಂತ್ರಿಗಳನ್ನು ಕೇಳುವುದು ಇಷ್ಟೆ. ಜನತಾ ಮನೆಗಳನ್ನು, ಹಿಂದೆ ಕಾಂಗ್ರೆಸ್ ಸರ್ಕಾರ ಇದ್ದಾಗ, ಒಂದು ತಾಲ್ಲೂಕಿಗೆ ಸುಮಾರು 150-200 ಮನೆಗಳನ್ನು ಕಟ್ಟತಕ್ಕ ವ್ಯವಸ್ಥೆ ಇತ್ತು. ಈಚೆಗೆ ಇದು ಬಹಳ ಕಡಿಮೆಯಾಗಿದೆ. ದಯಮಾಡಿ ಜನತಾ ಮನೆಗಳನ್ನು ಕಟ್ಟಿಸತಕ್ಕ ವ್ಯವಸ್ಥೆ ಏನಿದೆ, ಅದನ್ನು ತಾಲ್ಲೂಕುಗಳಲ್ಲಿ ಹೆಚ್ಚು ಕಟ್ಟಿಸತಕ್ಕ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಹಾಗೆಯೇ, ಈ ಹಿಂದೆ ಮಾತನಾಡಿದ ಶ್ರೀಮತಿ ಮೋಟಮ್ಮನವರು ಮಲೆನಾಡಿನ ಜನತಾ ಮನೆಗಳ ಪ್ಲಾನನ್ನು ಬದಲಾವಣೆ ಮಾಡಬೇಕೆಂದು ಹೇಳಿದರು. ಈಗಿರುವ ಜನತಾ ಮನೆಗಳು, ಅದರಲ್ಲೂ ಕೆಲವು ಜನತಾ ಮನೆಗಳನ್ನು ಲ್ಯಾಂಡ್ ಆರ್ಮಿಯವರು ಕಟ್ಟಿದ್ದಾರೆ. ಈ ಲ್ಯಾಂಡ್ ಆರ್ಮಿಯವರು ಕಟ್ಟಿಸಿದ ಮನೆಗಳು ಮಲೆನಾಡಿಗೆ ಸೂಟ್ ಆಗುತ್ತಾ ಇಲ್ಲ. ಆದ್ದರಿಂದ ಇವುಗಳ ಪ್ಲಾನ್ ಬದಲಾವಣೆ ಮಾಡಿ, ಜನತಾ ಮನೆಗಳನ್ನು ಜಾಸ್ತಿ ಕಟ್ಟಬೇಕೆಂದು ಕೇಳಿಕೊಳ್ಳುತ್ತೇನೆ. ಹಾಗೆಯೇ, ಎಲ್ಲರೂ ಹೇಳಿದಹಾಗೆ, ಜಿಲ್ಲಾಪರಿಷತ್ ಆಕ್ಟ್‌ನಲ್ಲಿರುವ ಕೆಲವು ನ್ಯೂನತೆಗಳನ್ನು ಸರಿಪಡಿಸಿ ಎಂದು ಕೇಳಿಕೊಳ್ಳುತ್ತೇನೆ. ಆರ್ಟಿಕಲ್ಚರ್ ಬಗ್ಗೆ ಹೇಳಬೇಕೆಂದರೆ, ನನ್ನ ಕ್ಷೇತ್ರದಲ್ಲಿ ಆರ್ಟಿಕಲ್ಚರ್ ವತಿಯಿಂದ, ಬಾಗೆ ಎಂಬ ಹಳ್ಳಿಯಲ್ಲಿ ಆರೇಂಜ್ ಫಾರಂ ಮೆಯಿನಟೇನ್ ಮಾಡುತ್ತಿದ್ದಾರೆ. ಇದಕ್ಕಾಗಿ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಇವತ್ತಿನವರೆಗೂ ಇದರಿಂದ 10 ರೂಪಾಯಿಗಳು ಆದಾಯವಿಲ್ಲವೆಂದು ನನ್ನ ಅನಿಸಿಕೆ. ಇದನ್ನು ಏತಕ್ಕಾದರೂ ಮಾಡುತ್ತಿದ್ದಾರೆಂದು ನನಗೆ ಗೊತ್ತಿಲ್ಲ.

ಇನ್ನು ಹಾರ್ಟಿಕಲ್ಚರ್ ಇಲಾಖೆಯ ವತಿಯಿಂದ ಕೊಡುವ ಕೆಲವು ಹಣ್ಣು ಹಂಪಲುಗಳನ್ನು ಸಮಯಕ್ಕೆ ಸರಿಯಾಗಿ ಕೊಡಿಸಿದರೆ ಉಪಯೋಗವಾಗುತ್ತದೆ. ಹಿಂದೆ ರಾಜೀವ್ ಗಾಂಧಿಯವರು ಪ್ರಧಾನಮಂತ್ರಿಗಳಾಗಿದ್ದಾಗ ಹಾಸನ ಜಿಲ್ಲೆಗೆ ಭೇಟಿ ಕೊಟ್ಟಂಥ ಸಂದರ್ಭದಲ್ಲಿ ನಾವೆಲ್ಲಾ ಸೇರಿ ಜಿಲ್ಲಾ ಪರಿಷತ್ ವತಿಯಿಂದ ಅವರಿಗೆ ಮೆಮೊರ್‍ಯಾಂಡಂ ಕೊಟ್ಟಿದ್ದೆವು. ಹಾಸನ ಜಿಲ್ಲೆಯಲ್ಲಿ ಒಂದು ಕೋಲ್ಡ್ ಸ್ಟೋರೇಜ್ ಮಾಡಿಕೊಡಬೇಕೆಂದು ಕೇಳಿಕೊಂಡಿದ್ದೆವು. ಅತೀ ಶೀಘ್ರದಲ್ಲಿ ಮಾಡುತ್ತೇವೆಂಬ ಭರವಸೆಯನ್ನು ಕೊಟ್ಟಿದ್ದರು. ದಯವಿಟ್ಟು ಸರಕಾರ ಈಗಲಾದರೂ ಅದರ ಬಗ್ಗೆ ಯೋಚನೆ ಮಾಡಬೇಕು. ಏತಕ್ಕೆಂದರೆ ನಮ್ಮಲ್ಲಿ ಆಲೂಗೆಡ್ಡೆ ಮತ್ತು ಕೋಸು ಜಾಸ್ತಿ ಬೆಳೆಯುತ್ತಾರೆ. ಅದನ್ನು ನಾವು ಬಾಂಬೆ ಅಥವಾ ಕೊಯಮತ್ತೂರಿಗೆ ತೆಗೆದುಕೊಂಡುಹೋಗತಕ್ಕಂಥ ಸಂದರ್ಭ ಇರುತ್ತದೆ. ಅದನ್ನು ಕೋಲ್ಡ್ ಸ್ಟೋರೇಜ್‌ನಲ್ಲಿ ಇಟ್ಟರೆ ಒಳ್ಳೆಯ ಬೆಲೆ ಬರುತ್ತದೆ. ಆದುದರಿಂದ ಹಾಸನ ಜಿಲ್ಲೆಯಲ್ಲಿ ಒಂದು ಕೋಲ್ಡ್ ಸ್ಟೋರೇಜ್ ಮಾಡಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಡ್ರೈಲ್ಯಾಂಡ್ ಡೆವಲಪ್‌ಮೆಂಟ್‌ಗೆ ನಮ್ಮ ಜಿಲ್ಲೆಯಲ್ಲಿ ಬರೀ ನಾಲ್ಕು ತಾಲ್ಲೂಕುಗಳು ಸೇರಿದೆ. ಡ್ರೈಲ್ಯಾಂಡ್ ಡೆವಲಪ್‌ಮೆಂಟ್ ಫೆಸಿಲಿಟೀಸ್ ಏನಿದೆ ಅದನ್ನು ನನ್ನ ಕ್ಷೇತ್ರವಾದ ಆಲೂರು ತಾಲ್ಲೂಕಿಗೆ ಒದಗಿಸಿಕೊಡಬೇಕು. ಆಲೂರಿನಲ್ಲಿ ಮೂರು ನಾಲ್ಕು ವರ್ಷದಿಂದ ಬರಗಾಲ ಇದೆ ಎಂದು ಸರಕಾರವೇ ಹೇಳಿದೆ. ಡ್ರೈಲ್ಯಾಂಡ್ ಡೆವಲಪ್‌ಮೆಂಟ್‌ನಲ್ಲಿ ಬರತಕ್ಕಂಥ ಸೌಕರ್ಯಗಳನ್ನು ನನ್ನ ಕ್ಷೇತ್ರವಾದ ಆಲೂರಿಗೆ ಒದಗಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಹಾಗೆಯೇ ವೆಸ್ಟರ್ನ್ ಘಾಟ್ ಸ್ಕೀಮ್‌ನಲ್ಲಿ ಸಕಲೇಶಪುರ, ಅರಕಲಗೂಡು ಮತ್ತು ಬೇಲೂರು ಸೇರಬೇಕು. ಹಿಂದೆ ಡೆಲ್ಲಿಯಲ್ಲಿ ಕುಳಿತು ಮಾಡಿದ ವ್ಯವಸ್ಥೆ ಸರಿಯಾಗಿಲ್ಲ. ವೆಸ್ಟ್ರನ್‌ಘಾಟ್ ಸ್ಕೀಮ್‌ಗೆ ಹಾಸನ ಸೇರಿದೆ. ಡ್ರೈಲ್ಯಾಂಡ್ ಡೆವಲಪ್‌ಮೆಂಟ್ ಫೆಸಿಲಿಟಿಯೂ ಹಾಸನಕ್ಕೆ ಸಿಗುತ್ತಿದೆ. ವೆಸ್ಟ್ರನ್ ಘಾಟ್ ಸ್ಕೀಮ್‌ನಲ್ಲಿ ಹೋದವರ್ಷ ಹಾಸನಕ್ಕೆ 54 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ವೆಸ್ಟ್ರನ್ ಘಾಟ್ ಸ್ಕೀಮ್ ಅನುಕೂಲವನ್ನು ನಿಜವಾಗಿ ಮಲೆನಾಡು ಪ್ರದೇಶಕ್ಕೆ ಒದಗಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಸಾಯಿಲ್ ಕನ್‌ಸರ್ವೇಷನ್ ಮತ್ತು ವಾಟರ್ ಕನ್‌ಸರ್ವೇಷನ್ ಬಗ್ಗೆ ಹೇಳಬೇಕಾದರೆ, ದಯಮಾಡಿ ಮಲೆನಾಡಿನಲ್ಲಿ ನೀಲಗಿರಿ ಮರ ಬೆಳೆಯುವುದನ್ನು ದಯವಿಟ್ಟು ನಿಲ್ಲಿಸಿ. ಇದು ಭೂಮಿಯಲ್ಲಿರುವ ನೀರನ್ನು ಹೀರುವುದರಿಂದ ನಮ್ಮ ಮಲೆನಾಡಿಗೆ ಬಹಳ ತೊಂದರೆಯಾಗಿದೆ. ಆದುದರಿಂದ ಮಲೆನಾಡಿನಲ್ಲಿ ಯೂಕಲಿಪ್ಟಸ್ ಬೆಳೆಯುವುದನ್ನು, ನಿಲ್ಲಿಸಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಮಲೆನಾಡಿನಲ್ಲಿ ಕೆರೆಗಳನ್ನು ಜಾಸ್ತಿ ಮಾಡಿದರೆ ನೀರಿನ ಸೌಕರ್ಯ ಸಿಗುತ್ತದೆ. ಹಾಗೆಯೇ ಮಲೆನಾಡಿನಲ್ಲಿ ಜಾಸ್ತಿ ಮರಗಳನ್ನು ಬೆಳೆಯುವ ವ್ಯವಸ್ಥೆಯನ್ನೂ ಮಾಡಬೇಕೆಂದು ನಾನು ಸರಕಾರವನ್ನು ಕೇಳುತ್ತೇನೆ. ಅಧ್ಯಕ್ಷರೇ, ನಾನು ಅರಣ್ಯದ ಬಗ್ಗೆ ಪ್ರಶ್ನೆಯನ್ನು ಕೇಳಿದ್ದಾಗ ಉತ್ತರ ಒದಗಿಸಿದ್ದರು. ಡಿಮ್ಯಾಂಡ್ ಬಂದಾಗ ಅದರ ಮೇಲೆ ಮಾತನಾಡಿ ಎಂದು ಹೇಳಿದ್ದರು. ಸಕಲೇಶಪುರ ತಾಲ್ಲೂಕಿನಲ್ಲಿ ಅರಣ್ಯ ಬೆಂಕಿಯಿಂದ ಅನಾಹುತ ಆಗುತ್ತಿದ್ದು ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂದು ಕೇಳಿದಾಗ, ರೈಲಿನಲ್ಲಿ ಪ್ರಯಾಣ ಮಾಡಬೇಕಾದರೆ ಆ ಕಡೆ, ಈ ಕಡೆ ಒಣಗಿದ ಎಲೆಗಳನ್ನು ಗುಡಿಸಿ ಗುಡ್ಡೆ ಮಾಡಿದ್ದಾಗ, ರೈಲಿನಲ್ಲಿ ಪ್ರಯಾಣ ಮಾಡುವವರು ಬೀಡಿ ಸಿಗರೇಟ್ ತುಂಡನ್ನು ಎಸೆದಿದ್ದರಿಂದ ಬೆಂಕಿ ಹತ್ತಿದೆ ಎಂದು ಹೇಳಿದ್ದರು. ಬಿಸಲೆ ಘಾಟ್‌ನಲ್ಲಿ ಎರಡು ಸಲ ಬೆಂಕಿ ಹತ್ತಿದೆ. ಅಲ್ಲಿ ರಸ್ತೆಯೇ ಇಲ್ಲ ಇನ್ನು ರೈಲು ವ್ಯವಸ್ಥೆ ಅಸಾಧ್ಯ. ಅಧಿಕಾರಿಗಳು ತಪ್ಪು ಉತ್ತರಗಳನ್ನು ಮಾನ್ಯ ಮಂತ್ರಿಗಳಿಗೆ ಕೊಟ್ಟಿದ್ದಾರೆ. ಎರಡು ಸಲ ಬೆಂಕಿ ಹತ್ತಿದಾಗ ಒಂದು ಬಾರಿ 24 ಲಕ್ಷ ರೂಪಾಯಿನ ಮರಗಳು ನಾಶವಾಯಿತು, ಇನೊಂದು ಬಾರಿ 12 ಲಕ್ಷ ರೂಪಯಿಗಳ ಮರಗಳು ನಾಶವಾಯಿತು.. ನಾನು ಅರಣ್ಯ ಮಂತ್ರಿಗಳನ್ನು ಕೇಳುವುದು ಇಷ್ಟೇ ಅರಣ್ಯ ಪ್ರದೇಶದ ಪಕ್ಕದಲ್ಲಿರುವ ಪ್ರೈವೇಟ್ ಲ್ಯಾಂಡ್‌ನವರು ಹೋಗಿ, ಟಿ.ಟಿ. ಕಟ್ಟಿ ಲ್ಯಾಂಡ್ ತೆಗದುಕೊಂಡು ಎ.ಡಿ.ಎಲ್.ಆರ್.ಗೆ ಬ್ರೈಬ್ ಮಾಡಿ ಸರಕಾರದ ಜಮೀನನ್ನು ಲೂಟಿ ಮಾಡುತ್ತಿದ್ದಾರೆ. ಸರಕಾರದ ಅರಣ್ಯದ ಸುತ್ತಮುತ್ತ ಪ್ರೈವೇಟ್ ಲ್ಯಾಂಡ್‌ನವರು ಯಾರೇ ಇರಲಿ ಅವರಿಗೆ ಅರಣ್ಯ ಭೂಮಿಯನ್ನು

ಕೊಡಬಾರದೆಂದು ಆದೇಶ ಕೊಟ್ಟರೆ ಕಳ್ಳತನದಿಂದ ಏನು ಮರ ಕಡಿಯುತ್ತಿದ್ದಾರೆ ಅದು ನಿಂತು ಹೋಗುತ್ತದೆ. ಸಕಲೇಶಪುರ ಮತ್ತು ಹಾಸನದ ದಿನ ಪತ್ರಿಕೆಗಳಲ್ಲಿ ಪ್ರತಿ ದಿನ ಬರುತ್ತಿದೆ. ಇದು ಸರ್ಕಾರದ ಗಮನಕ್ಕೆ ಬಂದಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಕೆಲವು ಅರಣ್ಯ ಇಲಾಖೆಯ ಅಧಿಕಾರಿಗಳು ಹೆತ್ತೂರು ಹೋಬಳಿಯಲ್ಲಿ ಸುಮಾರು 12 ಲಕ್ಷ ರೂಪಾಯಿಗಳ ಮರಗಳನ್ನು ನಾನು ಮೊದಲೇ ಹೇಳಿದಹಾಗೆ ಬೇರೆ ಜಾಗ ತೋರಿಸಿ ಸರ್ಕಾರ ಅರಣ್ಯ ಇಲಾಖೆಯುವತಿಯಿಂದ ಕದ್ದು ಸುಮಾರು 12 ಲಕ್ಷ ರೂಪಾಯಿಗಳ ಮಾಲನ್ನು ಮಾರಾಟ ಮಾಡಿದ್ದಾರೆ. ಒಂದು ತಿಂಗಳ ಹಿಂದಿನಿಂದ ಪ್ರತಿ ದಿನ ಪತ್ರಿಕೆಗಳಲ್ಲಿ ಬರುತ್ತಿದೆ. ಇದು ಸರ್ಕಾರದ ಗಮನಕ್ಕೆ ಬಂದಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಈ ಮರಗಳನ್ನು ಕಡಿಯಬಾರದು ಎಂದು ಸರ್ಕಾರ ಒಂದು ಆದೇಶವನ್ನು ಹೊರಡಿಸಿದೆ ಬಹಳ ಸಂತೋಷ. ಆದರೆ ನಾನು ಮೊದಲೇ ಹೇಳಿದಹಾಗೆ ಅರಣ್ಯ ಇಲಾಖೆ ಎಲ್ಲಿದೆಯೋ ಅಲ್ಲಿ ಸುತ್ತಮುತ್ತಲು ಇರುವ ಪ್ರೈವೇಟ್ ಜಮೀನುದಾರರಿಗೆ ಇದನ್ನು ಕೊಡಬಾರದು ಅದಕ್ಕೆ ಒಂದು ಕಾನೂನು ಮಾಡಿದರೆ ಒಳ್ಳೆಯದು. ಈಗ ಏನು ಕಳ್ಳತನದಲ್ಲಿ ಮಾಲು ಹೋಗುತ್ತಿದೆ ಇದನ್ನು ತಪ್ಪಿಸಬಹುದು. ಎಂದು ನನ್ನ ಭಾವನೆ. ಇದರಲ್ಲಿ ನಾನು ಮೊದಲೇ ಹೇಳಿದಹಾಗೆ ನನ್ನ ಕ್ಷೇತ್ರದಲ್ಲಿ ಈ ಹಿಂದೆ ಅಧಿಕಾರಿಗಳು ಕುಳಿತುಕೊಂಡು ಸಿ ಅಂಡ್ ಡಿ ಲ್ಯಾಂಡ್ ಲಿಸ್ಟ್ ಒಂದನ್ನು ಮಾಡಿದ್ದಾರೆ. ಇದು ಅರಣ್ಯ ಇಲಾಖೆಯ ಜಮೀನು ಆಗುತ್ತದೆ. ಆದರೆ ಇಬ್ಬರೂ ಮಾನ್ಯ ಮಂತ್ರಿಗಳು ಈ ಸಭೆಯಲ್ಲಿ ಇದ್ದಾರೆ. ಆ ಇಬ್ಬರೂ ಮಾನ್ಯ ಮಂತ್ರಿಗಳನ್ನು ನಾನು ಕೇಳುವುದು ಇಷ್ಟೇ ನನ್ನ ಕ್ಷೇತ್ರದಲ್ಲಿ ಸುಮಾರು ಒಂದು ಲಕ್ಷ ಹೆಕ್ಟೇರು ಜಮೀನನ್ನು ಸಿ ಅಂಡ್ ಡಿ ಲ್ಯಾಂಡ್ ಎಂದು ಮಾಡಿದ್ದಾರೆ. ಅದು ಈಗ ಸರ್ಕಾರದ ಕಡೆ ಇದೆ. ಆದರೆ ಅಲ್ಲಿ ಇರತಕ್ಕಂಥವರು ಎಲ್ಲರೂ ಬಡವರು. ಅವರು ಸುಮಾರು 10-20 ವರ್ಷಗಳಿಂದ ವ್ಯವಸಾಯ ಮಾಡಿಕೊಂಡು ಇದ್ದಾರೆ. ಮತ್ತೆ ಕೆಲವರು ಈ ಜಮೀನುಗಳಲ್ಲಿ ಸುಮಾರು 30-40 ವರ್ಷಗಳಿಂದ ಮನೆ ಕಟ್ಟಿಕೊಂಡು ಇದ್ದಾರೆ. ಇದನ್ನು ಒಣ ಭೂಮಿ ಎಂದು ಇದನ್ನು ಉಪಯೋಗಿಸುವುದಕ್ಕೆ ಆಗುವುದಿಲ್ಲ ಅಧಿಕಾರಿಗಳು ತೋರಿಸಿದ್ದಾರೆ. ಈ ಸಿ ಅಂಡ್ ಡಿ ಲ್ಯಾಂಡ್‌ನಲ್ಲಿ ಅರ್ಧದಷ್ಟು ಜನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರು ಇದ್ದಾರೆ. ಆದ್ದರಿಂದ ಈಗ ಅಂದಾಜು ಮಾಡಿರುವ ಸಿ ಅಂಡ್ ಡಿ ಲ್ಯಾಂಡ್‌ನ ಅರ್ಧದಷ್ಟು ಜಮೀನನ್ನು ಈ ಬಡವರಿಗೆ ಬಿಡಿಸಿಕೊಡಬೇಕೆಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಸಿ. ಬೈರೇಗೌಡ (ವೇಮಗಲ್):- ಮಾನ್ಯ ಅಧ್ಯಕ್ಷರೇ ಇವತ್ತಿನ ದಿವಸ ಈ ಸದನದ ಮುಂದೆ ಸರ್ಕಾರ ಮಂಡಿಸಿರತಕ್ಕಂಥ ಬೇಡಿಕೆಗಳನ್ನು ನಾನು ವಿರೋಧಿಸಿ ಕೆಲವು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾನು ಪ್ರಾರಂಭದಲ್ಲಿ ಮಾನ್ಯ ಮುಖ್ಯಮಂತ್ರಿಗಳ ಖಾತೆಗೆ ಸಂಬಂಧ ಪಟ್ಟ ಹಾಗೆ ಸಾಮಾನ್ಯ ಆಡಳಿತ ಪೋಲೀಸ್ ವ್ಯವಸ್ಥೆ ಹಾಗೂ ಮಂತ್ರಿಮಂಡಲದ ಬಗ್ಗೆ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ತಮ್ಮ ಅನುಮತಿ ಬೇಡುತ್ತೇನೆ. ಹೊಸದಾಗಿ ಸರ್ಕಾರ ಬಂದಿದೆ. ಅದರಲ್ಲೂ ಈ ರಾಜ್ಯದ ಚರಿತ್ರೆಯಲ್ಲಿ ಆಡಳಿತ ಪಕ್ಷಕ್ಕೆ ಈಗ ಇರುವಷ್ಟು ಬಹುಮತ ಹಿಂದೆಂದೂ ಕೂಡ ಬಂದಿಲ್ಲ. ಅದು ಒಂದು ದಾಖಲೆ ರೂಪದಲ್ಲಿ ಇವತ್ತಿನ ದಿವಸ ಆಡಳಿತ ಪಕ್ಷಕ್ಕೆ ಬಂದಿದ್ದು ಆಡಳಿತವನ್ನು ನಡೆಸುತ್ತಿದ್ದಾರೆ. ಅದು ಜನರ ಒಂದು ತೀರ್ಪು. ಕರ್ನಾಟಕ ರಾಜ್ಯದ ಮಹಾ ಜನರ ತೀರ್ಪನ್ನು ನಾವು ಕೂಡ ಒಪ್ಪಿದ್ದೇವೆ. ಇಂತಹ ಒಂದು ಸಂದರ್ಭದಲ್ಲಿ ಎರಡು ಭಾರಿ ರಾಜ್ಯದ ಮುಖ್ಯಮಂತ್ರಿಗಳಾಗಿ ಬಂದಿದ್ದಾರೆ. ರಾಜ್ಯದ ದೃಷ್ಟಿಯಿಂದ ಜನತೆಯ ಹಿತದೃಷ್ಟಿಯಿಂದ ಅವರಿಗೆ ಯಶಸ್ಸು ಕೋರಬೇಕಾದಂಥದ್ದು ನನ್ನ ಕರ್ತವ್ಯ. ಆದರೆ ಯಶಸ್ಸು ಕೋರತಕ್ಕಂಥ ಸಂದರ್ಭದಲ್ಲಿ ಈ ರಾಜ್ಯದಲ್ಲಿ ಕಳೆದ 7-8 ತಿಂಗಳುಗಳಿಂದ ಯಾವ ರೀತಿಯಲ್ಲಿ ಆಡಳಿತ ನಡೆಸಿದ್ದಾರೆ ಎನ್ನತಕ್ಕಂಥಾದ್ದು ಕೂಡ ಹೇಳಬೇಕಾದುದು ಜನತೆಯ ಹಿತದೃಷ್ಟಿಯಿಂದ ಸರ್ಕಾರದ ಗಮನಕ್ಕೆ ತರುವುದು ನನ್ನ ಕರ್ತವ್ಯ. ಮಾನ್ಯ ಮುಖ್ಯಮಂತ್ರಿಗಳು ತಮ್ಮ ಪತ್ರಿಕಾ ಸಂದರ್ಶನಗಳಲ್ಲಿ ಒಂದು ಮಾತನ್ನು ಹೇಳಿದ್ದಾರೆ. ಅಧಿಕಾರದ ವ್ಯಾಮೋಹ ಇಲ್ಲ ಕೇಂದ್ರದಲ್ಲೂ ಅಧಿಕಾರವನ್ನು ಅನುಭವಿಸಿದ್ದೇನೆ,

ರಾಜ್ಯದಲ್ಲೂ ಕೂಡ ಮುಖ್ಯ ಮಂತ್ರಿಯಾಗಿ ಕೆಲಸ ಮಾಡಿದ್ದೇನೆ, ಈಗ ಮತ್ತೊಮ್ಮೆ ರಾಜ್ಯದ ಜನತೆ ಅವಕಾಶ ಕೊಟ್ಟಿದ್ದಾರೆ, ಜನತೆಯ ಹಿತವನ್ನು ಕಾಪಾಡತಕ್ಕಂಥ ಒಂದೇ ದೃಷ್ಟಿ, ಮತ್ತೆ ಯಾವ ಆಸೆ ಆಕಾಂಕ್ಷೆಗಳೂ ನನಗೆ ಇಲ್ಲ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಇದು ವಾಸ್ತವಿಕವಾಗಿ ಒಪ್ಪ ಬೇಕಾಗಿರತಕ್ಕಂಥ ಮಾತು. ಯಾರೇ ಮುಖ್ಯ ಮಂತ್ರಿಯಾಗಿರಲಿ, ಮುಖ್ಯ ಮಂತ್ರಿಯಾದವರು, ಜನತೆಯಿಂದ ಚುನಾಯಿತರಾದಂಥವರು ಹೇಳುವಂಥ ಮಾತು ಇದು. ಆದರೆ ಕಳೆದ 7-8 ತಿಂಗಳುಗಳಲ್ಲಿ ನಡೆದ ಘಟನೆಗಳಲ್ಲಿ ಅವರು ಏನನ್ನು ಹೇಳುತ್ತಿದ್ದಾರೆ, ಅದರಲ್ಲಿ ಅವರು ಎಡವಿರತಕ್ಕ ವಿಚಾರಗಳನ್ನು ನಾನಂತೂ ಕೂಡ ಗಮನಿಸಿದ್ದೇನೆ. ನಾನು ಬೇರೆ ವಿಚಾರಗಳನ್ನು ಬೇರೆ ಸಂದರ್ಭದಲ್ಲಿ ಹೇಳುತ್ತೇನೆ. ಅದು ಕಾವೇರಿ ನದಿ ನೀರಿನ ವಿಚಾರದಲ್ಲಿ ಇರಬಹುದು ಅಥವಾ ರಾಜಕೀಯಕ್ಕೆ ಸಂಬಂಧ ಪಟ್ಟ ಗುರುತರವಾದ ವಿಚಾರಗಳು ಇರಬಹುದು, ಅದನ್ನು ಬೇರೆ ಸಂದರ್ಭದಲ್ಲಿ ಪ್ರಸ್ತಾಪ ಮಾಡುತ್ತೇನೆ. ಅದನ್ನು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಇಲ್ಲಿ ಅಧಿಕಾರ ವಹಿಸಿಕೊಂಡ ತಕ್ಷಣ, ಅವರು ಬಂದಿರತಕ್ಕ ಪ್ರದೇಶ, ಅಂದರೆ ಹೈದರಾಬಾದ್ ಕರ್ನಾಟಕ ಪ್ರದೇಶಕ್ಕೆ ವಿಶೇಷವಾದಂಥ ಯೋಜನೆಯನ್ನು ರೂಪಿಸಿದ್ದಾರೆ. ಅದಕ್ಕೆ 40 ಕೋಟಿ ರೂಪಾಯಿಗೆ ಮೀರಿ ಹಣವನ್ನು ಕೊಟ್ಟಿದ್ದಾರೆ. ಮೊನ್ನೆ ದಿವಸ ಇನ್ನೂ ಹೆಚ್ಚಿನ ಹಣವನ್ನು ಕೊಡತಕ್ಕಂಥ ಆಶ್ವಾಸನೆಯನ್ನು ಮಾನ್ಯ ಹಣಕಾಸಿನ ಮಂತ್ರಿಯವರು ಈ ಸದನದಲ್ಲಿ ಕೊಟ್ಟಿದ್ದಾರೆ. ಆ ಪ್ರದೇಶಕ್ಕಿಂತ ಇನ್ನೂ ಹಿಂದುಳಿದಿರತಕ್ಕಂಥ ಪ್ರದೇಶಗಳು ಇವೆ. ಅದರಲ್ಲೂ ಪ್ರಮುಖವಾಗಿ ನಮ್ಮ ಕೋಲಾರ ಜಿಲ್ಲೆ. ಸರ್ಕಾರದವರು ಒದಗಿಸಿರತಕ್ಕಂಥ ಅಂಕಿ ಅಂಶಗಳ ಪ್ರಕಾರವೇ ತಲಾವಾರು ಆದಾಯದಲ್ಲಿ ನಮ್ಮ ಜಿಲ್ಲೆ ಕೊನೆಯ ಸ್ಥಾನದಲ್ಲಿದೆ. ಈ ಕೊನೆಯ ಸ್ಥಾನದಲ್ಲಿರತಕ್ಕ ನಮ್ಮ ಜಿಲ್ಲೆಯಲ್ಲಿ ಇವತ್ತು ಕುಡಿಯುವ ನೀರಿಗೂ ತೊಂದರೆ ಇದೆ. ವ್ಯವಸಾಯ ಮಾಡುವುದಕ್ಕಾಗಿ ಐನೂರು ಅಡಿಗಳಿಗಿಂತಲೂ ಮೇಲ್ಪಟ್ಟು ಆಳದ ಭಾವಿಗಳನ್ನು ತೋಡಿ ನೀರನ್ನು ತರುತ್ತಿದ್ದೇವೆ. ಅಂಥಾ ಜಿಲ್ಲೆಗೆ ಯಾವ ಪ್ರಾಶಸ್ತ್ಯವಾಗಲೀ, ಅಲ್ಲಿರತಕ್ಕಂಥ ಸಮಸ್ಯೆಗಳನ್ನು ಪರಿಹರಿಸತಕ್ಕಂಥದ್ದಕ್ಕಾಗಲೀ ಇವತ್ತಿನ ಸರ್ಕಾರ ಏನೂ ಪ್ರಯತ್ನ ಮಾಡುತ್ತಿಲ್ಲ. ಯೋಜನೆಗಳನ್ನು ರೂಪಿಸುವುದರಲ್ಲಿ ಮತ್ತು ನಿರ್ಣಯಗಳನ್ನು ಮಾಡುವುದರಲ್ಲಿ ತಾರತಮ್ಯವಾಗಿದೆ. ಇದನ್ನು ಅವರು ಗಮನಿಸಬೇಕು. ಅವರು ಕರ್ನಾಟಕ ರಾಜ್ಯದ ಮುಖ್ಯ ಮಂತ್ರಿಗಳಾಗಿದ್ದಾರೆ. ಕೋಲಾರ ಜಿಲ್ಲೆಯೂ ಕೂಡ ಕರ್ನಾಟಕ ರಾಜ್ಯದ ಒಂದು ಭಾಗ. ಇದನ್ನು ಮರೆತಿರತಕ್ಕಂಥದ್ದು ಸರಿಯಲ್ಲ. ಅಂಕಿ ಅಂಶಗಳನ್ನು ನೋಡಿದರೆ, ತಲಾವಾರು ಆದಾಯವಾಗಲೀ, ಅಲ್ಲಿ ಖರ್ಚಾಗುತ್ತಿರತಕ್ಕಂಥ ಹಣವನ್ನಾಗಲೀ ನಾವು ವಿಮರ್ಶೆ ಮಾಡಿ ನೋಡಿದಾಗ, ಹಿಂದುಳಿದ ಭಾಗಗಳನ್ನು ಮತ್ತೆ ಹಿಂದೆ ತಳ್ಳತಕ್ಕಂಥ ಪ್ರಯತ್ನ ಈ ಸರ್ಕಾರದಲ್ಲಿ ನಡೆಯುತ್ತಿದೆಯೆಂದು ನಾನು ಹೇಳಲೇಬೇಕಾದ ಪರಿಸ್ಥಿತಿ ಇವತ್ತಿನ ದಿವಸ ಬಂದಿದೆ. ಇನ್ನೂ ಇವತ್ತು ಈ ಭ್ರಷ್ಟಚಾರದ ಬಗ್ಗೆ ಕೂಡ ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟವಾಗಿ ಹೇಳಿದ್ದಾರೆ. ನಾನು ಒಂದು ವಿಚಾರದ ಬಗ್ಗೆ ಮೆಚ್ಚುಗೆಯನ್ನು ಇಲ್ಲಿ ಸೂಚಿಸಬೇಕಾಗಿರತಕ್ಕಂಥದ್ದು ಇದೆ. ಕೆಲವು ಸಣ್ಣ ಪುಟ್ಟ ಅಧಿಕಾರಿಗಳ ಮೇಲೆ ಕೈ ಹಾಕುವುದನ್ನು ಬಿಟ್ಟು ಕೆಲವು ದೊಡ್ಡ ದೊಡ್ಡ ಅಧಿಕಾರಿಗಳ ಮೇಲೆ ಲೋಕಾಯುಕ್ತ ಕೈ ಹಾಕಿದೆ. ಇಷ್ಟೇ ಅಲ್ಲ, ಇವತ್ತಿನ ದಿವಸ ನಿಮ್ಮ ಆಡಳಿತ ವ್ಯವಸ್ಥೆಯಲ್ಲಿ ಈ ದೊಡ್ಡ ದೊಡ್ಡ ಅಧಿಕಾರಿಗಳಾಗಿರತಕ್ಕಂಥವರಲ್ಲಿ ಕೆಲವರು ಭ್ರಷ್ಟರೆಂದು ಅವರ ಮೇಲೆ ಸಾಕ್ಷಿ ಆಧಾರದ ಸಮೇತ ಸಾಬೀತು ಮಾಡತಕ್ಕಂಥಾದ್ದು ಅದು ಬೇರೆ ಪ್ರಶ್ನೆ. ಯಾರೂ ಕೂಡಾ ಇವತ್ತಿನ ದಿವಸ ಕಳ್ಳತನ ಮಾಡತಕ್ಕಂಥವರು ನಾನು ಕಳ್ಳತನ ಮಾಡುತ್ತೇನೆಂದು ಹೇಳಿ ಕಳ್ಳತನ ಮಾಡುವುದಕ್ಕೆ ಹೋಗುವುದಿಲ್ಲ. ಇದು ನಮಗೂ ಗೊತ್ತಿದೆ, ಮುಖ್ಯ ಮಂತ್ರಿಗಳ ಆತ್ಮಕ್ಕೂ ಗೊತ್ತಿದೆ, ಈ ಸದನದಲ್ಲಿರತಕ್ಕಂಥ ಅನೇಕರ ಆತ್ಮಕ್ಕೂ ಗೊತ್ತಿದೆ. ಈ ಮೇಲ್ಮಟ್ಟದಲ್ಲಿರತಕ್ಕಂಥ ಅಧಿಕಾರಿಗಳು ಅದರಲ್ಲೂ ಕೂಡ ಅಖಿಲ ಭಾರತ ಸೇವೆಯ ಐ.ಎ.ಎಸ್. ಅಧಿಕಾರಿಗಳು ಏನು ತಿಳಿದುಕೊಂಡಿದ್ದಾರೆಂದರೆ, ಅವರು ತಾಯಿಯ ಹೊಟ್ಟೆಯಲ್ಲಿ ಹುಟ್ಟಲೇ ಇಲ್ಲ, ಆಕಾಶದಿಂದ ನಾವು ದೊಪ್ ಅಂಥ ಭೂಮಿ ಮೇಲೆ ಬಿದ್ದಿದ್ದೇವೆ, ಈ ದೇಶದ ರಕ್ಷಣೆ ಮಾಡುವುದಕ್ಕೆ ನಮ್ಮನ್ನು ಬಿಟ್ಟರೆ ಬೇರೆ ಯಾರೂ ಇಲ್ಲ, ಎಂದು ಅವರ ವರ್ತನೆ.

ಅವರಿಗೆ ನಮ್ಮ ಸಹೋದರಿಯವರು ಸೂಪರ್‌ಮ್ಯಾನ್ ಎಂದು ಹೇಳುತ್ತಿದ್ದಾರೆ, ಅದೂ ಹೌದು, ಒಳ್ಳೆಯ ರೀತಿಯಲ್ಲಿ ಅಲ್ಲಿ ಅವರು ಕೆಲಸ ಮಾಡುತ್ತಿದ್ದರೆ ಸಂತೋಷ ಪಡೋಣ. ಅವರಿಂದ ಒಳ್ಳೆಯ ಕೆಲಸಕಾರ್ಯಗಳು ಆಗುವಹಾಗೆ ಇದ್ದರೆ ಅವರನ್ನು ಒಪ್ಪಿಕೊಳ್ಳುವುದಕ್ಕೂ ನಾನು ತಯಾರಾಗಿದ್ದೇನೆ. ಆದರೆ ಇಲ್ಲಿ ನಾವು ಯಾರಾದರೂ ಒಬ್ಬ ಅವ್ಯವಹಾರಿಯ ಬಗ್ಗೆ ಹೇಳಿದರೆ, ಒಂದು ಹೆಸರನ್ನು ಹೇಳಿದರೆ, ಒಬ್ಬರ ಬಗ್ಗೆ ಆಪಾದನೆ ಮಾಡಿದರೆ, ತತ್‌ಕ್ಷಣವೇ ಅವರ ಮೇಲೆ ಆಪಾದನೆ ಮಾಡತಕ್ಕಂಥಾದ್ದರ ಬಗ್ಗೆ ಆಧಾರಗಳು ಏನಿವೆ ಎಂದು ಕೇಳುತ್ತಾರೆ. ಆದರೆ ಈ ಅಧಿಕಾರಿ ವರ್ಗ ಏನು ಮಾಡುತ್ತಿದೆ ಹೇಗೆ ಕೆಲಸ ಮಾಡುತ್ತಿದೆ ಎಂಬುದು ಎಲ್ಲರಿಗೂ ಗೊತ್ತಿದೆ, ಜನತೆಗೂ ಗೊತ್ತಿದೆ. ಈ ವರ್ಗದಲ್ಲಿ ಪ್ರಾಮಾಣಿಕರು ಯಾರು ಎಂದು ಕಷ್ಟದಿಂದ ಹುಡುಕಬೇಕಾಗುತ್ತದೆ. ಆದರೆ ಸಾರಾಸಗಟಾಗಿ ಎಲ್ಲರೂ ಅಂಥವರೇ ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಈ ದೇಶದ ಹಿತದೃಷ್ಟಿಯಿಂದ, ರಾಜ್ಯದ ದೃಷ್ಟಿಯಿಂದ ನಮ್ಮ ಜನತೆಯ ದೃಷ್ಟಿಯಿಂದ ಈ ರಾಜ್ಯದಲ್ಲಿನ ಬಡತನದ ರೇಖೆಗಿಂತ ಕೆಳಗಿರತಕ್ಕಂಥ ಜನರ ದೃಷ್ಟಿಯಿಂದ ಶ್ರದ್ಧಾಪೂರ್ವಕವಾಗಿ ಕೆಲಸ ಮಾಡತಕ್ಕಂತ ಅಧಿಕಾರಿಗಳೂ ಕೂಡ ಇದ್ದಾರೆ. ಆದರೆ ಅವರು ಬೆರಳೆಣಿಕೆಗಿಂತಲೂ ಕಡಿಮೆ. ಕೆಲಸವನ್ನು ಸರಿಯಾಗಿ ನಿರ್ವಹಣೆ ಮಾಡದ ಅಧಿಕಾರಿ ವರ್ಗದ ಬಗ್ಗೆ, ಅವರನ್ನು ಇಳಿಸಲು ಏನು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೀರಿ ಅದರ ಬಗ್ಗೆ ಸಂತೋಷ ವ್ಯಕ್ತಪಡಿಸುತ್ತೇನೆ. ತಮಗೆ ಆ ಕುರಿತು ತೆಗೆದುಕೊಳ್ಳ ಬೇಕಾದ ಕಾರ್ಯಕ್ರಮಗಳ ಬಗ್ಗೆ ನಾನೇನೂ ಹೇಳಬೇಕಾಗಿಲ್ಲ. ತಮ್ಮ ಕೇಂದ್ರ ಮತ್ತು ರಾಜ್ಯ ಸರಕಾರಗಳಲ್ಲಿ ನಡೆಸಿದ ಅಧಿಕಾರದ ಅನುಭವ ಅಪಾರವಾಗಿದೆ ಅದನ್ನು ಅಲ್ಲಿಗೇ ನಿಲ್ಲಿಸದೇ ಇನ್ನೂ ಚುರುಕುಗೊಳಿಸಿ ರಾಜ್ಯಭಾರವನ್ನು ಮಾಡುತ್ತೀರಿ ಮತ್ತು ಜನತೆಯ ಏಳಿಗೆಯನ್ನು ಮಾಡುತ್ತೀರಿ ಎಂದು ನಾನು ಆಶಿಸುತ್ತೇನೆ. ಆ ಒಂದು ಅವಶ್ಯಕತೆಯು ಇವೊತ್ತು ರಾಜ್ಯಕ್ಕೆ ಇದೆ. ಒಂದು ಸಮಯದಲ್ಲಿ ನಾನೂ ಕೂಡ ರಾಜ್ಯ ಮಂತ್ರಿಮಂಡಲದ ಸದಸ್ಯನಾಗಿ ಈ ಕುರಿತು ಹೇಳಿದ್ದೆ. ಇಂಥ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕಾದ ಅವಶ್ಯಕತೆ ಇದೆ ಎಂದು ವಿವರಿಸಿದ್ದೆ. ಆದರೆ ಅಂದಿನವರ ಕಿವಿಗೆ ಅದು ಸರಿಯಾಗಿ ಬೀಳಲಿಲ್ಲ. ಆದರೆ ಈಗ ತಾವು ಕೈಗೊಂಡ ಕ್ರಮದ ಬಗ್ಗೆ ಸಂತೋಷವಾಗಿದೆ. ಈ ಬಗ್ಗೆ ಚುರುಕು ಹುಟ್ಟಿಸುವಂಥ ಕಾರ್ಯವನ್ನು ಮಾಡಿ ಎಂದು ಒತ್ತಾಯಿಸುತ್ತೇನೆ. ನಮ್ಮ ಸರಕಾರ ಇದ್ದಾಗ ಕೇಂದ್ರ ಸರಕಾರದವರು ಏಷಿಯನ್ ಕ್ರೀಡಾ ಸಮಯದಲ್ಲಿ ಕೆಲವು ಅಂಬಾಸಿಡರ್ ಕಾರ್‌ಗಳನ್ನು ಕೊಟ್ಟಿದ್ದರು. 15-16 ಕಾರ್‌ಗಳನ್ನು ಕೊಟ್ಟ ಬಗ್ಗೆ ಪತ್ರಿಕೆಯಲ್ಲಿಯೂ ಬಂತು. ಇವರು ಏನೋ ದೊಡ್ಡ ವ್ಯವಹಾರವನ್ನು ನಡೆಸಿದ್ದರು ಎಂದು ಬಂತು. ಆದನ್ನು ನಾನು ಕುತೂಹಲದಿಂದ ಓದಿದ್ದೇನೆ. ವಿರೋಧ ಪಕ್ಷದಲ್ಲಿದ್ದವರೂ ಈ ವಿಚಾರದಲ್ಲಿ ಮಾತನಾಡಿದ್ದಾರೆ. ಆದರೆ ಈ ಸರಕಾರದವರು ಅಂಬಾಸಿಡರ್ ಬದಲಾಗಿ ಕಾಂಟೆಸ್ಸಾ ಕಾರ್‌ಗಳನ್ನು ತೆಗೆದುಕೊಂಡಿದ್ದಾರೆ. ಈಗ ಹೇಳುವಂತೆ ಕಾಂಗ್ರೆಸ್ ಕಲ್ಚರ್ ಎಂದು ಹೇಳುವುದರ ಜೊತೆಗೆ ಕಾಂಟೆಸ್ಸಾ ಕಲ್ಚರ್ ಎಂದು ಸೇರಿಸಬೇಕಾಗುತ್ತದೆ. ಇಂಥ ಹೊಸ ಕಾರ್‌ಗಳಿಗೂ ನಮ್ಮ ಸಾಮಾನ್ಯ ಜನತೆಗೂ ಏನು ಸಂಬಂಧ? ಇದು ಭಾರತೀಯ ಕಾರ್ ಆದರೂ ಊಡ ಇದರ ಬೆಲೆ ಎರಡು ಲಕ್ಷ ರೂಪಾಯಿಗಳಿಗೂ ಜಾಸ್ತಿಯಾಗುತ್ತದೆ. ನಾನು ಒಂದು ಕಡೆಯಿಂದ ಇನ್ನೊಂದು ಕಡೆಗೆ ಹೋಗುವುದಕ್ಕೆ ಕಾರ್‌ಗಳನ್ನು ಬಳಸಬಾರದು ಎಂದು ಹೇಳುವುದಿಲ್ಲ. ಆದರೆ ಕಾಂಟೆಸ್ಸಾ ಕಾರ್‌ಗಳಲ್ಲಿ ಹೋದರೆ ಮಾತ್ರ ತಾವುಗಳು ಮಂತ್ರಿಗಳಾಗುತ್ತೀರೇನು? ಇಷ್ಟು ಬೆಲೆಯುಳ್ಳ ಕಾರ್‌ಗಳನ್ನು ನಾವು ಉಪಯೋಗಿಸುವುದರ ವಿಚಾರದಲ್ಲಿ ಮಾತ್ರ ನನ್ನ ವಾದ ಇದೆ ಎಂದು ಹೇಳ ಬಯಸುತ್ತೇನೆ. ಇಡೀ ದೇಶ ಪೆಟ್ರೋಲಿಯಂ ವಸ್ತುಗಳನ್ನು ಕಡಿಮೆ ಬಳಸಬೇಕೆಂದು ಕೇಂದ್ರ ಸರ್ಕಾರ ಸೂತ್ರಗಳನ್ನು ಕೊಟ್ಟಿದೆ. ಕಾರ್‌ಗಳನ್ನು ಸರ್ಕಾರೀ ವಾಹನಗಳನ್ನು ಹೇಗೆ ಬಳಸಬೇಕೆಂದೂ ಇದೆ. ಆದರೆ ನಾನು ನೋಡಿದ್ದೇನೆ ಒಬ್ಬೊಬ್ಬ ಸಚಿವರ ಮನೆ ಮುಂದೆ ಮೂರೂ ನಾಲ್ಕು ಕಾರ್‌ಗಳು ನಿಂತಿರುತ್ತದೆ. ಅವನ್ನು ಯಾರ್‍ಯಾರು ಎಲ್ಲೆಲ್ಲಿ ಓಡಿಸುತ್ತಾರೆ ಎಂದು ಹೇಳಲು ತಯಾರಿಲ್ಲ. ಇದಕ್ಕೆ ಪೆಟ್ರೋಲ್, ಡ್ರೈವರ್ ಇತರೆ ಖರ್ಚುಗಳೆಲ್ಲ ಎಷ್ಟೊಂದಾಗುತ್ತದೆ ಏನು ಕಥೆ...

ಅಧ್ಯಕ್ಷರು:- ನಿಂತಿರುವ ಕಾರಿಗೆ ಪೆಟ್ರೋಲ್ ಏಕೆ ಬೇಕು?

ಶ್ರೀ ಸಿ. ಬೈರೇಗೌಡ:- ಬರೀ ನಿಂತಿರುತ್ತವೆ ಎಂದು ಹೇಳಲಿಲ್ಲ ನಾನು, ಓಡಾಡುತ್ತವೆ ಎಂದೂ ಹೇಳಿದೆ. ಈ ತರಹ ಹಿಂದೆ ನಾನು ಮಾಡಿದ್ದರೆ ನನ್ನ ಮೇಲೂ ಕ್ರಮ ತೆಗೆದುಕೊಳ್ಳಿ.

ಶ್ರೀ ಎಲ್.ಆರ್. ಶಿವರಾಮೇಗೌಡ:- ಮಂತ್ರಿಯಾಗಿದ್ದಾಗ ನೀವೂ ಅದನ್ನೆಲ್ಲಾ ಮಾಡಿದ್ದೀರಿ.

ಶ್ರೀ ಸಿ. ಬೈರೇಗೌಡ:- ನನ್ನಷ್ಟು ನೀವು ಕಲಿಯಲು ಸಾಧ್ಯವಿಲ್ಲ.

ಶ್ರೀ ಎಲ್.ಆರ್. ಶಿವರಾಮೇಗೌಡ:- ಅದಷ್ಟೇ ಅಲ್ಲ, ವೀರಪ್ಪ ಮೊಯಿಲಿಯವರ ಜೊತೆ ನೀವು ನಡೆಸಿದಿರೆಂದು ಹೇಳಲಾದ ಘಟನೆಗಳ ತರಹವೂ ನಾನು ಮಾಡಲು ಆಗುವುದಿಲ್ಲ.

ಶ್ರೀ ಬೈರೇಗೌಡ:- ಶಿವರಾಮೇಗೌಡರೇ, ಈ ದೇಶದ ಕಣ್ಣು ತೆರೆಸುವ ಕೆಲಸ ನಾನು ಎಷ್ಟೋ ಮಾಡಿದ್ದೇನೆ ಆದಕ್ಕೆ ನೀವು ನನಗೆ ಕಾಂಪಿಟೇಟರ್ ಅಲ್ಲ ಎಂದು ಹೇಳಿದ್ದುದು ಇರಲಿ, ಮಂತ್ರಿಗಳ ಮನೆ ಮುಂದೆ ಮಾತ್ರವಲ್ಲ ಅಧಿಕಾರಿಗಳ ಮನೆ ಮುಂದೆ ಕೂಡ ನಿಂತಿರುತ್ತವೆ ಐದೂ ಆರು ಕಾರು. ಅವರು ಒಂದು ಕಡೆ ಚೇರ್ಮನ್, ಇನ್ನೊಂದು ಕಡೆ ಎಂ.ಡಿ. ಇನ್ನೊಂದು ಕಡೆ ಇನ್‌ಚಾರ್ಜ್ ಹೀಗೆ ನೂರೆಂಟು ತರಹ ಇವೆ. ಮೊನ್ನೆ ಕಾನೂನು ಸಚಿವರು ಹೇಳಿದರು ಡೆಸಿಗ್ನೇಟೆಡ್ ಕಾರಿವೆ ಎಂದು. ಹೀಗೆ ಎಷ್ಟಿವೆ ಹೇಳಿ? ಒಬ್ಬೊಬ್ಬ ಅಧಿಕಾರಿಗಳ ಹತ್ತಿರ ಎಷ್ಟಿವೆ ಹೇಳಿ? ಆ ಅಧಿಕಾರಿಗಳ ಹೆಸರು ಗೊತ್ತಿದೆ ಆದರೆ ಹೇಳಲು ನಾನು ತಯಾರಿಲ್ಲ.

ಶ್ರೀ ಆರ್.ಎನ್. ನಾಯಕ್:- ತಾವು ಎಲ್ಲಾ ಹೇಳಬೇಕು ನಮ್ಮನ್ನು ಊಹಾಪೋಹದಲ್ಲಿ ಬಿಡಬೇಡಿ. ಹಿಂದೆಯೆಲ್ಲ ನೀವು ಹೀಗೆ ಟೇಪ್ ಟೇಪ್ ಎಂದು ಗೊಂದಲ ಎಬ್ಬಿಸಿ ರಾಜಕೀಯವನ್ನು ಕೊಲೆ ಮಾಡಿಬಿಟ್ಟಿರಿ.

ಶ್ರೀ ಬೈರೇಗೌಡ:- ಆದ್ದರಿಂದ ಈ ಅಧಿಕಾರಿಗಳು ಎಷ್ಟು ಕಾರ್ ಉಪಯೋಗಿಸುತ್ತಿದ್ದಾರೆ ಅದನ್ನೆಲ್ಲ ನೋಡಿ ಅವರು ಎಷ್ಟೇ ಕಡೆ ಡೆಸಿಗ್ನೇಟೆಡ್ ಆಗಿದ್ದರೂ ಅವರಿಗೆ ಒಂದೇ ಕಾರ್ ಇರಬೇಕು ನಿಮ್ಮ ಸ್ಪೆಷಲ್ ಬ್ರಾಂಚ್‌ನವರಿಂದ ಕೇಳಿ ಎಷ್ಟು ಕಾರ್‌ಗಳಿವೆ ಎಂದು, ಎಲ್ಲೆಲ್ಲಿ ಅವು ಓಡಾಡುತ್ತವೆ ಎಂದು. ಇದನ್ನೆಲ್ಲಾ ಕಡಿಮೆ ಮಾಡಬೇಕು. ಮೊನ್ನೆ ದಿವಸ ಎಕ್ಸೈಜ್ ಬಗ್ಗೆ ಸಾಕಷ್ಟು ಮಾತನಾಡಿದ್ದೆ, ಆವೊತ್ತು ನನಗೆ ಹೆಚ್ಚಿನ ಮಾಹಿತಿ ಇರಲಿಲ್ಲ ಈಗ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೂ ತರುವ ವಿಚಾರ ಇದೆ. ರಾಜ್ಯದ ಹಣಕಾಸಿನ ಸ್ಥಿತಿಯನ್ನು ಸರಿಪಡಿಸಬೇಕಾದರೆ ಇದನ್ನು ತೀವ್ರವಾಗಿ ಅವರು ಪರಿಗಣಿಸಬೇಕು. ಅದು ಏನೆಂದರೆ ಯಥೇಚ್ಛವಾಗಿ ಇವತ್ತಿನ ದಿವಸ ಎಕ್ಸೈಜ್ ಹರಾಜಿನಲ್ಲಿ ಕೂಗಿದ್ದಾರೆ. ನಾಲ್ಕು ಪಟ್ಟು ಐದು ಪಟ್ಟು ಅಷ್ಟು ಜಾಸ್ತಿ ಹಣ ಬಂದಿರತಕ್ಕಂಥದ್ದು ಇದೆ. ಏನು ಬಂದಿರತಕ್ಕಂಥ ಆದಾಯವನ್ನು ಮೊಟಕುಗೊಳಿಸಬೇಕು, ಏನೇ ಆಗಲಿ, ಹಿಂದೆ ಏನು ನಡೆಸಿದ್ದರೋ, ಹಿಂದೆ ಯಾವ ರೀತಿಯಾಗಿ ನಡೆಸಿಕೊಂಡಿದ್ದರೋ ಅದೇ ರೀತಿ ಮಾಡಬೇಕು ಎನ್ನತಕ್ಕಂಥ ಒಂದು ಪ್ರಯತ್ನ ನಡೆಯುತ್ತಿದೆ. ಹಣಕಾಸಿನ ಮಂತ್ರಿಗಳು ಇವತ್ತಿನ ದಿವಸ ಇಲ್ಲ. ಇವರಿಗೆ ಮೂರು ತಿಂಗಳ ಬ್ಯಾಂಕ್ ಗ್ಯಾರಂಟಿಯನ್ನು ಕೊಡಬೇಕು ಎನ್ನುವುದು, ಮೂರು ತಿಂಗಳಿಗೆ ಬ್ಯಾಂಕ್ ಗ್ಯಾರಂಟಿಯನ್ನು ಕೊಡಬೇಕು ಎಂದು ಇನ್‌ಸಿಸ್ಟ್ ಮಾಡಿದ್ದೇವೆ ಎನ್ನತಕ್ಕಂಥ ಮಾತನ್ನು ಹೇಳಿದರು. ಎಲ್ಲರ ಹತ್ತಿರ ಕೂಡ ಬ್ಯಾಂಕ್ ಗ್ಯಾರಂಟಿಯನ್ನು ಪಡೆದಿಲ್ಲ. ನನಗೆ ಗೊತ್ತಿರುವ ಪ್ರಕಾರ ಕೇವಲ ಐದರಿಂದ ಹತ್ತುರಷ್ಟು ಜನ ಕಂಟ್ರಾಕ್ಟರ್ಸ್‌ಗಳಿಂದ ಬ್ಯಾಂಕ್ ಗ್ಯಾರಂಟಿಯನ್ನು ಪಡೆದಿದ್ದಾರೆ. ಉಳಿದಿರತಕ್ಕಂತಹವರು ಬ್ಯಾಂಕ್ ಗ್ಯಾರಂಟಿಯನ್ನು ಕೊಟ್ಟಿಲ್ಲ ಅಂಥವರಿಗೆ ಹದಿನೈದು ದಿವಸ ಕಾಲಾವಧಿ ಎಂದು ಕೊಟ್ಟಿದ್ದೀರಿ. ಈ ತಿಂಗಳ 15 ರವರೆಗೆ ಕಾಲಾವಧಿಯನ್ನು ಕೊಟ್ಟಿದ್ದೀರಿ. ಈಗಾಗಲೇ ಅವರೆಲ್ಲರೂ ಮೂರು ದಿವಸದ ಹಿಂದೆ ಸಭೆ ಸೇರಿ ತೀರ್ಮಾನವನ್ನು ಮಾಡಿಕೊಂಡಿದ್ದಾರೆ. ಅವರು ಸಭೆ ಸೇರಿ ಬ್ಯಾಂಕ್ ಗ್ಯಾರಂಟಿಯನ್ನು ಕೊಡಬಾರದು, ಆ ರೀತಿ ಕೊಡದಿದ್ದರೆ ಪುನಃ ಮರು ಹರಾಜಿಗೆ ಬರುತ್ತದೆ, ಮರುಹರಾಜಿಗೆ ಬಂದಾಗ ಪುನಃ ನಾವೇ ಒಂದು ಸಿಂಡಿಕೇಟನ್ನು ಮಾಡಿಕೊಂಡು ಮೊದಲು ಇದ್ದುದಕ್ಕಿಂತ ಕಡಿಮೆ ಬೆಲೆಯಲ್ಲಿ ಈ ಹರಾಜನ್ನು ಪಡೆದುಕೊಳ್ಳಬೇಕು ಎಂದು ಈಗಾಗಲೇ ತೀರ್ಮಾನವನ್ನು ಮಾಡಿಕೊಂಡಿದ್ದಾರೆ. ಇದು ಬಹಳ ಖಾತರಿಯಾಗಿ ನನಗೆ ಗೊತ್ತಿರತಕ್ಕಂಥ ಒಂದು ವಿಚಾರ. ಸರ್ಕಾರಕ್ಕೆ ಆದಾಯ ಸುಮಾರು 314-315 ಕೋಟಿ ರೂಪಾಯಿ ಬರುತ್ತದೆ ಎಂದು ಹೇಳಿದ್ದಾರೆ, ಅದು ಇನ್ನೂ ಹೆಚ್ಚಾಗಿ ಬರುತ್ತದೆ ಎಂದು ನನ್ನ ಒಂದು ಅನಿಸಿಕೆ ಇದೆ. ಇದರಿಂದ

ನನಗೂ ಕೂಡಾ ಸಂತೋಷವಾಯಿತು 400 ಕೋಟಿ ರೂಪಾಯಿಗೂ ಹೆಚ್ಚಾಗಿ ಆದಾಯ ಬರತಕ್ಕಂಥದ್ದು ಇದೆ. ಆ ರೀತಿ ಬರುವುದಾದರೆ ನೀವು ಕೊಟ್ಟಿರುವ ಕಾಲಾವಧಿ ನಾಳೆಗೆ ಮುಗಿಯುತ್ತದೆ. ಆದ್ದರಿಂದ ತಾವು ತಕ್ಷಣ ಯಾರು ಬ್ಯಾಂಕ್ ಗ್ಯಾರಂಟಿಯನ್ನು ಕೊಡುವುದಿಲ್ಲವೋ ಆ ತಿಂಗಳೇ ನಡೆಸಿಬಿಡಬೇಕು ಎಂದು ಹೇಳಿ ಪೂರ್ತಿಯಾಗಿ ನಾಳೆ ಕೊಡುತ್ತೇವೆ ಬೆಳಿಗ್ಗೆ ಕೊಡುತ್ತೇವೆ, ಸಂಜೆ ಕೊಡುತ್ತೇವೆ ಎಂದು ಹೇಳಿ ಈ ತಿಂಗಳು ಪೂರ್ತಿಯಾಗಿ ಅದನ್ನು ಉಪಯೋಗಿಸಿ ಕೊಂಡು ಮುಂದಿನ ತಿಂಗಳ ಮರು ಹರಾಜಿಗೆ ತರಿಸಬೇಕು ಎನ್ನತಕ್ಕಂಥ ಒಂದು ವಿಚಾರವನ್ನು ತೀರ್ಮಾನ ಮಾಡಿಕೊಂಡಿದ್ದಾರೆ. ಈಗಾಗಲೇ ತಾವು 15 ದಿವಸದ ಸಮಯವನ್ನು ಕೊಟ್ಟಿದ್ದೀರಿ. 15 ದಿವಸ ಮುಗಿದಿದೆ. 15ನೇ ತಾರೀಖಿನೊಳಗೆ ಯಾರು ಕೊಡುವುದಿಲ್ಲವೋ, 16ನೇ ತಾರೀಖಿನ ದಿವಸ ತಾವು ಯಾವುದೇ ಮುಲಾಜನ್ನು ನೋಡದೆ ಬ್ಯಾಂಕ್ ಗ್ಯಾರಂಟಿಯನ್ನು ಕೊಡದಿದ್ದರೆ ಮರುಹರಾಜಿಗೆ ಏನು ಕ್ರಮವನ್ನು ತೆಗೆದುಕೊಳ್ಳುತ್ತೀರೋ ತೆಗೆದುಕೊಳ್ಳಿ. ಅದನ್ನು ತಮಗೇ ಬಿಡುತ್ತೇನೆ. ಅವರು ಸರ್ಕಾರಕ್ಕೆ ಮೋಸ ಮಾಡಬೇಕು ಎಂದು ಒಂದು ಪ್ರಯತ್ನವನ್ನು ನಡೆಸಿದ್ದಾರೆ. ಈ ರೀತಿಯ ಮೋಸಕ್ಕೆ ಅವಕಾಶವನ್ನು ಮಾಡಿಕೊಡಬೇಡಿ ಎಂದು ಹೇಳುವುದಕ್ಕೆ ಈ ಸಂದರ್ಭದಲ್ಲಿ ಇಚ್ಛಿಪಡುತ್ತೇನೆ, ಇವತ್ತು ನನಗೆ ಬಹಳ ಪ್ರಿಯವಾಗಿರತಕ್ಕಂಥ ಇಲಾಖೆ ಎಂದರೆ ನಮ್ಮ ಬಂಗಾರಪ್ಪನವರು ಇಲ್ಲ ಅವರಿಗೆ ಎರಡು ಪೋರ್ಟ್‌ಫೋಲಿಯೋಗಳು ಇದೆ. ಮಾನ್ಯ ಘೋರ್ಪಡೆಯವರು ಇರುವ ಕಾರಣ ಈ ರೂರಲ್ ಡೆವಲಪ್‌ಮೆಂಟ್‌ಗೆ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾನು ಬಹಳ ಸಂದರ್ಭದಲ್ಲಿ ನೋಡಿ ದ್ದೇನೆ.ಇಲ್ಲಿರತಕ್ಕಂಥ ಮಾನ್ಯ ಅನೇಕ ಸದಸ್ಯರುಗಳು ಈ ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿಯ ಬಗ್ಗೆ ತಮ್ಮದೇ ಆದಂಥ ಅನೇಕ ಒಕ್ಕಣೆಯನ್ನು ಕೊಡುತ್ತಿದ್ದಾರೆ. ನನಗೆ ಅನೇಕ ಸಂದರ್ಭಗಳಲ್ಲಿ ಆಶ್ಚರ್ಯ ಕೂಡ ಆಗುತ್ತದೆ. ಕಾರಣವೇನೆಂದರೆ ಮಂತ್ರಿಗಳು ಮಂತ್ರಿಗಳಲ್ಲಿಯೇ ಮಾತನಾಡುವಾಗ ಒಬ್ಬೊಬ್ಬರಿಗೆ ವ್ಯತ್ಯಾಸ ಕೂಡಾ ವ್ಯಕ್ತವಾಗಿದ್ದನ್ನು ನಾನೇ ಈ ಸದನದಲ್ಲಿ ನೋಡಿದ್ದೇನೆ. ತಾವು ಈ ಅಧಿಕಾರದ ವಿಕೇಂದ್ರಿಕರಣದಲ್ಲಿ ನಂಬಿಕೆ ಇಲ್ಲ ಎನ್ನುವುದಾದಿರೆ ಅದನ್ನು ಬಿಟ್ಟುಬಿಡಿ. ನಮಗೆ ಅಧಿಕಾರದ ವಿಕೇಂದ್ರಿಕರಣದ ನಂಬಿಕೆ ಇತ್ತು, ನಾವು ತೋಚಿದ ಮಟ್ಟಿಗೆ ಕಾನೂನನ್ನು ಜಾರಿಯಲ್ಲಿ ತಂದೆವು. ಈಗ ಕಾನೂನು ಜಾರಿಯಲ್ಲಿದೆ. ನಾವು ಅದೆಲ್ಲಾ ಪರಿಪೂರ್ಣವಾಗಿ ಸರಿಯಾಗಿದೆ ಎನ್ನತಕ್ಕಂಥದ್ದನ್ನು ನಾವು ಹೇಳುವುದಿಲ್ಲ. ಯಾರ್‍ಯಾರು ಯಾವುದೇ ಕಾನೂನನ್ನು ಮಾಡಿದರೂ ಒಂದಲ್ಲ ಒಂದು ರೀತಿಯಲ್ಲಿ ಅದು ಅಪಕ್ವ ಅಪರಿಪೂರ್ಣ ಅಲ್ಲದೇ ಇರತಕ್ಕಂಥದ್ದು ಎಂದು ಹೇಳುವುದಕ್ಕೆ ಖಂಡಿತಾ ಸಾಧ್ಯ ಇದೆ. ನಮ್ಮ ಸರ್ಕಾರ ಇದ್ದಂಥ ಕಾಲದಲ್ಲಿ ಇದ್ದಂಥ ಪರಿಸ್ಥಿತಿಯನ್ನು ಅನುಸರಿಸಿ ಅವತ್ತು ಕಾನೂನನ್ನು ತಂದಿದ್ದೆವು. ನಿಮಗೆ ನಂಬಿಕೆ ಇದ್ದರೆ ಈ ಅಧಿಕಾರದ ವಿಕೇಂದ್ರೀಕರಣದಲ್ಲಿ ನಿಜವಾಗಿ ನಂಬಿಕೆ ಇದ್ದರೆ ಏನೇನು ನಿಮಗೆ ಸರಿ ಇಲ್ಲ ಮತ್ತು ಜನರ ಹಿತದೃಷ್ಟಿಯಿಂದ, ಆಡಳಿತ ಪಕ್ಷ ಎನ್ನತಕ್ಕಂಥದ್ದು ಅಲ್ಲ, ಜನರ ಹಿತದೃಷ್ಟಿಯಿಂದ ಎಂದು ಹೇಳುವುದಾದರೆ ತಿದ್ದುಪಡಿಯನ್ನು ತನ್ನಿ. ಅದನ್ನು ಬಿಟ್ಟು ಈ ಜಿಲ್ಲಾ ಪರಿಷತ್ತಿನಲ್ಲಿ ಹಾಗೆ ಮಾಡಿದ್ದಾರೆ, ಮತ್ತೊಂದು ಜಿಲ್ಲಾ ಪರಿಷತ್ತಿನಲ್ಲಿ ಹೀಗೆ ಮಾಡಿದ್ದಾರೆ ಎಂದು ಹೇಳುವುದು ಸರಿಯಲ್ಲ. ಜಿಲ್ಲಾ ಪರಿಷತ್ತಿನ ಒಂದು ಕಾನೂನಿನ ಅಡಿಯಲ್ಲಿ ಕೆಲಸವನ್ನು ಮಾಡಬೇಕಾಗುತ್ತದೆ. ಆ ಕಾನೂನಿನ ಅಡಿಯಲ್ಲಿ ಕೆಲಸ ಮಾಡುವಾಗ ಕಾನೂನನ್ನು ಮುರಿಯತಕ್ಕಂಥವರ ಮೇಲೆ ಕ್ರಮ ತೆಗೆದು ಕೊಳ್ಳುವುದಕ್ಕೆ ಸರ್ಕಾರಕ್ಕೆ ಅಧಿಕಾರ ಇದೆ. ಅದನ್ನು ನಾನು ಇಲ್ಲವೆಂದು ಹೇಳುವುದಕ್ಕೆ ಹೋಗುವುದಿಲ್ಲ. ಸರ್ಕಾರ ಕಾನೂನು ಕ್ರಮ ತೆಗೆದುಕೊಳ್ಳಲಿ. ಅದನ್ನು ಬಿಟ್ಟು ಬಾಯಿಗೆ ಬಂದ ರೀತಿಯಲ್ಲಿ ಈ ಅಧಿಕಾರ ವಿಕೇಂದ್ರೀಕರಣವನ್ನು ತಾವು ತಮ್ಮದೇ ಆದ ರೀತಿಯಲ್ಲಿ ವರ್ತನೆಯನ್ನು ಕೊಡಲಿಕ್ಕೆ ಹೋದರೆ ಈ ಅಧಿಕಾರ ವಿಕೇಂದ್ರೀಕರಣಕ್ಕೆ ತಾವು ಮಾಡಿದ ಅಪಚಾರ ಆಗುತ್ತದೆ. ಈ ಕೆಲಸ ಮಾಡುವುದು ಬೇಡ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಕೆಲವು ಜಿಲ್ಲಾ ಪರಿಷತ್‌ಗಳಲ್ಲಿ ಎಲ್ಲವೂ ಕೂಡ ಸಮರ್ಪಕವಾಗಿ ಆಗಿದೆ, ಸರಿಯಾಗಿದೆ ಎಂದು ನಾನು ಹೇಳುವುದಿಲ್ಲ. ಈ ಸಮಾಜದಲ್ಲಿ ಎಲ್ಲರೂ ಕೂಡ ಹರಿಶ್ಚಂದ್ರರೇ ಆಗಿದ್ದರೆ ಈ ಕಾನೂನು ಬೇಕಾಗುವುದಿಲ್ಲ, ಮತ್ತೊಂದು ಬೇಕಾಗಿಲ್ಲ. ಮನುಷ್ಯರು ಇರುವ ಕಡೆ ಇಂಥಾದ್ದು ನಡೆಯುತ್ತದೆ.

ಆದರಿಂದ ಕೆಲವು ಜಿಲ್ಲಾ ಪರಿಷತ್‌ನಲ್ಲಿ ವ್ಯತ್ಯಾಸ ನಡೆದಿದೆ. ಅದು ಎಲ್ಲಾ ಸರಿಯೆಂದು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಎಲ್ಲಿ ತಪ್ಪು ಮಾಡಿದ್ದಾರೆ, ಎಲ್ಲಿ ಅಧಿಕಾರವನ್ನು ಮೀರಿ ಕ್ರಮವನ್ನು ತೆಗೆದುಕೊಂಡಿದ್ದಾರೆ, ವರ್ತನೆ ಮಾಡಿದ್ದಾರೆ, ಅಲ್ಲಿ ತಾವು ಕ್ರಮ ತೆಗೆದುಕೊಳ್ಳಬೇಕಾಗಿರತಕ್ಕದ್ದು ಇಂತಹವರ ಮೇಲೆ ಕ್ರಮ ತೆಗೆದುಕೊಳ್ಳುವ ಅವಶ್ಯಕತೆ ಇದೆ. ದಯಮಾಡಿ ತಾವು ಇದಕ್ಕೆ ಹಿಂದೇಟು ಹಾಕಬಾರದು. ಇಲ್ಲಿ ಆ ಪಕ್ಷದವರು ಇದ್ದಾರೆ, ಈ ಪಕ್ಷದವರು ಇದ್ದಾರೆ ಎಂದು ಪಕ್ಷದ ವಿಚಾರ ಇಲ್ಲಿ ಬೇಡ. ಆ ಪಕ್ಷ, ಈ ಪಕ್ಷ ಬೇಡ. ಯಾವ ಪಕ್ಷವೂ ಬೇಡ. ಜನರ ಹಿತದೃಷ್ಟಿಯಿಂದ ಎಲ್ಲಿ ತಪ್ಪು ಆಗಿದೆ, ಅಲ್ಲಿ ಕ್ರಮ ತೆಗೆದುಕೊಳ್ಳಬೇಕಾದದ್ದು ತಮ್ಮ ಕರ್ತವ್ಯ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಲ್ಯಾಂಡ್ ಆರ್ಮಿಕಾರ್ಪೋರೇಷನ್ ಕೂಡ ತಮಗೆ ಬರುತ್ತದೆ. ನಮ್ಮ ಜಿಲ್ಲಾ ಪರಿಷತ್‌ನಲ್ಲಿ ನಡೆದಿರತಕ್ಕ ಒಂದು ಘಟನೆಯನ್ನು ನಾನು ಈ ಸಂದರ್ಭದಲ್ಲಿ ಹೇಳಬೇಕಾದ ಅವಶ್ಯಕತೆ ಇದೆ. ಅವರು ಮಾಡಿರತಕ್ಕ ಕೆಲವು ಕೆಲಸಕಾರ್ಯಗಳಲ್ಲಿ ಬಹಳ ಕೆಳದರ್ಜೆಯಲ್ಲಿವೆ. ಅವರು ಗ್ರಾಮಾಂತರ ಪ್ರದೇಶದಲ್ಲಿ ಕಟ್ಟಿಸಿರತಕ್ಕ ಶೌಚಾಲಯಗಳು, ಮನೆಗಳು ಆಗಲಿ ಕೆಲವು ಕಡೆ ಮನೆಗಳು ಒದ್ದರೆ ಬಿದ್ದು ಹೋಗುತ್ತವೆ. ಈ ರೀತಿ ಕಟ್ಟಡಗಳನ್ನು ಕಟ್ಟಿದ್ದಾರೆ. ಮತ್ತೆ ಕೆಲವು ಕಡೆ ರಸ್ತೆಗಳನ್ನು ಕೂಡ ಮಾಡಿದ್ದಾರೆ, ಕೆಲವು ಕಟ್ಟಡಗಳ ಕೆಲಸ ಮಾಡಿದ್ದಾರೆ. ಅದು ಯಾವುದೂ ಕೂಡ ಯಾವ ಮಟ್ಟದಲ್ಲಿ ಅದರ ಗುಣಮಟ್ಟ ಇರಬೇಕೋ ಆ ಮಟ್ಟದಲ್ಲಿ ಇಲ್ಲ. ಆದ್ದರಿಂದ ಜಿಲ್ಲಾ ಪರಿಷತ್‌ನಲ್ಲಿ ಏನು ಮಾಡಿದರು, ಅಲ್ಲಿ ಒಂದು ಸಮಿತಿಯನ್ನು ರಚನೆ ಮಾಡಿ ಅದು ವಿಚಾರಣೆ ಮಾಡಬೇಕು, ಇದರ ಬಗ್ಗೆ ತನಿಖೆ ಮಾಡಬೇಕು ಎನ್ನತಕ್ಕದ್ದರ ಬಗ್ಗೆ ಕೋಲಾರ ಜಿಲ್ಲಾ ಪರಿಷತ್‌ನಲ್ಲಿ ಒಂದು ನಿರ್ಣಯವಾಯಿತು.

ಈ ಸಮಿತಿಯವರು ನಿಮ್ಮ ಲ್ಯಾಂಡ್ ಆರ್ಮಿ ಕಾರ್ಪೋರೇಷನ್‌ನಲ್ಲಿ ಏನು ನಡೆದಿದೆ, ಅಲ್ಲಿ ಎಷ್ಟು ದುಡ್ಡು ಖರ್ಚು ಆಯಿತು, ಏನು ಆಯಿತು ನಿಮ್ಮ ಲೆಕ್ಕ ಕೊಡಿ ಎಂದರೆ ಆ ಲೆಕ್ಕದ ಗೊಡವೆಗೇ ಹೋಗಲಿಲ್ಲ. ದಾಖಲೆಗಳನ್ನು ಕೊಡಿ ಎಂದರೆ ದಾಖಲೆಗಳನ್ನು ಕೊಡತಕ್ಕ ಗೋಜಿಗೂ ಹೋಗಲಿಲ್ಲ. ಕೊಟ್ಟಿರತಕ್ಕಂಥಾದ್ದು ಜಿಲ್ಲಾ ಪರಿಷತ್ ಹಣ. ಜಿಲ್ಲಾ ಪರಿಷತ್‌ನಿಂದ ಕೊಟ್ಟಂತಹ ಹಣ ಖರ್ಚು ಆಗಿದೆ. ಯಾವ ರೀತಿ ಖರ್ಚಾಗಿದೆ ಎಂದು ಜಿಲ್ಲಾ ಪರಿಷತ್‌ನವರು ತಿಳಿದುಕೊಳ್ಳಬೇಕಾಗಿದೆ. ಅಧಿಕಾರ ಅವರಿಗೆ ಇಲ್ಲವೇ, ದಯವಿಟ್ಟು ಯೋಚನೆ ಮಾಡಿ. ನಿಮ್ಮ ಲ್ಯಾಂಡ್ ಆರ್ಮಿ ಕಾರ್ಪೋರೇಷನ್ ಎಂದರೆ ಅದು ಸೂಪರ್ ಕಾರ್ಪೋರೇಷನ್ ಆಗಿ ಕೆಲಸ ಮಾಡುತ್ತಿದೆ. ನಾನು ಇಲ್ಲಿ ನಡೆದಿರತಕ್ಕದ್ದು ಎಲ್ಲಾ ಅಕ್ರಮ ಎಂದು ಕೂಡ ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಎಲ್ಲೆಲ್ಲಿ ಅಕ್ರಮ ನಡೆದಿದೆ ಆ ಅಕ್ರಮ ನಡೆದಿರುವ ಕಡೆ ಕೊನೆಯ ಪಕ್ಷ ಯಾರು ಹಣ ಕೊಡುತ್ತಾರೆ ಅವರಾದರೂ ತಿಳಿದುಕೊಳ್ಳಬೇಕು ಅಕ್ರಮ ನಡೆದಿದೆಯೇ ಅಥವಾ ಇಲ್ಲವೇ ಎಂದು. ಇದನ್ನು ತಿಳಿದುಕೊಳ್ಳಬೇಕಾದ ಅವಶ್ಯಕತೆ ಇದೆ. ಅದು ಇಲ್ಲ ಎಂದರೆ ಇದು ಯಾವ ಕಾನೂನು ಈ ಕಾನೂನು, ಈ ಲ್ಯಾಂಡ್ ಆರ್ಮಿ ಕಾರ್ಪೋರೇಷನ್ ಇದು ಯಾವ ದೇಶದಲ್ಲಿದೆ ಎಂದು ಅರ್ಥ ಆಗುತ್ತಾ ಇಲ್ಲ ಈ ರೀತಿಯಾದ ಉದ್ಧಟತನದ ವ್ಯವಹಾರ ಏನು ನಡೆಯುತ್ತಾ ಇವೆ. ಲ್ಯಾಂಡ್ ಆರ್ಮಿ ಕಾರ್ಪೋರೇಷನ್ ಕೋಲಾರ ಇರಬಹುದು ಅಥವಾ ಬೇರೆ ಕಡೆ ಇರಬಹುದು, ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ನಾನು ತಮ್ಮ ಮೂಲಕ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ವೈ. ಘೋರ್ಪಡೆ:- ಇದರ ಬಗ್ಗೆ ದೀರ್ಘವಾಗಿ ಚರ್ಚೆ ಮಾಡುವ ಅವಶ್ಯಕತೆ ಇಲ್ಲ. ಜಿಲ್ಲಾ ಪರಿಷತ್‌ನಲ್ಲಿ ಸರ್ಕಾರವು ಕೊಟ್ಟ ಹಣ ಖರ್ಚು ಆಗುತ್ತದೆ. ಲ್ಯಾಂಡ್ ಆರ್ಮಿ ಕಾರ್ಪೋರೇಷನ್ ಸಂಪೂರ್ಣವಾಗಿ ಅಕೌಂಟಬಲ್ ಇವೆ. ಅದರ ಬಗ್ಗೆ ಯಾವ ಮಾಹಿತಿ ಬೇಕು, ಅದನ್ನು ಕೊಡಿಸಲಿಕ್ಕೆ ನಾನು ವ್ಯವಸ್ಥೆ ಮಾಡುತ್ತೇನೆ.

ಶ್ರೀ ಸಿ.ಭೈರೇಗೌಡ:- ಧನ್ಯವಾದಗಳು ಎರಡು ವರ್ಷದಿಂದ ನಡೆಯುತ್ತಿದೆ. ಅಧಿಕಾರ ವಿಕೇಂದ್ರೀಕರಣಕ್ಕೆ ಸಂಬಂಧಪಟ್ಟ ಹಾಗೆ ಹೇಳುವುದಾದರೆ, ಒಬ್ಬ ಜನತಾ ಮನೆ ಹೌಸಿಂಗ್ ಸ್ಕೀಮ್‌ನಲ್ಲಿ ತೆಗೆದುಕೊಂಡರೆ ಈಗಲೂ ಕೂಡ ಕೌಂಟರ್ ಸಿಗ್ನೇಚರ್ ಬರಬೇಕಾದರೆ ಜಿಲ್ಲಾ ಪರಿಷತ್‌ಗೆ ಹೋಗಬೇಕು. ಮೊದಲು ಅಸಿಸ್ಟೆಂಟ್ ಕಮಿಷನರ್‌ರವರಿಗೆ ಅಧಿಕಾರ ಇತ್ತು.

ಸಬ್‌ಡಿವಿಷನ್ ಮಟ್ಟದಲ್ಲಿ ನಡೆಯುತ್ತಾ ಇತ್ತು. ಇವೊತ್ತು ಜಿಲ್ಲೆಯದು ಎಲ್ಲಾ ಕೂಡ ಡೆಪ್ಯೂಟಿ ಸೆಕ್ರಟರಿ ಡೆವಲಪ್‌ಮೆಂಟ್ ಇವರ ಹತ್ತಿರ ಬಂದು ರುಜು ಆಗಬೇಕು. ರುಜು ಆದರೆ ಬಡವನಿಗೆ ಮನೆ ಸಿಗುತ್ತದೆ. ಇಲ್ಲದಿದ್ದರೆ ಸಿಗುವುದಿಲ್ಲ. ಇದನ್ನು ಸರಳೀಕರಣಗೊಳಿಸಬೇಕಾಗಿರತಕ್ಕದ್ದು ಅವಶ್ಯಕತೆ ಇದೆ. ದಯವಿಟ್ಟು ಇದನ್ನು ಗಮನಿಸಬೇಕು ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಮಂಡಲ್ ಪಂಚಾಯತ್‌ಗಳ ಬಗ್ಗೆ ಅನೇಕ ಮಾನ್ಯ ಸ್ನೇಹಿತರು ಮಾತನಾಡಿದ್ದಾರೆ. ಈಗ ಅವರು ಮಾತನಾಡಿದ್ದುದು ನಿಜ. ಬರೀ ಜಿಲ್ಲಾ ಪರಿಷತ್ತಿನ ಸದಸ್ಯರನ್ನೇ ಅಲ್ಲ ಶಾಸಕರನ್ನು ಕರೆಯತಕ್ಕದ್ದು ಕಾನೂನಿನಲ್ಲಿಲ್ಲ. ಆದ್ದರಿಂದ ಅವರು ಕರೆಯುತ್ತಾ ಇಲ್ಲ. ಆದ್ದರಿಂದ ನಾನು ಮಂಡಲ ಪಂಚಾಯಿತಿ ಮೇಲೆ ದೋಷಾರೋಪಣೆ ಮಾಡುವುದಕ್ಕೆ ತಯಾರಿಲ್ಲ, ಅದೂ ಸ್ವಾಯತ್ತ ಸಂಸ್ಥೆ ನನ್ನ ದೃಷ್ಟಿಯಲ್ಲಿ. ಕಾನೂನಿನ ಚೌಕಟ್ಟಿನಲ್ಲೂ ಕೂಡ ಸ್ವಾಯತ್ತ ಸಂಸ್ಥೆ. ಅದರಲ್ಲಿ ಯಾವ ರೀತಿಯಾದಂಥ ಅವಕಾಶವನ್ನು ಮಾಡಿಕೊಡಬೇಕು ಎಂದು ಯೋಚನೆ ಮಾಡಿ. ಮಂಡಲ ಪಂಚಾಯಿತಿಯಲ್ಲಿ ಜಿಲ್ಲಾ ಪರಿಷತ್ ಸದಸ್ಯರು ಮತ್ತು ಶಾಸಕರು ಇಚ್ಛೆಪಟ್ಟಲ್ಲಿ ಭಾಗವಹಿಸುವುದಕ್ಕೆ ಅವಕಾಶ ಮಾಡಿಕೊಡಬೇಕು ಎಂದು ನಾನು ತಮ್ಮಲ್ಲಿ ವಿನಂತಿಸುತ್ತೇನೆ.

(ಶ್ರೀಮತಿ ರೇಣುಕಾರಾಜೇಂದ್ರನ್‌ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಚುನಾವಣೆಗೆ ಮೊದಲು ಪಂಚಾಯಿತಿ ರಾಜ್ಯ, ನಗರಪಾಲಿಕಾ ಬಿಲ್ ಎಂದು ದೊಡ್ಡ ಪ್ರಚಾರ ನಡೆಯುತ್ತಾ ಇತ್ತು, ಪ್ರತಿ ದಿವಸ ಟಿ.ವಿ ತಿರುಗಿಸಿದರೆ ಬರೀ ಅದೇ ಕೇಳಿಸುತ್ತಾ ಇತ್ತು. ನಾನು ಅದು ಏನೋ ಬಂದು ಬಿಡುತ್ತದೆ, ಆಕಾಶ ಭೂಮಿಗೆ ಬಂದು ಬಿಡುತ್ತದೆ ಎಂದು ಇದ್ದೆ. ಆದರೆ ಈಗ ಅದಕ್ಕೆ ತದ್ವಿರುದ್ಧವಾದ ಮಾತುಗಳನ್ನು ನಾವು ಕೇಳುತ್ತಾ ಇದ್ದೇವೆ. ನೀವು ಸ್ಪಷ್ಟಪಡಿಸಬೇಕು. ಅಧಿಕಾರ ವಿಕೇಂದ್ರೀಕರಣದಲ್ಲಿ ನಂಬಿಕೆ ಇದೆ ಅಥವಾ ಇಲ್ಲ, ನಂಬಿಕೆ ಇದ್ದರೆ ಈಗ ಏನು ನಡೆಯುತ್ತಾ ಇದೆ ಇದಕ್ಕೆ ಒಂದು ಗುಡ್‌ಬೈ ಹಾಕಬೇಕು ಎನ್ನುವ ಮಾತನ್ನು ಹೇಳಿ ಇಷ್ಟಕ್ಕೆ ಬಿಡುತ್ತೇನೆ. ಮಾನ್ಯ ವ್ಯವಸಾಯ ಮಂತ್ರಿಗಳು ಬರುತ್ತಾರೆಂದು ನಾನು ನಿರೀಕ್ಷೆ ಮಾಡಿದ್ದೆ, ಆದರೆ ಬಂದಿಲ್ಲ. ಆದರೂ ಕೂಡ ನಾನು ವ್ಯವಸಾಯ ಇಲಾಖೆ ಬಗ್ಗೆ ಒಬ್ಬ ರೈತನಾಗಿ ಹೇಳಬೇಕಾಗಿದೆ. ಸ್ವಾಮಿ, ಯಾವುದಾದರೂ ಒಂದು ಇಲಾಖೆಯನ್ನು ತಕ್ಷಣ ಮುಚ್ಚಬೇಕು ಎಂದು ಇದ್ದರೆ ಅದು ವ್ಯವಸಾಯ ಇಲಾಖೆ. ರೈತನಿಗೆ ಪ್ರಯೋಜನ ವಾಗುವುದಕ್ಕೆ ಬದಲಾಗಿ ರೈತರ ಹೆಸರಿನಲ್ಲಿ ಲೂಟಿ ಮಾಡತಕ್ಕಂಥ ಇಲಾಖೆ ಇದು ಎಂದು ನಾನು ಹೇಳಲೇಬೇಕಾಗಿದೆ. ಗ್ರಾಮಾಂತರ ಪ್ರದೇಶದಲ್ಲಿ ಗ್ರಾಮಸೇವಕರು ಎಂದು ಇದ್ದಾರೆ. ಈಗ ಅವರಿಗೆ ಅಗ್ರಿಕಲ್ಚರ್ ಅಸಿಸ್ಟೆಂಟ್ಸ್ ಎಂದು ಬೇರೆ ಹೆಸರನ್ನು ಕೊಟ್ಟಿದ್ದೀರಿ. ಸ್ವಾಮಿ, ಅವರು ಎಲ್ಲಿ ಇರಬೇಕಾಗಿರುವುದು ಅಂದರೆ ಗ್ರಾಮದಲ್ಲಿ. ಗ್ರಾಮಮಟ್ಟದಲ್ಲಿ ಅವರಿಗೆ ಮನೆ ಕೊಟ್ಟಿದ್ದಾರೆ. ವರ್ಲ್ಡ್ ಬ್ಯಾಂಕ್ ಸ್ಕೀಂ ಕೆಳಗಡೆ ಮನೆ ಕಟ್ಟಿದ್ದಾರೆ. ಆ ಮನೆಗಳಲ್ಲಿ ಇವತ್ತಿನ ದಿವಸ ಕತ್ತೆಗಳು ವಾಸ ಮಾಡುತ್ತಾ ಇವೆ. ಗ್ರಾಮಸೇವಕರಿಗೆ ಇಷ್ಟಿಷ್ಟು ಹಳ್ಳಿ ಎಂದು ಸರ್ಕಲ್ ವಿಂಗಡಿಸಿದ್ದೀರಿ. ಪ್ರತಿ ದಿವಸ ಅವರು ಇಂತಹ ಹಳ್ಳಿಗೆ ಹೋಗಬೇಕು ಎಂದು ಟೈಂ ಟೇಬಲ್ ಇದೆ ಅದರ ಪ್ರಕಾರ ಅವನು ಅಲ್ಲಿ ಹೋಗಬೇಕಾಗುತ್ತದೆ. ಇಷ್ಟು ರೈತರ ಸಂಪರ್ಕ ಬೆಳೆಸಬೇಕು ಎಂದು ಇದೆ. ಅವನು ಅಲ್ಲಿಗೆ ಹೋಗಬೇಕಾಗುತ್ತದೆ. ಇದರಲ್ಲಿ ನೂರಕ್ಕೆ 99 ಜನ ಗ್ರಾಮಸೇವಕರು ಕೆಲಸ ಮಾಡುತ್ತಾ ಇಲ್ಲ. ಇವರೆಲ್ಲ ಎಲ್ಲಿರುತ್ತಾರೆಂದರೆ ಅವರ ಸ್ವಂತ ಊರಿನಲ್ಲಿರುತ್ತಾರೆ ಅಥವಾ ತಾಲ್ಲೂಕು ಮುಖ್ಯ ಕೇಂದ್ರದಲ್ಲಿರುತ್ತಾರೆ. ಗ್ರಾಮಾಂತರ ಪ್ರದೇಶದಲ್ಲಿ ನೂರಕ್ಕೆ 99 ರಷ್ಟು ಜನ ವಾಸ ಮಾಡುತ್ತಾ ಇಲ್ಲ. ಅವರು ಸುಳ್ಳು ಸುಳ್ಳು ಡೈರಿ ಬರೆಯುತ್ತಾ ಇದ್ದಾರೆ, ಟಿ.ಎ.ಡಿ.ಎ. ಡ್ರಾ ಮಾಡುತ್ತಾ ಇದ್ದಾರೆ. ಇದು ರೈತರ ಹೆಸರಿನಲ್ಲಿ ಖರ್ಚಾಗತಕ್ಕಂಥ ದುಡ್ಡು. ನಾನು ಎಲ್ಲಿ ಬೇಕಾದರೂ ಸವಾಲು ಹಾಕಿ ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಇವರಿಂದ ಮೂರು ಕಾಸಿನ ಪ್ರಯೋಜನವಾಗುತ್ತಾ ಇಲ್ಲ. ಮತ್ತೆ ಅಗ್ರಿಕಲ್ಚರ್ ಎಕ್ಸಟೆನ್ಷನ್ ಆಫೀಸರನ್ನು ಬೇರೆ ಇಟ್ಟಿದ್ದೀರಿ. ಗ್ರಾಮಸೇವಕರ ಕೆಲಸವನ್ನು ನಾನು ಹೇಳಿದ್ದೇನೆ. ರೈತರ ಸಂಪರ್ಕ ಬೆಳೆಸಬೇಕು, ಹೊಸ ಬೀಜ ಯಾವುದು ಬಂದಿದೆ, ಹೊಸ ವಿಧಾನ ಯಾವುದು ಬಂದಿದೆ ಇದೆಲ್ಲ ರೈತರಿಗೆ ತಿಳುವಳಿಕೆ ಕೊಡಬೇಕು. ಇದೆಲ್ಲಾ ಇದೆ. ನನ್ನ ತಾಲ್ಲೂಕಿಗೆ ಬರುವುದಕ್ಕೆ ಯಾರಾದರೂ ತಯಾರಾಗಿದ್ದರೆ ಬನ್ನಿ ಇವತ್ತೇ ಹೋಗಿ ನೋಡೋಣ. ಇದು ಎಷ್ಟರಮಟ್ಟಿಗೆ ಜಾರಿಯಾಗಿದೆ ಎಂದು. ಅದಕ್ಕೆ ನಾನು ಹೇಳಿದ್ದುದು, ಇವತ್ತಿನ ದಿವಸ ನಾನು

ಸವಾಲು ಹಾಕುವುದಕ್ಕೆ ತಯಾರಿದ್ದೇನೆ. ನಡೆಯಿರಿ, ಹೋಗಿ ನೋಡೋಣ. ಇವತ್ತಿನ ದಿವಸ ಎಷ್ಟರಮಟ್ಟಿಗೆ ಜಾರಿಯಾಗಿದೆಯೆಂದು. ಏಕೆಂದರೆ, ಇದನ್ನು ನೋಡಿದರೆ ನನಗೆ ಹೊಟ್ಟೆ ಉರಿಯುತ್ತದೆ. ರೈತರ ಹೆಸರಿನಲ್ಲಿ ಇವರಿಗೆ 2000, 3000 ರೂಪಾಯಿ ಸಂಬಳ ಕೊಡುತ್ತೇವೆ. ಇವರು ತಾಲ್ಲೂಕು ಮುಖ್ಯ ಕೇಂದ್ರಗಳಲ್ಲಿ ಕುಳಿತುಕೊಂಡಿರುತ್ತಾರೆ. ರೈತರು ಇವರನ್ನು ನೋಡಬೇಕಾಗಿದ್ದರೆ ಬಾರ್‌ಗೆ ಹೋಗಬೇಕು, ಸಾರಾಯಿ ಅಂಗಡಿಗೆ ಹೋಗಬೇಕು. ಈ ಜನ ಬಾರ್‌ನಲ್ಲಿ ಸಿಗುತ್ತಾರೆ, ಸಾರಾಯಿ ಅಂಗಡಿಯಲ್ಲಿ ಸಿಗುತ್ತಾರೆ. ಆದ್ದರಿಂದ ಇವರು ಏಕೆ ಇರಬೇಕು ಎನ್ನುವ ಮಾತನ್ನು ನಾನು ಬಹಳ ಸಿಟ್ಟಿನಿಂದ, ವ್ಯಥೆಯಿಂದ ಹೇಳಬೇಕಾಗಿದೆ.

ಸ್ವಾಮಿ, ಮೇಲಿನ ಅಧಿಕಾರಿಗಳು ತಿಂಗಳಿಗೆ ಒಂದು ಸಾರಿ 30 ದಿನಗಳಿಗೆ ಒಂದು ಸಾರಿ ಬಂದು ಕೆಲಸ ಮಾಡಿದರೂ ಸಾಕು. ಒಂದು ದಿವಸ ಕೂಡ ಇವರು ಬರುವುದಿಲ್ಲ. ಹಳ್ಳಿಗೇ ಬರುವುದೇ ಇಲ್ಲ. ಕೆಲವರನ್ನು ಕರೆಸಿಕೊಳ್ಳುತ್ತಾರೆ. ಯಾವಾಗ ಸಬ್ಸಿಡಿ ಕೊಟ್ಟರೆ, ಸಬ್ಸಿಡಿ ಎಷ್ಟು ಅಲಾಟ್ ಮಾಡುತ್ತಾರೆ. ರೈತರಿಗೆ ನೇಗಿಲು ಕೊಡುವಾಗ ಗುದ್ದಲಿ ಕೊಡಬೇಕಾದಾಗ; ಸಲಿಕೆ ಕೊಡಬೇಕಾದಾಗ; ರೈತರ ಕಾಲು ಬೆರಳು, ಕೈಬೆರಳು ಹೆಬ್ಬೆಟ್ಟು ಒತ್ತಿಸಿಕೊಳ್ಳುತ್ತಾರೆ. ರೈತರಿಗೆ ಬೀಜಕೋಸ್ಕರ ಬಂದಂಥ ಕಡಲೆಕಾಯಿ ಮಿಲ್‌ಗೆ ಹೋಯಿತು, ಏತಕ್ಕೋಸ್ಕರ ಎಣ್ಣೆ ತೆಗೆಸು ವುದಕ್ಕೋಸ್ಕರ ಹೋಯಿತು. ರೈತರ ಹೆಸರಿನಲ್ಲಿ ನೂರಾರು ಕೋಟಿ ರೂಪಾಯಿಗಳು ಖರ್ಚಾಗುತ್ತಿದೆ. ಇನ್ನು ಸಾಯಿಲ್ ಕನ್ಸರ್‌ವೇಷನ್ ಇದು ಆಶ್ಚರ್ಯ ಅದ್ಭುತ; ಇದರಲ್ಲಿ ಅದ್ಭುತವನ್ನು ಸಾಧಿಸಿದ್ದಾರೆ.

ಶ್ರೀ ಜಿ.ಎಸ್. ಶಿವನಂಜಪ್ಪ:- ನಿಮಗೆ ಈಗ ಜ್ಞಾನೋದಯವಾಗಿದೆ.

ಶ್ರೀ ಸಿ. ಭೈರೇಗೌಡ:- ನಾನು ಜ್ಞಾನ ಇರತಕ್ಕ ಕೆಲಸಗಳನ್ನೇ ಮಾಡಿದ್ದೇನೆ. ಶಿವನಂಜಪ್ಪನವರೆ.

ಶ್ರೀ ಆರ್.ಎನ್. ನಾಯಕ್:- ಕೆಲವು ಸಲ ಒಪ್ಪಬೇಕಾಗುತ್ತದೆ. ನಿಮಗೆ ಸ್ವಲ್ಪ ಜ್ಞಾನೋದಯ ಮೊದಲೇ ಆಗಿತ್ತು. ನಿಮ್ಮ ಗುಂಪಿನ ಅನ್ಯಾಯವನ್ನು ಸಹಿಸುವುದಕ್ಕೆ ಸಾಧ್ಯವಾಗದೇ ಜ್ಞಾನೋದಯವಾಗಿದೆ.

ಶ್ರೀ ಹೆಚ್. ಏಕಾಂತಯ್ಯ:- ಆಮೇಲೆ ಹೇಳುತ್ತೇನೆ.

ಶ್ರೀ ಸಿ. ಭೈರೇಗೌಡ :- ನಾನು ಯಾವಾಗಲೂ ಜ್ಞಾನದಲ್ಲಿಯೇ ಇರುತ್ತೇನೆ. ಹೊಸದಾಗಿ ಜ್ಞಾನೋದಯ ಆಗಬೇಕಾದ ಅವಶ್ಯಕತೆ ಇಲ್ಲ. ಸ್ವಾಮಿ, ಸಾಯಿಲ್ ಕನ್ಸ್‌ರ್‌ವೇಷನ್ ಬಗ್ಗೆ ಸದನದ ಒಂದು ಸಮಿತಿ ಮಾಡಿ, ಹೋಗಿ ನೋಡೋಣ. ಇದರಲ್ಲಿ ನೂರಾರು ಕೋಟಿ ರೂಪಾಯಿಗಳು ರೈತರ ಹೆಸರಿನಲ್ಲಿ ಖರ್ಚಾಗಿದೆ. ರೈತರಿಗೆ ಒಂದು ರೂಪಾಯಿನಲ್ಲಿ ಒಂದು ನಯಾಪೈಸೆ ಸಿಕ್ಕಿದ್ದರೂ ನಾನು ಸಂತೋಷ ಪಡುತ್ತೇನೆ.

ಶ್ರೀ ಜಿ.ಎಸ್. ಶಿವನಂಜಪ್ಪ:- 6 ತಿಂಗಳಿಂದ ಈಚೆಗೆ ಖರ್ಚಾಗಿರುವುದೋ 1982 ರಿಂದಲೂ ಖರ್ಚಾಗಿರುವುದೋ. ನಾನು ಈ ವಿಚಾರದಲ್ಲಿ ಮಾತನಾಡಿದಾಗ ಯಾರೂ ಒಪ್ಪಲಿಲ್ಲ.

ಶ್ರೀ ಸಿ. ಭೈರೇಗೌಡ:- ಸ್ಥದಾಶಿವನಿಗೆ ಅದೇ ಧ್ಯಾನ, ಶಿವನಂಜಪ್ಪನವರು ಅಲ್ಲಿಯೇ ಇರಬೇಕು. ನಾನು ಆಗಲೇ ಹೇಳಿದೆ, ಜ್ಞಾನ ನನಗೆ ಇದೆ. ಜ್ಞಾನ ಉದಯವಾಗಬೇಕಾದ ಅವಶ್ಯಕತೆ ಇಲ್ಲ. ಎಲ್ಲಿದ್ದರೂ ನಾನು ಈ ಮಾತನ್ನು ಹೇಳುತ್ತೇನೆ. ರೈತರಿಗೆ ಇದರಿಂದ ಎಷ್ಟರಮಟ್ಟಿಗೆ ಪ್ರಯೋಜನವಾಗಿದೆ. ಇದರ ಬಗ್ಗೆ ನೋಡಬೇಕಾಗಿದೆ. ಏತಕ್ಕೆ ಬೇಕು. ಸಾಯಿಲ್ ಕನ್ಸ್‌ರವೇಷನ್ ರೈತರಿಗೆ ಬೇಕು. ಭೂಮಿಯಲ್ಲಿನ ನೀರನ್ನು ಹಿಡಿದು ಇಟ್ಟಿರುತ್ತದೆ. ಬೆಳೆ ಕಾಪಾಡುತ್ತದೆ. ರೈತರ ಹೆಸರಿನಲ್ಲಿ ನೂರಾರು ಕೋಟಿ ಲೂಟಿ ವ್ಯವಸಾಯ ಇಲಾಖೆಯಲ್ಲಿ ನಡೆದಿದೆ. ಮೊದಲು ಈ ಇಲಾಖೆಯಲ್ಲಿ ಲಂಚ ಇರಲಿಲ್ಲ. ನಾನು ರೈತನಾಗಿರುವುದರಿಂದ ಈ ಮಾತನ್ನು ಹೇಳುತ್ತಿದ್ದೇನೆ. ಮೊದಲು ಅನೇಕ ಜನ ಅಧಿಕಾರಿಗಳು ಹೆಗಲ ಮೇಲೆ ಗೊಬ್ಬರ ಹೊತ್ತುಕೊಂಡು ಬಂದು, ರೈತರಿಗೆ ಕೊಟ್ಟಿದ್ದನ್ನು ನಾನು ನೋಡಿದ್ದೇನೆ. ಇವತ್ತು ಗೊಬ್ಬರ ಕೈಯಲ್ಲಿ ಕೂಡ ಮುಟ್ಟುತ್ತಿಲ್ಲ. ರೈತರಿಗೆ ಕೊಡುವಂಥ ಸಲಕರಣೆಗಳು ಮುಟ್ಟುತ್ತಿಲ್ಲ. ನಾನು ರೈತನಾಗಿ ವ್ಯಥೆಯಿಂದ ಹೇಳುವುದರ ಜೊತೆಗೆ ಅಷ್ಟೇ ಸಿಟ್ಟಿನಿಂದ ಈ ಮಾತನ್ನು ಹೇಳುತ್ತಿದ್ದೇನೆ. ಯಾವುದಾದರೂ ಇಲಾಖೆ ಮುಚ್ಚಬೇಕಾಗಿದ್ದಾರೆ, ಮೊದಲು ವ್ಯವಸಾಯ ಇಲಾಖೆಯನ್ನು ಮುಚ್ಚಬೇಕು ಮೂರು ಕಾಸಿನ ಪ್ರಯೋಜನ ಇಲ್ಲ..

ಇವೊತ್ತಿನ ದಿವಸ ನೂರಾರು ಕೋಟಿ ರೂಪಾಯಿಗಳನ್ನು ರೈತರ ಹೆಸರಿನಲ್ಲಿ ಖರ್ಚುಮಾಡುತ್ತಿದ್ದಾರೆ. ಇದನ್ನು ತಿಳಿದು ಕೊಳ್ಳಬೇಕಾಗಿದ್ದರೆ ಈ ಸದನದ ಸಮಿತಿಯಾಗಬೇಕು. ವಾಸ್ತವಾಂಶವನ್ನು ಸ್ಥಳಕ್ಕೆ ಹೋಗಿ ನೋಡಬೇಕು. ಅಧಿಕಾರಿಗಳಂತೂ ಹೋಗುವುದಿಲ್ಲ. ಅವರ ವ್ಯವಸಾಯವೆಲ್ಲಾ ಬೆಂಗಳೂರಿನಲ್ಲಿ ನಡೆಯುತ್ತದೆ. ಅವರು ಬೆಂಗಳೂರಿನಲ್ಲಿಯೇ ವ್ಯವಸಾಯ ಮಾಡುತ್ತಾರೆ. ಈ ಬೆಂಗಳೂರು ವ್ಯವಸಾಯಗಾರರ ಬಂಡವಾಳವನ್ನು ಬಿಚ್ಚಬೇಕಾದರೆ ನಾವು ಜನತೆಯಿಂದ ಬಂದಿರತಕ್ಕ ನಾವು ಹೋಗೋಣ ಹಳ್ಳಿಗೆ ಅಲ್ಲೇನಾಗಿದೆ ಎಂದು ನೋಡೋಣ. ಈ ಅನ್ಯಾಯವನ್ನು ಎಷ್ಟು ದಿವಸ ತಡೆಗಟ್ಟಲಿಕ್ಕೆ ಸಾಧ್ಯ ಇದೆ. ಈ ಅಕ್ರಮವನ್ನು ಎಷ್ಟು ದಿವಸ ತಡೆದು ಕೊಂಡು ಸುಮ್ಮನೆ ಕುಳಿತುಕೊಳ್ಳುವುದಕ್ಕೆ ಸಾಧ್ಯ ಇದೆ. ನಾನು ಸರ್ಕಾರಕ್ಕೆ ವಿನಂತಿ ಮಾಡುತ್ತೇನೆ. ಈ ಸದನದ ಒಂದು ಸಮಿತಿಯನ್ನು ರಚನೆ ಮಾಡಿ, ವ್ಯವಸಾಯ ಇಲಾಖೆಯಲ್ಲಿ ಆಗಿರತಕ್ಕಂತ ಖರ್ಚು ರೈತನಿಗೆ ಎಷ್ಟರಮಟ್ಟಿಗೆ ಮುಟ್ಟುತ್ತಿದೆಯೇ ಕೇಳೋಣ, ಅದು ಗೊತ್ತಾಗಬೇಕಾದದ್ದು ಅವಶ್ಯಕತೆ ಇದೆ. ಈಗ ಒಣಪ್ರದೇಶದಿಂದ ಬಂದಿರತಕ್ಕವನು ನಾನು ಇಲ್ಲಿ ಹೇಳಬೇಕೆಂದರೆ, ಡಾ. ಲಕ್ಷ್ಮಣಯ್ಯನವರನ್ನು ನಾವು ನೆನಸಿಕೊಳ್ಳಬೇಕು. ಲಕ್ಷ್ಮಣಯ್ಯನವರಿಂದ ಇವೊತ್ತಿನ ದಿವಸ ಕೋಟ್ಯಾಂತರ ಜನರು ಹಿಟ್ಟು ತಿನ್ನುತ್ತಿದ್ದಾರೆ. ಇಂಡಾಲ್ಟ್‌ರಾಗಿ ಬಂದಮೇಲೆ ಅವರ ಹೆಸರು ಹೇಳಿಕೊಂಡು ಮಧ್ಯಾಹ್ನ, ಸಾಯಂಕಾಲ ಪ್ರತಿ ತುತ್ತು ತಿನ್ನುವಾಗ ಅವರ ಹೆಸರನ್ನು ನೆನಸಿಕೊಂಡು ತಿನ್ನುತ್ತಿದ್ದೇನೆ. ಅದೇ ರೀತಿ ಕಾತರ್ಕಿ ಅವರ ಹೆಸರನ್ನು ನೆನಸಿಕೊಳ್ಳುವುದು ಅವಶ್ಯಕತೆ ಇದೆ. ಈ ಇಬ್ಬರನ್ನು ಬಿಟ್ಟರೆ ವಿಶ್ವವಿದ್ಯಾನಿಲಯದಿಂದ ರೈತರಿಗೆ ಕೊಡುಗೆ ಏನು? ಸಾಮಾನ್ಯ ಜನ ಉಪಯೋಗಿಸತಕ್ಕ ಮುಟ್ಟುಗಳು ಇದೆ, ಕುಡುಗೋಲು ಇದೆ, ಅಲ್ಲಿರತಕ್ಕ ವಿಜ್ಞಾನಿಗಳನ್ನು ಕೇಳಿದೆ ಸ್ವಾಮಿ ಸಾಮಾನ್ಯ ಜನರು ಉಪಯೋಗ ಮಾಡತಕ್ಕಂಥ ಕುಡುಗೋಲು, ಸಲಿಕೆ, ಗುದ್ದಲಿ, ಹಾರೆ, ಹಲಬೆ, ಕೂರಿಗೆ, ಇವುಗಳನ್ನು ಇಲಾಖೆಯವರು ಕೊಟ್ಟಿದ್ದಾರೆ ಸಾಲು ಬಿತ್ತನೆ ಮಾಡಬೇಕೆಂದು ಹೇಳಿದ್ದಾರೆ, ನಾನೇ ಒಂದು ಸಾರಿ ಕೂರಿಗೆಯನ್ನೊದಲಯಲಿಕ್ಕೆ ಹೋದೆ ಅದು ಮುರಿದು ಚೂರು ಚೂರು ಆಯಿತು ಈ ರೀತಿ ಕೆಲಸಕ್ಕೆ ಬಾರದೇ ಇರತಕ್ಕಂಥ ವ್ಯವಸಾಯ ಮುಟ್ಟುಗಳನ್ನು ಇವರು ಕೊಟ್ಟಿರತಕ್ಕಂಥದ್ದು ಇದೆ. ನಾನು ದೊಡ್ಡ ದೊಡ್ಡ ರೈತರ ವಿಚಾರ ಮಾತನಾಡಲಿಕ್ಕೆ ತಯಾರಿಲ್ಲ. ಸಾಮಾನ್ಯ ರೈತರಿಗೆ ಏನು ಕೊಟ್ಟಿದ್ದೀರಿ, ತಲೆತಲಾಂತರದಿಂದ, ಯಾವುದೇ ಕಾಲದಿಂದಲೂ ಮಾಡಿರತಕ್ಕಂಥ ಗುದ್ದಲಿ, ಅದು ಸರಿಯಿದೆಯೋ ಇಲ್ಲವೋ ಗೊತ್ತಿಲ್ಲ. ಯಾರು ಕುಲುಮೆ ಇಟ್ಟಿರ ತಕ್ಕವರು, ಯಾರೋ ಮಾಡಿರತಕ್ಕ ಗುದ್ದಲಿ ಸಲಿಕೆ ಕೂಡ ಅಷ್ಟೆ ಉಪಯೋಗಿಸತಕ್ಕಂತಾದ್ದು ಯಾವುದು ಸಣ್ಣ ಮುಟ್ಟುಗಳು ಇದೆ ಇವುಗಳ ಬಗ್ಗೆ ಚಕಾರ ಎತ್ತಲಿಕ್ಕೆ ಸಾಧ್ಯವಿಲ್ಲ. ವಿಶ್ವವಿದ್ಯಾನಿಲಯದಲ್ಲಿ ಈ ಮುಟ್ಟುಗಳ ಬಗ್ಗೆ ಯಾವುದೇ ರಿಸರ್ಚ್ ಆಗಲಿ ಏನೇ ಮಾಡದೇ ಇರುವ ಪರಿಸ್ಥಿತಿಗೆ ಬಂದಿದ್ದೇವೆ. ಆದ್ದರಿಂದ ಇದು ಪ್ರಯೋಜನ ಇಲ್ಲದೇ ಇರತಕ್ಕದ್ದು, ಇಂದು ನಮ್ಮ ವ್ಯವಸಾಯಗಾರರೆಲ್ಲಾ ಬೆಂಗಳೂರಿನಲ್ಲಿಯೇ ಸೇರಿಬಿಟ್ಟಿದ್ದಾರೆ. ಅವರಿಗೆ ಹೊಲ, ಗದ್ದೆ ಎಲ್ಲಾ ಇಲ್ಲೇ ಇದೆ. ಅಗ್ರಿಕಲ್ಚರ್ ಯೂನಿವರ್ಸಿಟಿಯಲ್ಲೂ ಅದೇ ಪರಿಸ್ಥಿತಿ ಆಗಿದೆ. ದೂರ ಇರತಕ್ಕಂಥ ರಿಸರ್ಚ್ ಸ್ಟೇಷನ್‌ನಲ್ಲಿ ಏನು ಆಗುತ್ತಿದೆ ಅದೆಲ್ಲಾ ಲೆಕ್ಕ ಕೊಡಬೇಕು. ಅಲ್ಲಿರತಕ್ಕ ರಿಸರ್ಚ್ ಸ್ಟೇಷನ್‌ನಲ್ಲಿ ಯಾರೂ ಕೂಡ ಹೋಗಲಿಕ್ಕೆ ತಯಾರಿಲ್ಲ. ನಾನು ಒಂದು ಸಾರಿ ಐಸಿಆರ್ ನಿಂದ ಒಂದು ಸಭೆಗೆ ಹೋಗಿದ್ದೆ. ಅಲ್ಲಿ ಡೈರೆಕ್ಟರ್ ಜನರಲ್ ಬಂದಿದ್ದರು, ನಮ್ಮ ವಿಶ್ವವಿದ್ಯಾನಿಲಯದ ವೈಸ್‌ಛಾನ್ಸ್‌ಲರನ್ನು ದಬಾಯಿಸುತ್ತಿದ್ದರು ಏತಕ್ಕೆ ಈ ರೀತಿ ಕೆಲಸ ಆಗಿಲ್ಲ ಎಂದು ಹೇಳುತ್ತಿದ್ದರು, ನಾನು ಮಂತ್ರಿಯಾಗಿದ್ದಂಥ ಸಂದರ್ಭದಲ್ಲಿ ನಾನು ಮೀನುಗಾರಿಕೆ ಬಗ್ಗೆ ಹೋಗಿದ್ದೆ. ಈ ರೀತಿ ಏತಕ್ಕೆ ಆಗಿಲ್ಲ ಎಂದು ನನ್ನ ಎದುರಿಗೆ ಉಪಕುಲಪತಿಯವರನ್ನು ಕೇಳುತ್ತಿದ್ದರು. ನಾನು ಅವರನ್ನು ಕರೆದು ಏನು ಇದೆಲ್ಲಾ ಎಂದು ಕೇಳಿದಾಗ ಅವರು ಏನು ಸಾರ್ ಪೋಸ್ಟ್ ಮಾಡಿದರೆ ಅಲ್ಲಿಗೆ ಯಾರೂ ಹೋಗುವುದಿಲ್ಲ ನಾವೇನು ಮಾಡೋಣ ಎಂದು ಹೇಳಿದರು ಜನರಿಗೆ ಅನುಕೂಲ ಆಗಬೇಕಾದ್ದು ಆಗಬೇಕು ಈಗ ಜನರಿಗೆ ಅನುಕೂಲ ಆಗಬೇಕಾಗಿರತಕ್ಕ ರಿಸರ್ಚ್ ಎಲ್ಲಾ ಬೆಂಗಳೂರಿನಲ್ಲಿಯೇ ಆಗಬೇಕು. ಹೆಬ್ಬಾಳ ಕ್ಯಾಂಪಸ್‌ನಲ್ಲಿ ಆಗಬೇಕು ಇದು ಒಂದೇ ಜಾಗ ಅವರಿಗೆ ಅವರಿಗೆ ಇರುವುದು. ಇದು ಒಂದು ಸ್ವರ್ಗ ಅವರಿಗೆ. ಬೇರೆ ಹಳ್ಳಿಗಳ ಕಡೆ ರಿಸರ್ಚ್ ಸ್ಟೇಷನ್ ಹೋದರೆ ಈ ಅಧಿಕಾರಿಗಳ ದೃಷ್ಟಿಯಿಂದ ಅದು ನರಕವಾಗಿದೆ. ಆ ನರಕಕ್ಕೆ ಯಾರೂ ಹೋಗುವುದಕ್ಕೆ

ತಯಾರಿಲ್ಲ ಇದು ಬಹಳ ದುರಾದೃಷ್ಟದ ಪರಿಸ್ಥಿತಿ. ನಾವು ಹೇಳಬಹುದಾಗಿದೆ. ರೈತ ಇವತ್ತು ಯಾವ ಪರಿಸ್ಥಿತಿಯಲ್ಲಿದ್ದಾನೆಂಬುದನ್ನು ನಾವು ಅರ್ಥ ಮಾಡಿಕೊಳ್ಳಬೇಕಾಗಿದೆ. 5-6 ಸಾವಿರ ಸಂಬಳ ತೆಗೆದುಕೊಳ್ಳತಕ್ಕಂತಹ ಪ್ರೊಫೆಸರ್ಸ್ ಅಸಿಸ್ಟೆಂಟ್ ಪ್ರೊಫೆಸರ್ಸ್ ಎಲ್ಲಾ ಇದ್ದಾರೆ ಇವರು ಏತಕ್ಕೆ ಇದ್ದಾರೆಂದು ಕೇಳಬೇಕಾಗಿದೆ. ಈ ಒಂದು ಪರಿಪಾಠ ಏನು ಇದೆ ಇದನ್ನು ಮುರಿಯತಕ್ಕಂತಹ ವಿಚಾರದಲ್ಲಿ ಗಮನ ಹರಿಸಬೇಕಾಗಿದೆ. ರೈತರ ಬಗ್ಗೆ ಮತ್ತೊಂದು ವಿಚಾರವನ್ನು ಹೇಳಬೇಕಾಗಿದೆ. ವರ್ಷವರ್ಷನಾವು ರಾಷ್ಟ್ರಮಟ್ಟದಲ್ಲಿ ರಾಜ್ಯ ಮಟ್ಟದಲ್ಲಿ ಬಹಳ ಜನರಿಗೆ ಬಹುಮಾನಗಳನ್ನು ಪ್ರಶಸ್ತಿಗಳನ್ನು ಅಂದರೆ ಭಾರತ ರತ್ನ ಹಾಗೂ ಇನ್ನಿತರ ಪ್ರಶಸ್ತಿಗಳನ್ನು ಕೊಡುತ್ತಿದ್ದಾರೆ. ಚಿತ್ರ ರಂಗದಲ್ಲಿ ಕೆಲಸ ಮಾಡುತ್ತಿರತಕ್ಕಂತಹವರಿಗೆ ಉತ್ತಮ ಚಿತ್ರಗಳನ್ನು ತೆಗೆದಂತಹವರಿಗೆ, ಉತ್ತಮ ನಟರಿಗೆಂದು ಪ್ರಶಸ್ತಿಗಳನ್ನು ಕೊಡುತ್ತಿದ್ದೇವೆ. ಇದರ ಜೊತೆಗೆ ನೃತ್ಯ ಗ್ರಾಮ ಎಂದು ಬೇರೆ ಇಲ್ಲಿ ಆಗಿದೆ. ಇದು ಯಾವ ದೇಶವನ್ನು ಉದ್ಧಾರ ಮಾಡುವುದಕ್ಕೋ ಗೊತ್ತಿಲ್ಲ. ಒಂದು ದೊಡ್ಡ ಏರ್ಪಾಡು ನಡೆದಿದೆ. ಎಂತಹವರಿಗೆ ಪ್ರೋತ್ಸಾಹ ಸಿಕ್ಕುತ್ತದೆ ಎಂತಹವರು ಏನು ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ ಆದರೆ ಯಾವತ್ತಾದರೂ ಒಬ್ಬ ರೈತನನ್ನು ಕರೆದು ಎಲ್ಲಿಯಾದರೂ ಒಂದು ಹೂಮಾಲೆ ಹಾಕಿರತಕ್ಕಂಥಹ ಪದ್ಧತಿ ಇದೆಯೇ?ರೈತ ಈ ದೇಶಕ್ಕೆ ಮಾಡಿರತಕ್ಕಂತಹ ಪಾಪವಾದರೂ ಏನು ಅನ್ನ ಬಟ್ಟೆಯನ್ನು ನಮಗೆ ಕೊಟ್ಟಿರತಕ್ಕಂಥದ್ದು ತಪ್ಪೇ? ಒಬ್ಬ ರೈತನನ್ನು ಒಂದು ಕಡೆಯಾದರೂ ಹೂಮಾಲೆ ಹಾಕಿರತಕ್ಕಂಥ ನಿದರ್ಶನ ಎಲ್ಲಿಯಾದರೂ ಇದ್ದರೆ ನನಗೆ ಹೇಳಿ ಈ ಬೇಧ ಭಾವವನ್ನು ಏಕೆ ಮಾಡುತ್ತಿದ್ದೀರಿ? ಯಾವ ರೈತ ವರ್ಷದಲ್ಲಿ ಅತಿ ಉನ್ನತವಾದಂತಹ ಬೆಳೆಯನ್ನು ಬೆಳೆದಿದ್ದಾನೆ ಅದು ಯಾವುದೇ ಬೆಳೆಯಾಗಿರಬಹುದು ಹೆಚ್ಚಿನ ಉತ್ಪಾದನೆ ಮಾಡತಕ್ಕಂತಹ ರೈತನಿಗೆ ಏನು ಸಿಕ್ಕಿದೆ ಎಂದು ನಾವು ನಮ್ಮಲ್ಲಿ ಪ್ರಶ್ನೆ ಮಾಡಿಕೊಳ್ಳಬೇಕಾಗಿದೆ. ನಾನು ಹಿಂದೆಯೂ ಕೂಡ ಒಂದು ಮಾತನ್ನು ಹೇಳಿದ್ದೆ ಈಗಲೂ ಅದನ್ನೇ ಹೇಳುತ್ತೇನೆ. ಯಾವ ರೀತಿಯಲ್ಲಿ ಪ್ರಪಂಚ ಮಟ್ಟದಲ್ಲಿ ನೋಬೆಲ್ ಪ್ರಶಸ್ತಿಯನ್ನು ಕೊಡತಕ್ಕಂತಹ ಪರಿಪಾಠ ಇದೆ ಅದೇ ಆಧಾರದ ಮೇಲೆ ರಾಷ್ಟ್ರ ಮಟ್ಟದಲ್ಲಿ ಕೊಡದಿದ್ದರೂ ಸಹ ರಾಜ್ಯ ಮಟ್ಟದಲ್ಲಿಯಾದರೂ ಕೂಡ ಇದಕ್ಕೆ ಅವಕಾಶ ಮಾಡಿಕೊಡಬೇಕು. ಕೆಲವು ಅಪಾರ ಬೆಳೆಗಳ ಇಳುವರಿಯನ್ನು ಪ್ರತಿ ವರ್ಷ ಯಾವ ರೈತ ಹೆಚ್ಚು ಉತ್ಪಾದನೆ ಮಾಡುತ್ತಾನೆ ಅವರಿಗೆ ಆ ರೈತನನ್ನು ಸನ್ಮಾನಿಸತಕ್ಕಂತಹ ಪರಿಪಾಠವನ್ನು ಇಲ್ಲಿ ನಾವು ಇಟ್ಟುಕೊಳ್ಳಬೇಕು. ಅತಿ ಉನ್ನತವಾದಂತಹ ಇಳುವರಿಯನ್ನು ಸಾಧಿಸಿದಂತಹ ಈ ರೈತನಿಗೆ ಕನಿಷ್ಟ 5 ಲಕ್ಷ ರೂಪಾಯಿ ಬಹುಮಾನವನ್ನಾದರೂ ಕೊಡಬೇಕು. ನೋಬೆಲ್ ಪ್ರಶಸ್ತಿಗಿಂತಲೂ ಈ ಪ್ರಶಸ್ತಿಯಾವ ವಿಧದಲ್ಲೂ ಕಡಿಮೆ ಇರಬಾರದು. ಇದು ರೈತನಿಗೆ ಮಾತ್ರ ಸಿಗತಕ್ಕಂತಹ ಬಹುಮಾನ ಮಾತ್ರ ಅಲ್ಲ ಇಡೀ ರೈತ ವರ್ಗಕ್ಕೆ ಸಿಗತಕ್ಕಂತಹ ಬಹುಮಾನ ಅವರನ್ನು ಗುರುತಿಸಿದ ಹಾಗಾಗುತ್ತದೆ. ಇದಕ್ಕೆ ಒಂದು ಟ್ರಸ್ಟ್ ಮಾಡಿ ಸರಕಾರ ಇದಕ್ಕೆ ಹಣ ಕೊಡಬೇಕಾಗಿಲ್ಲ. ರೈತನ ಹೆಸರಲ್ಲಿ ಕೋಟ್ಯಾಂತರ ರೂಪಾಯಿ ಲಾಭ ಮಾಡುತ್ತಾ ಇರತಕ್ಕಂಥ ಗೊಬ್ಬರದ ಕಂಪನಿಗಳು, ಔಷಧಿಗಳ ಕಂಪನಿಗಳು, ಮರ ಮುಟ್ಟುಗಳನ್ನು ಟ್ರ್ಯಾಕ್ಟರ್ಸ್‌ಗಳನ್ನು ತಯಾರು ಮಾಡತಕ್ಕಂತಹ ಕಂಪನಿಗಳು ಏನು ಇವೆ ಇವರನ್ನು ಕೇಳಿ ಹಣವನ್ನು ಪಡೆದುಕೊಂಡು ಒಂದು ಟ್ರಸ್ಟ್ ಎಂದು ರಿಜಿಸ್ಟರ್ ಮಾಡಿ 5-10 ಕೋಟಿ ರೂಪಾಯಿಯನ್ನು ಅದರಲ್ಲಿ ಇಟ್ಟರೆ ಇದು ಸಾರೋದ್ಧಾರವಾಗಿ ನಡೆದುಕೊಂಡು ಹೋಗುತ್ತದೆ. ಯಾವ ರೀತಿ ನೋಬೆಲ್ ಪ್ರಶಸ್ತಿಗೆಂದು ಟ್ರಸ್ಟ್ ಮಾಡಿ ಇಡುತ್ತೀರೋ ಅದೇ ರೀತಿಯಲ್ಲಿ ಇದಕ್ಕೆ ಒಂದು ಟ್ರಸ್ಟ್ ಎಂದು ರಚನೆ ಮಾಡಿ. ಭಾರತ ದೇಶದಲ್ಲಿ ಇಂತಹ ಕೆಲಸ ಎಲ್ಲೂ ನಡೆಯದಿದ್ದರೂ ಕೂಡ ಪ್ರಪ್ರಥಮವಾಗಿ ಕರ್ನಾಟಕದಲ್ಲಿ ಇದನ್ನು ಮಾಡಿ, ಇದು ಇಲ್ಲಿ ಮಹತ್ವದ ಪಾತ್ರವನ್ನು ವಹಿಸಬೇಕು. ರಾಷ್ಟ್ರವನ್ನು ಕಣ್ಣು ತೆರೆಸತಕ್ಕಂತಹ ರೀತಿಯಲ್ಲಿ ಕೆಲಸ ಮಾಡುವುದಕ್ಕೆ ಸಾಧ್ಯವಿದೆ. ಈ ಟ್ರಸ್ಟಿನಿಂದ ರೈತನು ಗೌರವಿಸಬೇಕು ಅವತ್ತಿನ ದಿವಸ ರೈತ ಬರುತ್ತಾನೆಂದು ಹೇಳಿದರೆ ಮಾನ್ಯ ಮುಖ್ಯ ಮಂತ್ರಿಗಳು ಅಲ್ಲಿದ್ದು ಲಕ್ಷಾಂತರ ಜನ ರೈತರನ್ನು ಸಾರ್ವಜನಿಕರನ್ನು ವಿಧಾನ ಸೌಧದ ಹೊರಗಡೆ ಸೇರಿಸಿ ಸನ್ಮಾನಿಸಬೇಕು. ಆ ರೈತರನ್ನು ಆಹ್ವಾನಿಸುವುದಕ್ಕೆ ಸ್ವತಃ ಮಾನ್ಯ ಮುಖ್ಯ ಮಂತ್ರಿಗಳು ಹೋಗಬೇಕು ಬೆಂಗಳೂರು ನಗರದ ಗಡಿಯಲ್ಲಿ ಅವರು ಹೋಗಿ ರೈತರಿಗೋಸ್ಕರ ಕಾಯಬೇಕು ಅವರನ್ನು ಗೌರವಯುತವಾಗಿ ಕರೆತಂದು ಇಡೀ ದೇಶದ ಜನ ಆ ರೈತನನ್ನು ಕಣ್ಣು ತುಂಬಾ ನೋಡಬೇಕು ಆ ರೀತಿಯಾದಂತಹ ಒಂದು

ಗೌರವ ಅತಿ ಹೆಚ್ಚು ಇಳುವರಿ ಬೆಳೆಯನ್ನು ಬೆಳೆದಂತಹ ರೈತನಿಗೆ ಸಿಗಬೇಕು. ಇನ್ನು ಲಕ್ಷ್ಮಣಯ್ಯನವರನ್ನು ನೆನೆದರೆ ನನ್ನ ಕಣ್ಣಿನಲ್ಲಿ ನೀರು ಬರುತ್ತದೆ. ಅವರು ನಮಗೆ ಅನ್ನ ಕೊಟ್ಟಂತಹವರು. ಅವರು ಇವತ್ತು ಎಂತಹ ಪಾಡು ಪಡುತ್ತಿದ್ದಾರೆ ಎಂದರೆ ಅವರು ನಿವೃತ್ತಿಯಾದಾಗ 4 ಎಕರೆ ಜಮೀನು ಕೊಡಿ ಎಂದು ಹೇಳಿದರೆ ಅವರ ಮೇಲೆ ಇನ್‌ವೆಸ್ಟಿಗೇಷನ್ ಎಲ್ಲಾ ನಡೆಸಿದರು.

ಅವರನ್ನು ಮೂಲೆ ಗುಂಪು ಮಾಡಿದರು ಮೂಲೆಗುಂಪು ಆಗತಕ್ಕಂತಹ ಕೆಲಸ ಮಾಡಿದರು. ಆ ಕೆಲಸವನ್ನು ವಿಜ್ಞಾನಿಗಳಾಗಿರತಕ್ಕಂತಹವರು ಮಾಡಿದರು. ನಮ್ಮ ದೇಶದ ಮೂಲಭೂತ ಸಮಸ್ಯೆಯಾದ ಅನ್ನದ ಸಮಸ್ಯೆಯನ್ನು ಬಗೆಹರಿಸತಕ್ಕಂತಹವರು ಯಾರು ಇದ್ದಾರೆ ಅವರಿಗೆ ಕೂಡ ಇದೇ ಗೌರವವನ್ನು ಸಲ್ಲಿಸಬೇಕಾಗಿರತಕ್ಕಂಥಾದ್ದು ಅವಶ್ಯಕತೆ ಇದೆ. ಈ ಎರಡು ಕೆಲಸವನ್ನು ಮಾಡಬೇಕೆಂದು ಹೇಳುತ್ತಾ ವ್ಯವಸಾಯ ಇಲಾಖೆಯನ್ನಾಗಲೀ, ವಿಶ್ವವಿದ್ಯಾನಿಲಯವನ್ನಾಗಲೀ ಮುಚ್ಚಿ ಎಂದು ಹೇಳಿದರೆ ಮುಚ್ಚುವುದಕ್ಕೆ ಹೋಗುವುದಿಲ್ಲ ಅದು ನಮಗೂ ಕೂಡ ಗೊತ್ತಿದೆ. ಆದರೆ ಈ ಕೆಲಸವನ್ನು ಮಾಡಿದರೆ ರೈತರು ನೆಮ್ಮದಿಯಿಂದ ಇರುವುದಕ್ಕೆ ಸಾಧ್ಯವಾಗುತ್ತದೆಂದು ತಿಳಿಸುತ್ತಾ ಅಧ್ಯಕ್ಷಣಿಯವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ.ಎಂ. ಶಿವಕುಮಾರ್:- ನಮ್ಮ ರಾಷ್ಟ್ರದ ಪ್ರಧಾನ ಮಂತ್ರಿಗಳಾದ ವಿ.ಪಿ.ಸಿಂಗ್‌ರವರು ರಾಜೀನಾಮೆ ಕೊಟ್ಟಿದ್ದಾರೇದು ಹೊರಗೆ ಗುಲ್ಲೋ ಗುಲ್ಲು ನಡೆಯುತ್ತಿದೆ. ಇವತ್ತು 3 ಜನ ಮಂತ್ರಿಗಳು ರಾಜೀನಾಮೆ ಕೊಟ್ಟಿದ್ದಾರೆ. ಇದರ ಬಗ್ಗೆ ಸರಿಯಾದಂತಹ ವಿಚಾರವನ್ನು ಸದನಕ್ಕೆ ತಿಳಿಸಬೇಕು. ಪರಿಸ್ಥಿತಿ ವಿಕೋಪಕ್ಕೆ ಹೋಗುತ್ತಿದೆ. ರಾಷ್ಟ್ರೀಯ ಸರಕಾರ ಉರುಳುವಂತಹ ಸಂದರ್ಭದಲ್ಲಿ ಈ ಮನೆಯಲ್ಲಿ ಚರ್ಚೆ ಮಾಡುವಂಥಾದ್ದು ಅವಶ್ಯಕತೆ ಇದೆ.

(ಗೊಂದಲ)

ಶ್ರೀ ಎಂ.ಡಿ. ವೆಂಕಟೇಶ್:- ವಿ.ಪಿ. ಸಿಂಗ್‌ರವರು ರಾಜೀನಾಮೆ ಕೊಟ್ಟರೆ ಇವರಿಗೆ ಅಂತೂ ಅದು ಸಿಗುವುದಿಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ಕಾಂಗ್ರೆಸ್‌ನವರ ಪಿತೂರಿಯಿಂದ ರಾಜೀನಾಮೆ ಕೊಡುತ್ತೇನೆಂದು ಅವರು ಹೇಳಿರುವುದು ನಿಜ ಇರಬಹುದು...

(ಗೊಂದಲ)

ಶ್ರೀ ಎಂ. ಮಹದೇವ್:- ಕಾಂಗ್ರೆಸ್‌ನವರ ಪಿತೂರಿ ಎಂದು ಆಪಾದನೆ ಮಾಡುವುದು ಸರಿಯಾದುದಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ಈ ದೇಶದಲ್ಲಿ ವಿರೋಧ ಪಕ್ಷ ಸರಕಾರ ನಡೆಸುತ್ತಿದ್ದು ಅದನ್ನು ಉರುಳಿಸುವುದಕ್ಕೆ ಕಾಂಗ್ರೆಸ್‌ನ ಪಿತೂರಿ ಏನು ಇದೆ ಇದಕ್ಕೆ ನಾಚಿಕೆ ಪಡಬೇಕಾಗಿದೆ.

(ಗೊಂದಲ)

ಶ್ರೀ ಆರ್.ಎನ್ ನಾಯಕ್:- ಕಾಂಗ್ರೆಸ್‌ನವರು ಏಕೆ ನಾಚಿಕೆ ಪಡಬೇಕು.

(ಗೊಂದಲ)

ಛೇರ್ಮನ್:– ಶಿವಕುಮಾರ್‌ರವರೇ ನೀವು ಕುಳಿತುಕೊಳ್ಳಿ...

ಶ್ರೀ ಕೆ.ಎಂ. ಶಿವಕುಮಾರ್:– ರಾಷ್ಟ್ರದ ರಾಜಕೀಯ ಪರಿಸ್ಥಿತಿ ಏನಿದೆ, ಕೇಂದ್ರದಲ್ಲಿ ಸರ್ಕಾರ ಇದೆಯೋ, ಇಲ್ಲವೋ ಎಂಬುದನ್ನು ತಿಳಿಸಬೇಕು. ಅಲ್ಲಿ 3 ಜನ ಮಂತ್ರಿಗಳು ರಾಜೀನಾಮೆ ಕೊಟ್ಟಿದ್ದಾರೆ ಅದನ್ನೂ ಕೂಡ ಈ ಸಭೆಗೆ ತಿಳಿಸಬೇಕೆಂದು ಕೇಳಿಕೊಳ್ಳುತ್ತೇವೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ಈ ರೀತಿಯ ಪಿತೂರಿಯನ್ನು ಮಾಡಬಾರದಿತ್ತು. ಇದು ದೇಶದ ಭದ್ರತೆಗೆ...

ಛೇರ್ಮನ್:- ನೀವು ಕುಳಿತುಕೊಳ್ಳಿ ನಾಗರಾಜ್‌ರವರೆ, ನೀವು ಸಮಯವನ್ನು ಕಾಯುತ್ತಿರುತ್ತೀರಿ ಏನೋ ಒಂದು ಅವಕಾಶವನ್ನು ತೆಗೆದುಕೊಳ್ಳುವುದಕ್ಕೆ...

ಶ್ರೀ ವಾಟಾಳ್ ನಾಗರಾಜ್:- ನೀವು ಏತಕ್ಕೆ ಈ ರೀತಿ ಹೇಳುತ್ತೀರಿ...

(ಗೊಂದಲ)

ಛೇರ್ಮನ್:- ಇದು ವಿ.ಪಿ. ಸಿಂಗ್‌ರ ಬಗ್ಗೆ ಡಿಸ್ಕಷನ್ ಅಲ್ಲ. ಈಗ ನಡೆಯುತ್ತಿರುವುದು, ತೋಟಗಾರಿಕೆ, ಅರಣ್ಯ ಇಲಾಖೆಯ ಬೇಡಿಕೆಗಳ ಚರ್ಚೆ

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ಕಾಂಗ್ರೆಸ್‌ನವರು ಒಂದು ದೊಂಬರಾಟವನ್ನು ಈ ದೇಶದಲ್ಲಿ ಮಾಡುತ್ತಿದ್ದಾರೆ...

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಅವರೇ ಸೂಯಿಸೈಡ್ ಮಾಡಿಕೊಂಡು ಕಾಂಗ್ರೆಸ್‌ನವರ ಮೇಲೆ ಹೇಳುತ್ತಿದ್ದಾರೆ. ಕಾಂಗ್ರೆಸ್‌ನವರ ಪಿತೂರಿ ಎಂದು ನಮ್ಮ ಮೇಲೆ ಏತಕ್ಕೆ ಹೇಳುತ್ತೀರಿ?[3]

ಶ್ರೀ ವಾಟಾಳ್ ನಾಗರಾಜ್ :- ಸಂಯುಕ್ತ ರಂಗ, ರಾಷ್ಟ್ರೀಯ ರಂಗವನ್ನು ಒಡೆಯುವುದರಲ್ಲಿ ಕಾಂಗ್ರೆಸ್‌ನವರ ಪಾತ್ರ ಪ್ರಮುಖವಾಗಿದೆ ಕಾಂಗ್ರೆಸ್‌ನವರಲ್ಲದೆ ಬೇರೆಯವರು ಈ ದೇಶದಲ್ಲಿರತಕ್ಕದ್ದು ಅವರಿಗೆ ಬೇಕಾಗಿಲ್ಲ...

ಶ್ರೀ ಆರ್.ಎನ್ ನಾಯಕ್:- ಪಿತೂರಿ ಏನೇನು ಆಗಿದೆ ಎಂಬುದನ್ನು ಹೇಳಬೇಕು.

ಶ್ರೀ ವಾಟಾಳ್ ನಾಗರಾಜ್:- ಒಂದು ಪ್ರಮುಖ ಸರ್ಕಾರವನ್ನು ಕೆಳಗಿಳಿಸಿ ಈ ದೇಶದಲ್ಲಿ ಪ್ರಜಾಪ್ರಭುತ್ವದ ಕೊಲೆಯನ್ನು ಮಾಡಿದ್ದಾರೆ. ಕಾಂಗ್ರೆಸ್‌ನವರು ಇದಕ್ಕೆ ಅವಕಾಶ ಕೊಡಬಾರದಿತ್ತು. ಇದು ಇವರ ಪಿತೂರಿಯಿಂದ ನಡೆದಿರತಕ್ಕದ್ದು...

(ಗೊಂದಲ)

ಶ್ರೀ ಆರ್. ಗೋಪಿನಾಥ ಸಾಂದ್ರ:- ಮಾನ್ಯ ಅಧ್ಯಕ್ಷಣಿಯವರೆ...

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ಅಧ್ಯಕ್ಷಣಿಯವರೆ ಪಾಯಿಂಟ್ ಆಫ್ ಆರ್ಡರ್...

ಛೇರ್ಮನ್ :- ಯಾವ ನಿಯಮದ ಪ್ರಕಾರ?

ಶ್ರೀ ಪಿ.ಜಿ.ಆರ್. ಸಿಂಧ್ಯ:- ಸದನವನ್ನು ನಡೆಸುವುದಕ್ಕೆ ತಮಗೆ ಅನುಕೂಲವಾಗಲೆಂದು ನಾನು ಹೇಳುವುದಕ್ಕೆ ಹೋದರೆ ತಾವು ನನ್ನ ಮೇಲೆ ಏತಕ್ಕೆ ಹೀಗೆ ಆಡುತ್ತೀರಿ? ಮಾನ್ಯ ಸದಸ್ಯರಾದ ಶಿವಕುಮಾರ್‌ರವರು ಎತ್ತಿರತಕ್ಕ ವಿಚಾರ ಎಂದರೆ ಮಾನ್ಯ ವಿ.ಪಿ.ಸಿಂಗ್‌ರವರು ರಾಜೀನಾಮೆಯನ್ನು ಕೊಟ್ಟಿದ್ದಾರೆ ಎಂಬ ವಿಷಯಕ್ಕೆ ಸಂಬಂಧ ಪಟ್ಟಂತೆ. ಅವರಿಗೆ ಹೊರಗಡೆ ಉತ್ಸಾಹ, ಸಂತೋಷ ಆಗತಕ್ಕದ್ದು ಸಹಜ. ಆದರೆ ಅದೇ ರೀತಿ ನಮಗೂ ಕೂಡ ಒಳಗಡೆ ನೋವಾಗಿರುತ್ತದೆ. ವಿ.ಪಿ. ಸಿಂಗರು ತಮ್ಮ ಪಕ್ಷದ ಅಧ್ಯಕ್ಷರಿಗೆ ಒಂದು ಪತ್ರವನ್ನು ಬರೆದು ನೀವು ಬೇರೆ ನಾಯಕರನ್ನು ಆರಿಸಿಕೊಳ್ಳಿ ಎಂದು ಹೇಳಿದ್ದಾರೆ. ಸದನದಲ್ಲಿ ಇದರ ಬಗ್ಗೆ ಎತ್ತಿರತಕ್ಕ ಗೊಂದಲವನ್ನು ಕಡಿಮೆ ಮಾಡಲು ನಿಮಗೆ ಸಹಾಯ ಮಾಡುವುದಕ್ಕಾಗಿ ನಾನು ಎದ್ದು ನಿಂತಿದ್ದೇನೆ. ಮಾನ್ಯ ಸಿಂಗ್‌ರವರ ರಾಜೀನಾಮೆ ವಿಚಾರ ನಮ್ಮ ಪಕ್ಷದ ಆಂತರಿಕ ವಿಷಯ. ಇವತ್ತು ಸಂಜೆಯೊಳಗೆ ವಿಚಾರ ಏನೆಂಬುದು ಗೊತ್ತಾಗುತ್ತದೆ. ದಯವಿಟ್ಟು ಸದನವನ್ನು ನಡೆಸಲಿಕ್ಕೆ ಅವಕಾಶವನ್ನು ಕೊಟ್ಟು....

ಛೇರ್ಮನ್ :- ಆದ್ದರಿಂದಲೇ ನಾನೂ ಹೇಳಿದೆ. ವಿವಿಧ ಇಲಾಖೆಗಳ...

(ಗೊಂದಲ)

ಶ್ರೀ ಆರ್. ಗೋಪಿನಾಥ ಸಾಂದ್ರ:- ಮಾನ್ಯ ಅಧ್ಯಕ್ಷಿಣಿಯವರೆ....

ಛೇರ್ಮನ್:- ನೀವು ಕುಳಿತುಕೊಳ್ಳಿ....

ಶ್ರೀ ಆರ್. ಗೋಪಿನಾಥ್ ಸಾಂದ್ರ:- ಅವರು ರಾಷ್ಟ್ರಪತಿಗಳಿಗೆ ರಾಜೀನಾಮೆಯನ್ನು ಕೊಟ್ಟಿಲ್ಲ.. ತಮ್ಮ ಪಕ್ಷದ ಆಧ್ಯಕ್ಷರಿಗೆ ಪತ್ರವನ್ನು ಕೊಟ್ಟಿದ್ದಾರೆ...

(ಗೊಂದಲ)

ಶ್ರೀ ಎ.ಎಂ. ಬೆಳ್ಳಿಯಪ್ಪ:- ಮಾನ್ಯ ಆಧ್ಯಕ್ಷಣಿಯವರೆ, ಮಾನ್ಯ ಮಂತ್ರಿಗಳು ಸದನದ ಮುಂದೆ ಮಂಡಿಸಿರತಕ್ಕ ಬೇಡಿಕೆಗಳನ್ನು ಸಂಪೂರ್ಣವಾಗಿ ಬೆಂಬಲಿಸುತ್ತಾ...

ಶ್ರೀ ಎಂ. ಮಹದೇವ್:- ಮಾನ್ಯ ಅಧ್ಯಕ್ಷಣಿಯವರೆ, ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಮಾತನಾಡುವಾಗ ಮಾನ್ಯ ರಾಜೀವ್ ಗಾಂಧಿಯವರ ಪಿತೂರಿಯಿಂದ ಹೀಗಾಗಿದೆ, ವಿ.ಪಿ. ಸಿಂಗರ ಪದಚ್ಯುತಿಯಾಗಲಿಕ್ಕೆ ರಾಜೀವ್ ಗಾಂಧಿಯವರು ಪಿತೂರಿ ಮಾಡಿದ್ದಾರೆಂದು ಆಪಾದನೆ ಮಾಡಿದ್ದಾರೆ. ಇದು ಕಡತಕ್ಕೆ ಹೋಗಿದೆ. ದಯವಿಟ್ಟು ಈ ಪದವನ್ನು ಕಡತದಿಂದ ತೆಗೆಸಬೇಕು.

ಛೇರ್ಮನ್:- ಯಾವುದೂ ಕಡತಕ್ಕೆ ಹೋಗಿಲ್ಲ. ನಿಮ್ಮ ಕಿರುಚಾಟದಿಂದ ಯಾವುದೂ ಕೂಡ ಕಡತಕ್ಕೆ ಹೋಗಿಲ್ಲ. ಸುಮ್ಮನೆ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಆರ್. ಗೋಪಿನಾಥ ಸಾಂದ್ರ:- ನಾವು ಪಿತೂರಿ ಮಾಡಿಲ್ಲ. ಬೊಮ್ಮಾಯಿಯವರು ಎಲ್ಲಿಗೆ ಹೋಗುತ್ತಾರೆ ಅಲ್ಲಿ...

ಛೇರ್ಮನ್:- ಬೆಳ್ಳಿಯಪ್ಪನವರೇ ನೀವು ಮಾತನಾಡುತ್ತೀರೋ, ಬೇರೆಯವರ ಹೆಸರನ್ನು ಕರೆಯಲೋ...

† ಶ್ರೀ ಎ.ಎಂ. ಬೆಳ್ಳಿಯಪ್ಪ (ವಿರಾಜಪೇಟೆ) :- ಮಾನ್ಯ ಅಧ್ಯಕ್ಷಿಣಿಯವರೆ, ಸದನದ ಮುಂದೆ ಮಾನ್ಯ ಮಂತ್ರಿಗಳು ಮಂಡಿಸಿರತಕ್ಕ ಬೇಡಿಕೆಗಳ ಬಗ್ಗೆ ನನ್ನ ಬೆಂಬಲವನ್ನು ವ್ಯಕ್ತಪಡಿಸುತ್ತಾ ಮೊದಲು ಅರಣ್ಯ ಖಾತೆಯ ವಿಷಯದಲ್ಲಿ ನನ್ನ ಭಾಷಣವನ್ನು ಸೀಮಿತಗೊಳಿಸುತ್ತಿದ್ದೇನೆ. ಮಾನ್ಯ ಸಭಾಧ್ಯಕ್ಷರೇ ಇವತ್ತಿನ ಸಂದರ್ಭದಲ್ಲಿ ಕಾಡು ಇರುವ ಪ್ರದೇಶದಲ್ಲಿ ಎಲ್ಲಾ ಕಾಡನ್ನು ಕಡಿಯುವುದಕ್ಕೆ ಆರಂಭಿಸಿದ್ದಾರೆ.

(ಗೊಂದಲ)

ಛೇರ್ಮನ್:- ನನ್ನ ಅನ್ನಿಸಿಕೆಯನ್ನು ಹೇಳುತ್ತೇನೆ, ದಯವಿಟ್ಟು ಎಲ್ಲರೂ ಕೇಳಬೇಕು. ವೈಜ್ಞಾನಿಕ ರೀತಿಯಿಂದ ದೂರದರ್ಶನಕ್ಕೆ ಕುಳಿತಲ್ಲಿಂದಲೇ ಆನ್ ಮಾಡುವುದಕ್ಕೂ ಮತ್ತು ಆಫ್ ಮಾಡುವುದಕ್ಕೂ ರಿಮೋಟ್ ಕಂಟ್ರೋಲ್ ಎಂದು ಕಂಡುಹಿಡಿದಿರುತ್ತಾರೆ. ಹಾಗೆ ರಿಮೋಟ್ ಕಂಟ್ರೋಲರ್‌ನ್ನು ಇಟ್ಟುಕೊಳ್ಳಬೇಕಾಗಿದೆ. ಈರೀತಿ ಪದೇ ಪದೇ ಎದ್ದು ನಿಂತು ಮಾತನಾಡುವವರನ್ನು ಇಲ್ಲಿಂದ ಸ್ವಿಚ್ ಹಾಕಿದ ಕೂಡಲೇ ಎಳೆದು ಕುಳ್ಳಿಸುವಂಥ ವ್ಯವಸ್ಥೆಯನ್ನು ಮಾಡಿದರೆ ಒಳ್ಳೆಯದೆಂದು ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ತಮ್ಮ ಸಲಹೆಯನ್ನು ಒಪ್ಪುತ್ತೇನೆ. ಪ್ರತಿಯೊಂದು ಸೀಟಿಗೂ ಆ ಯಂತ್ರವನ್ನು ಅಳವಡಿಸಿದರೆ ಬಹಳ ಒಳ್ಳೆಯದೆಂದು ಹೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ವಾಟಾಳ್ ನಾಗರಾಜ್‌ರವರ ಸೀಟಿಗೆ ಮಾತ್ರ ಆ ಯಂತ್ರವನ್ನು ಅಳವಡಿಸಿ.

ಛೇರ್‌ಮನ್:- ಮಾನ್ಯ ಬೆಳ್ಳಿಯಪ್ಪನವರೇ ತಾವು ತಮ್ಮ ಭಾಷಣವನ್ನು ಮುಂದುವರಿಸಿ.

(ಗೊಂದಲ)

ಶ್ರೀ ಎ.ಎಂ. ಬೆಳ್ಳಿಯಪ್ಪ :- ಕೆಲವು ವರ್ಷಗಳ ಹಿಂದೆ ಸರ್ಕಾರದಲ್ಲಿ ಮಂಜೂರಾಗಿರತಕ್ಕಂಥ ಕೆಲವು ಪ್ರದೇಶಗಳನ್ನು ಟಿ.ಟಿ. ಹಾಕಿ ಪರಿವರ್ತನೆ ಮಾಡಿದ್ದಾರೆ. ಆ ಪರಿವರ್ತನೆ ಮಾಡಿದ್ದಂಥ ಜಾಗಗಳಲ್ಲಿ ಇವತ್ತು ನಿಮ್ಮ ಕಾನೂನಿನಲ್ಲಿ ಹೇಳಿರುವಂತೆ ಕಾಡುಗಳನ್ನು ಬೆಳೆಯುವುದಕ್ಕೆ ಕರ್ನಾಟಕದ ಜನತೆ ಮುಂದೆ ಬಂದಿದ್ದಾರೆ. ನಾನು ಕೊಡಗಿನಿಂದ ಬಂದಿರತಕ್ಕಂಥವನು. ಕೊಡಗಿನಲ್ಲಿ ದೊಡ್ಡ ದೊಡ್ಡ ಆರಣ್ಯಗಳು ಬೆಳೆದಿದ್ದು ಎಲ್ಲಿನೋಡಿದರು ಎಲ್ಲಿ ಹೋದರೂ ಮುಗಿಲೆತ್ತರದ ಮರಗಳು ಕಾಣುತ್ತಿದ್ದವು. ಇದರಿಂದಾಗಿ ಬಹಳವಾಗಿ ಹಿಂದೆ ಮಳೆಯಾಗುತ್ತಿತ್ತು. ಕನ್ನಂಬಾಡಿ ಕಟ್ಟೆ ತುಂಬಿ ತುಳುಕುತ್ತಿತ್ತು. ಯಾವಾಗಲೂ ಕಾವೇರಿ ಜಲಾನಯನ ಪ್ರದೇಶದಲ್ಲಿ ನೀರು ಹರಿಯುತ್ತಿತ್ತು. ಆದರೆ ಇವತ್ತು ಏನಾಗಿದೆ, ಕಾಡುಗಳನ್ನು ಕಡಿದು ಮೈದಾನವನ್ನಾಗಿ ಮಾಡಿರುವುದರಿಂದ ಕಾವೇರಿಯಲ್ಲಿ ಪ್ರವಾಹವಿಲ್ಲ. ಕನ್ನಂಬಾಡಿ ಕಟ್ಟೆಯಲ್ಲಿ ನೀರಿಲ್ಲದಂತಾಗಿದೆ, ಮಳೆ ಕಡಿಮೆಯಾಗಿದೆ. ಕಾಡನ್ನು ನಾಶಮಾಡತಕ್ಕಂಥ ಜನರೊಡನೆ ಅಧಿಕಾರಿಗಳೂ ಕೂಡ ಶಾಮೀಲಾಗಿದ್ದಾರೆ. ಇದರಲ್ಲಿ ಸರ್ಕಾರವೂ ಕೂಡ ತನ್ನ ಅಸಮರ್ಥತೆಯನ್ನು ತೋರಿಸಿದೆ. ನಾನು ಈ ಸಂದರ್ಭದಲ್ಲಿ ಒಬ್ಬ ಪರಿಸರವಾದಿ, ಅಮೇರಿಕನ್ ಇನ್‌ಸ್ಟಿಟ್ಯೂಷನ್‌ನಲ್ಲಿ ಡೆವಲಪ್‌ಮೆಂಟ್ ಡೈರೆಕ್ಟರಾಗಿರತಕ್ಕಂಥ ರಶೀದಿ ಮಯೂರ್ ಎಂಬುವರು ವಾಶಿಂಗಟನ್‌ನಲ್ಲಿ 25ನೇ ತಾರೀಖು ಜೂನ್ ತಿಂಗಳಲ್ಲಿ ಮಾಡಿದ ಭಾಷಣ ಡೆಕ್ಕನ್ ಹೆರಾಲ್ಡ್ ಪತ್ರಿಕೆಯಲ್ಲಿ ಬಂದಿರುವುದನ್ನು ಹೇಳುತ್ತೇನೆ. ಒಂದು ವರ್ಷಕ್ಕೆ 1.7 ಮಿಲಿಯನ್ ಹೆಕ್ಟೇರ್ ಫಾರೆಸ್ಟಿಗೆ ಹೋಗುತ್ತಿದೆ. ಈ ಸಂದರ್ಭದಲ್ಲಿ ಪಾಲಿಸಿ ಮೇಕರ್ಸ್ ಮತ್ತು ಪ್ಲಾನರ್ಸ್ have said and it has appeared in Deccan Herald dated 25th June, 1990.

"India loses 5.5 billion tons of top soil every year, threatening its food production system, says a researcher in a Lecture to the World Resources Institute here on Saturday, Dr. Rashmi Mayur, Director of Urban Development Institute, said Asia particularly South Asia, faces the most environmental crisis in the world, even worse than in Sub Sahara Africa.

Then further in last para he says:

Thirty eight percent of Indians depend for fuel on firewood. India is losing 1.7 million hectares of Forest a year. Only 13 per cent of the land in India is covered with forests"

From this one could imagine how fastly forest is being destroyed...

ನಾನು ಆಗಲೇ ಹೇಳಿದೆ, ಸಿ ಅಂಡ್ ಡಿ ಲ್ಯಾಂಡನ್ನು ಅರಣ್ಯ ಖಾತೆಗೆ ರೆವಿನ್ಯೂ ಖಾತೆಯಿಂದ ಕೊಟ್ಟಿರುವುದು ಏತಕ್ಕೋಸ್ಕರ ಎಂದರೆ ಗಿಡಮರಗಳನ್ನು ಬೆಳಸಬೇಕು ಎಂದು. ಗಿಡಮರಗಳು ಬೆಳೆದು ಈ ದೇಶದ ಪರಿಸರ ಚೆನ್ನಾಗಿ ಆಗಬೇಕೆಂದು ಕೊಟ್ಟಿರುವುದು. Now what is happening to C & D Forest which you have given with best intention but that intention is not fulfilled so far as these forest cultivation is concerned...

ನಿಮ್ಮ ಲೆಕ್ಕಾಚಾರದ ಪ್ರಕಾರ ಕೊಟ್ಟಿದ್ದೀರಿ 1989-90ರಲ್ಲಿ 9 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ನೆಡುತೋಪುಗಳನ್ನು ಮಾಡಿದ್ದೇವೆಂದು ಹೇಳಿದ್ದೀರಿ. ಅದರಲ್ಲಿ ಯಾವ ಯಾವ ಗಿಡಗಳನ್ನು ನೆಟ್ಟಿದ್ದೀರಿ ಒಂದೂವರೆ ಲಕ್ಷ ಹೆಕ್ಟೇರಿನಲ್ಲಿ ಯೂಕಲಿಪ್ಟಸ್ ನೆಟ್ಟಿದ್ದೀರಿ, 5 ಲಕ್ಷ ಹೆಕ್ಟೇರಿನಲ್ಲಿ ಅಕೇಶಿಯವನ್ನು 1700 ಹೆಕ್ಟೇರ್‌ಗಳಲ್ಲಿ ಹಣ್ಣು ಹಂಪಲುಗಳನ್ನು ನೆಟ್ಟಿದ್ದೀರಿ. ಇದರ ಬಗ್ಗೆ ನಾನು ಏನೂ ಹೇಳುವುದಿಲ್ಲ, ಇದು ನನ್ನ ಆರ್ಗುಮೆಂಟ್ ಅಲ್ಲ. ನೀಲಗಿರಿ ನೆಡಬೇಡಿ ಅಥವಾ ಅಕೇಶಿಯಾ ನೆಡಬೇಡಿ ಎಂದು ಹೇಳುವ ಆರ್ಗುಮೆಂಟು ಅಲ್ಲ. 25 ವರ್ಷಗಳಿಂದ ಈ ಸದನದಲ್ಲಿ ಅನೇಕ ಸಮರ್ಥ ಶಾಸಕರು ಆ ಕಡೆಯಿಂದ ನೀಲಗಿರಿ ನೆಡಬೇಡಿ ಎಂದು ಹೇಳುತ್ತಿದ್ದರು. ಕಾಗೋಡು ತಿಮ್ಮಪ್ಪನವರು ಅವತ್ತಿನ ದಿವಸ ಬಹಳ ಜೋರಾಗಿ ಹೇಳುತ್ತಿದ್ದರು. ಬಂಗಾರಪ್ಪನವರು ಕಾಗೋಡು

ತಿಮ್ಮಪ್ಪನವರು, ಕೋಣಂದೂರು ಲಿಂಗಪ್ಪನವರು ವಿರೋಧ ಪಕ್ಷದಿಂದ ಮಾತನಾಡುವಾಗ ನೀಲಗಿರಿ ನೆಡಬೇಡಿ ಎಂದು ವಾದ ಮಾಡುತ್ತಿದ್ದರು. ಆದರೆ ನಾನು ಹೇಳುವುದೇನೆಂದರೆ ಈ ಒಂದು ನೀಲಗಿರಿಯನ್ನು ಮತ್ತು ಅಕೇಶಿಯಾವನ್ನು ಯಾವ ಪ್ರಾಣಿಗಳೂ ತಿನ್ನುವುದಿಲ್ಲ. ಆಡು ಮುಟ್ಟದ ಎಲೆ ಇಲ್ಲ ಎಂದು ಹೇಳುತ್ತಾರೆ. ಆದರೆ ಅದೂ ಕೂಡ ಇದನ್ನು ಮುಟ್ಟುವುದಿಲ್ಲ. ಇಂಥ ಗಿಡಗಳನ್ನು ಬೆಳೆಸುತ್ತಿದ್ದಾರೆ. ಕೆಲವು ಶ್ರೀಮಂತ ಕಾರ್ಖಾನೆಗಳಿಗೆ ಮಾರಬೇಕಾಗುತ್ತದೆ. ಆದರೆ ನಾನು ಹೇಳುವುದೇನೆಂದರೆ ಮಲೆನಾಡು ಪ್ರದೇಶಗಳಲ್ಲಿ, ಕೊಡಗು, ಚಿಕ್ಕಮಗಳೂರು, ಉತ್ತರ ಕನ್ನಡ, ದಕ್ಷಿಣ ಕನ್ನಡ ಮತ್ತು ಹಾಸನ ಇಂಥ ಪ್ರದೇಶಗಳು- ಫಲವತ್ತಾದ ಪ್ರದೇಶಗಳಾಗಿರುವುದರಿಂದ ಅದನ್ನು ಬೆಳೆಯಬೇಡಿ. ಮಳೆ ಚೆನ್ನಾಗಿ ಬಂದು ಮಣ್ಣು ಫಲವತ್ತಾಗಿದೆ. ಇಲ್ಲಿ ದೊಡ್ಡ ದೊಡ್ಡ ಜಾತಿ ಮರಗಳು ಬೇಕಾದಷ್ಟು ಬರುತ್ತವೆ. ಒಳ್ಳೆಯ ಮರಗಳನ್ನು ಇಲ್ಲಿ ನೆಡಿ. ನೀಲಗಿರಿ ಮತ್ತು ಅಕೇಶಿಯಾ ಮರಗಳನ್ನು ನೆಟ್ಟು ಈ ಭೂಮಿಯನ್ನು ಹಾಳು ಮಾಡಬೇಡಿ. ಎಲ್ಲಿ ಮಳೆ ಕಡಿಮೆ ಇದೆಯೋ, ಎಲ್ಲಿ ಫಲವತ್ತಾದ ಪ್ರದೇಶ ಇಲ್ಲವೋ ಅಂಥ ಬಂಜರು ಸ್ಥಳಗಳಲ್ಲಿ ಅದನ್ನು ನೆಡಿ ಎಂದು ಸನ್ಮಾನ್ಯ ಅರಣ್ಯ ಮಂತ್ರಿಗಳಲ್ಲಿ ಹೇಳುತ್ತಿದ್ದೇನೆ. ಇನ್ನೊಂದು ವಿಷಯ ಹೇಳುತ್ತಿದ್ದೇನೆ. ಅದು ಪೇಪರ್‌ನಲ್ಲಿ ಬಂದಿತ್ತು. Nature takes 500 years to fay one inch of soil... ಪ್ರಪಂಚದಲ್ಲಿ ಒಂದು ಇಂಚು ಸಬ್‌ಸಾಯಿಲ್ ಆಗಬೇಕಾದರೆ 500 ವರ್ಷಗಳು ಬೇಕಂತೆ. ಅದೇ ಒಂದು ಇಂಚು ಸಬ್‌ಸಾಯಿಲ್ ಮೂರು ರೈನಿ ಸೀಜನ್‌ನಲ್ಲಿ ಸರಿಯಾಗಿ ಕವರ್ ಇಲ್ಲದಿದ್ದರೆ ಹಾಳಾಗುತ್ತದೆ. Nature takes 500 years to build sub-soil. If good vegetation power is not given for that sub-soil it would be washed off in three rainy season...

ಆದ್ದರಿಂದ ಈ ಒಂದು ಬಂಜರು ಜಾಗ ಏನುಂಟು ಏನೂ ಬೆಳೆಯದ ಸ್ಥಳಗಳೇನುಂಟು ಅಂಥ ಸ್ಥಳಗಳಲ್ಲಿ ಮರಗಳನ್ನು ಬೆಳೆಸಿ. ಅಂಥ ಕಡೆಗಳಲ್ಲಿ ನೀಲಗಿರಿ ಮತ್ತು ಅಕೇಶಿಯಾ ಮರಗಳನ್ನು ಬೆಳೆಸಿ. 40 ವರ್ಷಗಳಿಂದ ಕನ್ನಂಬಾಡಿ ಕಟ್ಟೆಗೆ ನೀರು ಎಷ್ಟು ಕೆಪಾಸಿಟಿ ಬರುತ್ತಿತ್ತೋ ಆ ಸ್ಥಳ ಈಗ ಎಂಬಾಸ್ ಆಗಿದೆಯಂತೆ. ಅದೇ ತರಹ ತುಂಗಭದ್ರ ಸ್ಥಳದಲ್ಲೂ 40 ವರ್ಷಗಳ ಕಾಲ ಬಿಟ್ಟರೆ ತುಂಗಭದ್ರವೇ ಕರ್ನಾಟಕಕ್ಕೆ ಇಲ್ಲವಾದೀತು. ಆದ್ದರಿಂದ ಅರಣ್ಯ ಇಲಾಖೆಯ ಮೇಲೆ ದೊಡ್ಡ ಜವಾಬ್ದಾರಿ ಇದೆ. ಎಲ್ಲೆಲ್ಲಿ ಬಂಜರು ಜಾಗ ಉಂಟೋ, ಎಲ್ಲೆಲ್ಲಿ ಕಾಡುಗಳು ಬೆಳೆಯುವುದಿಲ್ಲವೋ ಅಂಥ ಸ್ಥಳಗಳಲ್ಲಿ ಇಂಥ ವೆಜಿಟೇಷನ್ಸ್ ಬೆಳೆಸಿ ಅಣೆಕಟ್ಟುಗಳನ್ನು ಉಳಿಸಿ ಪರಿಸರದ ಅಥವಾ ಪ್ರಕೃತಿಯ ಒಂದು ವಾತಾವರಣ ಏನುಂಟು ಅದನ್ನು ಸಮತೋಲನಕ್ಕೆ ತರುವುದಕ್ಕೆ ಪ್ರಯತ್ನ ಮಾಡಬೇಕೆಂದು ಅರಣ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತಿದ್ದೇನೆ. ನಾನು ಒಬ್ಬ ರೇಂಜ್ ಆಫೀಸರನ್ನು ಏತಕ್ಕೋಸ್ಕರ ಈ ನೀಲಗಿರಿ ಮತ್ತು ಅಕೇಶಿಯಾ ಮರಗಳನ್ನು ಇಂಥ ಜಾಗಗಳಲ್ಲಿ ನೆಟ್ಟಿದ್ದೀರಿ ಎಂದು ಕೇಳಿದೆ. ಅದಕ್ಕೆ ಅವರು ಹೇಳಿದರು, ಇದು ಯಾವ ವಾತಾವರಣದಲ್ಲೂ ಕೂಡ ಬರುತ್ತದೆ, ಬೇರೆ ಗಿಡಗಳಿಗೆ ಕೆಲಸ ಮಾಡುವಷ್ಟು ಈ ಗಿಡಗಳಿಗೆ ಮಾಡಬೇಕಾಗಿಲ್ಲ. ಬೇರೆ ಗಿಡಗಳಿಗೆ ಎರಡು ಅಡಿ ಗುಂಡಿ ತೆಗೆದರೆ ಇದಕ್ಕೆ ಬರೀ ಅರ್ಧ ಅಡಿ ಗುಂಡಿ ಸಾಕು, ಬಿಸಿಲಿನ ಸಮಯದಲ್ಲಿ ಶೇಡ್ ಕೊಡಬೇಕಾದ ಅವಶ್ಯಕತೆ ಇಲ್ಲ. ಕಡಿಮೆ ಖರ್ಚಿನಲ್ಲಿ ಆಗುವ ಗಿಡ, ಆದ್ದರಿಂದ ಇದನ್ನು ಬೆಳೆಸುತ್ತೇವೆ, ಮೇಲಧಿಕಾರಿಗಳು ಮತ್ತು ರಾಜಕಾರಣಿಗಳು ಬಂದು ನೋಡಿ ಚೆನ್ನಾಗಿ ಕಾಡನ್ನು ಬೆಳೆಸಿದ್ದೀರಿ ಎಂದು ಶಹಬಾಸ್‌ಗಿರಿ ಕೊಟ್ಟು ಹೋಗುತ್ತಾರೆ, ಕಡಿಮೆ ದುಡ್ಡಿನಲ್ಲಿ ಬೆಳೆಯುವಂಥ ಗಿಡ ಎಂಬ ವಿಷಯವನ್ನು ಅವರು ಹೇಳಿದರು.

ಆದುದರಿಂದ ನಾನು ಇವತ್ತು ಅರಣ್ಯ ಮಂತ್ರಿಗಳನ್ನು ಕೇಳುವುದು ಇಷ್ಟೇ. ನಾನು ಬೇಕಾದಷ್ಟು ಮಾತನಾಡಬೇಕೆಂದು ಇದ್ದೆ. ಸಮಯವಿಲ್ಲದೆಂದು ಬೆಲ್ ಹೊಡೆಯುತ್ತಿರುವುದರಿಂದ ನಾನು ಹೆಚ್ಚು ಮಾತನಾಡುವುದಿಲ್ಲ. ಆದ್ದರಿಂದ ಸನ್ಮಾನ್ಯ ಮಂತ್ರಿಗಳು ಕೇಳುವುದು ಇಷ್ಟೇ. ಅರಣ್ಯ ಇಲಾಖೆಯಲ್ಲಿ ಬೇಕಾದಷ್ಟು ಹಣ ಲೂಟಿಯಾಗುತ್ತಿದೆ. ಇಲ್ಲಿ ರೇಂಜ್ ಫಾರೆಸ್ಟ್‌ಆಫೀಸರ್‌ರಿಂದ ಹಿಡಿದು ಗಾರ್ಡ್‌ವರೆಗೆ ಲೂಟಿ ಮಾಡುತ್ತಿದ್ದಾರೆ. ಇದಕ್ಕೆ ಕಾರಣ ಏನು? ಇವತ್ತು ಗಿಡ ನೆಡುವ ಪೂರ್ಣ ಜವಾಬ್ದಾರಿಯನ್ನು ತಾವು ಅವರಿಗೆ ಕೊಟ್ಟಿದ್ದೀರಿ. ನಿಮ್ಮ ಒಂದು ಸ್ಟೇಟ್‌ಮೆಂಟ್‌ನಲ್ಲಿ ಈ ಜಾವಾಬ್ದಾರಿಯನ್ನು ತೆಗೆದು ಬೇರೆ ಒಂದು ಅಭಿಪ್ರಾಯಕ್ಕೆ ಬರುವ ಬಗ್ಗೆ ವ್ಯಕ್ತ ಮಾಡಿದ್ದೀರಿ. ಇವತ್ತು ಮೇಲಧಿಕಾರಿಗಳ ಮಟ್ಟದಲ್ಲೂ, ಎ.ಸಿ.ಎಫ್. ಡಿ.ಎಫ್.ಓ. ಮಟ್ಟದಲ್ಲೂ ಭ್ರಷ್ಟಾಚಾರ ನಡೆಯುತ್ತಿದೆ. ನಾನು ಎಲ್ಲಾ ಅಧಿಕಾರಿಗಳೂ ಭ್ರಷ್ಟಾಚಾರಿಗಳು ಎಂದು ಹೇಳುವುದಿಲ್ಲ. ತಮ್ಮ ಹೆಂಡತಿ ಮಕ್ಕಳನ್ನೂ ಕೂಡಾ ಸರ್ಕಾರಿ ಕಾರಿನಲ್ಲಿ ಕೂರಿಸದ ಡಿ.ಎಫ್.ಓ.ಗಳು ಎ.ಸಿ.ಎಫ್.ಗಳು, ಕನ್‌ಸರ್ವೇಟರ್‌ಗಳು ಇದ್ದಾರೆ. ಇಂತಹ ಒಳ್ಳೆಯ ಅಧಿಕಾರಿಗಳೂ ಇದ್ದಾರೆ. ನಾನು ಒಂದು ಸಲಹೆ ಕೊಡುತ್ತೇನೆ. ಈ ಭ್ರಷ್ಟಾಚಾರವನ್ನು ಹೇಗೆ ನಿವಾರಿಸುವುದು? ಇವತ್ತು ಒಂದು ತಾಲ್ಲೂಕಿನಲ್ಲಿ ಇರುವ ಗಣ್ಯ ವ್ಯಕ್ತಿಗಳನ್ನು ಆರಿಸಿ. I want you to select prominent member and honest people, irrespective of any party ಅಂತಹವರ ಒಂದು ಸಮಿತಿಯನ್ನು ಮಾಡಿ. ಅವರಿಗೆ ಈ ಗಿಡಗಳನ್ನು ಹೇಗೆ ನೆಡಬೇಕು ಎಂಬುದರ ಬಗ್ಗೆ ಮಾಹಿತಿಯನ್ನು ಕೊಡಿ. ಎಷ್ಟು ಹಣ ಇದಕ್ಕೆ ಬಂದಿದೆ ಎಂದು ಮಾಹಿತಿ ಕೊಡಿ. ಫಾರೆಸ್ಟ್ ಅಧಿಕಾರಿಗಳಿಗೆ, ರೇಂಜ್ ಆಫೀಸರ್‌ಗಳಿಗೆ ಗಿಡಗಳನ್ನು ನೆಡುವ ಮೇಲ್ವಿಚಾರಣೆಯನ್ನು ವಹಿಸಿ. ಅವರು ಅದನ್ನು ನೋಡಿಕೊಳ್ಳಲಿ. ಇವತ್ತು ಇನ್ನೊಂದು ಸಲಹೆ ಏನೆಂದರೆ ಲೋಕೋಪಯೋಗಿ ಇಲಾಖೆಯವರು ತಮ್ಮ ಕೆಲಸವನ್ನು ಕಾಂಟ್ರಾಕ್ಟರುಗಳಿಗೆ ಕಾಂಟ್ರಾಕ್ಟ್ ಕೊಡುತ್ತಾರೆ. ಈ ಒಂದು ಕೆಲಸವನ್ನೂ ಸಹಾ ತಾವು ಖಾಸಗೀ ಕಾಂಟ್ರಾಕ್ಟರುದಾರರಿಗೆ ಏತಕ್ಕೋಸ್ಕರ ಕೊಡಬಾರದು? ಆ ನಂತರ ನಿಮ್ಮ ಅಧಿಕಾರಿಗಳು ಮೇಲ್ವಿಚಾರಣೆಯನ್ನು ನೋಡಲಿ. ಇದರಿಂದ ಭ್ರಷ್ಟಾಚಾರ ಪೂರ್ತಿ ನಿರ್ಮೂಲನವಾಗುವುದಿಲ್ಲ. ಲೋಕೋಪಯೋಗಿ ಇಲಾಖೆಯಲ್ಲಿ ಹೋಗಿದೆಯೇ? ಆದರೂ ಕೂಡಾ ಭ್ರಷ್ಟಚಾರವನ್ನು ಎಷ್ಟೋ ಕಡಿಮೆ ಮಾಡಬಹುದೆಂದು ನನ್ನ ಅಭಿಪ್ರಾಯ. ಮತ್ತೆ ಕಳ್ಳಸಾಗಾಣಿಕೆ ವಿಷಯವಾಗಿ ನಮ್ಮ ಶಾಸಕ ಮಿತ್ರರು ಬಹಳ ಮಾತನಾಡಿದ್ದಾರೆ. ಕಳ್ಳಸಾಗಾಣಿಕೆ ವಿಷಯ ಈ ಸದನದಲ್ಲಿ ಬರುತ್ತಲೇ ಇದೆ. ನನ್ನ ಸೋಮವಾರಪೇಟೆ ತಾಲ್ಲೂಕಿನಲ್ಲಿ ಒಂದು ಕಾಲದಲ್ಲಿ ಬೇಕಾದಷ್ಟು ಗಂಧದ ಮರಗಳು ಇದ್ದವು. ಬಹುಶಃ ಮಾನ್ಯ ವಾಟಾಳ್ ನಾಗರಾಜ್ ಅವರು ಹೇಳಿದಹಾಗೆ ಇನ್ನು 50 ಅಥವಾ 100 ವರ್ಷ ಕಳೆದ ಮೇಲೆ ಮಕ್ಕಳು ಗಂಧದ ಮರವನ್ನು, ಕಾಡನ್ನು ಲೈಬ್ರರಿಗಳಲ್ಲಿ, ಪುಸ್ತಕದಲ್ಲಿ ನೋಡಲೇಬೇಕಾಗುತ್ತದೆ. ನಾವು ಇಂತಹ ಸ್ಥಿತಿಯಲ್ಲಿದ್ದೇವೆ. ಕಳ್ಳಸಾಗಾಣೆಯನ್ನು ನಿಲ್ಲಿಸುವುದು ಹೇಗೆ ಎಂದು ಒಂದು ವಿಷಯ. ಇವತ್ತು ಅಧಿಕಾರಿಗಳು ಯಾರಿದ್ದಾರೆ ಅವರಿಗೆ ಹೆಚ್ಚಿನ ಪ್ರೋತ್ಸಾಹ ಕೊಡಬೇಕಾಗುತ್ತದೆ. ಸತ್ಯವಂತ, ಒಳ್ಳೆಯ ಅಧಿಕಾರಿಗಳು ಇದ್ದಾರೆ. ನಮ್ಮ ಕೊಡಗು ಜಿಲ್ಲೆಯಲ್ಲಿ ಒಬ್ಬರು ಲಕ್ಷ್ಮಣ್ ಎನ್ನುವ ಡಿ.ಎಫ್.ಓ 7 ವರ್ಷ ಕೆಲಸ ಮಾಡಿದರು. ಅವರ ಏಳು ವರ್ಷಗಳ ಅವಧಿಯಲ್ಲಿ ಅವರು ನೆಟ್ಟ ಗಿಡಗಳು, ಎಳಿಸಿದ ಕಾಡು ಇವತ್ತು ನಾವು ನೋಡಬಹುದಾಗಿದೆ. ಭಾಗಮಂಡಲ, ತಲಕಾವೇರಿ ಭಾಗದಲ್ಲಿ ಏನೂ ಬೆಳೆಯದ ಸ್ಥಳದಲ್ಲಿ ಅವರು ಕಾಡನ್ನು ಬೆಳೆಸಿದ್ದಾರೆ. ಅವರನ್ನು ಶಿವಮೊಗ್ಗ ಜಿಲ್ಲೆಗೆ ಕನ್ಸರ್‌ವೇಟರ್ ಆಗಿ ಟ್ರಾನ್ಸ್‌ಫರ್ ಮಾಡಿದರು. ಈಗ ಬಳ್ಳಾರಿಯಲ್ಲಿದ್ದಾರೆ. ಅವರು ಎಲ್ಲಿ ಹೋಗಿದ್ದಾರೆ ಏನು ಆಗಿದ್ದಾರೆ ಎಂಬುದು ನನಗೆ ಗೊತ್ತಿಲ್ಲ. ಆದರೆ ಪೇಪರ್‌ನಲ್ಲಿ ಅವರ ಕಟಿಂಗ್ಸ್‌ಗಳು ಬರುತ್ತಿದೆ ಆದ್ದರಿಂದ ನನಗೆ ಗೊತ್ತಿದೆ. ಎಕ್ಸ್‌ಪರಿಮೆಂಟ್ ರಿಸರ್ಚ್ ಅನ್ನು ಅವರು ಬ್ಯಾಂಬೂ ಮೇಲೆ ಮಾಡಿದ್ದಾರೆ. "ಕೃಷಿ" ಎಂಬ ಪೇಪರ್‌ನಲ್ಲಿ ಅದರ ಬಗ್ಗೆ ವಿವರಗಳು ಬಂದಿದೆ. ಈ ಪೇಪರ್‌ನಲ್ಲಿ ನಾನು ನೋಡಿದಾಗ ಅವರ ಹೆಸರು ಇತ್ತು. ಅದಕ್ಕೋಸ್ಕರ ನನಗೆ ಅವರ ಮೇಲೆ ಬಹಳ ಒಳ್ಳೆಯ ಅಭಿಪ್ರಾಯ ಬಂತು. ಅವರು ಮೊದಲು ನಮ್ಮ ಕೊಡಗಿನಲ್ಲಿದ್ದರು, ಕೊಡಗಿನಲ್ಲಿದ್ದಾಗ ಒಳ್ಳೆಯ ಕೆಲಸವನ್ನು ಮಾಡಿ ಹೆಸರನ್ನು ಪಡೆದಿದ್ದರು, ಒಬ್ಬ ಮರದ ವ್ಯಾಪಾರಿಯೂ ಕೂಡ ಅವರ ಹತ್ತಿರ ಹೋಗುತ್ತಿರಲಿಲ್ಲ.

Sincere & faithful Officer made an experiment and research on the bamboos and one of his species which he had invented & which he has tried is even to-day said to be in the stage of being named as BAMBOO LAKSHMAN. ಹೀಗೆ ಕೇರಳದವರು ಆವರನ್ನು ಕರೆಯುತ್ತಿದ್ದರು. ಇನ್ನು ಶಿವಮೊಗ್ಗದಲ್ಲಿ ಬೇಕಾದಷ್ಟು ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಚಿಕ್ಕಮಗಳೂರಿನಲ್ಲಿರತಕ್ಕ ಮೇದಾರ ಜನಾಂಗದವರ ಅಭಿವೃದ್ಧಿ ಕೆಲಸವನ್ನು ಮಾಡಿದ್ದಾರೆ. ಅವರು ಬುಟ್ಟಿ ನೇಯುವುದಕ್ಕೆ ಬೇಕಾದಷ್ಟು ಬ್ಯಾಂಬೂ ಅನ್ನು ಕೊಡಿಸಿ ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಈ ಆಫೀಸರ್ ಬಳ್ಳಾರಿಯಲ್ಲಿದ್ದಾರೆ. ಅವರನ್ನು ಡ್ರೈಲ್ಯಾಂಡ್ ಡೆವಲಪ್‌ಮೆಂಟ್‌ಗೆ ವರ್ಗ ಮಾಡಿದ್ದಾರೆ. ನನಗೆ ರಿಸರ್ಚ್ ಮಾಡಲು ಜಾಗವಿಲ್ಲ. ಎಂದು ಅವರು ಬಳ್ಳಾರಿ ಶಾಸಕರೊಡನೆ ಮಾತನಾಡುತ್ತಿದ್ದರು. ಇಂತಹ ಒಳ್ಳೆಯ ಅಧಿಕಾರಿಗಳಿಗೆ ತಾವು ಪ್ರೋತ್ಸಾಹವನ್ನು ಕೊಡಬೇಕೆಂದು ನಾನು ಸನ್ಮಾನ್ಯ ಅರಣ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀಗಂಧದ ಕಳ್ಳಸಾಗಾಣಿಕೆ ಬಗ್ಗೆ ಶ್ರೀಮತಿ ಮೋಟಮ್ಮನವರು ಮೊನ್ನೆ ಮಾತನಾಡಿದರು, ಹಾಗೆಯೇ ಅನೇಕ ಜನ ಸದಸ್ಯರುಗಳು ಮಾತನಾಡಿದರು. ಶ್ರೀಗಂಧದ ಮರಗಳು ಕಳ್ಳತನವಾಗುತ್ತಿದೆ, ಅಧಿಕಾರಿಗಳು ಹಿಡಿಯುತ್ತಿಲ್ಲ, ಎಂದೆಲ್ಲಾ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ನಮ್ಮ ಕೊಡಗಿನಲ್ಲಿ ಅಂದರೆ ಕುಶಾಲನಗರದಲ್ಲಿ ಒಬ್ಬ ರೇಂಜ್ ಆಫೀಸರ್ ಪ್ರಭಾಕರ್ ಗಾಣಿಗ ಅನ್ನುವವರು ಇದ್ದಾರೆ. ಅವರು ನಾಲ್ಕುವರೆ ಲಕ್ಷ ರೂಪಾಯಿ ಬೆಲೆ ಬಾಳುವ ಸುಮಾರು 3 ಸಾವಿರ ಕೆ.ಜಿ. ಶ್ರೀಗಂಧವನ್ನು ತಮ್ಮ ಪ್ರಾಣವನ್ನು ಲೆಕ್ಕಿಸದೆ ಧೈರ್ಯ ಮಾಡಿ ಹಿಡಿದಿದ್ದಾರೆ. ಅವರು ಹಾಗೂ ಅವರ ಜೊತೆಯಲ್ಲಿ ಇದ್ದಂತಹ ನಾಲ್ಕು ಜನ ಸಿಬ್ಬಂದಿಯವರು ಈ ಕಳ್ಳಸಾಗಾಣಿಕೆ ಆಗುತ್ತಿದುದ್ದನ್ನು ಹಿಡಿದಿದ್ದಾರೆ. ಇದರ ಬಗ್ಗೆ ಪತ್ರಿಕೆಯಲ್ಲಿ ಬಂದಿದೆ. ಸರ್ಕಾರದ ಸ್ವತ್ತನ್ನು ಉಳಿಸಲು ಅವರು ತಮ್ಮ ಪ್ರಾಣವನ್ನು ಲೆಕ್ಕಿಸದೆ ಇಂತಹ ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಅದಕ್ಕೋಸ್ಕರ ಸೂಪರಿಂಟೆಂಡೆಂಟ್ ಆಫ್ ಪೋಲೀಸ್ ಡೆಪ್ಯುಟಿ ಕಮಿಷನರ್ ಆಫ್ ಕೂರ್ಗ್ ಮತ್ತು ಕನ್ಸರ್‌ವೇಟರ್ ಆಫ್ ಫಾರೆಸ್ಟ್ ಎಲ್ಲರೂ ಅವರಿಗೆ ಅಭಿನಂದನೆಯನ್ನು ಸಲ್ಲಿಸಿದ್ದಾರೆ. ಇವರ ಜೀಪ್ ನಿಂತಿದ್ದಾಗ ಲಾರಿಯೊಂದು ಬಂದು ಜೀಪನ್ನು ಹೊಡೆದುಕೊಂಡು ಮುಂದೆ ಹೋಗಲು ಪ್ರಯತ್ನ ಮಾಡಿದಾಗ, ಈ ಜೀಪು ಕಾವೇರಿ ನದಿಯಲ್ಲಿ ಬೀಳಬೇಕಾಗಿತ್ತು, ಆ ಸಂದರ್ಭದಲ್ಲಿ ಮೂರು ನಾಲ್ಕು ಜನರಿಗೆ ಗಾಯವಾಯಿತು. ಆದರೂ ಕೂಡ ಈ ರೇಂಜ್ ಆಫೀಸರ್‌ರವರು ಈ ಇಬ್ಬರನ್ನು ಹಿಡಿದು, ಅರೆಸ್ಟ್ ಮಾಡಿಸಿ, ಲಾರಿಯನ್ನು ರೇಂಜ್ ಆಫೀಸ್ ಮುಂದೆ ತಂದು ನಿಲ್ಲಿಸಿದ್ದಾರೆ. ಇದರ ಬಗ್ಗೆ ಕೇಸ್ ನಡೆಯುತ್ತಿದೆ. ಇಂತಹವರಿಗೆ ಸನ್ಮಾನ್ಯ ಮಂತ್ರಿಗಳು ಹೆಚ್ಚಿನ ಪ್ರೋತ್ಸಾಹ ನೀಡಬೇಕು. You have to award them. You have to give awards to this type of people; You have to appreciate the services done by this type of people. ಇಂತಹವರಿಗೆ ಅಪ್ರಿಶಿಯೆಟ್ ಮಾಡಬೇಕು. ಇಂತಹವರಿಗೆ ಅವಾರ್ಡ್ ಕೊಡಬೇಕು. It will be an encouragement to other persons also. ಇವತ್ತು ಕೊಡಗಿನಲ್ಲಿ ಅಥವಾ ಸೋಮವಾರ ಪೇಟೆಯಲ್ಲಿ ಹೆಚ್ಚು ಕಳ್ಳ ಸಾಗಾಣಿಕೆಯಾಗುತ್ತಿದೆ, ಇದನ್ನು ನಿಲ್ಲಿಸಬೇಕಾದರೆ ಬಹಳ ಪ್ರಯತ್ನ ಮಾಡಬೇಕು; ಇದು ಬರೇ ಒಂದು ತಿಂಗಳಿನಲ್ಲಿ ಸಾಧ್ಯವಿಲ್ಲ. ಇದನ್ನು ನಿಲ್ಲಿಸಲು ಒಂದು ಅಥವಾ ಎರಡು ತಿಂಗಳಿನಲ್ಲಿ ಸಾಧ್ಯವಿಲ್ಲ. You have to educate the people who are the natives there. ಆ ಜನಗಳಿಗೆ ಆ ಒಂದು ವಿಷಯದಲ್ಲಿ ಸರಿಯಾದ ಮಾಹಿತಿಯನ್ನು ಕೊಟ್ಟು ಅವರಿಗೆ ಪ್ರೋತ್ಸಾಹವನ್ನು ಕೊಡಬೇಕು. ನಿಮ್ಮ ಸಿಬ್ಬಂದಿಗಳು ಸರಿಯಾಗಿಲ್ಲ. ಇಡೀ ಕೊಡಗಿನಲ್ಲಿ ಎರಡು ಅರಣ್ಯ ಜೀಪುಗಳ ಸ್ಕ್ವಾಡ್ ಇದೆ. ಅರಣ್ಯ ಇಲಾಖೆಯಲ್ಲಿ ಎರಡು ಜೀಪ್‌ಗಳಿವೆ. ಪೋಲೀಸ್ ಇಲಾಖೆಯಲ್ಲಿ ಎರಡು ಜೀಪ್‌ಗಳಿವೆ. ನಾಲ್ಕು ಜೀಪ್‌ಗಳಿರುವಂತಹ ಸ್ಕ್ವಾಡ್ ಯಾವರೀತಿಯಲ್ಲಿ ಮಡಿಕೇರಿಯ ಮೂರು ತಾಲ್ಲೂಕುಗಳಲ್ಲಿ ಗಂಧದ ಕಳ್ಳರು ಇನ್ನಿತರ ಕಳ್ಳರನ್ನು ಹಿಡಿಯುವುದಕ್ಕೆ ಸಾಧ್ಯ? ಕಳ್ಳರನ್ನು ಹಿಡಿಯಲಿಕ್ಕೆ ಹೋಗುವುದಕ್ಕೆ ಸಾಧ್ಯವೇ ಇಲ್ಲ. ಉಪಕರಣಗಳು ಇಲ್ಲ, ಕೋವಿಗಳು ಇಲ್ಲ, ಅವರ ಹತ್ತಿರ ಯಾವುದೂ ಇಲ್ಲ. ಒಂದು ಸಂದರ್ಭದಲ್ಲಿ ಕುಶಾಲನಗರ ರೇಂಜ್ ಆಫೀಸರ್ ಕಳ್ಳಸಾಗಾಣಿಕೆ ಆಗತಕ್ಕ ವಿಷಯವನ್ನು ತಿಳಿದು ಆ

ಸ್ಥಳಕ್ಕೆ ಹೋಗುವಾಗ ಅವರಿಗೆ ಜೀಪಿಗೆ ಕಳ್ಳಸಾಗಾಣಿಕೆದಾರರು ಗುಂಡು ಹೊಡೆದು ಹೋಗಿಬಿಟ್ಟರು. ಅವರನ್ನು ಯಾರೂ ತಡೆಯಲಿಕ್ಕೆ ಆಗುತ್ತದೆ? ಮಾನ್ಯ ಅರಣ್ಯಮಂತ್ರಿಗಳಲ್ಲಿ ಕೇಳಿಕೊಳ್ಳುವುದು ಇಷ್ಟೆ, ಅರಣ್ಯ ಇಲಾಖೆಗೆ ಬೇಕಾದ ಸಿಬ್ಬಂದಿಯನ್ನು ಹೆಚ್ಚು ಕೊಡಿ. ಉಪಕರಣಗಳನ್ನು ಕೊಡಿ ಅದನ್ನು ಕೊಡದಿದ್ದರೆ ಏನೂ ಸಾಧ್ಯವಿಲ್ಲ. ನಿಮ್ಮ ವಿಷಯವನ್ನು ನಾವು ಕೇಳಿದ್ದೇವೆ. ನೀವು ಬಹಳ ವರ್ಷಗಳ ಕಾಲ ಮಂತ್ರಿಗಳಾಗಿದ್ದವರು. ಬಸವಲಿಂಗಪ್ಪನವರು ಏನಾದರೂ ಮನಸ್ಸು ಮಾಡಿದರೆ ಏನಾದರೂ ಯೋಚನೆ ಮಾಡಿದರೆ ಅದು ಆಗಿಯೇ ಆಗುತ್ತದೆ. You are not only a man of revolutionary thinking out also a man who take the things with determination. ಅದಕ್ಕೋಸ್ಕರ ನಾನು ಕೇಳಿಕೊಳ್ಳುವುದು ನಿಮ್ಮ ಕಾಲದಲ್ಲಿ ಈವೊಂದು ಅರಣ್ಯ ಇಲಾಖೆಯಲ್ಲಿರುವ ಭ್ರಷ್ಟರು ಕಳ್ಳಸಾಗಾಣಿಕೆದಾರರು ಏನು ಇದ್ದಾರೆ ಅವರನ್ನು ನಿರ್ನಾಮ ಮಾಡಿ ಕರ್ನಾಟಕದ ಫಾರೆಸ್ಟನ್ನು ಉಳಿಸಿದ್ದಾರೆಂದು ಹೇಳುವಂತಹ ಹೆಸರನ್ನು ತೆಗೆದುಕೊಳ್ಳಿಯೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನಾನು ನನ್ನ ಜಿಲ್ಲೆಯ ವಿಷಯ ನನ್ನ ತಾಲ್ಲೂಕಿನ ವಿಷಯವನ್ನು ಎರಡು ನಿಮಿಷಗಳಲ್ಲಿ ಮಾತನಾಡುತ್ತೇನೆ. ನಮ್ಮ ಜಿಲ್ಲೆಯಲ್ಲಿ ರೆಡಿಮ್ ಮತ್ತು ಅನ್‌ರೆಡಿಮ್ ಎಂದು ಎರಡು ಜಾಗಗಳಿವೆ. ಅದೂ ಅಲ್ಲದೆ ಸುಮಾರು 27 ತರಹ ವರೈಟೀಸ್ ಆಫ್ ಟೆನ್ಯೂರ್‌ಗಳು ಇವೆ. ಜಮ್ಮ, ಉಂಬಳಿ, ಸಾಗು, ರಾಜಮಾಣಿ, ಅಮಾಣಿ ಈಮಾಣಿ ಈ ವಿಷಯ ಗೊತ್ತಲ್ಲ It is most cumbersome procedure and cumbersome process also ನಾನು ನಿಮ್ಮನ್ನು ದಯವಿಟ್ಟು ಕೇಳಿಕೊಳ್ಳುವುದೇನೆಂದರೆ ನಿಮಗೆ ಗೊತ್ತಿರಬಹುದು. ಇದನ್ನೆಲ್ಲ ಮಾಡಿಫೈ ಮಾಡಿ ಒಂದು ಟೆನ್ಯೂರ್‌ಗೆ ತರಬೇಕೆಂದು ಕೇಳಿಕೊಳ್ಳುತ್ತೇನೆ. ರೆಡಿಮಾ ಮತ್ತು ಅನ್‌ರೆಡಿಮಾ ಎಂದು ಹೇಳುವ ಜಾಗದಲ್ಲಿರುವಂತಹ ಸ್ಯಾಂಡಲ್‌ವುಡ್ ಕಳ್ಳ ಸಾಗಾಣಿಕೆ ಆಗುತ್ತಿದೆ. ಆದರೆ ಜನಗಳಿಗೆ ಪ್ರೋತ್ಸಾಹ ಕೊಡಬೇಕೆಂದು ನಾನು ಆಗಲೇ ಹೇಳಿದ್ದೇನೆ. ಏತಕ್ಕೋಸ್ಕರ ಹೇಳುತ್ತಿದ್ದೇನೆಂದರೆ ಅನ್‌ರೆಡಿಮ್ ಜಾಗದಲ್ಲಿರುವಂತಹ ಗಂಧದ ಮರಗಳನ್ನು ತೆಗೆಯಬೇಕೆಂದು ನಾವು ಸರ್ಕಾರಕ್ಕೆ ಅರ್ಜಿಯನ್ನು ಬರೆದರೆ ಮೂರು ನಾಲ್ಕು ವರ್ಷಗಳಾದರೂ ಆ ಮರಗಳನ್ನು ತೆಗೆಯುವುದಕ್ಕೆ ಆಗುವುದಿಲ್ಲ. ಕಳ್ಳಸಾಗಾಣಿಕೆದಾರರು ಆ ಮರಗಳನ್ನು ಕಡಿದುಕೊಂಡು ಹೋಗುತ್ತಿದ್ದಾರೆ. ಅಂತಹ ಸಂದರ್ಭಗಳಲ್ಲಿ ಅಧಿಕಾರಿಗಳು ತೋಟದ ಮಾಲೀಕರನ್ನು ಹಿಡಿಯುತ್ತಾರೆ. ಅವರುಗಳ ಮೇಲೆ ಕೇಸ್ ಹಾಕುತ್ತಾರೆ. ಅವರಿಗೆ ತೊಂದರೆ ಕೊಡುತ್ತಾರೆ. ಗಂಧದ ಮರಗಳನ್ನು ತೆಗೆಯಬೇಕೆಂದು ಅರ್ಜಿ ಕೊಟ್ಟರೆ ಅಂತಹ ಪೇಪರ್ ಒಂದು ತಿಂಗಳೊಳಗೆ ಪ್ರೋಸಸ್ ಆಗಬೇಕು. ಮರಗಳನ್ನು ತೆಗೆಯಲಿಕ್ಕೆ ಪರ್ಮಿಶನ್ ಕೊಡಲು ನಿಧಾನ ಮಾಡುವುದರಿಂದ ಕಳ್ಳಸಾಗಾಣಿಕೆದಾರರು ತೆಗೆದು ಕೊಂಡು ಹೋಗುತ್ತಾರೆ. ಅವರ ಪಾಲಾಗದಂತೆ ಭೂಮಾಲೀಕರಿಗೆ ಪ್ರೋತ್ಸಾಹ ಕೊಡಬೇಕು. ಇಲ್ಲದಿದ್ದರೆ ಕಳ್ಳಸಾಗಾಣಿಕೆದಾರರಿಗೆ ಸಹಾಯವಾಗುತ್ತದೆಂದು ಹೇಳುವಂತಹ ವಿಷಯವನ್ನು ನಾನು ಹೇಳುತ್ತೇನೆ. ಅನ್‌ರೆಡಿಮ್ ಜಾಗದಲ್ಲಿರುವಂತಹ ಮರಗಳು ಸರ್ಕಾರದ್ದು ಎಂದು ಘೋಷಣೆ ಮಾಡಿಕೊಂಡು ಬಂದಿದ್ದಾರೆ. ಆದರೆ ಆ ಮರಗಳನ್ನು ಯಾರು ಘೋಷಣೆ ಮಾಡಿಕೊಂಡು ಬಂದಿರುತ್ತಾರೆ ಅವು ಅವರಿಗೆ ಸಲ್ಲಬೇಕು ಎನ್ನುವ ಮನವಿಯನ್ನು ಸರ್ಕಾರದ ಮುಂದಿಟ್ಟಿದ್ದೇವೆ. ಅದು ಇದುವರೆಗೂ ತೀರ್ಮಾನವಾಗಿಲ್ಲ. ನಮಗೆ ಬೇಕಾದ ಮರಗಳು 150 ಸಿ ಎಫ್ ಟಿ ಮರವನ್ನು ತೆಗೆದುಕೊಳ್ಳುವ ಆರ್ಡರ್ ಮೊದಲು ಇತ್ತು. ಅದು ಇನ್ನು ಕಂಟಿನ್ಯು ಆಗುತ್ತಾ ಬಂದಿದೆ. ನಾವು ಮನೆ ಕಟ್ಟಿಕೊಳ್ಳಲಿಕ್ಕೆ, ಕೊಟ್ಟಿಗೆ ಕಟ್ಟಿಕೊಳ್ಳಲಿಕ್ಕೆ ಆ 50 ಸಿ ಎಫ್ ಟಿ ಮರ ಬೇಕಾದಗೆ ಡಿ ಎಫ್ ಓ ಗೆ ಅರ್ಜಿಯನ್ನು. ಕೊಡ ಬೇಕು. ಅದು ಮೇಲೆ ಪ್ರೊಸಸ್ ಆಗಿ ಬರಬೇಕಾದರೆ 3-4 ವರ್ಷಗಳಾಗಬೇಕಾಗುತ್ತದೆ. ಅಷ್ಟರವರೆಗೆ ಮನೆಯನ್ನೂ ಕಟ್ಟುವುದಕ್ಕಾಗುವುದಿಲ್ಲ, ಕೊಟ್ಟಿಗೆಯನ್ನೂ ಕಟ್ಟುವುದಕ್ಕಾಗುವುದಿಲ್ಲ. ಇದರಿಂದ ಜನಗಳು ಯಾವಗಲೂ ಹೋಗಿಬಿಟ್ಟು ಡಿ.ಎಫ್.ಒ. ಕಛೇರಿಯ ಎದುರು, ಹಾಗೂ ವಲಯ ಅರಣ್ಯ ಅಧಿಕಾರಿಗಳ ಕಛೇರಿಯ ಮುಂದುಗಡೆ ಲಾಗ ಹೊಡೆದುಕೊಂಡು ನಿಂತಿರುತ್ತಾರೆ. ನಿಮ್ಮ ಕಛೇರಿಗಳಿಗೆ ಅರ್ಜಿ ಬಂದರೆ ಅನ್-ರಿಡೀಮ್ಡ್ ಲ್ಯಾಂಪ್‌ನಲ್ಲಿರತಕ್ಕ ಮರಗಳನ್ನು ಕೊಟ್ಟಿಗೆ ಕಟ್ಟುವುದಕ್ಕೆ ಬೇಕು ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಬೇಕು, ಮರ ಕಡಿಯುವುದಕ್ಕೆ ಪರ್ಮಿಷನ್ ಬೇಕು ಎಂದು ಅರ್ಜಿ ಹಾಕಿದರೆ ಆದಷ್ಟು ಬೇಗ ಆ ಅರ್ಜಿಯನ್ನು ಪ್ರೊಸಸ್ ಮಾಡಿ ಆರ್ಡರ್ ಕೊಡುವಂತೆ ಸಂಬಂಧಪಟ್ಟ

ಅಧಿಕಾರಿಗಳಿಗೆ ಆದೇಶವನ್ನು ತಾವು ನೀಡಬೇಕು. ಈಗ ಮಾನ್ಯ ಮಂತ್ರಿಗಳು ಒಂದು ಸ್ಟೇಟ್‌ಮೆಂಟ್‌ನ್ನು ಕೊಟ್ಟಿದ್ದಾರೆ. ಅದೇನೆಂದರೆ ಪಶ್ಚಿಮ ಘಟ್ಟದಲ್ಲಿರುವ ಮರಗಳನ್ನು ಯಾರೂ ಕಡಿಯುವುದಕ್ಕೆ ಬಿಡುವುದಿಲ್ಲವೆಂದು ಹೇಳುವಂತಹ ವಿಷಯವನ್ನು ಪತ್ರಿಕೆಯಲ್ಲಿ ಹೇಳಿದ್ದೀರಿ ಒಳ್ಳೆಯದು. ಅದಕ್ಕೆ ನಾವೂ ಕೂಡ ನಮ್ಮ ಸಹಕಾರ ಕೊಡುತ್ತೇವೆ. ಆದರೆ ನಮ್ಮ ಜಾಗದಲ್ಲಿರುವ ಮರಗಳನ್ನು ನಮ್ಮ ಉಪಯೋಗಕ್ಕೆ, ನಮ್ಮ ಅನುಕೂಲಕ್ಕೆ ಅಂದರೆ ನಮ್ಮ ಕೊಟ್ಟಿಗೆಯನ್ನು ಕಟ್ಟುವುದಕ್ಕೆ, ಮನೆಗಳನ್ನು ಕಟ್ಟುವುದಕ್ಕೆ ಅವಕಾಶ ಕೊಡದಿದ್ದರೆ ಬಹಳ ಅನ್ಯಾಯ ಮಾಡಿದಂತಾಗುತ್ತದೆ. ಖಂಡಿತವಾಗಿ ಆ ದಿಸೆಯಲ್ಲಿ ಮಾನ್ಯ ಮಂತ್ರಿಗಳು ಸಹಕಾರ ಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಮತ್ತೆ ಆರ್.ಎಫ್.ಓ. ಕಛೇರಿಯ ಆವರಣದಲ್ಲಿ ಕೊನೆಯಪಕ್ಷ 50 ಕಾರುಗಳು, 20 ಟ್ರಕ್‌ಗಳು ನಿಂತಿರುವುದನ್ನು ನಾವು ಕಾಣುತ್ತೇವೆ. ಕಳ್ಳಸಾಗಾಣಿಕೆಯನ್ನು ಮಾಡುತ್ತಿದ್ದಂತಹ ವಾಹನಗಳನ್ನು ಕಾನ್‌ಫಿಸಿಕೇಟ್ ಮಾಡಿಕೊಳ್ಳುತ್ತಾರೆ. ಕೇಸನ್ನು ಹಿಡಿದು, ಆ ಕೇಸು ರುಜುವಾತಾಗಬೇಕಾದರೆ ಕಡೆಯ ಪಕ್ಷ 5-6 ವರ್ಷಗಳಾಗುತ್ತವೆ. ನಿಮ್ಮದೆ ಅಂಕಿ ಅಂಶಗಳ ಪ್ರಕಾರ ನೀವೇ ಕೊಟ್ಟಿರತಕ್ಕ ಪುಸ್ತಕದಲ್ಲಿ ಒಂದು ಸಾವಿರ ವೆಹಿಕಲ್‌ಗಳನ್ನು ಹಿಡಿದಿದ್ದೇವೆಂದು ತಿಳಿಸಿದ್ದೀರಿ. 1,000 ವೆಹಿಕಲ್ಸ್‌ಗಳಲ್ಲಿ 750 ಟ್ರಕ್ಸ್‌ಗಳು ಒಂದೊಂದು ಟ್ರಕ್‌ಗೂ ಕಡೇ ಪಕ್ಷ. ಅದಕ್ಕೋಸ್ಕರ ಯಾವ ಒಂದು ವಾಹನವನ್ನು ಆ ಕಳ್ಳಸಾಗಾಣಿಕೆ ವಿಷಯದಲ್ಲಿ ಹಿಡಿಯುತ್ತಿರೋ ಆದಷ್ಟು ಬೇಗನೆ ಆ ಕೇಸನ್ನು ತೀರ್ಮಾನ ಮಾಡಿ.

ಶ್ರೀ ಬಿ. ಬಸವಲಿಂಗಪ್ಪ:- ರೆಡೀಮ್ಡ್ ಮತ್ತು ಅನ್ ರೆಡೀಮ್ಡ್ ಜಮೀನುಗಳು ಅಂತ ಏನು ಇವೆ ಕೂರ್ಗ್‌ನಲ್ಲಿ ಇದೆ, ಅದು ಬಹಳ ಐತಿಹಾಸಿಕವಾದ ಭೂಮಿಗಳು. ಅದರ ಚರಿತ್ರೆ ಬೇರೆ. ಆದಷ್ಟು ಜಾಗ್ರತೆ ಸರ್ಕಾರ ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತದೆ ಕಾರುಗಳ ಬಗ್ಗೆ ಮಾನ್ಯ ಸದಸ್ಯರು ಹೇಳಿದ್ದಾರೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಸಾವಿರಾರು ವೆಹಿಕಲ್ಸ್ ಇವೆ. ಆದಷ್ಟು ಶೀಘ್ರವಾಗಿ ಕಾನೂನು ರೀತ್ಯ ಬಗೆಹರಿಸುವುದಕ್ಕೆ ನಾವು ತೀರ್ಮಾನ ತೆಗೆದುಕೊಂಡಿದ್ದೇವೆ, ಅದನ್ನು ನಾವು ಬಗೆಹರಿಸುತ್ತೇವೆ.

ಶ್ರೀ ಎ.ಎಂ. ಬೆಳ್ಳಿಯಪ್ಪ:- ನನಗೆ ಈ ಸದನದಲ್ಲಿ ಮಾತನಾಡುವುದಕ್ಕೆ ಆಸ್ಪದ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ.ಎಚ್. ಬನ್ನಿಕೋಡ್ (ಹಿರೇಕೆರೂರು):- ಮಾನ್ಯ ಅಧ್ಯಕ್ಷರೆ, ಕೆ.ಪಿ.ಎಲ್ ಬಗ್ಗೆ ರೂಲ್ 68ರ ಪ್ರಕಾರ ಪ್ರಶ್ನೆಯೊಂದನ್ನು ಕೇಳಿದ್ದೆ. ಅದರ ಬಗ್ಗೆ ಅರ್ಧ ಗಂಟೆ ಅವಕಾಶ ಚರ್ಚೆ ಮಾಡುವುದಕ್ಕೆ ಕೊಡುತ್ತೇವೆಂದು ಮಾನ್ಯ ಅಧ್ಯಕ್ಷರು ಹೇಳಿದ್ದರು. 10 ನಿಮಿಷದಲ್ಲಿ ಮುಗಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಇಲ್ಲದಿದ್ದರೆ ಸ್ವಲ್ಪ ಅವಕಾಶ ಕೊಡಬೇಕು.

ಛೇರ್ಮನ್:- 10 ನಿಮಿಷದಲ್ಲಿ ಮುಗಿಸಿ ಏಕೆಂದರೆ 4-00 ಗಂಟೆಗೆ ಮಂತ್ರಿಗಳನ್ನು ಉತ್ತರ ಕೊಡುವುದಕ್ಕೆ ಕರೆಯಬೇಕಾಗುತ್ತದೆ. ಇನ್ನೂ ಸದಸ್ಯರೂ ಮಾತನಾಡುವವರು ಇದ್ದಾರೆ. 10 ನಿಮಿಷದಲ್ಲಿ ಮುಗಿಸಿ.

ಶ್ರೀ ಬಿ.ಎಚ್. ಬನ್ನಿಕೋಡ್:- ಮಾನ್ಯ ಅರಣ್ಯ ಸಚಿವರ ಬೇಡಿಕೆ ಮೇಲೆ ಏನು ಈ ರಾಜ್ಯದ ಜನತೆಗೆ ಸಂಬಂಧಪಟ್ಟ 75 ಸಾವಿರ ಎಕರೆ ಸಿ ಮತ್ತು ಡಿ. ಕಂದಾಯ ಭೂಮಿಯನ್ನು ಕೆ.ಪಿ.ಎಲ್ ಎಂಬ ಜಂಟಿ ಕಂಪನಿಗೆ ರಾಜ್ಯ ಸರ್ಕಾರ ಕೊಟ್ಟಿರುವ ಬಗ್ಗೆ ಮೊದಲನೆಯದಾಗಿ ಇಲ್ಲಿ ಪ್ರಸ್ತಾಪಿಸಲಿಕ್ಕೆ ಇಷ್ಟಪಡುತ್ತೇನೆ. ಬಡವರಿಗೆ ಮನೆ ಕಟ್ಟಿಕೊಳ್ಳುವುದಕ್ಕೆ ಹಿಂದುಳಿದವರ್ಗದವರಿಗೆ, ಹರಿಜನ-ಗಿರಿಜನರಿಗೆ ಅಥವಾ ಬಡವರಿಗೆ ಇವತ್ತು ಭೂಮಿಯನ್ನು ಕೊಡುವುದಕ್ಕೆ ಕಾನೂನು ಮಾಡಿಲ್ಲ. ಒಂದು ವೇಳೆ ಅವರು ಎಲ್ಲಿಯಾದರೂ ಒತ್ತುವರಿ ಮಾಡಿದ್ದೇ ಆದರೆ ಅವರಿಗೆ ದಂಡ ಹಾಕುತ್ತೀರಿ, ಕ್ರಿಮಿನಲ್ ಕೇಸ್ ಹಾಕುತ್ತೀರಿ. ಬಡವರು ಯಾರು ಇದ್ದಾರೆ, ಅವರು ತನ್ನ ಹೊಟ್ಟೆ ಪಾಡಿಗಾಗಿ ದುಡಿಯಬೇಕೆಂಬ ಉದ್ದೇಶದಿಂದ ಭೂಮಿಯನ್ನು ಸಾಗುವಳಿ ಮಾಡುತ್ತೇವೆ ನಮಗೆ ಭೂಮಿಯನ್ನು ಕೊಡಿ ಅಂದರೆ ಅವರಿಗೆ ಕೊಡಲಿಕ್ಕೆ ಕಾನೂನು ಕಟ್ಟಲೆಗಳು ಅವಕಾಶ ನೀಡುತ್ತಿಲ್ಲವೆಂದು ಹೇಳುತ್ತೀರಿ. ಆ ಜನರಿಗೆ ಅವಕಾಶ ಮಾಡಿಕೊಡುವುದಕ್ಕೆ ತಾವು ಸಿದ್ದರಿಲ್ಲ. ಮಾನ್ಯಸದಸ್ಯರು ಇವತ್ತು ಪದೇಪದೇ ಹೇಳುತ್ತಿದ್ದಾರೆ, ಹರಿಜನ-ಗಿರಿಜನರು, ಹಿಂದುಳಿದವರು, ಬಡವರು ಎಂಬ ಮಾತನ್ನು. ಈ ರಾಜ್ಯದಲ್ಲಿ ಇಲ್ಲಿಯವರೆಗೆ

ಅವರಿಗೆ ಅನುಕೂಲವನ್ನು ಮಾಡುವುದಕ್ಕೆ ಆಗಿದೆಯೆ? ನಾವು ಇವತ್ತು 43 ವರ್ಷಗಳಿಂದ ಹೇಳುತ್ತಿದ್ದೇವೆ. ಸಮಾಜವಾದ ಎಂದು ಹೇಳುತ್ತಿದ್ದೇವೆ. ಬಡವರ ಪರವಾಗಿ ಹಿಂದುಳಿದವರ ಪರವಾಗಿ ಗರೀಬಿ ಹಟಾವೋ ಎಂದು ಹೇಳುತ್ತಿದ್ದೇವೆ. ಇಲ್ಲಿ ಇರತಕ್ಕಂಥ ಬಿರ್ಲಾ ಎಂಬ ಬಂಡವಾಳಶಾಹಿ, ಕರ್ನಾಟಕ ಸರ್ಕಾರದೊಂದಿಗೆ ಸೇರಿಕೊಂಡು ಕೆ.ಪಿ.ಎಲ್. ಎಂಬ ಜಂಟಿ ಸಂಸ್ಥೆ ಮಾಡಿಕೊಂಡು ಈ ರಾಜ್ಯದ ಬಡವರಿಗೆ ಸೇರಬೇಕಾದಂಥ, ಹರಿಜನ-ಗಿರಿಜನರಿಗೆ ಸಿಗಬೇಕಾದಂಥ 75 ಸಾವಿರ ಎಕರೆ ಜಮೀನನ್ನು ನೀಲಗಿರಿ ಬೆಳೆಯಲಿಕ್ಕೆ, ಹರಿಹರದಲ್ಲಿ ಇರತಕ್ಕಂಥ ಪಾಲಿಫೈಬರ್ಸ್ ಎಂಬ ಬಿರ್ಲಾ ಕಂಪನಿಗೆ ಅಲ್ಲಿ ಕಚ್ಚಾವಸ್ತು ತಯಾರು ಮಾಡುವುದಕ್ಕಾಗಿ ಈ ಅರಣ್ಯ ಭೂಮಿಯನ್ನು ಬಳಸಲಾಗುತ್ತಿದೆ. ಈ ಗಿಡಗಳನ್ನು ಬೆಳೆಸಿ ಏಳು ವರ್ಷಗಳಲ್ಲಿ ಕಟಾವು ಮಾಡಿ ಈ ನೀಲಗಿರಿ ಗಿಡಗಳಿಂದ ಪಲ್ಪ್ ತೆಗೆಯುತ್ತಾರೆ, ಬಹಳ ಉತ್ತಮವಾದಂಥ ಬಟ್ಟೆ ತಯಾರು ಮಾಡುವುದಕ್ಕಾಗಿ ಈ ಪಲ್ಪ್‌ನಿಂದಾಗಿ ರೈತರು ಬೆಳೆಯತಕ್ಕಂಥ ಡಿಸಿ ಎಚ್-4 ಅಥವಾ ವರಲಕ್ಷ್ಮಿ ಉದ್ದೆಳೆ ಹತ್ತಿಗೆ ಸಿಗಬೇಕಾದಂಥ ನ್ಯಾಯವಾದ ಬೆಲೆ ಸಿಗದಂತಾಗಿದೆ. ಈ ರೈತರಿಗೆ ನ್ಯಾಯವಾಗಿ ದೊರೆಯಬೇಕಾದಂಥ ಬೆಲೆ ಸಿಗದೆ ರೈತರು ಇವತ್ತು ಈ ದೇಶದಲ್ಲಿ, ರಾಜ್ಯದಲ್ಲಿ ದಿವಾಳಿ ಸ್ಥಿತಿಗೆ ಬರುವುದಕ್ಕೆ ಈ ಸರ್ಕಾರಗಳ ನೀತಿಗಳು ಕಾರಣ. ಒಬ್ಬ ಬಿರ್ಲಾಗೆ 75 ಸಾವಿರ ಎಕರೆ ಕೊಟ್ಟು ರೈತ ಬೆಳೆದಂಥ ಹತ್ತಿಗೆ ಬೆಲೆ ಸಿಗದಂತೆ ಮಾಡಿ. ಆ ಒಂದು ಉದ್ದೆಳೆ ಹತ್ತಿಗೆ ರಾಜ್ಯದಲ್ಲಿ ಸಿಗತಕ್ಕಂಥ ಬೆಲೆ ಏನಿದೆ ಅದು ಕುಸಿಯಲಿಕ್ಕೆ ಇದೇ ಕಾರಣವಾಗಿದೆ. ನಾನು ಮುಖ್ಯವಾಗಿ ಈ 75 ಸಾವಿರ ಎಕರೆ ಭೂಮಿಯನ್ನು ಯಾವರೀತಿ ಕೊಟ್ಟರು ಏನು ಎಂಬುದನ್ನು ಇಲ್ಲಿ ಕೇಳುವುದಕ್ಕೆ ಇಚ್ಛೆಪಡುತ್ತೇನೆ. ಅನೇಕ ಸಾರಿ ಈ ವಿಚಾರ ಇಲ್ಲಿ ಪ್ರಸ್ತಾಪವಾಗಿದೆ, ಇದರ ಬಗ್ಗೆ ಕ್ರಮ ಕೈಗೊಳ್ಳುತ್ತೇವೆ ಎಂದು ಹೇಳುತ್ತಾರೆ. ಆದರೆ ಬಿರ್ಲಾ ಬಂಡವಾಳಶಾಹಿಯ ಬುಟ್ಟಿಗೆ ಬಿದ್ದಂಥ ರಾಜಕಾರಣಿಗಳು, ಅಧಿಕಾರಿಗಳು ಈವರೆಗೆ ಇದರ ಬಗ್ಗೆ ಕ್ರಮ ತೆಗೆದುಕೊಂಡಿಲ್ಲ. ಇದು 75 ಸಾವಿರ ಎಕರೆ ಭೂಮಿಯನ್ನು, ಬಡವರಿಗೆ, ರಾಜ್ಯದ ಜನತೆಗೆ ಸೇರಿದಂಥ ಭೂಮಿಯನ್ನು ಬಂಡವಾಳಶಾಹಿಗೆ ಕೊಟ್ಟಂತಹ ಒಂದು ನಿದರ್ಶನ. ಮೊನ್ನೆ ನಾನು ಕೇಳಿದಂಥ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರ ಕೊಟ್ಟಾಗ ಇದನ್ನು ಹೊರಗೆಡವಿದ್ದಾರೆ. ಅದನ್ನು ಈ ಸದನದ ಮುಂದೆ, ರಾಜ್ಯದ ಜನತೆಯ ಮುಂದೆ ತರಲಿಕ್ಕೆ ಇಚ್ಛೆಪಡುತ್ತಿದ್ದೇನೆ. ನಾನು ಕೇಳಿದಂಥ ಪ್ರಶ್ನೆ ಇಲ್ಲಿ ಅನ್‌ಸ್ಟಾರ್ಡ್ ಪ್ರಶ್ನೆಯಾಗಿ ಬಂದಿದೆ. ಲಿಖಿತ ಮೂಲಕ ಉತ್ತರ ಕೊಟ್ಟಿರುವುದರಿಂದ ಚರ್ಚೆಗೆ ಅವಕಾಶ ಸಿಗಲಿಲ್ಲ. ಇದರಲ್ಲಿ ಕೆ.ಪಿ.ಎಲ್.ಗೆ 75 ಸಾವಿರ ಎಕರೆ ಕೊಟ್ಟಂಥ ಭೂಮಿ ಅದು ಸಿ ಅಂಡ್ ಡಿ ಕ್ಲಾಸ್ ಅರಣ್ಯ ಭೂಮಿ ಹಾಗೂ ಸಾಗುವಳಿಯ ಕಂದಾಯ ಭೂಮಿ ಸಹಿತ ಸೇರಿದೆ ಇದರ ಅಂಕಿ ಅಂಶಗಳನ್ನು ಸಹಿತ ಇಲ್ಲಿ ಕೊಟ್ಟಿದ್ದಾರೆ. ಒಟ್ಟು 75 ಸಾವಿರ ಎಕರೆ ಭೂಮಿಯಲ್ಲಿ ಅವರು ಹೇಳಿದ ಪ್ರಕಾರ 8,683 ಹೆಕ್ಟೇರ್ ಈಗಾಗಲೇ ಅವರ ತಾವಾಕ್ಕೆ ಕೊಟ್ಟಿದೆ, ಅಲ್ಲಿ ಗಿಡಗಳನ್ನು ಹಚ್ಚಿದ್ದಾರೆ ಎಂಬ ಮಾತನ್ನು ಅವರು ಹೇಳಿದ್ದಾರೆ. ಉಳಿದ ಭೂಮಿಯಲ್ಲಿ ನೀಲಗಿರಿ ಗಿಡಗಳನ್ನು ನೆಡುವವರಿದ್ದಾರೆ. 'ಕೇಂದ್ರ ಸರ್ಕಾರದ ಅರಣ್ಯ ಕಾನೂನು ಪ್ರಕಾರ ಕರ್ನಾಟಕ ಸರ್ಕಾರ ಈ 75 ಸಾವಿರ ಎಕರೆ ಭೂಮಿಯನ್ನು ಈ ಒಂದು ಜಂಟಿ ಕಂಪನಿಗೆ ಕೊಡಲಿಕ್ಕೆ ಕಾನೂನಿನಲ್ಲಿ ಅವಕಾಶ ಇಲ್ಲ' ಎಂದು ಕೇಳಿದ್ದಕ್ಕೆ 'ಹೌದು' ಎಂದು ಉತ್ತರ ಕೊಟ್ಟಿದ್ದಾರೆ. ಜಂಟಿ ಕಂಪನಿಗಳಿಗೆ ಈ ರೀತಿ ಭೂಮಿ ಕೊಡಬಾರದು ಎಂದು ಕೇಂದ್ರಸರ್ಕಾರದ ಕಾನೂನು ಇದ್ದರೂ ಸಹಿತ ಕಾನೂನಿಗೆ ವಿರೋಧವಾಗಿ ನಾವು ಈ ಭೂಮಿಯನ್ನು ಸರ್ಕಾರ ಕೊಟ್ಟಿದೆ ಎಂದು ಅವರು ಒಪ್ಪಿಕೊಂಡಿದ್ದಾರೆ. "ಕೇಂದ್ರ ಅರಣ್ಯ ಸಂರಕ್ಷಣಾ ಕಾಯಿದೆ ಮೇರೆಗೆ ಅರಣ್ಯ ಭೂಮಿಯನ್ನು ಕೇಂದ್ರ ಸರ್ಕಾರದ ಪೂರ್ವಾನುಮತಿ ಇಲ್ಲದೆ ಹಸ್ತಾಂತರಿಸಲು ಬರುವುದಿಲ್ಲ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ?" ಎಂದು ಕೇಳಿದ ಪ್ರಶ್ನೆಗೆ "ಗಮನಕ್ಕೆ ಬಂದಿದೆ" ಎಂದು ಉತ್ತರಿಸಿದ್ದಾರೆ. "ಹಾಗಿದ್ದರೆ ಕರ್ನಾಟಕ ಪಲ್ಪ್‌ವುಡ್ ಕಂಪನಿಗೆ ಅರಣ್ಯ ಭೂಮಿಯನ್ನು ಹಸ್ತಾಂತರಿಸುವುದಕ್ಕೆ ಕೇಂದ್ರಸರ್ಕಾರದ ಅನುಮತಿ ಪಡೆಯಲಾಗಿದೆಯೇ?" ಎಂದು ಪ್ರಶ್ನೆ ಕೇಳಿದ್ದೆ, ಅದಕ್ಕೆ ಉತ್ತರ ಕೊಟ್ಟಿದ್ದಾರೆ. ಈ ರೀತಿ ಇದ್ದರೂ ಸಹಿತ ಅರಣ್ಯ ಕಾನೂನಿಗೆ ವಿರುದ್ಧವಾಗಿ ಮತ್ತು ಹೀಗೆ ಹಸ್ತಾಂತರ ಮಾಡಿದ್ದು ಈ ರಾಜ್ಯದ ಜನತೆಗೆ ದ್ರೋಹ ಬಗೆದಂತಾಗಿದೆ. ಬಡವರ ಪರವಾಗಿ, ಹಿಂದುಳಿದವರ ಪರವಾಗಿದ್ದೇವೆ

ಎಂದು ಹೇಳಿದ್ದುದು ಇಲ್ಲಿ ಸುಳ್ಳಾಗಿದೆ. ಈ ರಾಜ್ಯದಲ್ಲಿ ಯಾರು ಮತ ಕೊಟ್ಟಿದ್ದಾರೆ, ಯಾರು ಸಾರ್ವಭೌಮರಾಗಿದ್ದಾರೆ ಈ ದೇಶದ ಮಾಲೀಕರು, ಈ ಮಾಲೀಕರಿಗೆ ಮತದಾರರಿಗೆ ಮೋಸ ಮಾಡಿದ್ದಾರೆ ಎಂಬ ಮಾತನ್ನು ಇಲ್ಲಿ ಹೇಳುವುದಕ್ಕೆ ಇಚ್ಛಿಸುತ್ತೇನೆ.

ಒಬ್ಬ ಬಂಡವಾಳಶಾಹಿಯ ಅಭಿವೃದ್ಧಿಗಾಗಿ ಈ ಒಂದು ಕಾರ್ಯಕ್ರಮವನ್ನು ಹಾಕಿಕೊಂಡು, ರಾಜ್ಯವನ್ನು ಲೂಟಿ ಮಾಡುವುದಕ್ಕೆ ಹೊರಟಿದ್ದೀರಿ. ಈ ದಿಸೆಯಲ್ಲಿ ಮತ್ತೆ, ಈ ವಿಚಾರವಾಗಿ ಪರಿಸರ ಅರಣ್ಯವಾದಿಗಳು ಸುಪ್ರೀಂ ಕೋರ್ಟಿಗೆ ಹೋದರು, ಇದು ಕೊಟ್ಟಿದ್ದು ಸರಿಯಿಲ್ಲ, ಮೂಲತಃ ಇದನ್ನು ರದ್ದುಮಾಡಿ, ಇದು ಕಾನೂನು ಬಾಹಿರವಾಗಿದೆ, ಇದನ್ನು ರದ್ದುಪಡಿಸಬೇಕೆಂದು ಸುಪ್ರೀಂಕೋರ್ಟಿಗೆ ಹೋದಾಗ, ಸುಪ್ರೀಂಕೋರ್ಟಿನವರು ತಡೆಯಾಜ್ಞೆ ಕೊಟ್ಟರು. ಯಾವುದೇ ಭೂಮಿ ಕರಾರಾಗಿದ್ದರೂ ಸಹಿತ, ಆ ಕರಾರು ಪ್ರಕಾರ ಕೆ.ಪಿ.ಎಲ್.ಗೆ ಕೊಡಬಾರದು ಎಂದು ಹೇಳಿದರು. ಸುಪ್ರೀಂ ಕೋರ್ಟಿನವರು ತಡೆಯಾಜ್ಞೆ ಕೊಟ್ಟರೂ, ಆ ತಡೆಯಾಜ್ಞೆಯನ್ನು ಉಲ್ಲಂಘಿಸಿ, ರಾಜ್ಯಸರ್ಕಾರದ ಅಧಿಕಾರಿಗಳು, ರಾಜ್ಯಸರ್ಕಾರದ ಭೂಮಿಯನ್ನು ಕೆ.ಪಿ.ಎಲ್.ಗೆ ಕೊಟ್ಟಿದ್ದಾರೆಯೇ ಎಂಬ ಪ್ರಶ್ನೆಯನ್ನು ನಾನು ಹಿಂದೆ ಕೇಳಿದ್ದೆ. ಇದಕ್ಕೆ ಕೊಟ್ಟಿರುವ ಉತ್ತರವನ್ನು ಓದುತ್ತೇನೆ. ಕಂಪನಿಯ ವಿರುದ್ಧ ಸುಪ್ರೀಂ ಕೋರ್ಟ್ ಮೊಕದ್ದಮೆ ಹಾಕಲಾಗಿದೆಯೇ? ಮತ್ತು ತಡೆಯಾಜ್ಞೆ ಬಂದಿದೆಯೆ ಎಂದು ಕೇಳಿದ್ದಕ್ಕೆ, ಕಂಪನಿ ವಿರುದ್ಧ ಸುಪ್ರೀಂ ಕೋರ್ಟಿನಲ್ಲಿ ಮೊಕದ್ದಮೆ ಹಾಕಲಾಗಿದೆ, ನ್ಯಾಯಾಲಯದ ತಡೆಯಾಜ್ಞೆಯನ್ನು 24-3-87ರಲ್ಲಿ ನೀಡಿರುತ್ತದೆ ಎಂಬ ಉತ್ತರವನ್ನು ಕೊಟ್ಟಿದ್ದಾರೆ. ತಡೆಯಾಜ್ಞೆ ನೀಡಿದ ಮೇಲೆ, ಕಂಪನಿಗೆ ಎಷ್ಟು ಭೂಮಿಯನ್ನು ಹಸ್ತಾಂತರಿಸಲಾಗಿದೆ ಎಂಬ ಪ್ರಶ್ನೆಗೆ, ಈ ರೀತಿ ಉತ್ತರ ಕೊಟ್ಟಿರುತ್ತಾರೆ. ತಡೆಯಾಜ್ಞೆ ನೀಡಿದ ಮೇಲೆ ಕಂಪನಿಗೆ, 14,560.90 ಹೆಕ್ಟೇರ್ ಪ್ರದೇಶವನ್ನು ಹಸ್ತಾಂತರಿಸಲು ಮುಖ್ಯ ಅರಣ್ಯಾಧಿಕಾರಿಗಳು ಆದೇಶ ನೀಡಿರುತ್ತಾರೆ. ತಡೆಯಾಜ್ಞೆ ನೀಡಿದ ಮೇಲೆ, ಕಂಪನಿಯವರು, 2,440.25 ಹೆಕ್ಟೇರ್ ಅರಣ್ಯ ಪ್ರದೇಶದಲ್ಲಿ ನೆಡುತೋಪನ್ನು, ತಡೆಯಾಜ್ಞೆ ವಿರುದ್ಧ ಮಾಡಿದ್ದಾರೆ. ಇದು ರಾಜ್ಯದ ಜನತೆ ಸದನದ ಸದಸ್ಯರು ಗಮನಿಸಬೇಕಾದ ವಿಷಯ. ಇಲ್ಲಿರತಕ್ಕ ವಿಷಯ, ಇವೊತ್ತು ಮತ ಕೊಟ್ಟ -ಮತದಾರರಿಗೆ ಮೋಸ, ವಂಚನೆ ನಡೆದಿದೆ, ಸ್ವತಂತ್ರ ನ್ಯಾಯಾಲಯ ಎಂದು ಏನು ಹೇಳುತ್ತೇವೆ, ಈ ದೇಶದ ಸರ್ವೋಚ್ಚ ನ್ಯಾಯಾಲಯದ ಆಜ್ಞೆಗೆ ವಿರುದ್ಧ, ತಡೆಯಾಜ್ಞೆ ಉಲ್ಲಂಘನೆ ಮಾಡಿ, ಅಧಿಕಾರಿಗಳು, ಸರ್ಕಾರ ಇವರಿಗೆ 14,560.90 ಹೆಕ್ಟೇರ್ ಭೂಮಿಯನ್ನು ಕೊಟ್ಟಿದೆ. ಇದು ಕಾನೂನು ಬಾಹಿರ, ಕೋರ್ಟಿನ ನಿಂದನೆ ಮಾಡಿದ ಹಾಗೆ ಆಗಿದೆ.. This is contempt of Court..... ಈ ಬಗ್ಗೆ ಸಹಿತ ಸುಪ್ರೀಂಕೋರ್ಟಿನಲ್ಲಿ ಕೇಸನ್ನು ಅಧಿಕಾರಿಗಳ ಮೇಲೆ ಹಾಕಿದ್ದಾರೆ. ಈ ಅಧಿಕಾರಿಗಳ ಮೇಲೆ ಸಚಿವರು ಏನು ಕ್ರಮ ತೆಗೆದುಕೊಂಡಿದ್ದೀರಿ? ಸುಪ್ರೀಂಕೋರ್ಟಿನ ವಿರುದ್ಧ ಈ ಭೂಮಿಯನ್ನು ಹಸ್ತಾಂತರ ಮಾಡಿದವರು ಯಾರು? ಅವರ ಬಗ್ಗೆ ಕೋರ್ಟ್ ನಿಂದನೆ ಇದೆ, ರಾಜ್ಯದ ಜನತೆಗೆ ಮೋಸ ಮಾಡಿದ್ದಾರೆ, ಸರ್ಕಾರ ಇಲ್ಲಿ ಹಸ್ತಕ್ಷೇಪ ಮಾಡಿ, ಜನತೆಯ ಹಾಗೂ ನ್ಯಾಯಾಲಯದ ಆಜ್ಞೆ ಉಲ್ಲಂಘನೆ ಮಾಡಿರುವುದಕ್ಕೆ ಏನು ಕ್ರಮ ತೆಗೆದುಕೊಳ್ಳಬೇಕೆಂದು ತಾವು ಯೋಚನೆ ಮಾಡಿದ್ದೀರಿ ಎಂಬ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಈ ರೀತಿ ಕೊಟ್ಟಂಥ ಭೂಮಿ ಹಾಗೂ ಇದು ಎಲ್ಲೆಲ್ಲಿ, ಯಾವ ಯಾವ ಜಿಲ್ಲೆಯಲ್ಲಿ ಕೊಟ್ಟಿದ್ದಾರೆಂದರೆ, ಶಿವಮೊಗ್ಗ, ಧಾರವಾಡ, ಬೆಳಗಾಂ ಮತ್ತು ಚಿಕ್ಕಮಗಳೂರು ಜಿಲ್ಲೆಯಲ್ಲೂ ಸಹಿತ ಕೊಟ್ಟಿದ್ದಾರೆ. ನಾನು ಜಿಲ್ಲಾವಾರು ಮತ್ತು ತಾಲ್ಲೂಕುವಾರು ಗ್ರಾಮಗಳನ್ನು ಕೇಳಿದ್ದೆ, ಸರ್ಕಾರದ ಉತ್ತರದಲ್ಲಿ ವಿವರ ಕೊಟ್ಟಿದ್ದಾರೆ. ಅವೆಲ್ಲವನ್ನೂ ಹೇಳುವುದಕ್ಕೆ ಸಮಯವಿಲ್ಲದೇ ಇರುವುದರಿಂದ, ನಾನು ಹೇಳುವುದಿಲ್ಲ. ಈ 4 ಜಿಲ್ಲೆಗಳಲ್ಲಿ ಈ ರಾಜ್ಯದಲ್ಲಿ ಬರುತ್ತದೆ. ಈ ಒಂದು ದಿಸೆಯಲ್ಲಿ ಮಾನ್ಯ ಸಚಿವರನ್ನು ಕೇಳುತ್ತೇನೆ, ಈ ಸದನದ ಸುಮಾರು 70 ಜನ ಮಾನ್ಯ ಸದಸ್ಯರು, ಈ ಕಡೆಯವರು ಆ ಕಡೆಯವರು ಎಲ್ಲರೂ ಸೇರಿ, ಕೆ.ಪಿ.ಎಲ್.ನ್ನು ರದ್ದುಪಡಿಸಬೇಕು, ಈ ರಾಜ್ಯದ ಭೂಮಿಯನ್ನು ಜನತೆಗೆ ಕೊಡಿಸಬೇಕು ಅಥವಾ ಸರ್ಕಾರದಲ್ಲಿ ಅರಣ್ಯವನ್ನು ಬೆಳೆಸಬೇಕು. ಸಾಗುವಳಿಗೆ ಇರತಕ್ಕ ಕಂದಾಯ ಭೂಮಿಯನ್ನು, ಬಡವರಿಗೆ ಸಾಗುವಳಿಗೆ ಕೊಡಬೇಕು ಇಲ್ಲದೇ ಹೋದರೆ ಸಾಮಾಜಿಕ ಅರಣ್ಯ ಎಂದು ನಾವೇನು ಹೇಳುತ್ತೇವೆ ಅದನ್ನು ಬಡವರಿಗೆ ಗಿಡ ನೆಡುವುದಕ್ಕೆ ಕೊಡಿ. ಅರಣ್ಯ

ಬೆಳೆಸುವ ಉದ್ದೇಶ ಇದ್ದರೆ, ಸರ್ಕಾರ ಹಾಕಿದಂಥ ಗಿಡಗಳು ಇವತ್ತು ಲೂಟಿಯಾಗುತ್ತಿವೆ, ಅರಣ್ಯ ಇಲಾಖೆ ಬಂದ ಮೇಲೆ ಈ ರಾಜ್ಯದಲ್ಲಿ ಅರಣ್ಯಸಂಪತ್ತು ಬೆಳೆಯುತ್ತಾ ಇಲ್ಲ, ಗಂಧದ ಕಳ್ಳಸಾಗಾಣಿಕೆ, ಅರಣ್ಯಗಳನ್ನು ಕಡಿದು ನಾಶವಾಗುತ್ತಿದೆ. ಅರಣ್ಯ ಇಲಾಖೆ, ಅರಣ್ಯ ರಕ್ಷಣಾ ಇಲಾಖೆಯಾಗಿ ಉಳಿದಿಲ್ಲ ಅರಣ್ಯ ಇಲಾಖೆ, ಅರಣ್ಯ ಭಕ್ಷಕ ಇಲಾಖೆಯಾಗಿದೆ. ಮಾನ್ಯ ಸಚಿವರು, ಇದನ್ನು ಗಮನಿಸಿ, ಈಗಾಗಲೇ 70 ಜನ ಶಾಸಕರು ಏನು ಕೊಟ್ಟಿದ್ದೇವೆ, ಅದರಂತೆ ಕೆ.ಪಿ.ಎಲ್. ರದ್ದುಪಡಿಸಬೇಕೆಂದು ಹಾಗೂ ಯಾವುದೇ ಭೂಮಿಯನ್ನು ಬಿಡುಗಡೆ ಮಾಡಬಾರದು ಬಹುತೇಕ ಉಳಿದವರದು ಯಾರದೂ ಇದಕ್ಕೆ ವಿರೋಧವಿಲ್ಲ. ತಾವು ಕರಾರಾಗಿದೆ ಎಂದು ಹೇಳಬಹುದು. ಈ ಕರಾರು ಕೇಂದ್ರ ಸರಕಾರದ ಕಾನೂನಿಗೆ ವ್ಯತಿರಿಕ್ತವಾಗಿರುವುದರಿಂದ ಅದು ಅಕ್ರಮವಾಗಿದೆ. ಅದು ನಲ್ ಅಂಡ್ ವೈಡ್ ಆಗಿದೆ. ಮೂಲತಃ ಅದು ರದ್ದಾಗಿರುತ್ತದೆ. ದಾಖಲೆ ಏನು ಇರುತ್ತದೆ ಅದು ರದ್ದಾಗಿದೆ. ಆ ಕರಾರಿಕೆ ಯಾವುದೇ ಕಾಸಿನ ಕಿಮ್ಮತ್ತೂ ಬೆಲೆ ಇಲ್ಲ. ಆ ಕ್ಷೇತ್ರದಲ್ಲಿ ಈ ಒಂದು ಕಂಪನಿಗೆ ಕೊಟ್ಟಂಥ ಭೂಮಿಯನ್ನು ರದ್ದುಪಡಿಸಿ ಬಡಜನರಿಗೆ ಕೊಡಬೇಕು ಮತ್ತು ಅರಣ್ಯ ಬೆಳೆಸುವುದಕ್ಕೆ ಉಪಯೋಗ ಮಾಡಬೇಕೆಂದು ಕೂಡಲೇ ತಾವು ತಮ್ಮ ಉತ್ತರದಲ್ಲಿ ಸರಕಾರದ ಈ ಒಂದು ವಿಚಾರವನ್ನು, ನಿರ್ಧಾರವನ್ನು ಹೇಳಬೇಕೆಂದು ಕೇಳುತ್ತಿದ್ದೇನೆ. ಇದರಲ್ಲಿರತಕ್ಕಂಥ ಒಂದು ಮಹತ್ವವಾದ ವಿಷಯ ಎಂದರೆ, ಬಿರ್ಲಾ ಕಂಪನಿ ಈ ಅರಣ್ಯ ಉತ್ಪಾದನೆಯಲ್ಲಿ ಬಂದಂಥ ಹನ್ನೆರಡೂವರೆ ಪರ್ಸೆಂಟ್ ಕಟ್ಟಿಗೆಯನ್ನು ಸರಕಾರಕ್ಕೆ ಕೊಡಬೇಕು. ಉಳಿದದ್ದು ಬಿರ್ಲಾ ಕಂಪನಿಗೆ ಎಂದು ಇದೆ. ಇದನ್ನು ಜನರಿಗೆ ಕೊಡುವುದರಿಂದ ಇದರಲ್ಲಿ 20 ಪರ್ಸೆಂಟ್ ಸರಕಾರ ತೆಗೆದುಕೊಂಡು ಬಾಕಿ 80 ಪರ್ಸೆಂಟ್ ಬಡ ಜನತೆಗೆ ಕೊಡತಕ್ಕಂಥ ಪದ್ಧತಿ ಮಾಡಿಕೊಳ್ಳಬೇಕು. ಇದನ್ನು ಜನರಿಗೆ ಕೊಡಲಿ. ಕೆಲಸವಿಲ್ಲದ ಜನ ಇದ್ದಾರೆ, ಬಡವರು ಇದ್ದಾರೆ, ಅವರಿಗೆ ಇದನ್ನು ಕೊಟ್ಟರೆ ಅವರ ತೊಂದರೆ ನಿವಾರಣೆಯಾಗುತ್ತದೆ. ಅವರ ತೊಂದರೆ ನಿವಾರಣೆ ಮಾಡುವುದಕ್ಕೆ ಸರಕಾರಕ್ಕೆ ಮನಸ್ಸು ಇಲ್ಲವೇ? ದಯವಿಟ್ಟು ಮಾನ್ಯ ಸಚಿವರು ಇದರ ಬಗ್ಗೆ ಗಮನಹರಿಸಬೇಕು. ಸರಕಾರ ಇದರ ಬಗ್ಗೆ ಒಂದು ನಿರ್ದಿಷ್ಟ ನಿಲುವನ್ನು ತೆಗೆದುಕೊಂಡು ಜನರ ಪರವಾದ ಒಂದು ನಿಲುವನ್ನು ತೆಗೆದುಕೊಳ್ಳುತ್ತದೆಯೇ ಎಂದು ಕೇಳುತ್ತೇನೆ. ಅಧ್ಯಕ್ಷರೇ, ನಾನು ಮೊದಲೇ ಹೇಳಿದ ಹಾಗೆ ನನಗೆ ಸ್ವಲ್ಪ ಸಮಯ ಕೊಡಬೇಕು, ಆದಷ್ಟು ಬೇಗ ಮುಗಿಸಲಿಕ್ಕೆ ಪ್ರಯತ್ನ ಮಾಡುತ್ತೇನೆ.

ಅರಣ್ಯ ಇಲಾಖೆಯಲ್ಲಿ ಕೋಟ್ಯಾಂತರ ರೂಪಾಯಿ ಹಣವನ್ನು ಗಿಡ ನೆಡುವುದಕ್ಕೆ ನೆಡುತೋಪು ನೆಡುವುದಕ್ಕೆ, ಅರಣ್ಯ ಬೆಳೆಸುವುದಕ್ಕೆ ಕೊಟ್ಟಿದೆ. ಇದು ಎಷ್ಟರಮಟ್ಟಿಗೆ ಪ್ರಯೋಜನವಾಗಿದೆ, ಸದುಪಯೋಗವಾಗಿದೆ ಎಂಬುದನ್ನು ನೋಡಬೇಕು. ಇದು ಇಡೀ ರಾಜ್ಯಕ್ಕೆ, ದೇಶಕ್ಕೆ, ಜನತೆಗೆ ಅನುಕೂಲವಾಗುವಂತಹ ಯೋಜನೆ ಇದ್ದರೂ ಸಹಿತ ಇದು ಸರಿಯಾಗಿ ನಡೆಯುತ್ತಿಲ್ಲ. ಇದರಲ್ಲಿ ದುರುಪಯೋಗವಾಗಿದೆ. ಇವತ್ತು ರಾಜ್ಯದಲ್ಲಿ ಖರ್ಚು ಮಾಡಿದಂಥ ಹಣ ಎಷ್ಟು, ಎಷ್ಟು ಅರಣ್ಯ ಇದೆ, ಎಲ್ಲಿ ಕೆಲಸ ನಡೆದಿಲ್ಲ ಎಂಬ ಬಗ್ಗೆ ಸಮಗ್ರವಾದ ತನಿಖೆಯನ್ನು ಮಾಡುವುದಕ್ಕೆ ಯೋಚನೆ ಮಾಡುತ್ತೀರಾ ಎಂಬ ಮಾತನ್ನು ಕೇಳುವುದಕ್ಕೆ ಇಚ್ಛೆ ಪಡುತ್ತೇನೆ. ಕನಿಷ್ಟ ಪಕ್ಷ ಒಂದೊಂದು ಗ್ರಾಮಕ್ಕೆ ಹೋದರೂ ಅಲ್ಲಿ ಒಳ್ಳೆಯ ಮರಗಳು ಬಹಳ ಇಲ್ಲ, ಬೇಸಿಗೆಯಲ್ಲಿ ಕೂಡಲಿಕ್ಕೆ ನೆರಳು ಇಲ್ಲ. ಕನಿಷ್ಠ ಪಕ್ಷ ಒಂದು ಗ್ರಾಮಕ್ಕೆ 30 ಮರಗಳನ್ನು ಹಚ್ಚುವುದಕ್ಕೆ ಪ್ರಯತ್ನ ಮಾಡಬೇಕು. ಅರಣ್ಯ ಸಂಪತ್ತು ನಾಶವಾಗುತ್ತಿದೆ. ಒಂದು ಗ್ರಾಮಕ್ಕೆ ಕನಿಷ್ಠ 30 ಮರಗಳನ್ನು ಹಚ್ಚುವುದಕ್ಕೆ ಟ್ರೀ ಗಾರ್ಡ್ಸ್ ಕೊಡಬೇಕು. ಗ್ರಾಮಗಳಲ್ಲಿ ಮರಗಳನ್ನು ಬೆಳೆಸುವುದಕ್ಕೆ ಕಟ್ಟಿಗೆಯನ್ನು ಕೊಟ್ಟು ಟ್ರೀ ಗಾರ್ಡ್ಸ್ ಮಾಡಿಸಿಕೊಡಿ ಎಂದು ಮಾನ್ಯ ಸಚಿವರಾದ ವೀರಪ್ಪಮೊಯಿಲಿಯವರು ನಮ್ಮ ಜಿಲ್ಲೆಗೆ ಬಂದಾಗ ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ತಿಳಿಸಿದ್ದರು. ಆದರೆ ಇವತ್ತು ಅವರು ಅದನ್ನು ಮಾಡುವುದಕ್ಕೆ ತಯಾರಾಗಿಲ್ಲ. ಅರಣ್ಯದಲ್ಲಿರುವ ಕಟ್ಟಿಗೆಯನ್ನು ಉಪಯೋಗಿಸಿ ಟ್ರೀ ಗಾರ್ಡ್ಸ್ ಮಾಡಿ ಕನಿಷ್ಠ ಒಂದು ಮಂಡಲಕ್ಕೆ 30ರಂತೆ ಕೊಡಿಸುವುದಕ್ಕೆ ವ್ಯವಸ್ಥೆ ಮಾಡಬೇಕು. ಅಷ್ಟಾದರೂ ಜನರಿಗೆ ಅನುಕೂಲವಾಗುತ್ತದೆ ಎಂದು ಹೇಳುತ್ತೇನೆ. ಮತ್ತೆ ಈ ಒಂದು 75 ಸಾವಿರ ಎಕರೆಯನ್ನು ಬಿರ್ಲಾ ಕಂಪನಿಯವರಿಂದ ಅಂದರೆ ಕೆ.ಪಿ.ಎಲ್‌ನಿಂದ ವಾಪಸ್ ತೆಗೆದುಕೊಂಡರೆ ಅದನ್ನು ವಿದ್ಯಾವಂತ

ನಿರುದ್ಯೋಗಿಗಳು ಯಾರಿದ್ದಾರೆ, ಅನ್ ಎಂಪ್ಲಾಯ್ಡ್ ಯಾರಿದ್ದಾರೆ, ಗ್ರಾಮಗಳಲ್ಲಿ ಯಾರು ಬಡ ಜನರು ಇದ್ದಾರೆ ಅವರಿಗೆ ಕೊಟ್ಟು, ಅವರಿಗೆ 50 ಪರ್ಸೆಂಟ್ ಹಣವನ್ನು ಸಹಾಯಧನ ರೂಪದಲ್ಲಿ ಕೊಟ್ಟು, ಉಳಿದುದನ್ನು ಸಾಲ ರೂಪದಲ್ಲಿ ಕೊಟ್ಟು ಅನುಕೂಲ ಮಾಡಿಕೊಟ್ಟು ಮರಗಳನ್ನು ಬೆಳೆಸಲಿಕ್ಕೆ ಅನುಕೂಲ ಮಾಡಿಕೊಡಬೇಕು. ಅರಣ್ಯ ಬೆಳೆಸಲಿಕ್ಕೆ ಅನುಕೂಲ ಮಾಡಿಕೊಡಿ ಎಂಬ ಮಾತನ್ನು ಹೇಳುತ್ತೇನೆ. ಅರಣ್ಯ ಇಲಾಖೆ ಅರಣ್ಯವನ್ನು ರಕ್ಷಣೆ ಮಾಡುವ ಇಲಾಖೆ ಆಗುವುದಕ್ಕೆ ಪ್ರಯತ್ನ ಮಾಡಬೇಕು. ಅಲ್ಲಿರತಕ್ಕ ಅರಣ್ಯ ಭಕ್ಷಕ ಜನರ ಬಗ್ಗೆ ಲಕ್ಷ್ಯ ವಹಿಸಬೇಕು ಎಂದು, ಕಾಳಜಿ ವಹಿಸಬೇಕೆಂದು ಹೇಳುತ್ತೇನೆ.

ಈಗ ಮಾನ್ಯ ಕೃಷಿ ಸಚಿವರು ಬಂದಿದ್ದಾರೆ. ಈಗಾಗಲೇ ಸಮಯ ಆಗಿರುವುದರಿಂದ ಒಂದೆರಡು ಸೂಚನೆಗಳನ್ನು ಕೊಡುವುದಕ್ಕೆ ಬಯಸುತ್ತೇನೆ. ಕೃಷಿ ಉತ್ಪನ್ನಗಳಿಗೆ ಬೆಲೆಗಳನ್ನು ಯಾವ ರೀತಿ ವೈಜ್ಞಾನಿಕ ಆಧಾರವಿಲ್ಲದೆ ನಿಗದಿಪಡಿಸಿದ್ದಾರೆ, ಯಾವ ರೀತಿ ವೈಜ್ಞಾನಿಕವಾಗಿ ಇದನ್ನು ನಿಗದಿಪಡಿಸಬೇಕೆಂಬ ಬಗ್ಗೆ ಮಾನ್ಯ ನಂಜುಂಡಸ್ವಾಮಿಯವರು ಹೇಳಿದ್ದಾರೆ. ಕೃಷಿ ಬೆಲೆಗಳನ್ನು ನಿಗದಿಪಡಿಸುವಾಗ ಯಾವ ರೀತಿ ಅಧಿಕಾರಿಗಳಿಗೆ ಸಿಗತಕ್ಕಂಥ ಸಂಬಳ, ಟಿ.ಎ., ಡಿ.ಎ. ಕಾರು, ಇತರ ಸವಲತ್ತುಗಳು, ಹೆರಿಗೆ ಭತ್ಯ, ರಜಾ, ರಜಾಕಾಲದಲ್ಲಿ ಪಗಾರ ಇವುಗಳನ್ನು ಸೆಕ್ಷನ್ ಆಫೀಸರ್, ಸೂಪರಿಂಟೆಂಡೆಂಟ್, ಅಂಡರ್‌ಸೆಕ್ರೆಟರಿ, ಸೆಕ್ರೆಟರಿ ಮುಂತಾದ ಅಧಿಕಾರಿಗಳಿಗೆ ಒದಗಿಸುತ್ತಾರೆ, ಅದೇ ರೀತಿ ಅಗ್ರಿಕಲ್ಚರ್ ಅಂದರೆ ಒಕ್ಕಲುತನದಲ್ಲಿ ಸಹಿತ ಇದೇ ರೀತಿ ಲೆಕ್ಕ ಹಾಕಿ, ಹಳ್ಳಿಯಲ್ಲಿ ಕೆಲಸ ಮಾಡುವ ರೈತನಿಗೆ ಬೇಕಾಗತಕ್ಕಂಥ ಸಲಕರಣೆಗಳು, ಸಾಮುಗ್ರಿಗಳನ್ನು ಒದಗಿಸಿಕೊಡತಕ್ಕಂಥ ವ್ಯವಸ್ಥೆ ಮಾಡಬೇಕು. ಇದು ಮ್ಯಾನೇಜ್‌ಮೆಂಟ್ ಮಾಡಲು ಬೇಕಾಗುತ್ತದೆ. ಬೆಲೆಯನ್ನು ನಿಗದಿ ಮಾಡುವಾಗ ಈ ರೀತಿ ವ್ಯವಸಾಯ ಮಾಡತಕ್ಕವರಿಗೆ, ಅದನ್ನು ಮ್ಯಾನೇಜ್‌ಮೆಂಟ್ ಮಾಡಲು ತಕ್ಕ ಸಲಕರಣೆಗಳನ್ನು ಸಾಮುಗ್ರಿಗಳನ್ನು ಒದಗಿಸಬೇಕು.

ನಮ್ಮ ಭೂಮಿ ಸವಕಳು ಆಗುತ್ತಿರುತ್ತದೆ. ಈ ಸವಕಳು ಭೂಮಿಯನ್ನು ಫಲವತ್ತು ಮಾಡಬೇಕಾಗುತ್ತದೆ. ಫಲವತ್ತು ಮಾಡದಿದ್ದರೆ ಪುನಃ ಬೆಳೆಯನ್ನು ಬೆಳೆಯುವುದಕ್ಕೆ ಆಗುವುದಿಲ್ಲ. ಅದಕ್ಕೆ ಭೂಮಿಯನ್ನು ಫಲವತ್ತು ಮಾಡಬೇಕು. ಈ ವಿಚಾರವನ್ನು ಮಾನ್ಯ ಮಂತ್ರಿಗಳು ಸರಿಯಾಗಿ ಗಣನೆಗೆ ತೆಗೆದುಕೊಂಡಿಲ್ಲ. ಭೂಮಿಯನ್ನು ಫಲವತ್ತು ಮಾಡುವ ವಿಚಾರದಲ್ಲಿ ಎಷ್ಟು ಖರ್ಚಾಗುತ್ತದೆ ಆ ಭೂಮಿಯನ್ನು ಫಲವತ್ತು ಮಾಡಬೇಕಾದರೆ ಒಂದು ಎಕರೆ ಭೂಮಿಯನ್ನು ಫಲವತ್ತು ಮಾಡಬೇಕಾದರೆ ಎಷ್ಟು ಗೊಬ್ಬರವನ್ನು ಹಾಕಬೇಕು ಇದೆಲ್ಲವನ್ನು ಮಾನ್ಯ ಮಂತ್ರಿಗಳು ನೋಡಬೇಕಾಗುತ್ತದೆ. ಆ ಭೂಮಿಯನ್ನು ಫಲವತ್ತು ಮಾಡುವ ಶಕ್ತಿ ರೈತನಿಗೆ ಇದೆಯೇ, ಆ ರೈತನಲ್ಲಿ ಹಣ ಇದೆಯೇ ಇಲ್ಲವೇ ಎನ್ನುವುದನ್ನು ನೋಡಬೇಕಾಗುತ್ತದೆ. ಈ ಭೂಮಿಯನ್ನು ಫಲವತ್ತು ಮಾಡಬೇಕಾದರೆ ಹಣ ತೊಡಗಿಸಬೇಕಾಗುತ್ತದೆ. ರೈತನ ಹೊಲಗಳಲ್ಲಿ ಕೆಲಸ ಮಾಡಿಸಬೇಕಾದರೆ ಕೂಲಿ ಕೊಡಬೇಕು ಗೊಬ್ಬರ ಹಾಕಬೇಕು ಕ್ರಿಮಿಕೀಟಗಳ ಹಾವಳಿಯನ್ನು ತಪ್ಪಿಸಲು ಕ್ರಿಮಿನಾಶಕ ವಸ್ತುಗಳನ್ನು ಸಿಂಪಡಿಸಬೇಕು, ಭೂಮಿ ಫಲವತ್ತು ಮಾಡಿ ತನ್ನ ಭೂಮಿಯಲ್ಲಿ ಬೆಳೆದ ಬೆಳೆಗೆ ಯಾವ ಬೆಲೆ ನಿಗಧಿ ಮಾಡಬೇಕೆನ್ನುವುದನ್ನು ಗಣನೆಗೆ ತೆಗೆದುಕೊಂಡು ಯೋಗ್ಯ ಬೆಲೆಯನ್ನು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ರೈತನು ಬೆಳೆದ ಬೆಳೆಗೆ ಸರ್ಕಾರದವರು ಯೋಗ್ಯ ಬೆಲೆಯನ್ನು ಕೊಟ್ಟರೆ ರೈತ ತನ್ನ ಸಾಲ ಮನ್ನಾ ಮಾಡಿ ಎಂದು ಕೇಳುವ ಆಗತ್ಯ ಇರುವುದಿಲ್ಲ. ರೈತ ಇವತ್ತು ಈ ದೇಶದ ಅನ್ನದಾತ. ಅವನ ಹೊಟ್ಟೆಗೆ ಇವತ್ತು ಅನ್ನ ಇಲ್ಲದಂತಹ ಪರಿಸ್ಥಿತಿ ಬಂದಿದೆ. ರೈತ ಬೆಳೆದ ಬೆಳೆಗೆ ಯೋಗ್ಯವಾದ ಬೆಲೆಯನ್ನು ಕೊಟ್ಟಿದ್ದರೆ ರೈತ ಇವತ್ತು ನಿಮ್ಮಲ್ಲಿ ಭಿಕ್ಷೆ ಬೇಡುವ ಪರಿಸ್ಥಿತಿಗೆ ಬರುತ್ತಿರಲಿಲ್ಲ. ಸಾಲಮನ್ನಾ ಮಾಡಿ ಎಂದರೆ ರೈತ ಇವತ್ತು ತಮ್ಮಲ್ಲಿ ಭಿಕ್ಷೆ ಬೇಡಲು ಬಂದಿದ್ದಾನೆಂದು ಯಾರೂ ಭಾವಿಸಬಾರದು, ಆ ರೀತಿ ಏನಾದರೂ ಭಾವಿಸಿದ್ದರೆ ಅದು ತಪ್ಪು. ಅವನು ಭಿಕ್ಷೆ ಬೇಡುವ ಪರಿಸ್ಥಿತಿಗೆ ಬರಲು ಈ ರಾಜ್ಯಗಳ ಈ ರಾಷ್ಟ್ರದ ತಪ್ಪು ನೀತಿಗಳೇ ಕಾರಣವೆಂದು ನಾನು ಹೇಳುತ್ತೇನೆ. ಯಾರು ಅವನಿಂದ ಇವತ್ತು ಅನುಕೂಲ ಪಡೆದಿದ್ದಾರೆ, ಅವರೆಲ್ಲರೂ ಇದಕ್ಕೆ ಕಾರಣರು. ರಾಷ್ಟ್ರದ ರಾಜಕಾರಣಿಗಳು ಮತ್ತು ರಾಷ್ಟ್ರದ ನಾಯಕರ ಪಾಲು ಇದರಲ್ಲಿ ಇದೆ ಎನ್ನುವ ಮಾತನ್ನು ನಾನು

ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಸಚಿವರು ಈ ಸದನದಲ್ಲಿ ಒಂದು ವರದಿಯಲ್ಲಿ ಹೇಳಿಕೆ ಮಾಡಿದರು. ಕೇವಲ ಅದು ಒಂದು ವರದಿ. ಆ ವರದಿಯನ್ನು ಮಾನ್ಯ ಸಚಿವರು ಕಾರ್ಯ ರೂಪಕ್ಕೆ ತರುವುದಕ್ಕೆ ಪ್ರಯತ್ನ ಮಾಡಬೇಕು. ರೈತನು ಬೆಳೆದ ಬೆಳೆಗೆ ಯೋಗ್ಯ ಬೆಲೆ ಸಿಗುವಂತೆ ಮಾಡಬೇಕೆಂದು ನಾನು ತಮ್ಮ ಮುಖಾಂತರ ತಿಳಿಸುತ್ತೇನೆ.

ಛೇರ್ಮನ್:- 15 ನಿಮಿಷ ಆಯಿತು ತಾವು ಮುಗಿಸಿ.

ಶ್ರೀ ಬಿ.ಎಚ್. ಬನ್ನಿಕೋಡ್:- ಮಾನ್ಯ ಅಧ್ಯಕ್ಷರೇ...

ಶ್ರೀ ಆರ್.ಎನ್. ನಾಯಕ್:- ಮಾನ್ಯ ಅಧ್ಯಕ್ಷಣೀಯವರೇ ಅವರಿಗೆ ಟೈಮ್ ಜಾಸ್ತಿ ಕೊಡುತ್ತಾ ಹೋದರೆ ಬೇರೆಯವರಿಗೂ ಸಹ ಟೈಮ್ ಜಾಸ್ತಿ ಕೊಡಬೇಕಾಗುತ್ತದೆ. ಟೈಮ್ ಜಾಸ್ತಿ ಕೊಡುವುದಕ್ಕೆ ತಾವು ತಯಾರು ಇದ್ದೀರಾ ಎನ್ನುವುದನ್ನು ವಿಚಾರ ಮಾಡಿ.

ಛೇರ್ಮನ್: ತಾವು ದಯಮಾಡಿ ಮುಗಿಸಿ.

ಶ್ರೀ ಬಿ.ಎಚ್. ಬನ್ನಿಕೋಡ್:- ಮಾನ್ಯ ಅಧ್ಯಕ್ಷಣೀಯವರೇ ಮಾನ್ಯ ಸಚಿವರ ಗಮನಕ್ಕೆ ನಾನು ಒಂದೇ ಒಂದು ವಿಷಯವನ್ನು ತರುವುದಕ್ಕೆ ಪ್ರಯತ್ನ ಮಾಡುತ್ತೇನೆ. ಧಾರವಾಡ ಜಿಲ್ಲೆಯಲ್ಲಿ ದಶಲಕ್ಷ ಭಾವಿಗಳ ಯೋಜನೆಯಡಿಯಲ್ಲಿ ಸುಮಾರು 8 ಲಕ್ಷ ರೂಪಾಯಿಗಳ ಹಣವನ್ನು ಖರ್ಚು ಮಾಡಿದ್ದೇವೆಂದು ತೋರಿಸಿದ್ದಾರೆ. ಆದರೆ ಅಲ್ಲಿ ಕೇವಲ 2 ಲಕ್ಷ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿ ಇನ್ನುಳಿದ 6 ಲಕ್ಷ ರೂಪಾಯಿಗಳನ್ನು ಅವ್ಯವಹಾರ ಮಾಡಿದ್ದಾರೆ. ಧಾರವಾಡ ಜಿಲ್ಲಾ ಪರಿಷತ್ತಿನಲ್ಲಿ ಈ ದಶಲಕ್ಷ ಬಾವಿಗಳ ಯೋಜನೆಯಲ್ಲಿ ಅವ್ಯವಹಾರ ಆಗಿದೆ ಎಂದು ಬೆಳಕಿಗೆ ಬಂದಿದೆ. ಅಲ್ಲಿ ಬಾವಿಗಳೇ ಇಲ್ಲ. ಅಲ್ಲಿ ಅಧಿಕಾರಿಗಳು ಹಣವನ್ನು ಲಪಟಾಯಿಸಿದ್ದಾರೆ. ಇದರ ಬಗ್ಗೆ ಜಿಲ್ಲಾ ಪರಿಷತ್ತಿನಲ್ಲಿ ಪಕ್ಷಭೇದ ಇಲ್ಲದೆ ಸರ್ವಾನುಮತದಿಂದ ಈ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಮತ್ತು ಇದನ್ನು ಲೋಕಾಯುಕ್ತಕ್ಕೆ ಕಳುಹಿಸಿಕೊಡಬೇಕೆಂದು ಹೇಳಿದ್ದರೂ ಕೂಡ ಇದುವರೆವಿಗೂ ಈ ಬಗ್ಗೆ ಸರ್ಕಾರ ಏನೂ ಗಮನ ತೆಗೆದುಕೊಂಡಿಲ್ಲ. ಇದನ್ನು ತಾವು ಲೋಕಾಯುಕ್ತಕ್ಕೆ ಕಳುಹಿಸಿಕೊಡುವ ವ್ಯವಸ್ಥೆ ಮಾಡಿ ಮತ್ತು ಈ 5 ಜನ ಅಧಿಕಾರಿಗಳನ್ನು ಅಧಿಕಾರಿಗಳ ವ್ಯಾಪ್ತಿಯಲ್ಲಿ ಸಸ್‌ಪೆಂಡ್ ಮಾಡಿದ್ದೇವೆ. ಆದರೆ ಇವತ್ತು ಅಲ್ಲಿ ಇರತಕ್ಕಂಥ ಡೆಪ್ಯುಟಿ ಡೈರೆಕ್ಟರ್ ಮತ್ತು ಅಸಿಸ್ಟೆಂಟ್ ಡೈರೆಕ್ಟರ್‌ರವರನ್ನು ಈ ಕೂಡಲೇ ಸಸ್‌ಪೆಂಡ್ ಮಾಡಿ ಎಂದು ಸರ್ಕಾರಕ್ಕೆ ಬರೆದರೂ ಕೂಡ ಸರ್ಕಾರ ಈ ಬಗ್ಗೆ ಗಮನ ತೆಗೆದುಕೊಂಡಿಲ್ಲ ತಾವು ಅಲ್ಲಿಗೆ ಹೋಗಿ ನೋಡಬೇಕು ಹರಿಜನರಿಗೆ ಕೊಡುವಂತಹ ಹಣ ಎನಿದೆ ಅದು ಸರಿಯಾಗಿ ಉಪಯೋಗವಾಗಿಲ್ಲ ಆದ್ದರಿಂದ ಈ ವಿಷಯವನ್ನು ಈಗಲಾದರೂ ತಾವು ಗಮನಕ್ಕೆ ತೆಗೆದುಕೊಂಡು ಅಂತಹ ಅಧಿಕಾರಿಗಳನ್ನು ಕೂಡಲೇ ಸಸ್‌ಪೆಂಡ್ ಮಾಡುವ ಬಗ್ಗೆ ಕ್ರಮ ಕೈಗೊಳ್ಳಬೇಕು ಮತ್ತು ಲೋಕಾಯುಕ್ತಕ್ಕೆ ಕಳುಹಿಸಿಕೊಡುವಂತಹ ವ್ಯವಸ್ಥೆ ಮಾಡಬೇಕೆಂದು ನಾನು ಹೇಳುತ್ತೇನೆ.

ಛೇರ್ಮನ್:- ನನ್ನ ಮಾತನ್ನು ಮುಗಿಸುತ್ತೇನೆಂದು ಹೇಳಿ. ಬೇರೆಯವರಿಗೂ ಅವಕಾಶ ಸಿಗಲಿ ತಾವು ದಯಮಾಡಿ ಮುಗಿಸಿ.

ಶ್ರೀ ಬಿ.ಎಚ್. ಬನ್ನಿಕೋಡ್:- ಒಂದೇ ನಿಮಿಷದಲ್ಲಿ ಮುಗಿಸುತ್ತೇನೆ. ಇನ್ನು ಗ್ರಾಮಾಭಿವೃದ್ಧಿ ವಿಚಾರದಲ್ಲಿ ಹೇಳುವುದಾದರೆ ಇವತ್ತಿನ ದಿವಸ ಗ್ರಾಮಾಂತರ ಪ್ರದೇಶದಲ್ಲಿರುವ ಜನತೆಗೆ ಇದರ ಒಂದು ಸೌಲಭ್ಯ ಮುಟ್ಟಿದೆಯೋ ಇಲ್ಲವೇ ಬಡಜನತೆಗೆ ಕೊಡತಕ್ಕಂಥ ಹಣ ಈ ಇಲಾಖೆ ಮೂಲಕ ಅವರಿಗೆ ಮುಟ್ಟಿದೆಯೇ ಎನ್ನುವುದನ್ನು ನಾವು ನೋಡಬೇಕಾಗುತ್ತದೆ. ಈ ಅಧಿಕಾರ ವಿಕೇಂದ್ರೀಕರಣ ವ್ಯವಸ್ಥೆ ಇರತಕ್ಕಂಥಾದ್ದು ಸರಿಯೇ ಅಥವಾ ತಪ್ಪೇ? ಈ ಅಧಿಕಾರ ವಿಕೇಂದ್ರೀಕರಣ ಇರತಕ್ಕಂಥಾದ್ದರಿಂದ ಉಪಯೋಗ ಏನು ಎನ್ನುವುದನ್ನೂ ಸಹ ನಾವು ನೋಡಬೇಕಾಗುತ್ತದೆ. ಈ ಕಾನೂನಿನಲ್ಲಿ ಏನಾದರೂ ಲೋಪದೋಷಗಳು ಇದ್ದರೆ ತಿದ್ದುಪಡಿ ತನ್ನಿ. ಇರುವ ಕಾನೂನನ್ನು ಬಿಗಿ ಮಾಡಬೇಕು. ಜನರ ಕೈಗೆ ಅಧಿಕಾರ ಕೊಟ್ಟಿದ್ದೇವೆ. ಅಲ್ಲಿಗೆ ಯಾವ ಪಕ್ಷದವರಾದರೂ ಬರಬಹುದು. ಅಲ್ಲಿ ಇರತಕ್ಕಂಥವರು ಏನಾದರೂ ಕಾನೂನು ಬಾಹಿರವಾಗಿ ಕೆಲಸ ಮಾಡಿದರೆ ಅದನ್ನು ತಡೆಗಟ್ಟುವ ಸಲುವಾಗಿ ಸೂಕ್ತವಾದ ನಿಯಮಗಳನ್ನು ರಚನೆ ಮಾಡಬೇಕು. ಈ ಒಂದು ಅಭಿಪ್ರಾಯದಿಂದ

ಅಧಿಕಾರ ವಿಕೇಂದ್ರೀಕರಣ ಪದ್ಧತಿ ಸುಧಾರಣೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕೇ ವಿನಹಃ ಶಾಸಕರಾಗಿರತಕ್ಕಂಥವರು ನಾವು ನಮ್ಮ ಕೈಗೆ ಅಧಿಕಾರ ಸಿಗಬೇಕು ಎಂದು ಇವುಗಳನ್ನು ಸ್ಥಾಪನೆ ಮಾಡಿದ್ದುದು ಅಲ್ಲ. ನಾನು ಒಬ್ಬ ನಾಗರೀಕ ಈ ದೇಶದಲ್ಲಿ. ಇವತ್ತು ಮಂತ್ರಿಗಳು ಇರಲಿ ಸರ್ಕಾರ ಇರಲಿ ಶಾಸಕರೇ ಇರಲಿ ಅವರೆಲ್ಲರೂ ಸಹ ಒಬ್ಬ ಸಾಮಾನ್ಯ ನಾಗರೀಕನ ಹಿತವನ್ನು ಕಾಪಾಡಲಿಕ್ಕೆ ಇರತಕ್ಕಂಥವರು. ಅವರೆಲ್ಲರೂ ಅಧಿಕಾರ ವಿಕೇಂದ್ರೀಕರಣ ಆಗಬೇಕು ಎನ್ನುವವರು ಇಲ್ಲಿ ಇದ್ದಾರೆ. ಆದರೆ ಅವರು ಏನಾದರೂ ಕೆಲಸವನ್ನು ಕಾನೂನು ಬಾಹಿರವಾಗಿ ಮಾಡಿದರೆ ಅದನ್ನು ತಡೆ ಗಟ್ಟಬೇಕು. ಅಲ್ಲಿ ಅನೇಕ ತಪ್ಪುಗಳಿವೆ. ಈ ತಪ್ಪುಗಳಾದಾಗ, ಕಾನೂನು ಬಾಹಿರವಾಗಿ ನಡೆದಾಗ, ಯಾವ ರೀತಿ ತಪ್ಪುಗಳನ್ನು ತಿದ್ದಲಿಕ್ಕೆ ಮತ್ತು ಶಿಕ್ಷೆ ಕೊಡುವುದಕ್ಕೆ ನಿಯಮಗಳನ್ನು ತಿದ್ದುಪಡಿ ಮಾಡ ಬೇಕೋ ಆ ರೀತಿ ಮಾಡಬೇಕೆಂದು ಹೇಳುತ್ತಾ, ಈ ಅಧಿಕಾರ ವಿಕೇಂದ್ರೀಕರಣ ತಂದದ್ದು ಬಹಳ ಸೂಕ್ತವಾಗಿದೆ. ಈ ರಾಜ್ಯದ ಜನತೆಗೆ ಕೆಲಸಗಳು ಸರಿಯಾಗಿ ಆಗಬೇಕಾದರೆ ಸರಿಯಾಗಿಲ್ಲದ ನಿಯಮಗಳನ್ನು ತಿದ್ದುಪಡಿ ಮಾಡಬೇಕೆಂದು ಹೇಳಿ ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಹೆಚ್. ವಿಶ್ವನಾಥ್ (ಕೃಷ್ಣರಾಜನಗರ) :- ಸನ್ಮಾನ್ಯ ಸಭಾಧ್ಯಕ್ಷಿಣಿಯರೇ, ಈ ಸದನದ ಮುಂದೆ ಮಾನ್ಯ ಮಂತ್ರಿಗಳವರು ಮಂಡಿಸಿರತಕ್ಕ ಬೇಡಿಕೆಗಳನ್ನು ಸ್ವಾಗತ ಮಾಡುತ್ತಾ ನನ್ನ ಅನಿಸಿಕೆಗಳನ್ನು ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಪ್ರಥಮವಾಗಿ ಗ್ರಾಮೀಣಾಭಿವೃದ್ಧಿ ಇಲಾಖೆ, ಈಗಾಗಲೇ ಬಹಳಷ್ಟು ಜನರು ಇದರ ಮೇಲೆ ಮಾತನಾಡಿದ್ದಾರೆ. ನಮ್ಮ ಗ್ರಾಮಾಂತರ ಪ್ರದೇಶಗಳ ಜನತೆಯ ದುಃಖದುಮ್ಮಾನಗಳನ್ನು, ಕಷ್ಟ ಕಾರ್ಪಣ್ಯಗಳನ್ನು ಅರಿತು ಅವರಿಗೆ ಸರಿಯಾದ ಆಡಳಿತ ಕೊಡತಕ್ಕಂಥ ಇದೊಂದು ದೊಡ್ಡ ಇಲಾಖೆ. ಮತ್ತೆ ಸರ್ಕಾರ, ಈ ಗ್ರಾಮಾಂತರ ಪ್ರದೇಶದ ಜನರಿಗೆ ತೆಗೆದುಕೊಳ್ಳತಕ್ಕಂಥ ಜನಪ್ರಿಯ ಕಲ್ಯಾಣ ಕಾರ್ಯಕ್ರಮಗಳನ್ನು ಅವರ ಮನೆ ಬಾಗಿಲಿಗೆ ತಲುಪಿಸತಕ್ಕಂಥ ಒಂದು ಜವಾಬ್ದಾರಿಯನ್ನು ಈ ಇಲಾಖೆಗೆ ವಹಿಸಲಾಗಿದೆ.

ಶ್ರೀ ಆರ್.ಎನ್. ನಾಯಕ್:- ಮಾನ್ಯ ಸಭಾಧ್ಯಕ್ಷಣಿಯವರೇ, ಕೆಲವು ಸಾರಿ ಮಂತ್ರಿಗಳು ಇಲ್ಲದೇ ಇದ್ದಾಗ ಮಂತ್ರಿಗಳು ಸದನದಲ್ಲಿ ಇಲ್ಲವೆಂದು ಹೇಳುತ್ತಿದ್ದ ವಿರೋಧ ಪಕ್ಷದ ಕಡೆಯವರಲ್ಲಿ ಒಬ್ಬರೂ ಸದವದಲ್ಲಿ ಇಲ್ಲ.

ಶ್ರೀ ಕೆ. ಹರ್ಷಕುಮಾರ್‌ಗೌಡ:- ಜನರ ಪರವಾಗಿ ಮಾತನಾಡುತ್ತಿದ್ದೇವೆಂದು ಹೇಳುವ ವಿರೋಧ ಪಕ್ಷದ ಸದಸ್ಯರುಗಳು ಒಬ್ಬರೂ ಸದನದಲ್ಲಿ ಇಲ್ಲವಲ್ಲ.

ಶ್ರೀ ಆರ್.ಎನ್. ನಾಯಕ್:- ನೋಡಿ ಅವರ ಹಣೆಬರಹ.

ಶ್ರೀ ಕೆ. ಹರ್ಷಕುಮಾರ್‌ಗೌಡ:- ಏಕೆಂದರೆ, ಕೇಂದ್ರದಲ್ಲಿ ಅವರ ಸರ್ಕಾರ ಬಿದ್ದು ಹೋಗುತ್ತಿದೆ ಅದಕ್ಕಾಗಿ ಅವರು ಹೊರಗೆ ಹೋಗಿದ್ದಾರೆ. ಅಲ್ಲಿ ವಿ.ಪಿ.ಸಿಂಗ್‌ರವರು ರಾಜೀನಾಮೆ ಕೊಟ್ಟಿದ್ದಾರೆ.

ಶ್ರೀ ಎಸ್. ಬಂಗಾರಪ್ಪ:- ಮಾನ್ಯ ಸಭಾಧ್ಯಕ್ಷಣೀಯವರೇ, ಸದನದಲ್ಲಿ ಹಾಜರಿರಬೇಕಾದ ವಿಚಾರ ಮಾನ್ಯ ಸದಸ್ಯರುಗಳಿಗೇ ಬಿಟ್ಟದ್ದುದು. ವಿರೋಧ ಪಕ್ಷದ ಮಾನ್ಯ ಸದಸ್ಯರುಗಳು ಸದನದಲ್ಲಿ ಇಲ್ಲದೇ ಇರುವ ಕಾರಣ, ಮಾನ್ಯ ಸದಸ್ಯರು ಹೇಳಿದ ಕಾರಣ ಇರಬಹುದು. ನಾನು ಅದನ್ನು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ, ಅವರು ಆಬ್ಸೆಂಟ್ ಆಗಿದ್ದಾರೆಂದು ನಾವು ಹೇಳುವುದು ಬೇಡ. ಅದು ಅವರ ಪಕ್ಷದ ಒಳ ವಿಚಾರ ನಾವು ಅದಕ್ಕೆ ತಲೆ ಹಾಕಬೇಕಾದ ವಿಚಾರ ಇಲ್ಲ. ಮಾನ್ಯ ಸದಸ್ಯರು ಹೇಳಿರುವುದರಲ್ಲಿ ಕಾರಣ ಇದೆ. ಕೆಲವೊಮ್ಮೆ ರಾಜಕಾರಣದಲ್ಲಿ ಹಾಗೆ ಬಂದುಬಿಡುತ್ತದೆ. ಅವರ ಇಂಟರ್ನೆಲ್ ವಿಚಾರದ ಬಗ್ಗೆ ಯಾರೂ ಪ್ರಸ್ತಾಪ ಮಾಡುವುದು ಬೇಡ.

ಶ್ರೀ ಹೆಚ್. ವಿಶ್ವನಾಥ್:- ಹೀಗೆ ಈ ಗ್ರಾಮೀಣಾಭಿವೃದ್ಧಿ ಇಲಾಖೆಗೆ ಒಂದು ಹೊಸ ಚೇತನವನ್ನು ಹೊಸ ಹರಿತವನ್ನು ಕೊಟ್ಟಂಥ ಕೀರ್ತಿ ದಿವಂಗತ ನಜೀರ್‌ಸಾಬ್‌ರವರಿಗೆ ಸಲ್ಲಬೇಕೆಂದು ಸ್ಮರಣೆ ಮಾಡಬೇಕಾದುದು ಅಗತ್ಯ. ಏಕೆಂದರೆ 6-7 ವರ್ಷಗಳ ಹಿಂದೆ ಯಾರನ್ನಾದರೂ ಈ ಇಲಾಖೆ ಮಂತ್ರಿ ಆಗುತ್ತೀರಾ ಎಂದು ಹೇಳಿದರೆ ಅದು ಬೇಡ, ಕೆಲಸಕ್ಕೆ ಬಾರದ ಇಲಾಖೆ ಎಂದು ಹೇಳುತ್ತಿದ್ದರು. ಇವತ್ತು ಗ್ರಾಮಾಂತರ ಪ್ರದೇಶದ ಜನರ ಮನಸ್ಸಿನಲ್ಲಿ ಒಂದು ಕಿಚ್ಚನ್ನು ಹಚ್ಚಿಸಿದಂಥ

ಹರಿಕಾರ ಶ್ರೀ ನಜೀರ್‌ಸಾಬ್. ಅವರು ಇವತ್ತು ನಮ್ಮ ಜೊತೆ ಇಲ್ಲ. ಅಧಿಕಾರ ವಿಕೇಂದ್ರೀಕರಣಕ್ಕೆಂದು ಜಿಲ್ಲಾಪರಿಷತ್ ಮತ್ತು ಮಂಡಲ್ ಪಂಚಾಯಿತ್ ವ್ಯವಸ್ಥೆ ತಂದ ಮೇಲೆ ಕೆಲವು ಸಾಧಕಬಾಧಕಗಳು ಆಗಿರಬಹುದು ಆದರೆ ಯಾವ ಉದ್ದೇಶದಿಂದ ಇವನ್ನು ಮಾಡಲಾಯಿತೋ ಅದನ್ನು ನಾವು ಯಾರೂ ಮರೆಯಬಾರದು, ಇದೊಂದು ಪ್ರಯೋಗ, ಇದರಲ್ಲಿ ಬೇಕಾದಷ್ಟು ಘಟನಾವಳಿಗಳು ನಮ್ಮ ಗ್ರಾಮಗಳಲ್ಲಿ ನಡೆದಿರಬಹುದು ಇದಕ್ಕೆ ಕಾರಣವೇನೆಂದರೆ ಅದರ ವ್ಯವಸ್ಥೆಯನ್ನು ಸರಿ ಮಾಡದಿರುವುದು. ಒಂದು ಉದಾಹರಣೆ ಹೇಳುತ್ತೇನೆ. ಗ್ರಾಮೀಣ ಜನರಿಗೆ ಪಡಿತರ ವ್ಯವಸ್ಥೆಯನ್ನು ನ್ಯಾಯಬೆಲೆ ಅಂಗಡಿ ಮೂಲಕ ಹಸಿರು ಕಾರ್ಡ್ ಮೂಲಕ ಕೊಡುವ ಕಾರ್ಯಕ್ರಮ ಏನಾಗುತ್ತಿದೆ ಎಂದರೆ ಇದು ಮಂಡಲ ಪಂಚಾಯಿತಿ ವ್ಯಾಪ್ತಿಯಲ್ಲಿ ಆಗುವುದು, ಅರ್ಜಿದಾರರ ಸಂದರ್ಶನ ಮಾಡುವುದು ಅಸಿಸ್ಟೆಂಟ್ ಕಮೀಷನರ್, ಮಂಜೂರು ಮಾಡುವವರು ಜಿಲ್ಲಾಪರಿಷತ್ ಅಧ್ಯಕ್ಷ ಅಥವಾ ಮುಖ್ಯಕಾರ್ಯದರ್ಶಿ ಈ ಕುರಿತು ತಾಲ್ಲೂಕು ಬೋರ್ಡ್ ಆಗಲಿ ಶಾಸಕರೇ ಆಗಲಿ ಯಾವುದೇ ಶಿಫಾರಸ್ ಮಾಡಲು ಅಧಿಕಾರವಿಲ್ಲ. ಕೊನೆಗೆ ನ್ಯಾಯಬೆಲೆ ಅಂಗಡಿ ಕೊಟ್ಟಮೇಲೆ ಅಂಗಡಿಯವನಿಂದ ಕಳ್ಳತನ ನಡೆದು ಸಿಕ್ಕಿಕೊಂಡರೆ ಅದನ್ನು ಸೀಸ್ ಮಾಡುವ ಅಧಿಕಾರ ಬಿಡಿಒಗೆ ಇಲ್ಲ ಕೇಂದ್ರದ ಅವಶ್ಯಕ ವಸ್ತು ಕಾಯಿದೆ ಪ್ರಕಾರ ತಹಸೀಲ್ದಾರ್‌ಗೆ ಮಾತ್ರ ಅಧಿಕಾರ ಬರುತ್ತದೆ ಅಂದರೆ ಲೈಸೆನ್ಸ್ ಕೊಡುವವನು ಒಬ್ಬ,ಅದನ್ನು ನೋಡುವವನು ಒಬ್ಬ, ಕಳ್ಳತನ ಮಾಡಿದಾಗ ಹಿಡಿಯುವನು ಒಬ್ಬ ಇದರಿಂದ ಏನಾಗುತ್ತದೆ, ಎಂದರೆ ಇದರಲ್ಲಾಗಿರುವ ತೊಂದರೆಯನ್ನು ಅರಿತು ಸರಿಯಾದ ವ್ಯವಸ್ಥೆ ಏರ್ಪಡಿಸಬೇಕು. ಸರ್ಕಾರ ಶಾಸಕರ ಅಧ್ಯಕ್ಷ ಸ್ಥಾನದಲ್ಲಿ ಪಂಚಾಯಿತಿ ಸಮಿತಿ ಎಂದು ಮಾಡಿದಿರಿ, ಅದರಲ್ಲಿ ಬಿಡಿಓ ಬದಲು ತಹಸೀಲ್ದಾರರನ್ನು ಇರಿಸುವುದು ಒಳ್ಳೆಯದು ಏಕೆಂದರೆ ಒಂದು ಸರ್ಕಾರಿ ಭೂಮಿ ಇದ್ದರೆ ಅದನ್ನು ಟೇಕೋವರ್ ಮಾಡುವ ಅಧಿಕಾರ ತಹಸೀಲ್ದಾರ್‌ಗಿದೆ. ಫುಡ್ ಕಮಾಡಿಟೀಸ್ ಸರಿಯಾಗಿಲ್ಲದಿದ್ದರೆ ಅದನ್ನು ಸೀಸ್ ಮಾಡುವ ಅಧಿಕಾರ ಅವರಿಗೇ ಇದೆ. ಸೀಮೆಎಣ್ಣೆ ಲೈಸೆನ್ಸ್ ಕೊಡುವ ಅಧಿಕಾರವೂ ತಹಸೀಲ್ದಾರಗೇ ಇದೆ. ಹೀಗಿರುವಾಗ ಆ ಸಮಿತಿಗೆ ತಹಸೀಲ್ದಾರ್‌ರನ್ನೇ ಕಾರ್ಯದರ್ಶಿಯಾಗಿ ಮಾಡಿದರೆ ಸರಿ ಏಕೆಂದರೆ ತಹಸೀಲ್ದಾರ್ ಕೈಕೆಳಗೇ ನನ್ನ ತಾಲ್ಲೂಕಿನಲ್ಲಿ 68 ಜನ ವಿಲೇಜ್ ಅಕೌಂಟೆಂಟ್, 4 ಜನ ನಾಡ ಕಛೇರಿಗಳವರು, ನಾಲ್ಕು ಜನ ಶಿರಸ್ತೇದಾರರು ಇದ್ದಾರೆ ಇವರ್ಯಾರಿಗೂ ಏನೂ ಕೆಲಸವಿಲ್ಲ. ಇವರೆನ್ನೆಲ್ಲ ಅಭಿವೃದ್ಧಿ ಕೆಲಸದ ಕಡೆ ತಿರುಗಿಸಿದರೆ ಅದಾದರೂ ಆಗುತ್ತದೆ. ಮಂಡಲ ಪಂಚಾಯಿತಿ ಮುಖ್ಯಕಾರ್ಯದರ್ಶಿ ಯಾರ ಹಿಡಿತದಲ್ಲೂ ಇಲ್ಲ. ಸರ್ಕಾರದಿಂದ ನೇಮಿತವಾದ ಎರವಲು ಅಧಿಕಾರಿ ಈತ. ಅಭಿವೃದ್ಧಿ ಕಮೀಷನರ್‌ರಿಂದ ನೇಮಿತವಾದವ ಯಾರ ಹಿಡಿತದಲ್ಲೂ ಇಲ್ಲ ಈತ. ಪ್ರಧಾನರೇ ಕಾರ್ಯದರ್ಶಿಯನ್ನು ಹುಡುಕಿಕೊಂಡು ತಿರುಗಬೇಕಾಗಿದೆ, ಕಡತಗಳೆಲ್ಲ ನಮ್ಮಲ್ಲಿ ಕಾಣೆಯಾಗಿದೆ. ಈತ ಏನು ತಪ್ಪು ಮಾಡಿದರೂ ಸಸ್ಪೆನ್‌ಶನ್ ಮಾಡುವ ಅಧಿಕಾರ ಕೂಡ ಯಾರಿಗೂ ಇಲ್ಲ ಈ ಅಧಿಕಾರವನ್ನು ಪ್ರಧಾನರಿಗೆ ಕೊಡಬೇಕೆಂದು ಹೇಳುತ್ತೇನೆ. ಜವಹಾರ್ ರೋಜ್‌ಗಾರ್ ಯೋಜನೆ ಬಹಳ ಮುಖ್ಯವಾದ ಕಾರ್ಯಕ್ರಮ, ಇದರ ಬಗ್ಗೆ ಅಭಿವೃದ್ಧಿ ಸಚಿವರು ಉತ್ತರ ಕೊಟ್ಟರು. 120 ಕೋಟಿ ರೂಗಳನ್ನು ಇಲ್ಲಿಯವರೆಗೆ ಖರ್ಚು ಮಾಡಲಾಗಿದೆ ಎಂದರೆ ಅದು ಹೇಗೆ ವಿತರಣೆಯಾಯಿತು ಹೇಗೆ ಖರ್ಚಾಯಿತು ಅದರ ಸಾಧಕಬಾಧಕಗಳು ಏನೆಂದು ನೋಡುವುದಕ್ಕೋಸ್ಕರ ಅಭಿವೃದ್ಧಿ ಕಮಿಷನರ್ ಅಧ್ಯಕ್ಷತೆಯಲ್ಲಿ ಒಂದು ಕಮಿಟಿ ಇದ್ದು ನನಗೆ ಗೊತ್ತಿರುವ ಪ್ರಕಾರ ಈ ಸೂಪರ್‌ಕಮಿಟಿ ಇನ್ನೂ ಮೀಟ್ ಕೂಡ ಮಾಡಿಲ್ಲವಂತೆ. ಅಂದರೆ 120 ಕೋಟಿ ಹೇಗೆ ಖರ್ಚಾಯಿತು ಯಾರ್ಯಾರು ತಿಂದರು ಅನ್ನುವುದನ್ನು ನೋಡುವ ಸಮಿತಿ ಇನ್ನು ನಿದ್ದೆ ಮಾಡುತ್ತಿದೆ ಎಂದರೆ ಎಲ್ಲಿಗೆ ಆಯಿತು? ನನ್ನ ತಾಲ್ಲೂಕಿನ ಪಾಲಿನ 80 ಲಕ್ಷ ರೂಪಾಯಿಗಳನ್ನು ಯಾರ್ಯಾರೋ ಎಲ್ಲಾ ಮುಗಿಸಿದ್ದಾರೆ ಅಂದರೆ ಅಧಿಕಾರಿಗಳಷ್ಟೇ ಅಲ್ಲ ರಾಜಕಾರಣಿಗಳು ಕೂಡ ಸೇರಿದ್ದಾರೆ. ಆದ್ದರಿಂದ ಸರ್ಕಾರದ ಹಣ ಸರಿಯಾಗಿ ವಿನಿಯೋಗವಾಗಿದೆಯೋ ಇಲ್ಲವೋ ಎಂದು ಅಜಮಾಯಿಷಿ ಮಾಡುವ ಸರ್ಕಾರಕ್ಕೆ ನೇರವಾಗಿ ಅಧಿಕಾರ ಇರಬೇಕೆಂದು ಹೇಳುತ್ತೇನೆ ಇನ್ನು ಸಮಾನ್ಯ ಆಡಳಿತ. ವಿಧಾನ ಸೌಧ ಕಟ್ಟಿದ ಹನುಮಂತಯ್ಯನವರು ಮುಂಭಾಗದಲ್ಲಿ ಬರೆಸಿದ್ದಾರೆ, ಸರ್ಕಾರದ ಕೆಲಸ ದೇವರ ಕೆಲಸ ಎಂದು,

ಇವತ್ತು ಏನಾಗಿದೆ ಎಂದರೆ ಸರ್ಕಾರದ ಕೆಲಸ ಯಾರ ಕೆಲಸವೂ ಅಲ್ಲ ಮತ್ತು ಸರ್ಕಾರದ ಹಣ ಎಲ್ಲರ ಹಣ ಯಾರು ಬೇಕಾದರೂ ತಿನ್ನಬಹುದು ಆದರೆ ಸರ್ಕಾರದ ಕೆಲಸ ಯಾರದೂ ಅಲ್ಲ ಎಂಬ ಅಭಿಪ್ರಾಯ ಜಾರಿಯಲ್ಲಿದೆ. ಎಲ್ಲರೂ ಅದನ್ನೇ ಮೈಗೂಡಿಸಿಕೊಂಡಿದ್ದಾರೆ ಆಡಳಿತದಲ್ಲಿ ದುಸ್ಥಿತಿ ಹೇಗೆ ಉಂಟಾಗಿದೆ ಎಂದರೆ ಅದರಲ್ಲಿ ಎರಡು ಶಕ್ತಿಗಳಿವೆ. ಒಂದು ಕ್ಯಾಸ್ಟಿಸಮ್ ಇನ್ನೊಂದು ಕರ್‌ಪ್‌ಶೇಶನ್. ಎಲ್ಲಿ ಜಾತೀಯತೆ ಇದೆಯೋ ಅಲ್ಲಿ ಕರ್‌ಪ್‌ಶನ್ ಇರುತ್ತದೆ. ಇದನ್ನು ತಪ್ಪಿಸಲೆಂದು ನಮ್ಮ ಮುಖ್ಯಮಂತ್ರಿಗಳು ತಮ್ಮ ಸಚಿವರಿಗೆಲ್ಲ ನಿಮ್ಮ ಕಛೇರಿಗಳಲ್ಲಿ ಸ್ವಜಾತಿಯವರನ್ನು ಆಪ್ತಕಾರ್ಯದರ್ಶಿಗಳನ್ನಾಗಿ ತೆಗೆದುಕೊಳ್ಳಬೇಡಿ ಎಂದು ಸೂಚನೆ ಕೊಟ್ಟರು. ಆದರೆ ಬಹಳಷ್ಟು ಸಚಿವರು ಆಪ್ತ ಸಹಾಯಕರು, ಆಪ್ತಕಾರ್ಯದರ್ಶಿಗಳನ್ನು ಸ್ವಜಾತಿಯವರಿಂದಲೇ ತುಂಬಿಕೊಂಡಿರುವುದು ಸಾಲದೆಂದು ಜವಾನರು, ಕಾರ್ ಡ್ರೈವರ್‌ಗಳನ್ನು ಅವರನ್ನೇ ಮಾಡಿಕೊಂಡಿದ್ದಾರೆ. ಈ ರೀತಿಯಾದರೆ ಸಣ್ಣ ಪುಟ್ಟ ಗುಂಪಿನ ಜನರಿಗೆ ನ್ಯಾಯ ಸಿಗುವುದಿಲ್ಲ. ಮುಖ್ಯಮಂತ್ರಿಗಳನ್ನು ಆಗ್ರಹಪಡಿಸುತ್ತೇನೆ ನಿಮ್ಮ ಸಚಿವರಿಗೆಲ್ಲ ಇವತ್ತೇ ಹೇಳಿ ಸ್ವಜಾತಿಯವರಿನ್ನೆಲ್ಲಾ ಇವತ್ತೇ ಹಿಂದಕ್ಕೆ ಕಳಿಸಿ ಎಂದು ತಿಳಿಸಬೇಕು. ಮುಖ್ಯಮಂತ್ರಿಗಳಿಗೆ ಆಡಳಿತದಲ್ಲಿ ಅನುಭವವಿರುವವರು ಎಂಬ ಹೆಸರಿದೆ ಅದನ್ನು ಉಳಿಸಿ ಮುಂದುವರಿಸಿಕೊಳ್ಳಬೇಕಾದರೆ ಅವರೇ ಈಗ ಮುಂದಾಗಬೇಕಾಗಿದೆ. ಅದೇಂದರೆ ಆಡಳಿತದಲ್ಲಿ ಸುವ್ಯವಸ್ಥೆ ತರಬೇಕು ಇವತ್ತು ನಮ್ಮ ತಾಲ್ಲೂಕಿನಲ್ಲಿ ಯಾರೋ ಒಬ್ಬ ಎಸ್ ಐ ಒಂದು ಅನ್ಯಾಯ ಎಸಗಿದ್ದಾನೆಂದು ಮುಖ್ಯಮಂತ್ರಿಗಳಿಗೆ ಅರ್ಜಿಕೊಟ್ಟರೆ ಅವರು ಅದನ್ನು ಹೋಮ್ ಸೆಕ್ರೆಟರಿಗೆ, ಅವರು ಡಿ.ಐ.ಜಿಯವರಿಗೆ, ಅವರು ಐಜಿಪಿಯವರಿಗೆ ಹೀಗೆ ಸಾಗಿ ಕೊನೆಗೆ ಆ ಎಸ್ ಐ ಕೈಗೇ ಬಂದು ಸೇರುತ್ತದೆ. ಯಾರ ಮೇಲೆ ದೂರು ಕೊಡುತ್ತೇವೆವೋ ಅವರ ಬಳಿಯೇ ಅದು ಬರುತ್ತದೆ. ಇದು ಹೋಗಬೇಕು. ಇನ್ನು ಇಂಟೆಲಜೆನ್ಸ್ ಎಂದು ಒಂದು ವಿಂಗ್ ಇದೆ, ಕಾಲಕಾಲಕ್ಕೆ ಮುಖ್ಯ ಮಂತ್ರಿಗಳಿಗೆ ರಾಜಕೀಯ ವಿರೋಧಿಗಳು ಯಾರು, ಜನಾಭಿಪ್ರಾಯ ಎತ್ತಕಡೆ ಸಾಗಿದೆ, ಕಲ್ಯಾಣ ಕಾರ್ಯಕ್ರಮಗಳು ಸರಿಯಾಗಿ ಸಾಗಿವೆಯೇ ಎಂದು ತಿಳಿದೆ ಕೊಳ್ಳುವುದಕ್ಕೆ ಇದೆ. ಈ ಸರ್ಕಾರದ ಬಗ್ಗೆ ಜನರು ಏನು ಅಭಿಪ್ರಾಯವನ್ನು ಕೊಡುತ್ತಾರೆ ಎನ್ನುವುದಕ್ಕೆ ಅದು ಗುಪ್ತಚಾರ ದಳ. ಮಾನ್ಯ ಮುಖ್ಯಮಂತ್ರಿಗಳ ವೈರಿಗಳು ಯಾರು ಎಂದರೆ ಅವರು ಇಂಟೆಲಿಂಜೆನ್ಸ್ ಅಧಿಕಾರಿಗಳು ಅವರ ವೈರಿಗಳು. ನೀವು ಯಾರನ್ನಾದರೂ ಕೇಳಿಧಿ ಕೆಲಸಕ್ಕೆ ಬಾರದ ಜಾಗಕ್ಕೆ ಹಾಕಿದ್ದಾರೆ ಎಂದು ಹೇಳುತ್ತಾರೆ. ಅತೃಪ್ತರು ಅವರು. ಆದುದರಿಂದ ಯಾರೇ ಮುಖ್ಯಮಂತ್ರಿಗಳು ಕೂಡ ಈ ಇಂಟೆಲಿಂಜೆನ್ಸ್‌ನ್ನು ನಂಬಿಕೊಂಡು ಬದುಕುವುದಕ್ಕಾಗುವುದಿಲ್ಲ. ಅವರು ಹೇಳಿದ ಮಾಹಿತಿಗಳು ಕೂಡಾ ಅನೇಕ ಸಾರಿ ಉಲ್ಟಪಲ್ಟ ಆಗಿರುತ್ತವೆ. ಆದುದರಿಂದ ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳುತ್ತಿದ್ದೇನೆ, ಮಾನ್ಯ ಮುಖ್ಯಮಂತ್ರಿಗಳು ತಮ್ಮದೇ ಆದಂಥ ಗುಪ್ತಚಾರ ದಳವನ್ನು ಇಟ್ಟುಕೊಂಡು ಈ ರಾಜ್ಯದಲ್ಲಿ ಏನಾಗುತ್ತಿದೆ, ಈ ರಾಜ್ಯದಲ್ಲಿ ರಾಜಕಾರಣಿಗಳು ಏನೇನು ಹೇಳುತ್ತಿದ್ದಾರೆ, ಓಟು ಕೊಟ್ಟಂಥ ಜನರು ಯಾವ ರೀತಿ ಸರ್ಕಾರದ ಮೇಲೆ ಅವರ ಭಾವನೆಯನ್ನು ಯಾವ ರೀತಿ ವ್ಯಕ್ತ ಮಾಡುತ್ತಿದ್ದಾರೆ ಎನ್ನತಕ್ಕಂಥದ್ದನ್ನು ಸಂಗ್ರಹಣೆ ಮಾಡಿ ಜನತೆಯನ್ನು ಸ್ಪಂಧನ ಮಾಡತಕ್ಕಂಥ ಕೆಲವು ಕಾರ್ಯಕ್ರಮಗಳನ್ನು ಅವರು ಅಳವಡಿಸಿಕೊಳ್ಳಬೇಕು ಎಂದು ಹೇಳಿ ತಾವು ಬೆಲ್ ಹೊಡೆಯುವುದಕ್ಕಿಂತ ಮುಂಚೆ ನನ್ನ ನಮಸ್ಕಾರಗಳನ್ನು ತಿಳಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಲ್.ಆರ್. ಶಿವರಾಮೇಗೌಡ:- ಇಲ್ಲಿ ಒಂದು ವಿಚಾರ ತೀರ್ಮಾನವಾಗಬೇಕು.

ಛೇರ್ಮನ್:- ತಾವು ಕುಳಿತುಕೊಳ್ಳಿ.

ಶ್ರೀ ಎಲ್.ಆರ್. ಶಿವರಾಮೇಗೌಡ:- ನಾವು ಇವತ್ತು ಬೆಳಿಗ್ಗೆ ತಾವು ಬರುವುದಕ್ಕಿಂತ ಮುಂಚೆ ಬಂದು ಇಲ್ಲಿ ಕುಳಿತುಕೊಂಡಿದ್ದೇವೆ. ಕೊನೆಯಲ್ಲಿ ತಾವು ಹೋದಮೇಲೂ ಕಡೆಯವರೆಗೂ ಕುಳಿತುಕೊಂಡಿರುತ್ತೇವೆ. ಇಲ್ಲಿ ತಾವು ಒಂದು ತೀರ್ಪನ್ನು ಕೊಡಬೇಕು. ಆ ಪಟ್ಟಿಯಲ್ಲಿ ನಮ್ಮ ಹೆಸರು ಇದೆಯೇ ಇಲ್ಲವೇ ಎನ್ನುವುದನ್ನು ಹೇಳಿ.

ಛೇರ್ಮನ್:- ಆಮೇಲೆ ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ:- ಆ ಪಟ್ಟಿಯಲ್ಲಿ ಅವರ ಹೆಸರು ಇಲ್ಲ ಎಂದು ಗೊತ್ತಾದರೆ ಸುಮ್ಮನೆ ಕುಳಿತುಕೊಳ್ಳುತ್ತಾರೆ.

ಶ್ರೀ ಎ. ಕೆ. ಅನಂತಕೃಷ್ಣ:- ಮಾನ್ಯ ಶಿವರಾಮೇಗೌಡರು ಹೇಳಿದ ರೀತಿ ನಮ್ಮ ಹೆಸರು ಬರುತ್ತದೆ ಎಂದು ಹೇಳಿ ಹೇಳಿ ರಾತ್ರಿಯವರೆಗೂ ಕುಳಿತು ಕೊಂಡಿರುತ್ತೇವೆ. ನಮಗೆ ಅವಕಾಶವನ್ನೇ ಕೊಡುವುದಿಲ್ಲ.

ಶ್ರೀ ಬಿ. ಎಂ. ಇದಿನಬ್ಬ:- ನಮ್ಮ ಹೆಸರು ಬರುತ್ತದೆಯೊ ಇಲ್ಲವೋ ಎಂದು ಕಾದು ಕುಳಿತುಕೊಂಡಿರುತ್ತೇವೆ. ನಮ್ಮ ಹೆಸರು ಉಂಟೋ ಇಲ್ಲವೋ ಎಂದು ನೋಡಿ. ನಾನು ಖಾಯಂ ಆಗಿ ಬೆಳಿಗ್ಗೆಯಿಂದ ಸಂಜೆಯವರೆಗೂ ಕುಳಿತು ಕೊಂಡಿರುತ್ತೇನೆ. ನಮ್ಮ ಹೆಸರು ಬರುತ್ತದೆಯೊ ಇಲ್ಲವೋ ಎಂದು ಹೇಳಿಬಿಟ್ಟರೆ ಸುಮ್ಮನೆ ಕುಳಿತುಕೊಳ್ಳುತ್ತೇವೆ.

ಛೇರ್ಮನ್:- ಈ ಬೆಲ್‌ಗೆ ಬೆಲೆಯೇ ಇಲ್ಲ. ಒಬ್ಬೊಬ್ಬರು ಹತ್ತು ಹತ್ತು ನಿಮಿಷದಲ್ಲಿ ಮಾತನಾಡಿದರೆ ಮುಗಿದುಹೋಗುತ್ತದೆ. ಬೆಲ್ ಹೊಡೆದರೂ ಕೂಡಾ ಮಾತನಾಡುತ್ತಲೇ ಇರುತ್ತಾರೆ. ಈಗ ಶ್ರೀಮತಿ ಚಂದ್ರಪ್ರಭಾ ಅರಸ್‌ರವರು ಮಾತನಾಡುತ್ತಾರೆ.

ಶ್ರೀಮತಿ ಚಂದ್ರಪ್ರಭಾ ಅರಸ್ (ಹುಣಸೂರು):- ಸನ್ಮಾನ್ಯ ಸಭಾಧ್ಯಕ್ಷಿಣಿಯವರೇ ಮಾನ್ಯ ಮುಖ್ಯಮಂತ್ರಿಗಳ ಇಲಾಖೆಗೆ ಸಂಬಂಧಪಟ್ಟಂತೆ ಹಾಗೂ ನಮ್ಮ ಇತರೆ ಸಚಿವರ ಪ್ರಮುಖ ಬೇಡಿಕೆಗಳ ಬಗ್ಗೆ ಮಾತನಾಡಲಿಕ್ಕೆ ತಾವು ಕೆಲವು ನಿಮಿಷಗಳ ಅವಕಾಶವನ್ನು ಕೊಟ್ಟಿದ್ದೀರಿ ಧನ್ಯವಾದಗಳು. ಕೃಷಿ ಬಗ್ಗೆ ನಮ್ಮ ಹಿರಿಯ ಸದಸ್ಯರುಗಳು ಅನೇಕ ಒಳ್ಳೆಯ ವಿಷಯಗಳನ್ನು ಸ್ವಯಂ ಅನುಭವಗಳನ್ನು ಮತ್ತು ವಸ್ತು ಸ್ಥಿತಿಯನ್ನು ಬಹಳ ವಿವರಗಳನ್ನು ಚೆನ್ನಾಗಿ ಹೇಳಿದ್ದಾರೆ. ಆದ್ದರಿಂದ ಹೆಚ್ಚು ವಿವರಕ್ಕೆ ಹೋಗದೆ ಕೇವಲ ಕೆಲವೇ ಸಲಹೆಗಳನ್ನು ಅಥವಾ ನಾನು ತಿಳಿದಂಥ ಕೆಲವು ವಿಷಯಗಳನ್ನು ತಮ್ಮ ಮೂಲಕ ಮಾನ್ಯ ಕೃಷಿ ಸಚಿವರ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ನಮ್ಮ ರಾಷ್ಟ್ರ ಕೃಷಿ ಪ್ರಧಾನವಾದಂಥ ರಾಷ್ಟ್ರ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಇರತಕ್ಕಂಥ ನಮ್ಮ ನಾಡ ರೈತರು ಶೇಕಡ 80 ಭಾಗಕ್ಕಿಂತ ಹೆಚ್ಚಿನ ಜನತೆ ಕೃಷಿಯನ್ನೇ ಅವಲಂಭಿಸಿದಂಥ ನಮ್ಮ ರಾಜ್ಯ ಮತ್ತು ರಾಷ್ಟ್ರ ಇವತ್ತು ಅದರ ಮೇಲೆ ನಿಂತಿದೆ. ಇದನ್ನು ನಾವೆಲ್ಲರೂ ಕೂಡಾ ಕಾಣುತ್ತಾ ಬರುತ್ತಿದ್ದೇವೆ. ಮತ್ತು ಅತಿ ಮುಖ್ಯವಾದ ಕಸುಬು ಹಾಗೂ ಅತ್ಯಾವಶ್ಯಕವಾದಂಥದ್ದು ಈ ಒಂದು ಬೇಸಾಯವಾಗಿದೆ. ನಮ್ಮ ರಾಷ್ಟ್ರಕ್ಕೆ ಸ್ವಾತಂತ್ರ್ಯ ಬಂದು 43 ವರ್ಷಗಳು ಆದರೂ ಕೂಡಾ ಈ ಇಲಾಖೆ ವಿಸ್ತೃತವಾಗಿದೆ. ವ್ಯಾಪಕವಾಗಿ ಇದರ ಅಂಗ ಸಂಸ್ಥೆಗಳು ಬೆಳೆದಿವೆ. ನಮ್ಮ ರಾಜ್ಯದಲ್ಲಿ ಎಷ್ಟು ನೀರಾವರಿಗೆ ಒಳಪಟ್ಟಂತಹ ಭೂಮಿ ಇದೆ ಅಂದರೆ ಪೂರ್ತಿ ನೀರಾವರಿ ಹಾಗೆಯೇ ಎಷ್ಟು ಅರೆ ನೀರಾವರಿ ಭೂಮಿ ಇದೆ ಹಾಗೆಯೇ ಸಂಪೂರ್ಣವಾಗಿ ಮಳೆಯಿಂದ ಆಧಾರಿತವಾಗಿ ಯಾವುದೇ ನೀರಿನ ಆಸರೆ ಇಲ್ಲದೇ ಇರತಕ್ಕ ಭೂಮಿ ಇದೆ ಇದೆಲ್ಲಾ ವೈಜ್ಞಾನಿಕ ವಿಶ್ಲೇಷಣೆ ಆಗಿಲ್ಲವೆಂದು ನನ್ನ ಅನಿಸಿಕೆ. ಇದರ ವೈಜ್ಞಾನಿಕ ವಿಶ್ಲೇಷಣೆ ಆಗಬೇಕು. ಈ ವಿವರಗಳಿಗೆ ಒಳಪಟ್ಟಂತೆ ನಮ್ಮಲ್ಲಿ ಮುಂಗಾರು ಮತ್ತು ಹಿಂಗಾರು ಮಳೆ ಮುಖ್ಯವಾಗಿ ಮಳೆ ಆಧಾರಿತ ಬೆಳೆಗಳನ್ನು ಬೆಳೆಸಲು ನಮ್ಮ ರೈತರು ಅದಕ್ಕೆ ತಕ್ಕ ಸಿದ್ಧತೆಗಳನ್ನು ನಡೆಸಿಕೊಂಡು ಪ್ರಾರಂಭ ಮಾಡುತ್ತಾರೆ. ಇತ್ತೀಚಿನ ವರ್ಷಗಳಲ್ಲಿ ನಿಸರ್ಗದ ಒಂದು ಪ್ರಕೋಪಕ್ಕೆ ನಾವು ಒಳಗಾಗಿದ್ದೇವೆ. ನಿಸರ್ಗವನ್ನು ಸಂಪೂರ್ಣವಾಗಿ ನಾಶ ಮಾಡತಕ್ಕ ಕೆಲಸಗಳೆಲ್ಲಾ ಅನೇಕ ರೀತಿಯಲ್ಲಿ ಸರ್ಕಾರವು ಅಧಿಕಾರಿಗಳು ಹಾಗೂ ನಮ್ಮ ರೈತರು ಕೂಡ ಇದಕ್ಕೆ ಭಾಗಿಯಾಗಿದ್ದಾರೆ. ಇದರಿಂದ ಮಳೆ ಸಕಾಲಕ್ಕೆ ಬರದಂತಹ ಪರಿಸ್ಥಿತಿ ನಮ್ಮ ರಾಜ್ಯದಲ್ಲಿ ಅದರಲ್ಲಿಯೂ ಮಲೆನಾಡು ಪ್ರದೇಶದಲ್ಲಿದೆ. ಆಗುಂಬೆ ಪ್ರದೇಶ ಇಡೀ ರಾಷ್ಟ್ರದಲ್ಲಿ ಚಿರಾಪುಂಜಿಯನ್ನು ಬಿಟ್ಟರೆ ಎರಡನೆಯದಾಗಿ ಅತಿ ಹೆಚ್ಚಿನ ಮಳೆ ಬೀಳತಕ್ಕ ಪ್ರದೇಶ ಆಗಿತ್ತು: ಆದರೆ ಇನ್ನೂ ಕೂಡ ಸರಿಯಾದ ಮಳೆ ಇಲ್ಲಿ ಆಗಿಲ್ಲ ಯಾವುದೇ ಕೆರೆಕಟ್ಟೆ ಪ್ರದೇಶಗಳಲ್ಲಿ ನಾಲ್ಕು ಇಂಚು ಮಳೆ ನೀರು ಶೇಖರಣೆ ಆಗಿಲ್ಲ. ಇಂತಹ ಸಂದರ್ಭದಲ್ಲಿ ಹಾಕಿರತಕ್ಕ ಬಿತ್ತನೆ ಬೀಜಗಳು ಈಗಾಗಲೇ ಬತ್ತಿ ಬಾಡಿ ಹೋಗಿವೆ. ಇನ್ನು ಮುಂದೆಯೂ ಸಹ ಮಳೆ ಬರತಕ್ಕ ಸೂಚನೆ ಕೂಡ ಕಾಣುತ್ತಿಲ್ಲ. ಮಳೆ ಬರುವ ಸಂಭವ ಕಡಿಮೆ ಆಗುತ್ತಿದೆ ಎನ್ನುವ ಮಾತನ್ನು ನಾನು ಹೇಳಬೇಕಾಗಿದೆ ಈ ಅನಿಶ್ಚಯುತ್ ಪರಿಸ್ಥಿತಿ ಇರುವುದರಿಂದ ಬೆಳೆಗಳಿಗೆ ಹೊಂದಾಣಿಕೆ ಕ್ರಾಪ್ ಪ್ಯಾಟರ್ನ್ ಏನು ಇದೆ ನಮ್ಮಲ್ಲಿ ಮೂರು ತಿಂಗಳ ಅವಧಿಗೆ ಬೆಳೆಯತಕ್ಕ ಬೆಳೆಗಳು ಇವೆ ಆರು ತಿಂಗಳ ಅವಧಿಗೆ ಬೆಳೆಯತಕ್ಕ ಬೆಳೆಗಳು ಇವೆ ಮತ್ತು

ವಿತ್ತೀಯ ಬೆಳೆಗಳು ಅಂದರೆ ಕಮರ್ಷಿಯಲ್ ಕ್ರಾಪ್‌ಗಳು ಇದನ್ನು ಸಮರ್ಪಕವಾಗಿ ಜಾರಿಗೆ ತರತಕ್ಕ ಒಂದು ಕೆಲಸವನ್ನು ಸಂಬಂಧಪಟ್ಟ ಇಲಾಖಾ ಅಧಿಕಾರಿಗಳು ಮಾಡಬೇಕು. ನಮ್ಮಲ್ಲಿ ಅಗ್ರಿಕಲ್ಚರಲ್ ಎಕ್ಸಟೆನ್‌ಷನ್ ಆಫೀಸರ್ಸ್‌ಗಳು ಇದ್ದಾರೆ. ಗ್ರಾಮೀಣ ಮಟ್ಟದಲ್ಲಿ ತಾಲ್ಲೂಕು ಮಟ್ಟದಲ್ಲಿ ಹೋಬಳಿವಾರು ಮಟ್ಟದಲ್ಲಿ ಸಂಪರ್ಕ ಸಭೆಗಳನ್ನು ಏರ್ಪಡಿಸಿ ರೈತರಿಗೆ ಮುಂಜಾಗ್ರತೆ ಮುನ್ನೆಚ್ಚರಿಕೆಯನ್ನು ಕೊಡತಕ್ಕ ಕ್ರಮವನ್ನು ಅಥವಾ ಅವರು ಮುಂದೆ ಯಾವ ರೀತಿ ತಯಾರು ಆಗಬೇಕು ಎಂದು ಹೆಚ್ಚಿನ ತಿಳುವಳಿಕೆ ಅಥವಾ ಮಾಹಿತಿ ಕೊಟ್ಟರೆ ಮಾತ್ರ ಕೆಲವು ಮಟ್ಟಿಗೆ ಈ ಒಂದು ಸಮಸ್ಯೆಗಳಿಗೆ ಪರಿಹಾರ ಮಾಡುವುದಕ್ಕೆ ಸಾಧ್ಯ ಆಗಬಹುದು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ತಾವು ನೋಡುತ್ತಿದ್ದೀರಿ ಹಿಂದೆಯೂ ಕೂಡ ಅನೇಕ ರೋಗ ರುಜಿನಗಳು ಮನುಷ್ಯನ ಜೀವನವನ್ನು ಹಾನಿ ಮಾಡತಕ್ಕ ಅನೇಕ ರೋಗಗಳು ಇದ್ದಾವೆ. ಸೊಳ್ಳೆ ಕಡಿತದಿಂದ ಮಲೇರಿಯಾ ಪ್ಲೇಗ್ ಬರುತ್ತವೆ ಕಾಲರಾ ಬರುತ್ತವೆ. ಇಡೀ ಊರಿಗೆ ಊರೇಕೊಳ್ಳೆ ಹೋಗುತ್ತದೆ ಅಂದರೆ ಜನರು ಬೇರೆ ಪ್ರದೇಶಗಳಿಗೆ ಹೋಗತಕ್ಕ ಸಂದರ್ಭ ಬರುತ್ತದೆ. ಆದ್ದರಿಂದ ನೊಂದ ಜನರು ಅನೇಕರು ಸಾವು ನೋವಿಗೆ ಈಡಾಗುತ್ತಿದ್ದರು. ಆದರೆ ಇವೊತ್ತಿನ ದಿವಸ ನಾವು ಕೇಳುತ್ತಿದ್ದೇವೆ ಈ ಕ್ಯಾನ್ಸರ್ ರೋಗ ಅಂದರೆ ಅರ್ಬುದ ರೋಗದ ವ್ಯಾಪ್ತಿ ಹಳ್ಳಿಗಾಡಿನಲ್ಲಿ ಎಂದೂ ನಾವು ಇದನ್ನು ಕೇಳಿರಲಿಲ್ಲ. ಇತ್ತೀಚಿನ ದಿನಗಳಲ್ಲಿ ಹೆಚ್ಚಿನ ಜನರು ಇದಕ್ಕೆ ಬಲಿ ಆಗುತ್ತಿದ್ದಾರೆ. ಇದಕ್ಕೆ ಮುಖ್ಯವಾದ ಒಂದು ಕಾರಣವನ್ನು ವಿಜ್ಞಾನಿಗಳು ಮತ್ತು ವೈದ್ಯರಾದವರು ವಿಶ್ಲೇಷಣೆ ಮಾಡಿ ಹೇಳತಕ್ಕದ್ದು ಇದೆ. ಈ ರಸಗೊಬ್ಬರಗಳ ಇತಿಮಿತಿ ಇಲ್ಲದ ಬಳಕೆ ಮತ್ತು ಸಮರ್ಪಕವಾಗಿ ಅಲ್ಲದೆ ಬಳಕೆ ಕೂಡ ಈ ಒಂದು ರೋಗಕ್ಕೆ ಮುಖ್ಯ ಕಾರಣ ಆಗಿರಬೇಕು ಎಂದು ನಾವು ಎಲ್ಲರೂ ಹೆಚ್ಚಿನ ಗಮನಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ಹಳ್ಳಿಗಾಡಿನಲ್ಲಿ ನಾವು ಎಲ್ಲಾ ಸಣ್ಣ ಮಕ್ಕಳು ಇರುವಾಗ ನೋಡಿದ್ದೇವೆ. ಗೋದನ ದನ ಮತ್ತು ಎಮ್ಮೆಯ ಅಂದರೆ ಜಾನುವಾರುಗಳ ಒಂದುಗೊಬ್ಬರವನ್ನು ವಿಶೇಷವಾಗಿ ಉಪಯೋಗ ಮಾಡುತ್ತಿದ್ದರು. ಆದರೆ ಇವೊತ್ತಿನ ದಿವಸದಲ್ಲಿ ಈ ರಸಾಯನಿಕ ಗೊಬ್ಬರಗಳ ಒಂದು ಪ್ರಚಾರದಿಂದ ಹೆಚ್ಚಾಗಿ ಅಥವಾ ಇದರ ಉಪಯೋಗ ಸರಿಯಾದ ಬಳಕೆ ವೈಜ್ಞಾನಿಕ ರೀತಿಯಾದ ಬಳಕೆ ಅಥವಾ ಮಾಹಿತಿ ಅಥವಾ ತರಬೇತಿ ಪರಿಣಿತಿ ಇಲ್ಲದೇ ಇರತಕ್ಕ ರೀತಿಯಲ್ಲಿ ಅದನ್ನು ಬಳಸಿಕೊಳ್ಳುತ್ತಾ ಇರುವುದು ಕೂಡ ಈ ರೋಗಕ್ಕೆ ಮುಖ್ಯ ಕಾರಣ ಆಗಿದೆ ಎಂದು ನನ್ನ ಅನಿಸಿಕೆ. ನಮ್ಮ ಭೂಮಿಯಲ್ಲಿರತಕ್ಕ ಅಣುಗಳು ಅದರಿಂದ ಆಗತಕ್ಕ ಈ ಗೊಬ್ಬರಗಳು ನ್ಯಾಚುರಲ್ ಆಗಿ ನೈಸರ್ಗಿಕವಾಗಿ ಉತ್ಪತ್ತಿ ಆಗುತ್ತದೆ. ಇವೆಲ್ಲಾ ಕೂಡ ಇದರಿಂದ ನಾಶ ಆಗುತ್ತದೆ. ಈಗ ಕಾಂಪೋಸ್ಟ್ ಗೊಬ್ಬರವನ್ನು ತಯಾರು ಮಾಡುತ್ತಿದ್ದಾರೆ. ಹೆಚ್ಚು ಮರ ಇದ್ದ ಕಡೆ ಸಾಕಷ್ಟು ಎಲೆಗಳು ಉದುರುತ್ತವೆ. ಮುಖ್ಯವಾಗಿ ಹಳ್ಳಿಗಳಲ್ಲಿ ಅದರ ಶೇಖರಣೆ ಮಾಡಿ ಅದರ ಮೇಲೆ ಮಣ್ಣು ಹಾಕಿ ಗೊಬ್ಬರಗಳನ್ನು ತಯಾರು ಮಾಡತಕ್ಕದ್ದು ಅದರಲ್ಲಿಯೂ ಸ್ಥಳೀಯವಾಗಿ ತಯಾರು ಮಾಡತಕ್ಕ ಪರಿಪಾಠ ಕೂಡ ಇತ್ತು.

ದನಗಳ ಸಾಕಾಣಿಕೆ ಒಳ್ಳೆಯ ರೀತಿಯಲ್ಲಿ ಆಗದೇ ಇರುವುದರಿಂದ ಉತ್ಕೃಷ್ಟವಾದ ಗೊಬ್ಬರ ಕೂಡ ಕಡಿಮೆಯಾಗುತ್ತಿದೆ. ನೈಸರ್ಗಿಕ ರಾಸಾಯನಿಕ ಕ್ರಿಯೆಗೆ ಒಳಗಾಗಿರುವಂಥ ಕಾಂಪೋಸ್ಟ್ ಗೊಬ್ಬರಗಳ ತಯಾರಿಕೆ ಬಗ್ಗೆ ರೈತರಿಗೆ ತಿಳುವಳಿಕೆ ಹೆಚ್ಚಿನ ಮಾಹಿತಿ ಕೊಡುವಂಥ ರೈತರಿಗೆ ಒಳ್ಳೆಯದು ಆಗತಕ್ಕಂಥ ಕೆಲವು ಹಳೆಯ ಪದ್ಧತಿಗಳನ್ನು ಅನುಸರಿಸುವಂಥ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು, ಇದರ ಬಗ್ಗೆ ಹೆಚ್ಚಿನ ಪ್ರಚಾರ ಕೊಡಬೇಕು. ಏಕೆಂದರೆ ಹಿಂದೆ ಕೆರೆಕಟ್ಟೆಗಳು ಇದ್ದುವು. ಸುಮಾರು ತಿಂಗಳುಗಟ್ಟಲೆ ಮಳೆಯಾಗುತ್ತಾ ಇದ್ದುದರಿಂದ ಅಲ್ಲಿ ಸಾಕಷ್ಟು ನೀರು ಸಂಗ್ರಹವಾಗುತ್ತಿತ್ತು. ನಮ್ಮ ರೈತರು ಕೆರೆಕಟ್ಟೆಗಳ ಅಜುಬಾಜಿನಲ್ಲಿ ಉತ್ತಿಕೊಂಡು ಬೇಸಾಯ ಮಾಡುತ್ತಿದ್ದುದು ಹೆಚ್ಚು ಭೂಮಿ ದೊರಕುತ್ತದೆ ಎನ್ನುವ ಆಸೆಯಿಂದ ಇರಬಹುದು. ಇತ್ತೀಚಿನ ವರ್ಷಗಳಲ್ಲಿ ಮಳೆ ಅಂಶ ಕೂಡ ಕಡಿಮೆಯಾಗಿರುವುದರಿಂದ ಕೆರೆಕಟ್ಟೆಗಳೆಲ್ಲಾ ಬತ್ತಿ ಹೋಗಿದೆ. ಹಿಂದೆ ನಮ್ಮ ರೈತರಿಂದ ಹೂಳು ತೆಗೆಯತಕ್ಕಂಥ ಕಾರ್ಯಕ್ರಮ ನಡೆಯುತ್ತಿತ್ತು. ಅದು ಒಳ್ಳೆಯ ಗೊಬ್ಬರ ಅದಕ್ಕೆ ಗೋಡು ಎಂದು ಹೇಳುತ್ತಾರೆ. ರೈತರು ಅದನ್ನು ತಮ್ಮ ಹೊಲಗದ್ದೆಗಳಿಗೆ ಹಾಕಿಕೊಳ್ಳುತ್ತಿದ್ದರು.

ಇವತ್ತು ಯಾರೂ ಒಂದು ಗಾಡಿ ಮಣ್ಣನ್ನು ತೆಗೆಯಲಿಕ್ಕೆ ತಯಾರಿಲ್ಲ. ಈಗ ಹಣ ಕೊಟ್ಟರೆ ಯೂರಿಯಾ ಗೊಬ್ಬರ ಬರುತ್ತದೆ ನಾವೇಕೆ ಅದನ್ನು ತೆಗೆಯಬೇಕು ಪರಿಶ್ರಮಪಡಬೇಕು ಎನ್ನುವ ಮನೋಭಾವ ಅವರಲ್ಲಿರಬಹುದು. ಹೂಳು ಬಹಳ ಉತ್ಕೃಷ್ಟವಾದ ಗೊಬ್ಬರ ಅದನ್ನು ಸಂಗ್ರಹಣೆ ಮಾಡಿ ಉಪಯೋಗವಮಾಡಬಹುದು. ಅದರಿಂದ ಡೀಸಿಲ್ಟಿಂಗ್ ಕೆಲಸ ಆಗುತ್ತದೆ ತಮ್ಮ ಹೊಲ ಗದ್ದೆಗಳಿಗೆ ಅದು ಒಳ್ಳೆಯ ಗೊಬ್ಬರ ಕೂಡ ಆಗುತ್ತದೆ. ಇದು ಒಂದು ಮುಖ್ಯ ಕಾರಣ. ಏಕೆಂದರೆ ಇವತ್ತು ಹೂಳು ತುಂಬಿ ಕೆರೆಕಟ್ಟೆಗಳು ಬಹಳ ಮೇಲು ಪ್ರದೇಶಕ್ಕೆ ಬಂದುಬಿಟ್ಟಿವೆ. ಮತ್ತು ರೈತರು ಬೇಸಾಯಕ್ಕೆ ಅದರ ಆಜುಬಾಜು ಜಮೀನನ್ನು ತಮ್ಮ ವಶಪಡಿಸಿಕೊಂಡಿರುವುದರಿಂದ ಅಲ್ಲಿ ಸಾಕಷ್ಟು ಮಳೆ ನೀರು ಸಂಗ್ರಹವಾಗುವುದಕ್ಕೆ ಸಾಧ್ಯವಿಲ್ಲದಂತಾಗಿದೆ. ನಮ್ಮಲ್ಲಿ ನೋಡುತ್ತಾ ಇದ್ದೇನೆ. ಬರ ಪರಿಹಾರ ಅಥವಾ ಕಾಮಗಾರಿಗಳು ಯಾವಾಗ ನಡೆಯುತ್ತಪೆಯೆಂದರೆ ಇನ್ನೊಂದು ಸಾರಿ ಮಳೆ ಬರುವವರೆಗೂ ಕಾದಿರತಕ್ಕಂಥಾದ್ದನ್ನು ನೋಡುತ್ತೇವೆ. ಈ ಕೆಲಸಗಳನ್ನು ಬೇಸಿಗೆ ದಿನಗಳಲ್ಲಿ ಮಾಡಬೇಕು. ಸುಮಾರು ಜನವರಿಯಿಂದ ಅಂದರೆ ಕಟಾವುಗಳು ಮುಗಿದ ಮೇಲೆ ಫೆಬ್ರವರಿ ಮಾರ್ಚಿ ಏಪ್ರಿಲ್ ಈ ಮೂರು ತಿಂಗಳಲ್ಲಿ ಇದನ್ನು ಬಹಳೆ ಜರೂರಾಗಿ ತೆಗೆದುಕೊಂಡರೆ ಒಳ್ಳೆಯದು. ಪ್ರತಿವರ್ಷ ಕೂಡ ಯಾವುದೇ ಕಾಮಗಾರಿಯಾಗಲಿ ಈ ತಿಂಗಳುಗಳ ಅವಧಿಯಲ್ಲಿ ನಾವು ಪ್ರಾರಂಭ ಮಾಡಬೇಕಾಗುತ್ತದೆ. ಮತ್ತೊಂದು ಮಳೆಗಾಲ ಬರುವುದರಲ್ಲಿ ಇದನ್ನು ಮುಗಿಸಬೇಕಾಗುತ್ತದೆ. ಈಗ ತಾವು ನೋಡುತ್ತಾ ಇದ್ದೀರಿ. ಈಗ ಮಳೆ ಅಂಶ ಕಡಿಮೆಯಾಗಿದೆ. ಈಗಾಗಲೇ ಎಲ್ಲೆಲ್ಲೂ ಹಾಹಾಕಾರ ಪ್ರಾರಂಭವಾಗಿದೆ. ಶೇಕಡ 40 ಭಾಗದಷ್ಟು ಮಳೆ ಹೋದವರ್ಷ ಆಗಿಲ್ಲ. ಈಗ ಡೀಸಿಲ್ಟಿಂಗ್ ಮಾಡುತ್ತೇವೆ ಕೆರೆಕಟ್ಟೆಗಳನ್ನು ದುರಸ್ತಿ ಮಾಡುತ್ತೇವೆ ನಾಲೆಗಳನ್ನು ಸರಿಪಡಿಸುತ್ತೇವೆ ಎನ್ನುವ ಮಾತನ್ನು ಹೇಳಿದರು. ಇದು ಬಹಳ ತಡವಾಗುತ್ತದೆ ಸಕಾಲದಲ್ಲಿ ಮಾಡಿಸತಕ್ಕಂಥ ವ್ಯವಸ್ಥೆಯನ್ನು ಮಾಡಬೇಕು. ಸಂಬಂಧಪಟ್ಟ ಇಲಾಖೆಗಳನ್ನು ಸಿಬ್ಬಂದಿಯನ್ನು ಕ್ರೋಢೀಕರಿಸಬೇಕಾಗುತ್ತದೆ. ಅದು ಕೃಷಿ ಇಲಾಖೆಗೆ ಸಂಬಂಧಪಟ್ಟಿದ್ದು ಇರಬಹುದು ರೆವಿನ್ಯೂ ಇಲಾಖೆಗೆ ಸಂಬಂಧಪಟ್ಟಿದ್ದು ಇರಬಹುದು ಸಂಬಂಧಪಟ್ಟ ಇಲಾಖೆಗಳ ಪರಸ್ಪರ ಹೊಂದಾಣಿಕೆಯಿಂದ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎನ್ನುವ ಮಾತನ್ನು ತಮ್ಮ ಮುಖಾಂತರ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ಬೆಳೆ ಅತಿ ಮುಖ್ಯವಾದುದು. ನಮ್ಮ ರೈತರು ಊಟಕ್ಕಾಗಿ ಧಾನ್ಯಗಳನ್ನು ಬೆಳೆಸುತ್ತಾರೆ ಹಾಗೂ ಮಾರಾಟಕ್ಕಾಗಿ ಕಮರ್ಷಿಯಲ್ ಕ್ರಾಪ್ಸ್‌ನ್ನು ಬೆಳೆಯುತ್ತಿದ್ದಾರೆ. ತಂಬಾಕು ಹತ್ತಿ ಅರಿಶಿನ ಕಬ್ಬು ಮುಂತಾದ ಬೆಳೆಗಳನ್ನು ಬೆಳೆಯುತ್ತಿದ್ದಾರೆ. ಕಾರ್ಪೊರೇಷನ್‌ನವರು ಇದರ ಬಗ್ಗೆ ಸರಿಯಾದ ಮಾಹಿತಿಯನ್ನು ಸರಿಯಾದ ಪರಿಚಯವನ್ನು ಮಾಡಿಕೊಡಬೇಕು. ತಿಳುವಳಿಕೆ ಕೊಡಬೇಕು ತರಬೇತಿ ಕೊಡತಕ್ಕಂಥ ಕಾರ್ಯಕ್ರಮಗಳನ್ನು ಹಮ್ಮಿಕೊಂಡರೆ ಒಳ್ಳೆಯದಾಗುತ್ತದೆ. ಹಿಂದೆ ಒಳ್ಳೆಯ ಬಿತ್ತನೆಬೀಜಗಳ ಸಕಾಲದಲ್ಲಿ ಸಪ್ಲೈ ಇಲ್ಲದೆ ಇದ್ದುದರಿಂದ ಸ್ಪೂರಿಯಸ್ ಅಂದರೆ ಕೋಟಾ ಬೀಜಗಳನ್ನು ತಂದು ಇಂತಹ ಪ್ರದೇಶಗಳಲ್ಲಿ ಬೆಳೆದಾಗ ಅದು ನಷ್ಟವಾಯಿತು ಎಂದು ಗೊತ್ತಾಗಲಿಕ್ಕೆ ಒಂದು ತಿಂಗಳಾಯಿತು ಮತ್ತೆ ಹೊಸದಾಗಿ ಹಾಕಿದರೆ ಬೆಳೆ ಬರುವುದಿಲ್ಲ. ಹೀಗಾಗಿ ನಮ್ಮ ರೈತರು ಅನೇಕ ಕಷ್ಟ ನಷ್ಟಗಳನ್ನು ಅನುಭವಿಸಬೇಕಾಯಿತು. ಈಗ ನಮ್ಮಲ್ಲಿ ತಂಬಾಕು ಬೆಳೆಯನ್ನು ಹಚ್ಚಿದ್ದಾರೆ. ಅದರಲ್ಲೂ ನಮ್ಮ ಹಳೆಯ ಮೈಸರಿನಲ್ಲಿ ಬಹಳ ಉತ್ಕೃಷ್ಟವಾದ ಗುಣ ಮಟ್ಟ ಹೊಂದಿದಂಥ ಬೆಳೆಯಾಗಿದೆ. ಇವತ್ತಿನ ದಿವಸ ಇದಕ್ಕೆಲ್ಲ ಪ್ರೊಸೆಸ್ ಮಾಡಬೇಕಾಗುತ್ತದೆ. ಅದನ್ನು ಬೆಳೆದ ತಕ್ಷಣ ಮಾರಾಟ ಮಾಡುವು ದಕ್ಕಾಗುವುದಿಲ್ಲ. ಅದನ್ನು ಪ್ರೊಸೆಸಿಂಗ್ ಮಾಡಬೇಕಾಗುತ್ತದೆ. ಅದನ್ನು ಒಲೆಯಲ್ಲಿಟ್ಟು ವೈಜ್ಞಾನಿಕ ರೀತಿಯಲ್ಲಿ ಬೇಯಿಸಿ ಹದಗೊಳಿಸಿ ಮಾರಾಟ ಮಾಡಬೇಕಾಗುತ್ತದೆ. ಇದಕ್ಕೆ ಇಂಧನ ಬೇಕಾಗುತ್ತದೆ. ನಮ್ಮಲ್ಲಿ ಕಾಡೆಲ್ಲಾ ಕಡಿದು ಅರ್ಧ ಹಾಳಾಗಿಹೋಗಿರುವುದಕ್ಕೆ ಇದು ಒಂದೂ ಕಾರಣ ಇರಬಹುದು. ಹಿಂದೆ ನಾವು ಭೂಗೋಳವನ್ನು ಓದುತ್ತಾ ಇರುವಾಗ ನೋಡುತ್ತಿದ್ದೆವು. ಸಾಲು ಮರಗಳನ್ನು ನೆಡುತ್ತಿದ್ದರು ಕೆರೆಕಟ್ಟೆಗಳನ್ನು ಕಟ್ಟಿಸುತ್ತಿದ್ದರು ಬಾವಿಗಳನ್ನು ತೋಡಿಸಿದರು ಸಾರ್ವಜನಿಕರಿಗೆ ನೆರಳನ್ನು ಉಂಟು ಮಾಡತಕ್ಕಂಥ ಕೆಲಸಗಳನ್ನು ಮಾಡುತ್ತಿದ್ದರು ಎನ್ನುವ ಇತಿಹಾಸವನ್ನು ನಾವು ಓದುತ್ತಿದ್ದೆವು. ಅದನ್ನು ರಾಜ ಪ್ರಮುಖರು ಮಾಡಿರಬಹುದು ಅಥವಾ

ರಾಜರು ಮಾಡಿರಬಹುದು. ಈ ಒಂದು ಇತಿಹಾಸವನ್ನು ಓದುತ್ತಿದ್ದೆವು. ಆದರೆ ಇವತ್ತು ಏನಾಗಿದೆಯೆಂದರೆ ಸಾಲು ಮರಗಳನ್ನೆಲ್ಲಾ ಕಡಿದು ಬೋಳಾಗಿದೆ ಇದಕ್ಕೆ ಇಂಧನ ಬೇಕಾಗಿರತಕ್ಕಂಥಾದ್ದು ಮುಖ್ಯಕಾರಣವಾಗಿದೆ. ಮುಂಚೆ ಅರಣ್ಯ ಇಲಾಖೆಯಿಂದ ಪರವಾನಗಿ ತೆಗೆದುಕೊಂಡು ಎತ್ತಿನಗಾಡಿಯಲ್ಲಿ ಸಾಗಾಣಿಕೆ ಮಾಡುವುದಕ್ಕೆ ಕೆಲವೊಂದು ಅವಕಾಶ ಕೊಡುತ್ತಾ ಇದ್ದರು. ಈಗ ಕಾಡಿನಲ್ಲೂ ಬಹಳ ಕಷ್ಟ ಪರಿಸ್ಥಿತಿ ಇರುವುದರಿಂದ ಅದಕ್ಕೆ ಅರಣ್ಯ ಇಲಾಖೆಯವರು ಅವಕಾಶ ಕೊಡುವುದಿಲ್ಲ. ಆದ್ದರಿಂದ ಇವರು ಏನು ಮಾಡುತ್ತಾರೆಂದರೆ ಸಾಲು ಮರಗಳನ್ನು ತಮ್ಮ ಜಮೀನಿನಲ್ಲಿ ಮರಗಳಿದ್ದರೆ ಆ ಮರಗಳನ್ನು ಮತ್ತು ಇತರೆ ಜಮೀನುಗಳಲ್ಲಿರತಕ್ಕ ಮರಗಳನ್ನು ರಾತ್ರಿಯಲ್ಲಿ ಕಡಿಯುತ್ತಾ ಹೋಗುತ್ತಾರೆ. ಅದಕ್ಕೆ ಇದೂ ಒಂದು ಕಾರಣ ಇರಬಹುದು. ಇಂಧನ ಪೂರೈಕೆಯಲ್ಲಿ ಕಲ್ಲಿದ್ದಲನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವೇ
ಎಂಬುದನ್ನು ಕೇಂದ್ರಸರ್ಕಾರದ ನೆರವು ಪಡೆದು ಮಾಡುವುದಕ್ಕೆ ಸಾಧ್ಯವೇ ಎಂಬುದನ್ನು ತಿಳಿಸಬೇಕಾಗುತ್ತದೆ. ಇನ್ನು ರೈತರು ಬೆಳೆದಂಥ ಆಹಾರ ಧಾನ್ಯಗಳಿಗೆ ಒಳ್ಳೆಯ ಬೆಲೆಯನ್ನು ಕೊಡಬೇಕು. ವೈಜ್ಞಾನಿಕ ರೀತಿಯಲ್ಲಿ ಬೆಲೆಯನ್ನು ವಿಶ್ಲೇಷಣೆ ಮಾಡಿ; ಕೊಡಬೇಕು. ಇದರ ಬಗ್ಗೆ ಅನೇಕ ಹಿರಿಯರು ಹೇಳಿದ್ದಾರೆ. ಲೆವಿ ಪಾಲಿಸಿಯನ್ನು ಪುನರ್‌ಪರಿಶೀಲಿಸಬೇಕಾಗಿದೆ. ಇದು ಆಹಾರ ಇಲಾಖೆಗೆ ಬರುತ್ತದೆ. ಲೆವಿ ಸಿಸ್ಟಂನ್ನು ಭತ್ತ ಬೆಳೆಯುವಂಥ ಜಾಗದಲ್ಲಿಯೇ ಜಾರಿ ಮಾಡಬೇಕು. ಇವತ್ತು ಪಾಯಿಂಟ್‌ನಲ್ಲಿ ಲೆವಿ ಕಲೆಕ್ಟ್ ಮಾಡುತ್ತಿದ್ದಾರೆ. ಬೆಳೆಗಾರ ಬೆಳೆಯತಕ್ಕ ಪ್ರದೇಶದಲ್ಲಿ ಲೆವಿ ಹಾಕಿದರೆ; ಸರ್ಕಾರ ಸಂಗ್ರಹ ಮಾಡುವುದಕ್ಕೂ ಕೂಡ ಸುಲಭವಾಗುತ್ತದೆ. ಇನ್ನು ಬಹು ಮುಖ್ಯವಾಗಿ ದನಕರುಗಳಿಗೆ ಬೇಕಾದ ಮೇವು ಹೆಚ್ಚಾಗಿ ಬೆಳೆಯಬೇಕಾಗಿದೆ. ಹತ್ತಿ ತಂಬಾಕು ಬೆಳೆಯುವುದರಿಂದ ದನಕರುಗಳಿಗೆ ಆಹಾರ ಸಿಗುವುದಿಲ್ಲ. ಇತ್ತೀಚಿನ ದಿನಗಳಲ್ಲಿ ರಾಗಿ ಹುಲ್ಲು ಹೊರ ರಾಜ್ಯಗಳಿಗೆ ಹೊರ ದೇಶಗಳಿಗೆ ಯಾವುದೋ ಕಾರ್ಖಾನೆಗಳಿಗೆ ಕಳುಹಿಸುತ್ತಿದ್ದಾರೆ. ಇದನ್ನು ನಿಲ್ಲಿಸುವಂಥ ಕೆಲಸವನ್ನು ಯಾರೂ ಕೂಡ ಮಾಡುತ್ತಿಲ್ಲ. ಜಿಲ್ಲಾ ಪರಿಷತ್‌ನವರನ್ನು ಹೋಗಿ ಕೇಳಿದರೆ ಇದು ನಮ್ಮ ಕೆಲಸವಲ್ಲ ರೆವಿನ್ಯೂ ಇಲಾಖೆಯ ಕೆಲಸ ಎಂದು ಹೇಳುತ್ತಾರೆ. ತಾಲ್ಲೂಕು ಮಟ್ಟದ ಅಧಿಕಾರಿಗಳು ಬಹಳ ಬೇಜವಾಬ್ದಾರಿಯಿಂದ ವರ್ತಿಸುತ್ತಿದ್ದಾರೆ. ಕಂದಾಯ ಇಲಾಖೆಯಿಂದ ಇದರ ಬಗ್ಗೆ ಸೂಕ್ತ ಆದೇಶ ನೀಡಬೇಕೆಂದು ಹೇಳುತ್ತೇನೆ. ಇವತ್ತು ಅವ್ಯಾಹತವಾಗಿ ಮೇವು ಹೊರಗಡೆ ಹೋಗುತ್ತಿದೆ; ಇದನ್ನು ನಿಲ್ಲಿಸದೇ ಹೋದರೆ ಸಕಾಲದಲ್ಲಿ ಮಳೆ ಬಾರದೇ ಇದ್ದರೆ ದನಕರುಗಳಿಗೆ ಮೇವೂ ಕೂಡ ಇಲ್ಲದಂತಾಗುತ್ತದೆ. ಸರ್ಕಾರ ಕೊಡುವುದಕ್ಕೆ ಮುಂದೆ ಬಂದರೂ ಮೇವು ಸಿಗದಂಥ ಪರಿಸ್ಥಿತಿ ಉಂಟಾಗುತ್ತದೆ. ಒಣ ಹುಲ್ಲು ಹೊರ ರಾಜ್ಯಗಳಿಗೆ ಹೋಗುವುದನ್ನು ತಡೆಗಟ್ಟಬೇಕೆಂದು ಕೇಳಿಕೊಳ್ಳುತ್ತೇನೆ. ಪಂಚಾಯತ್ ರಾಜ್ ಬಗ್ಗೆ ಅನೇಕ ಹಿರಿಯರು ಮಾತನಾಡಿದ್ದಾರೆ. ನಮ್ಮ ವಿರೋಧ ಪಕ್ಷದ ನಾಯಕರುಗಳು ಮುಖಂಡರುಗಳು ಮಾತನಾಡಿದ್ದಾರೆ. ಇವತ್ತಿನ ದಿವಸ ಕಾಂಗ್ರೆಸ್ ಪಕ್ಷದ ಸರ್ಕಾರ ಬಂದ ನಂತರ ಇಡೀ ರಾಜ್ಯದಲ್ಲಿ ಒಂದು ಹೊಸ ಬದಲಾವಣೆಯನ್ನು ಕ್ರಾಂತಿಕಾರಕ ಹೆಜ್ಜೆ ಇಟ್ಟಿರುವುದನ್ನು ಹೋಗಲಾಡಿಸುವುದಕ್ಕೆ ಬಂದಿದ್ದಾರೆ ಎನ್ನುವ ಪ್ರಚಾರ ಕೈಗೊಂಡಿದ್ದಾರೆ. ಈ ವಿಚಾರದಲ್ಲಿ ನನ್ನ ಪ್ರಾಮಾಣಿಕ ಅನಿಸಿಕೆ ಹೇಳಬೇಕಾಗಿದ್ದರೆ ಮೂಲಭೂತವಾಗಿ ನಾವು ರಾಜ್ಯಾಂಗದಲ್ಲಿ ಏನೊಂದು ಕಟ್ಟುಪಾಡನ್ನು ಹಾಕಿಕೊಂಡಿದ್ದೇವೆ. ರಾಷ್ಟ್ರಮಟ್ಟದಲ್ಲಿ ಸ್ವಾತಂತ್ರ್ಯ ಬಂದನಂತರ ಪ್ರಜಾಪ್ರಭುತ್ವಕ್ಕೆ ಅಡಿಗಲ್ಲಾಗಿ ಏನು ಇಟ್ಟುಕೊಂಡಿದ್ದೇವೆ; ಅದಕ್ಕೆ ವಿರುದ್ಧವಾದ ಭಾವನೆಗಳನ್ನು ಯಾರೂ ಇಟ್ಟುಕೊಂಡಿಲ್ಲ. ಮೂಲಭೂತವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಸಣ್ಣ ಸಣ್ಣ ಪ್ರಮಾಣದಲ್ಲಿ ನಿತ್ಯದ ಕೆಲಸಕಾರ್ಯಗಳನ್ನು ನೋಡತಕ್ಕ ಚುನಾಯಿತ ಪ್ರತಿನಿಧಿಗಳನ್ನು ಒಳಗೊಂಡಂಥ ಪ್ರಜಾಪ್ರಭುತ್ವವೇ ನಿಜವಾದ ಪ್ರಜಾಪ್ರಭುತ್ವ. This is a basic democratic Institution which is a must........ 5 ವರ್ಷಕ್ಕೊಂದು ಸಾರಿ ವಿಧಾನ ಸಭೇ ಚುನಾವಣೆಗಳು ಸರ್ಕಾರ ರಚನೆಯಾಗುತ್ತದೆ. ಅದೇ ರೀತಿ 5-6ವರ್ಷಕ್ಕೊಮ್ಮೆ ಕಡ್ಡಾಯವಾಗಿ ಚುನಾವಣೆಗಳು ನಡೆಯಬೇಕು. ವಿಕೇಂದ್ರೀಕರಣ ಮಾಡಿದ್ದೇವೆಂದು ಇವರು ಹೇಳುತ್ತಾರೆ; ನಿಜವಾದ ಅರ್ಥದಲ್ಲಿ ವಿಕೇಂದ್ರೀಕರಣವಾಗಿಲ್ಲ. ಕೆಳಮಟ್ಟದಲ್ಲಿ ಕೇಂದ್ರೀಕರಣವಾಗಿದೆ. ಹಿಂದೆ ಸಣ್ಣ ಸಣ್ಣ ಪಂಚಾಯಿತಿಗಳು ಇದ್ದಾಗ ಸಾಮಾನ್ಯವಾಗಿ ಜನರು ತಮ್ಮ ಗ್ರಾಮದಲ್ಲಿನ ತೊಂದರೆ ಬಗ್ಗೆ

ಕುಡಿಯುವ ನೀರಿನ ಬಗ್ಗೆ ಒಳಚರಂಡಿ ವ್ಯವಸ್ಥೆ ಬಗ್ಗೆ ನಡಿಗೆಯಲ್ಲಿ ಹೋಗಿ ತಲುಪಿಸುತ್ತಿದ್ದರು. ಆದರೆ ಇವತ್ತು 20 ಹಳ್ಳಿಗಳನ್ನು ಒಳಗೊಂಡಂತೆ ಮಂಡಲ ಪಂಚಾಯಿತಿ ಮಾಡಿರುವುದರಿಂದ ತಮ್ಮ ಕಾರ್ಯವ್ಯಾಪ್ತಿಯಲ್ಲಿ ಕೆಲಸ ಮಾಡುವುದಕ್ಕೆ ಕಷ್ಟ ಇದೆ. ಸಾಮಾನ್ಯ ಅರ್ಜಿದಾರರು ತಮ್ಮ ಅಹವಾಲುಗಳನ್ನು ಹೇಳುವುದು ಕಷ್ಟವಾಗುತ್ತದೆ. ಪ್ರದೇಶಗಳ ದೀ ಲಿಮಿಟೇಷನ್ ಮಾಡುವಾಗ ವೈಜ್ಞಾನಿಕವಾಗಿ ಮಾಡಬೇಕಾಗುತ್ತದೆ. ಇದನ್ನು ರಾಜಕೀಯ ದೃಷ್ಟಿ ಯಿಂದ ಮಾಡಿದ್ದಾರೆಂದು ಸ್ವತಃ ಅನುಭವದಿಂದ ಹೇಳುವುದಕ್ಕೆ ಇಚ್ಚೆ ಪಡುತ್ತೇನೆ. ಇದು ಇನ್ನೂ ಸಣ್ಣದಾಗಿರಬೇಕು. ಕಾರ್ಯವ್ಯಾಪ್ತಿ ಬರತಕ್ಕಂಥದ್ದು ಇರಬೇಕಾಗುತ್ತದೆ. ಮತ್ತು ಪ್ರಾಕ್ಟಿಕಲ್ ಆಗಿ ಅವರು ಒಳ್ಳೆಯ ಕೆಲಸವನ್ನು ಹಮ್ಮಿಕೊಳ್ಳಲಿಕ್ಕೆ ಅವರಿಗೆ ಹೆಚ್ಚಿನ ಸಹಾಯ ಅಧಿಕಾರ ಮತ್ತು ತೆರಿಗೆ ಹಾಕಿ ರಿಸೋರ್ಸ್ ಮೊಬೆಲೈಸ್ ಮಾಡತಕ್ಕ ಅವಕಾಶವನ್ನು ಸರ್ಕಾರ ಕಲ್ಪಿಸಿ ಕೊಡಬೇಕಾಗುತ್ತದೆ. ಎಲ್ಲಿ ಚುನಾಯಿತ ಪ್ರತಿನಿಧಿಗಳನ್ನೊಳಗೊಂಡಂಥ ಸ್ಥಳೀಯ ಸಂಸ್ಥೆಗಳು ಇರಬೇಕೆಂದು ಹೇಳುತ್ತೇವೆ ಅಲ್ಲಿ ನಾಮಕರಣ ಯಾವುದೇ ರೀತಿಯಲ್ಲಿ ಸಲ್ಲದು. ವೀಕರ್ ಸೆಕ್ಷನ್ ಮೈನಾರಿಟೀಸ್ ನಿಮ್ನವರ್ಗದವರನ್ನು ದುರ್ಬಲವರ್ಗದವರನ್ನು ಪರಿಶಿಷ್ಟಜಾತಿ ಪರಿಶಿಷ್ಟವರ್ಗದವರಿಗೆ ಮಹಿಳೆಯರಿಗೆ ಸಾಕಷ್ಟು ಸ್ಥಳಾವಕಾಶ ಇದ್ದು ಅವರಿಗೆ ಮೀಸಲಾತಿಯನ್ನು ಕೊಡಬೇಕು ಎನ್ನುವ ಮಾತನ್ನು ಹೇಳುತ್ತೇನೆ. ಈ ನಾಮಕರಣ ದಯವಮಾಡಿ ಇರಕೂಡದು ಏಕೆಂದರೆ ರಾಜಕೀಯ ದೃಷ್ಟಿಯಿಂದ ತಮ್ಮ ಹೆಚ್ಚಿನ ಸದಸ್ಯರನ್ನೊಳಗೊಂಡಂತೆ ಆ ಪರಿಸ್ಥಿತಿಯನ್ನು ಮಾಡಬೇಕೆಂದು ಇದನ್ನು ಮಾಡುತ್ತಾರೆ. ಪಕ್ಷಗಳ ಆಧಾರದ ಮೇಲೆ ಇವುಗಳನ್ನು ಛಿದ್ರ ಛಿದ್ರವಾಗಿ ಒಡೆಯತಕ್ಕಂಥ ಕೆಲಸ ಏನು ಮಾಡಿದ್ದಾರೆ ಇದು ಸಣ್ಣ ಪ್ರಮಾಣದಲ್ಲಿರತಕ್ಕಂಥ ಸ್ಥಳೀಯ ಸಂಸ್ಥೆಗಳ ಮೇಲೆ ಬೀಳಬಾರದು ಎಂದು ಒತ್ತಾಯ ಪೂರ್ವಕವಾಗಿ ಹೇಳಬಯಸುತ್ತೇನೆ. ಹಳ್ಳಿಗಾಡಿನ ಒಂದು ಸೌಹಾರ್ದ ಶಾಂತಿ ನೆಮ್ಮದಿ ಕದಡಿ ಹಾಳಾಗಿ ಹೋಗಿದೆ ಅಷ್ಟು ಮಟ್ಟಿಗೆ ಗೃಹ ಇಲಾಖೆಯ ಸಮಸ್ಯೆಗಳು ಹೆಚ್ಚಾಗಿವೆ ಪೋಲೀಸ್ ಇಲಾಖೆ ಅಷ್ಟೇ ಇದೆ ಕೋರ್ಟ್ ಅಷ್ಟೇ ಇದೆ. ಆದರೆ ನಿತ್ಯ ಜಗಳಗಳು ಒಬ್ಬರಿಗೊಬ್ಬರಿಗೆ ಹೊಡೆದಾಟಗಳು ಒಬ್ಬರಿಗೊಬ್ಬರಿಗೆ ವೈಷಮ್ಯ. ದ್ವೇಷಾಸೂಯೆಗಳು ಬಹಳ ಬೆಳೆಯುತ್ತಿವೆ. ಇದಕ್ಕೆ ಅವಕಾಶ ಮಾಡಿಕೊಡತಕ್ಕಂಥ ಒಂದು ಕೆಲಸಕ್ಕೆ ಅವರು ಕೈ- ಹಾಕದೆ ಅದನ್ನು ಉತ್ತಮ ರೀತಿಯಲ್ಲಿ ನಡೆಸಿಕೊಂಡು ಹೋಗುವುದಕ್ಕೆ ಮಾರ್ಪಾಡುಗಳನ್ನು ಮಾಡಿ ಅದನ್ನು ಜಾರಿತರಬೇಕು ಎಂದು ಗ್ರಾಮೀಣ ಅಭಿವೃದ್ಧಿ ಸಚಿವರಲ್ಲಿ ವಿನಂತಿ ಮಾಡುತ್ತೇನೆ. ತಾಲ್ಲೂಕುಗಳ ಮಟ್ಟದ ಸ್ಥಳೀಯ ಸಂಸ್ಥೆಗಳ ಕೆಲಸಕಾರ್ಯ ಅಧಿಕಾರ ಕಾರ್ಯವ್ಯಾಪ್ತಿ ಜಿಲ್ಲಾಮಟ್ಟದಲ್ಲಿರುವುದರಿಂದ ಹೇಗೆ ವಿಕೇಂದ್ರೀಕರಣ ಆಯಿತು ಎಂದು ತಿಳಿಯುತ್ತಿಲ್ಲ. ಅದು ತಾಲ್ಲೂಕು ಮಟ್ಟದಲ್ಲಿದ್ದರೆ ಒಳ್ಳೆಯದು ಎನ್ನುವ ಮಾತನ್ನು ನಾನು ಒತ್ತಾಯಪೂರ್ವಕವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಕುಡಿಯುವ ನೀರಿನ ವ್ಯವಸ್ಥೆ ರಸ್ತೆ ಒಳಚರಂಡಿ ವ್ಯವಸ್ಥೆ ಮನೆ ನಿವೇಶನ ಕೊಡತಕ್ಕಂಥದ್ದು ಹಿಂದೆ 20 ಅಂಶದ ಕಾರ್ಯಕ್ರಮ ಇತ್ತು. ಬಹಳ ವ್ಯಾಪಕವಾಗಿ ಜನಾನುರಾಗಿಯಾಗಿ ಜನಪರವಾದಂಥ ಕಾರ್ಯಕ್ರಮಗಳು ಹಳ್ಳಿಗಾಡಿನಲ್ಲಿದ್ದವು ಇವೊತ್ತು ನಾಲ್ಕು ಹಳ್ಳಿಗಳಿಗೆ ಹೋದರೆ ನಮಗೆ ಉತ್ತರ ಹೇಳಲಿಕ್ಕೆ ಕಷ್ಟವಾಗಿದೆ. ನಮ್ಮ ತಲೆಯಮೇಲೆ ಸೂರು ಕಟ್ಟಿಕೊಳ್ಳಲಿಕ್ಕೆ ಒಂದು ಸ್ವಲ್ಪ ನಿವೇಶನ ಕೊಡಿ ಎಂದು ವಿಧವೆಯರು ಬಡವರು ನಿಮ್ನವರ್ಗದವರು ಪರಿಶಿಷ್ಟಜಾತಿ ಪರಿಶಿಷ್ಟ ವರ್ಗದವರು ಬಂದರೆ ಇವೊತ್ತು ನಾವು ಏನೂ ಕೊಡುವ ಸ್ಥಿತಿಯಲ್ಲಿಲ್ಲ. ರೋಜ್‌ಗಾರ್ ಯೋಜನೆಯಲ್ಲಿ ಶೇಕಡ 15 ಭಾಗ ಹಣ ಉಪಯೋಗಿಸಬೇಕೆಂದು ಅವಕಾಶ ಕೊಟ್ಟಿದ್ದಾರೆ. ಅದನ್ನು ಉಪಯೋಗಿಸುತ್ತಾರೋ ಬಿಡುತ್ತಾರೋ ಅದನ್ನು ಪ್ರಯೋಜನ ಮಾಡಲಿಕ್ಕೆ ಅಧಿಕಾರ ಇಲ್ಲ. ಪ್ರಧಾನರಿಗೆ ಬಿಟ್ಟಿರುತ್ತಾರೆ. ಅದು ಅವರಿಗೆ ಬೇಕಾದವರಿಗೆ ಉಪಯೋಗ ಮಾಡಿಕೊಳ್ಳುತ್ತಾರೆ. ಮೊದಲು ಒಂದೊಂದು ತಾಲ್ಲೂಕಿಗೆ ಇಷ್ಟು ಎಂದು ಕೊಡುತ್ತಿದ್ದರು. ಜನತಾ ಮನೆ ಸ್ಕೀಮ್ ಬಡವರಿಗಾಗಿ ಆವಾಸಗಳನ್ನು ನಿರ್ಮಾಣ ಮಾಡತಕ್ಕದ್ದು ಒಂದು ಯೋಜನೆ ಇತ್ತು. ಅದು ಕೈಬಿಟ್ಟು ಹೋಗಿದೆ. ಮತ್ತೊಮ್ಮೆ ಅದನ್ನು ಕಾರ್ಯರೂಪಕ್ಕೆ ತರಬೇಕು. ಈ 20 ಅಂಶಗಳ ಕಾರ್ಯಕ್ರಮವನ್ನು ಹಿಂದಿನಿಂದಲೂ ಕೂಡ ರಾಷ್ಟ್ರದಲ್ಲಿ ರಾಜ್ಯದಲ್ಲಿ ಬಹಳ ಒತ್ತು ಕೊಟ್ಟು ತೆಗೆದುಕೊಂಡು ಮಾಡಿದರು. ಅದಕ್ಕೆ ಮತ್ತೊಮ್ಮೆ ಪುನರ್‌ಜೀವನ ಕೊಡಬೇಕೆಂದು ಹೇಳುತ್ತೇನೆ. ಇನ್ನು ಕುಡಿಯುವ ನೀರಿನ ಬಗ್ಗೆ ಹೇಳಬೇಕೆಂದರೆ ಸಾಮಾನ್ಯವಾಗಿ

ನಾವು ಯಾವುದೇ ಹಳ್ಳಿಗೆ ಹೋದಾಗ ನಮಗೆ ಅರ್ಜಿಗಳು ಬರತಕ್ಕಂಥದ್ದು ಮುಖ್ಯವಾಗಿ ಕುಡಿಯುವಂತ ನೀರು ಓ.ಎ.ಪಿ.ಗಳು ಮನೆಗಳು ನಿವೇಶನಗಳು ಕುಡಿಯುವ ನೀರನ್ನು ಪಿಡಬ್ಲ್ಯೂಡಿ ಇಲಾಖೆ ಪಿ ಹೆಚ್ ಇ ಮುಖಾಂತರ ಕೊಡುತ್ತಿದ್ದಾರೆ. ಶ್ರೀಮಾನ್ ನಜೀರ್‌ಸಾಬ್ ಅವರ ಹೆಸರನ್ನು ಮಾನ್ಯ ಇನ್ನೊಬ್ಬ ಸದಸ್ಯರು ತೆಗೆದುಕೊಂಡರೂ ತಪ್ಪೇನಿಲ್ಲ. ಅವರು ರಾಜ್ಯಕ್ಕೆ ಅನೇಕ ರೀತಿಯ ಸೇವೆಗಳನ್ನು ಮಾಡಿದ್ದಾರೆ ಮಾಡುವಾಗ ಏನು ಪ್ರಯೋಗ ಮಾಡುತ್ತಿದ್ದೇವೆ ಎನ್ನುವ ಮಾತನ್ನು ಹಿಂದೆ ಹೇಳಿದ್ದರು. ಇದನ್ನು ಪ್ರಯೋಗ ಮಾಡಲಿಕ್ಕೆ ಹೋಗಿ ಇದರ ಪರಿಣಾಮ ಏನಾಗಿದೆ ಇವೊತ್ತು ನಾವೆಲ್ಲಾ ಅನುಭವಿಸುತ್ತಿದ್ದೇವೆ. ಆದ್ದರಿಂದ ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡುತ್ತೇನೆ. ಕುಡಿಯುವ ನೀರಿಗಾಗಿ ಕೊಳವೆ ಬಾವಿಗಳನ್ನು ಪ್ರತಿಯೊಂದು ಹಳ್ಳಿಗಳಲ್ಲೂ ಯಾವುದೇ ವಿಮರ್ಶೆಯಿಲ್ಲದೆ ವಿಚಕ್ಷಣೆ ಇಲ್ಲದೆ ತೆಗೆದು ತೆಗೆದು ವಾಟರ್‌ಟೇಬಲ್ ಕೆಳಗಡೆ ಹೋಗಿ ಕೆರೆಕುಂಟೆಗಳಲ್ಲಿ ಹಳ್ಳಿಬಾವಿಗಳಲ್ಲಿ ನೀರು ಕೆಳಗಡೆ ಹೋಗಿದೆ. ಇದರ ಬಗ್ಗೆ ಮುಂದಿನ ಪರಿಣಾಮವನ್ನು ನೋಡಬೇಕಾಗುತ್ತದೆ. ಒಮ್ಮೆ ಏನಾದರೂ ವಾಟರ್ ಟೇಬಲ್ ಕೆಳಗಡೆ ಹತ್ತು ಅಡಿ ಹೋದರೆ ಬಾವಿ ಮುಚ್ಚಿದ ಹಾಗೆಯೇ ಆದ್ದರಿಂದ ಮಾನ್ಯ ಮಂತ್ರಿಗಳು ಹಣಕಾಸನ್ನು ಕ್ರೋಢೀಕರಣ ಮಾಡಿಕೊಂಡು ಬೇರೆಯವರ ಜೊತೆ ಹೊಂದಾಣಿಕೆ ಮಾಡಿಕೊಂಡು ಈ ಮಿನಿವಾಟರ್ ಸಪ್ಲೈ (ಎಲ್ಲಿ ಹಳ್ಳಗಳು, ಕೆರೆ ಕಟ್ಟೆಗಳು ಇವೆ ಅಲ್ಲಿ ಮಾಡಬೇಕು. ಈ ಒಂದು ಮಿನಿವಾಟರ್ ಸಪ್ಲೈ) ಮಾಡುವುದರಿಂದ ಹತ್ತಾರು ಕೊಳವೆ ಬಾವಿಗಳನ್ನು ತೋಡಿ ಫೇಲ್ ಆಗತಕ್ಕ ಒಂದು ಸಂದರ್ಭ ಏನಿದೆ ಅದನ್ನು ಕಡಿಮೆ ಮಾಡಬಹುದು. ಶಾಶ್ವತವಾದ ಪರಿಹಾರವನ್ನು ಗ್ರಾಮಾಂತರ ಜನರಿಗೆ ಕೊಡಲಿಕ್ಕೆ ಪ್ರಯತ್ನ ಮಾಡಬೇಕು. ಇದಕ್ಕಾಗಿ ಮಾನ್ಯ ಹಣಕಾಸಿನ ಸಚಿವರು ಹೆಚ್ಚಿನ ಹಣಕಾಸನ್ನು ಕೊಡಲಿಕ್ಕೆ ತಯಾರಿದ್ದಾರೆಂದು ತಮ್ಮ ಮುಂದೆ ಹೇಳುತ್ತೇನೆ. ಗ್ರಾಮ ನೈರ್ಮಲ್ಯ ಶಾಲೆ ಆಸ್ಪತ್ರೆ ಇವುಗಳಿಗೆ ಸಂಬಂಧಪಟ್ಟಂತೆ ಸ್ಥಳೀಯ ಜನರ ಬೇಡಿಕೆಗಳು ಏನು ಬರುತ್ತವೆ ಅದನ್ನು ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಆಗಿಂದಾಗ್ಗೆ ಮಾಹಿತಿಗಳನ್ನು ಒದಗಿಸಿ ಕೊಟ್ಟು ಅದನ್ನು ಜಾರಿಗೊಳಿಸುವ ವಿಚಾರದಲ್ಲೂ ಅನುಕ್ರಮವಾಗಿ ಫಾಲೋ ಅಪ್ ಮಾಡಲಿಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಒಳಾಡಳಿತ ಮತ್ತು ಪೋಲೀಸ್ ಇಲಾಖೆಯ ಬಗ್ಗೆ ಒಂದೆರಡು ಮಾತುಗಳನ್ನು ನಾನು ಹೇಳಬೇಕಾಗಿದೆ. ಪೋಲೀಸ್ ಅಧಿಕಾರಿಗಳು ಬ್ರಿಟೀಷರ ಆಡಳಿತವಿದ್ದಾಗ ಏನು ಪದ್ಧತಿ ಇದ್ದುವೋ ಅದೇ ಪದ್ಧತಿಗಳನ್ನು ಇವರು ಇನ್ನೂ ಇಟ್ಟುಕೊಂಡು ಬಂದಿದ್ದಾರೆ. ಇವರ ಆಯ್ಕೆಯ ಸಂದರ್ಭದಲ್ಲಿ ತರಬೇತಿ ಶಿಕ್ಷಣ ಸಮಯದಲ್ಲಿ ಕೆಲವೊಂದು ಮಾರ್ಪಾಡುಗಳನ್ನು ಮಾಡಿದರೆ ಒಳ್ಳೆಯದೆಂದು ನನಗೆ ಅನಿಸುತ್ತದೆ. ಒಳ್ಳೆಯ ನೈತಿಕತೆಯನ್ನು ಹೊಂದಿರತಕ್ಕ ಮತ್ತು ದಕ್ಷತೆ ಪ್ರಮಾಣಿಕತೆಗೆ ಹೆಸರಾದಂಥ ಒಳ್ಳೆಯ ಅಧಿಕಾರಿಗಳೂ ಇದ್ದಾರೆ. ಅವರನ್ನು ಸ್ಮರಿಸಬೇಕಾಗುತ್ತದೆ. ಐ.ಎ.ಎಸ್ ಅಧಿಕಾರಿಗಳಲ್ಲೂ ಕೂಡ ಲಿನ್ ನಂತಹ ಒಳ್ಳೆಯ ಅಧಿಕಾರಿಗಳಿದ್ದಾರೆ. ಅವರು ದಕ್ಷತೆಯಿಂದ ಪ್ರಮಾಣಿಕತೆಯಿಂದ ಕೆಲಸ ಮಾಡುತ್ತಿದ್ದರು. ಆದರೆ ಇವತ್ತಿನ ಆಡಳಿತ ವ್ಯವಸ್ಥೆಯನ್ನು ಬದಲಾವಣೆ ಮಾಡಿದರೂ ಕೂಡ ಅಧಿಕಾರಶಾಹಿ ಪದ್ಧತಿ ಬಹುಶಃ ಇದ್ದೇ ಇರುತ್ತದೆ. ಆದ್ದರಿಂದ ಇದನ್ನು ಮಾರ್ಪಾಡು ಮಾಡತಕ್ಕದ್ದು ಅವಶ್ಯಕ ಇದೆ. ತಮಗೆ ಒಂದು ಉದಾಹರಣೆಯನ್ನು ಹೇಳುವುದಾದರೆ ಐ.ಎ.ಎಸ್. ಅಧಿಕಾರಿಗಳಿಗೆ ಒಂದು ಫೈಲ್ ಹೋಗುತ್ತದೆ. ಅದು ಮೊದಲು ಒಂದೇ ಹಾಳೆಯಲ್ಲಿ ಇರುತ್ತದೆ. ಅದು ಮುಖ್ಯವಾಗಿ ಜನತೆಯ ಹಿತದೃಷ್ಟಿಯಿಂದ ಕೆಲಸ ಮಾಡುವಂಥಾದ್ದಾಗಿರುತ್ತದೆ. ಆದರೆ ಅಧಿಕಾರಿಗಳು ಅನಾವಶ್ಯಕವಾಗಿ ಫೈಲನ್ನು ದೊಡ್ಡದಾಗಿ ಬೆಳೆಸುತ್ತಾರೆ. ಆ ಕೆಲಸ ಬೇಗನೆ ಆಗುವುದಿಲ್ಲ. ಈ ಕಾರ್ಯಕ್ರಮವನ್ನು ನಾವು ಜಾರಿಗೊಳಿಸಿದ್ದೇವೆ ಅಥವಾ ಇಲ್ಲ ಎಂಬ ಉತ್ತರ ನಮಗೆ ಬರುವುದಿಲ್ಲ. ಸುಮ್ಮನೆ ಆ ಕಡೆಯಿಂದ ಈ ಕಡೆಗೆ ಈ ಕಡೆಯಿಂದ ಆ ಕಡೆಗೆ ಫೈಲನ್ನು ಓಡಾಡಿಸುತ್ತಾರೆ. ಈ ರೀತಿ ಮಾಡುವುದನ್ನು ತಪ್ಪಿಸಿ ಆಡಳಿತವನ್ನು ಚುರುಕುಗೊಳಿಸಬೇಕು. ದಕ್ಷತೆಯಿಂದ ಪ್ರಮಾಣಿಕತೆ ಯಿಂದ ಕೆಲಸ ಮಾಡತಕ್ಕ ಅಧಿಕಾರಿಗಳಿಗೆ ಬೆನ್ನು ತಟ್ಟಬೇಕು.

ಇನ್ನೊಂದು ವಿಚಾರ ಎಂದರೆ ಗೃಹ ಇಲಾಖೆಯಲ್ಲಿ ಯಾರಾದರೂ ಒಬ್ಬ ಅಧಿಕಾರಿಯ ಮೇಲೆ ಸಿ.ಓ.ಡಿ./ ತನಿಖೆ 'ಇದ್ದರೆ ಅದೇ ಅಧಿಕಾರಿಯನ್ನು ಅದೇ ಸಿ.ಓ.ಡಿ. ಇಲಾಖೆಗೆ ವರ್ಗಾವಣೆ ಮಾಡಿದಂಥ ನಿದರ್ಶನಗಳು ಇವೆ. ಈ ವಿಚಾರವನ್ನು ನಾನು ಈ ಸಂದರ್ಭದಲ್ಲಿ ಮಾನ್ಯ ಮುಖ್ಯ

ಮಂತ್ರಿಯವರ ಗಮನಕ್ಕೆ ತರಬಯಸುತ್ತೇನೆ. ಸಿ.ಓ.ಡಿ. ಇಲಾಖೆ ಎಂದರೆ ಇದು ಒಂದು ಕೆಲಸಕ್ಕೆ ಬಾರದಂಥ ಜೀವಾಳವೇ ಇಲ್ಲದಂಥ ಒಂದು ಇಲಾಖೆ ಎನ್ನತಕ್ಕ ಒಂದು ಭಾವನೆ ಬಂದಿದೆ. ಯಾವ ಸಂದರ್ಭದಲ್ಲಿ ಯಾರಮೇಲೆ ಯಾವ ವಿಚಾರದಲ್ಲಿ ಸಿ.ಓ.ಡಿ ಯಿಂದ ತನಿಖೆಯಾಗುತ್ತಿರುತ್ತದೆ ಅದೇ ತಪ್ಪಿತಸ್ಥ ಅಧಿಕಾರಿಯನ್ನು ಅದೇ ಸಿ.ಓ.ಡಿ. ಇಲಾಖೆಯಲ್ಲಿ ಹಾಕಿಕೊಂಡಿದ್ದಾರೆ. ಈ ವಿಚಾರವನ್ನು ನಾನು ಅನಂತರ ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ಪ್ರತ್ಯೇಕವಾಗಿ ತರುತ್ತೇನೆ. ಈಗ ತಮ್ಮ ಮೂಲಕ ನಾನು ಇಷ್ಟು ಮಾತ್ರ ಹೇಳುತ್ತೇನೆ. ಆಡಳಿತದಲ್ಲಿ ದಕ್ಷತೆಯನ್ನು ಹೆಚ್ಚಿಸುವುದಕ್ಕೋಸ್ಕರವಾದರೂ ಇವರಿಗೆ ಕನಿಷ್ಠ ಸೌಲಭ್ಯಗಳನ್ನು ಒದಗಿಸಬೇಕು. ಸುಮಾರು ಎರಡೂವರೆ ಲಕ್ಷ ಜನಸಂಖ್ಯೆ ನನ್ನ ಮತದಾರ ಕ್ಷೇತ್ರದಲ್ಲಿದೆ. ಪೋಲೀಸ್ ಸಂಖ್ಯೆ ಮಾತ್ರ ಹಿಂದೆ ಎಷ್ಟು ಇತ್ತೋ ಅಷ್ಟೇ ಇದೆ. ಗ್ರಾಮಾಂತರ ಪ್ರದೇಶದಲ್ಲಿ 35 ಜನ ಪೋಲೀಸ್ ಕಾನ್‌ಸ್ಟೇಬಲ್‌ಗಳು ಇರತಕ್ಕ ಪೋಲೀಸ್ ಕಛೇರಿ ಮತ್ತು ನಗರ ಪ್ರದೇಶದಲ್ಲಿ 25 ಜನ ಇರತಕ್ಕ ಕಛೇರಿ ಇದೆ. ಇಲ್ಲಿ ಒಬ್ಬರು ಡಿ.ವೈ.ಎಸ್.ಪಿ. ಇರುತ್ತಾರೆ. ಇವತ್ತು ಏನಾಗುತ್ತದೆ ಎಂದರೆ ಐ.ಪಿ.ಎಸ್. ಅಧಿಕಾರಿಗಳನ್ನು ಸೆಲೆಕ್ಟ್ ಮಾಡುತ್ತೀರಿ ಆದರೆ ಇದು ತಪ್ಪು ಎಂದು ನಾನು ಹೇಳುವುದಿಲ್ಲ. ಆಯ್ಕೆಯಾದಂಥ ಐ.ಪಿ.ಎಸ್. ಅಧಿಕಾರಿಗಳು 6 ತಿಂಗಳು ರಜಾ ಹೋಗುತ್ತಾರೆ ಇನ್ನು 6 ತಿಂಗಳ ಕಾಲ ಟ್ರೈನಿಂಗ್‌ಗೆ ಹೋಗುತ್ತಾರೆ. ಇದರಿಂದಾಗಿ ಇವರ ಕೈಕೆಳಗಿರತಕ್ಕ ಸಬ್ ಇನ್‌ಸ್ಪೆಕ್ಟರ್‌ಗಳು ಸರ್ಕಲ್ ಇನ್‌ಸ್ಪೆಕ್ಟರ್‌ಗಳೂ ಇತರೇ ಅಧಿಕಾರಿಗಳು ಯಾರೂ ಕೂಡ ಇವರ ಮುಖಗಳನ್ನು ನೋಡಿರುವುದಿಲ್ಲ. ಅಷ್ಟೇ ಅಲ್ಲ ಇವರ ಕೈಕೆಳಗಿರತಕ್ಕ ಅಧಿಕಾರಿಗಳಿಗೆ ಭಯ ಭೀತಿ ಇರುವುದಿಲ್ಲ. ತಮ್ಮ ಜವಾಬ್ದಾರಿಯನ್ನು ನಿರ್ವಹಣೆ ಮಾಡುವಾಗ ಬೇಜವಾಬ್ದಾರಿಯಿಂದ ಇರುತ್ತಾರೆ. ಈ ನ್ಯೂನತೆಗಳನ್ನು ಸರಿಪಡಿಸುವುದಕ್ಕೆ ಕ್ರಮ ಕೈಗೊಳ್ಳಬೇಕು. ವರ್ಗಾವಣೆಯನ್ನೂ ಕೂಡ ಸರಿಯಾದ ರೀತಿಯಲ್ಲಿ ಮಾಡಿದರೆ ಇಷ್ಟೊಂದು ಗೊಂದಲ ಇರುವುದಿಲ್ಲ ಎನ್ನತಕ್ಕ ಮಾತನ್ನು ಹೇಳಿ ಇಷ್ಟು ಮಾತನಾಡಲು ಅವಕಾಶವನ್ನು ಕೊಟ್ಟಂಥ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಗಂಗಾಧರ ಗೌಡ:- ಸ್ವಾಮಿ ಕರ್ನಾಟಕದಲ್ಲಿ 50 ಹುಲಿಗಳನ್ನು ಸಾಕುವುದಕ್ಕೆ 40 ಲಕ್ಷ ರೂ. ಖರ್ಚು ಆನೆ ಸಾಕುವುದಕ್ಕೆ ಲೆಕ್ಕವಿಲ್ಲ. ಇದನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತಂದು ಇದರ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಕೊಡಬೇಕೆಂದು ಕಳೆದ ಮೂರು ದಿನದಿಂದ ಕೇಳುತ್ತಿದ್ದರೂ ಅವಕಾಶ ಕೊಡುತ್ತಿಲ್ಲ. ರಾಜ್ಯದಲ್ಲಿ ಅರಣ್ಯ ಸಂರಕ್ಷಣೆಯ ಹೆಸರಿನಲ್ಲಿ ನಿಮ್ಮ ಅರಣ್ಯಾಧಿಕಾರಿಗಳು ಘಸ್ನಿ ಮಹಮ್ಮದ್ ಘೋರಿ ಮಹಮ್ಮದ್ ರೀತಿಯಲ್ಲಿ ರಾಜ್ಯದ ಬೊಕ್ಕಸವನ್ನು ಲೂಟಿ ಮಾಡುತ್ತಿದ್ದಾರೆ. ಇದರ ಬಗ್ಗೆ ಮಾತನಾಡಲು ನನಗೆ ಅವಕಾಶ ಕೊಡಬೇಕು.

ಅಧ್ಯಕ್ಷರು:- ಘಸ್ನಿ ಮಹಮ್ಮದ್ ಘೋರಿ ಮಹಮ್ಮದ್‌ರ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಕೊಡಬೇಕೆ?

ಶ್ರೀ ಆರ್. ಎಲ್. ಶಿವರಾಮೇಗೌಡ:- ಮಾನ್ಯ ಅಧ್ಯಕ್ಷರೇ 28-30 ದಿವಸಗಳಿಂದ ಚರ್ಚೆ ಮಾಡತಕ್ಕಂಥ ಸಂದರ್ಭದಲ್ಲಿ ತಾವು ಯಾವಾಗಲೂ ನನಗೆ ಈ ಸ್ವರೂಪ ತೋರಿರಲಿಲ್ಲ ಇವತ್ತು ದಯವಿಟ್ಟು ಕೊನೆ ದಿವಸದಲ್ಲಿ ಈ ಸ್ವರೂಪ ತಾಳಬೇಡಿ. ಏನಾದರೂ ಸ್ವಲ್ಪಮಟ್ಟಿಗೆ ನಮ್ಮ ಮೇಲೆ ತಮ್ಮ ದೃಷ್ಟಿಕೋನವನ್ನು ಹರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಗೋಪಿನಾಥ ಆರ್. ಸಾಂದ್ರ:- ಮಾನ್ಯ ಅಧ್ಯಕ್ಷರೇ ಎರಡು ವಿಷಯಗಳನ್ನು ಮಾತ್ರ ಹೇಳಬೇಕೆಂದಿರುತ್ತೇನೆ. ದಯವಿಟ್ಟು ಅವಕಾಶವನ್ನು ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಎಂ.ಪಿ. ವೆಂಕಟೇಶ್:- ಮಾನ್ಯ ಅಧ್ಯಕ್ಷರೇ ಎರಡೂ ಸಾರಿ ಮಾತನಾಡಬೇಕೆಂದು ಪ್ರಯತ್ನ ಪಟ್ಟೆ ಆಗಲಿಲ್ಲ. ತಾವು ಎಲ್ಲರಿಗೂ ಅವಕಾಶವನ್ನು ಮಾಡಿಕೊಡುತ್ತೇವೆಂದು ಹೇಳಿದ್ದೀರಿ. ತಾವು ಬಂದ ತಕ್ಷಣ ಗಾಬರಿಯಾಗಿ ಬಿಟ್ಟರು. ದಯವಿಟ್ಟು ಯುವಕರಿಗೆ ಒಂದು 5-5 ನಿಮಿಷ ಅವಕಾಶವನ್ನು ಮಾಡಿಕೊಡಬೇಕು.

MR.SPEAKER:- I will give you the party-wise information. ಒಟ್ಟು ಇದುವರೆಗೆ 8920 ನಿಮಿಷಗಳಾಗಿದೆ. ಕಾಂಗ್ರೆಸ್(ಐ) ನವರು 400 ನಿಮಿಷ ತೆಗೆದುಕೊಂಡಿದ್ದಾರೆ. ಜನತಾದಳ 227

ನಿಮಿಷ ಇಂಡಿಪೆಂಡೆಂಟ್ಸ್ 100 ನಿಮಿಷ ಜನತಾಪಾರ್ಟಿ 80 ನಿಮಿಷ ರೈತ ಸಂಘ 60 ನಿಮಿಷ ಬಿ.ಜೆ.ಪಿ. 55 ನಿಮಿಷ ಮುಸ್ಲೀಮ್ ಲೀಗ್ 20 ನಿಮಿಷ ಇಷ್ಟಾಗಿದೆ. ಆದ್ದರಿಂದ ಮಾನ್ಯ ಕೃಷಿಸಚಿವರೇ ನಿಮ್ಮನ್ನು ನಾಲ್ಕು ಗಂಟೆಗೆ ಕರೆದರೆ ತಾವು ಉತ್ತರವನ್ನು ಹೇಳಲಿಕ್ಕೆ ಆಗುತ್ತದೆಯೇ?

ಶ್ರೀ ಎಸ್. ಬಂಗಾರಪ್ಪ:- ಆಗುತ್ತದೆ.

ಅಧ್ಯಕ್ಷರು:- ಶ್ರೀ ಏಕಾಂತಯ್ಯ. You will have to be brief..

† ಶ್ರೀ ಹೆಚ್. ಏಕಾಂತಯ್ಯ (ಚಿತ್ರದುರ್ಗ):- ಹತ್ತತ್ತು ನಿಮಿಷಗಳ ಕಾಲವೆಂದರೂ ಇನ್ನು ಎಷ್ಟು ಕಾಲ ಬೇಕಾಗುತ್ತದೆ. ನಾನು ತಮ್ಮ ಗಮನಕ್ಕೆ ತರುವುದಾದರೂ ಇಷ್ಟೇ. ಹತ್ತು ಹತ್ತು ನಿಮಿಷಗಳ ಕಾಲದಲ್ಲಿ 15 ಬೇಡಿಕೆಗಳ ಮೇಲೆ ಮಾತನಾಡಬೇಕೆಂದರೆ ಸಾಧ್ಯವೇ ಮಾತನಾಡದಿರುವುದೇ ಒಳ್ಳೆಯದೆಂದು ಹೇಳುತ್ತೇನೆ. ಸನ್ಮಾನ್ಯ ಅಧ್ಯಕ್ಷರೇ ತಾವು ದೊಡ್ಡ ಮನಸ್ಸು ಮಾಡಿ ಕೆಲವು ಸಮಯವನ್ನು ಕೊಟ್ಟದ್ದಕ್ಕಾಗಿ ಮೊಟ್ಟಮೊದಲು ತಮಗೆ ವಂದಿಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಇಲ್ಲಿಲ್ಲ. ಅವರು ತಾವು ಮಾಡಿದ ಭಾಷಣದಲ್ಲಿ ರಾಜ್ಯಪಾಲರ ಮುಖಾಂತರ ಮಾಡಿಸಿದಂಥ ಭಾಷಣದಲ್ಲಿ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ನಾನಾದರೂ ಬಹಳ ಸಮಯವನ್ನು ತೆಗೆದುಕೊಳ್ಳಲಿಕ್ಕೆ ಇಷ್ಟಪಡದೆ ಕೆಲವಾರು ವಿಚಾರಗಳನ್ನು ಪ್ರಸ್ತಾಪ ಮಾಡಲಿಕ್ಕೆ ಇಷ್ಟಪಡುತ್ತೇನೆ. ಈಗ ಜನತಾದಳದ ಸರ್ಕಾರ ಹೋದಮೇಲೆ ಅವರ ಬಳುವಳಿಯಾಗಿ ಬಂದುದು ಶೀಥಿಲವಾದಂಥ ಆಡಳಿತ ಖಾಲಿಯಾದಂಥ ಖಜಾನೆ ಎನ್ನುವ ಮಾತನ್ನು ಹೇಳಿದರು. ಖಾಲಿಯಾದಂಥ ಖಜಾನೆಯ ಬಗ್ಗೆ ಈಗಾಗಲೇ ನಾನು ಹೇಳಿದ್ದೇನೆ. ಶಿಥಿಲಗೊಂಡಂಥ ಆಡಳಿತ ಏನಿದೆ ಆ ಆಡಳಿತವನ್ನು ತಾವು ಸರಿಪಡಿಸಬೇಕಾದರೆ ಎನ್ನುವ ಮಾತನ್ನು ಹೇಳಿದರು. ಆಡಳಿತದಲ್ಲಿ ದಕ್ಷತೆಯನ್ನು ತರಲಿಕ್ಕೆ ಸೇವಾ ಶಿಸ್ತನ್ನು ಕಟ್ಟುನಿಟ್ಟಾಗಿ ಜಾರಿಗೆ ತರಲಿಕ್ಕೆ ಅವರು ಪ್ರಯತ್ನ ಮಾಡುತ್ತೇವೆ. ಈ ನೌಕರಶಾಹಿ ವ್ಯವಸ್ಥೆ ಏನಿದೆ ಇದು ಜನಸಾಮಾನ್ಯರ ಆಶೋತ್ತರಗಳಿಗೆ ಸ್ಪಂದಿಸುತ್ತಿಲ್ಲ. ಭ್ರಷ್ಟಾಚಾರ ಎಲ್ಲಾ ಕಡೆ ವ್ಯಾಪಿಸಿದೆ ಎನ್ನುವ ಮಾತನ್ನು ಹೇಳಿ ಇದನ್ನು ಸರಿಪಡಿಸುವುದಕ್ಕೆ ಎಲ್ಲಾ ಭರವಸೆಗಳನ್ನು ಕೊಟ್ಟಿದ್ದಾರೆ. ಆ ಭರವಸೆ ಎಷ್ಟರಮಟ್ಟಿಗೆ ಈಡೇರಿಸುವ ಪ್ರಯತ್ನದಲ್ಲಿ ನಡೆದಿದೆ ಎಂಬುದನ್ನು ತಮ್ಮ ಗಮನಕ್ಕೆ ತರಲಿಕ್ಕೆ ಇಷ್ಟಪಡುತ್ತೇನೆ.ಈ ದೇಶದಲ್ಲಿ ನೌಕರಶಾಹಿ ವ್ಯವಸ್ಥೆ ಈ ಜನತಂತ್ರವ್ಯವಸ್ಥೆಯ ಮುಖಾಂತರ ಚುನಾವಣೆ ಮುಖಾಂತರ ಬಂದಂಥ ಈ ಸರ್ಕಾರದ ಕಾರ್ಯನೀತಿಗಳನ್ನು ಜಾರಿಗೆ ತಂದು ಅದನ್ನು ಮಾಡುವಲ್ಲಿ ಪ್ರಮುಖವಾದ ಪಾತ್ರವನ್ನು ವಹಿಸಬೇಕಾಗಿದೆ ಎಂದು ಹೇಳುವಾಗ ನಾನು ತಮ್ಮಲ್ಲಿ ಕೇಳುವುದಿಷ್ಟೇ. ಮಾನ್ಯ ಮುಖ್ಯಮಂತ್ರಿಗಳಿಗೆ ಈ ಸರ್ಕಾರ ಬಂದಮೇಲೆ ಎಷ್ಟರಮಟ್ಟಿಗೆ ಶಿಥಿಲಗೊಂಡಂಥ ಆಡಳಿತವನ್ನು ಸರಿಯಾದಂಥ ದಾರಿಗೆ ತರಲಿಕ್ಕೆ ಪ್ರಯತ್ನ ಮಾಡಿದೆ ಎಂಬುದನ್ನು ನೋಡಬೇಕಾಗಿದೆ. ನಿಜ ಹೇಳುವುದಾದರೆ 6 ತಿಂಗಳಲ್ಲಿ ಎಲ್ಲವನ್ನು ಸರಿಪಡಿಸುವುದಕ್ಕೆ ಸಾಧ್ಯವಾಗುವುದಿಲ್ಲವೆನ್ನುವ ಮಾತನ್ನು ಒಪ್ಪುತ್ತೇನೆ. ಆದರೆ 6-7 ತಿಂಗಳ ಅವಧಿಯಲ್ಲಿ ಯಾವ ದಿಕ್ಕಿನಲ್ಲಿ ನಡೆದಿದೆ ಎಂದರೆ ಮೊದಲಿಗಿಂತಲೂ ಉತ್ತಮವಾಗಿದೆ ಎಂದು ಹೇಳಿಕೊಳ್ಳುವಂಥ ಯಾವುದೇ ಸೂಚನೆಗಳನ್ನು ಈ ಸರ್ಕಾರ ಕೊಟ್ಟಿಲ್ಲ. ಕೊಡಲಿಕ್ಕೆ ಸಹ ಅದು ಪ್ರಯತ್ನ ಮಾಡಿಲ್ಲವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ ಮುಖ್ಯಮಂತ್ರಿಗಳಾಗಲಿ ಈ ಸರ್ಕಾರದ ಯಾವುದೇ ಮಂತ್ರಿಗಳಾಗಲಿ ಈ ದೇಶದಲ್ಲಿರತಕ್ಕ ಆಡಳಿತ ರಾಜ್ಯದ ಆಡಳಿತ ಜಿಲ್ಲಾ ಮಟ್ಟದ ಆಡಳಿತ ಇರಬಹುದು ಅಥವಾ ಸಾರ್ವಜನಿಕ ವಲಯಗಳಲ್ಲಿ ಇರತಕ್ಕ ಸಂಘಸಂಸ್ಥೆಗಳು ಇರಬಹುದು. ಅವುಗಳ ಕಾರ್ಯವೈಖರಿಯನ್ನು ಪರಿಶೀಲನೆ ಮಾಡಿದ್ದಾರೆಯೇ? ಇಲ್ಲ. ದೀಪದ ಕೆಳಗೆ ಕತ್ತಲೆ ಇರುವಂತೆ ಮುಖ್ಯ ಮಂತ್ರಿಗಳು ಇದ್ದಾರೆ ಸಚಿವ ಸಂಪುಟ ಇದೆ. ವಿಧಾನಸೌಧದಲ್ಲಿರುವ ಸಚಿವಾಲಯ ಏನಿದೆ ಇದು.ಏನು ಕೆಲಸ ಮಾಡುತ್ತಿದೆ ಎಂದು ಅವಲೋಕನ ಮಾಡಿದ್ದಾರೆಯೇ? ಇಲ್ಲ. ಮುಖ್ಯ ಮಂತ್ರಿಗಳು ಏನಿದ್ದಾರೆ ಅವರ ಕೈಕೆಳಗಿರುವಂತಹ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಏನಿದೆ ಅದು ಏನು ಕೆಲಸ ಮಾಡುತ್ತಿದೆ ಎಂದು ಏನಾದರೂ ಗೊತ್ತಿದೆಯೇ? ಆಡಳಿತ ವ್ಯವಸ್ಥೆ ಕೆಟ್ಟಿದ್ದರೆ ಈ ದೇಶದಲ್ಲಿ ಅಧ್ಯಕ್ಷತೆ ಕಂಡಿದ್ದರೆ

ಭ್ರಷ್ಟಾಚಾರ ಇದ್ದರೆ ಅದಕ್ಕೆ ನೇರವಾಗಿ ಮುಖ್ಯ ಮಂತ್ರಿಗಳ ಕೈ ಕೆಳಗಿರುವ ಆಡಳಿತ ಸುಧಾರಣಾ ಇಲಾಖೆ ಏನಿದೆ ಅದು ಕಾರಣ ಎಂಬ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾನು ಯಾವುದೇ ಆಧಾರ ಇಲ್ಲದೆ ಹೇಳುತ್ತಿಲ್ಲ. ನಾನು ಕೆಲವು ತಿಂಗಳ ಕಾಲ ಮಂತ್ರಿಯಾಗಿ ಮತ್ತು ಕೆಲವು ವರ್ಷಗಳ ಕಾಲ ಶಾಸಕನಾಗಿ ಕೆಲಸ ಮಾಡಿದ್ದೇನೆ. ನನ್ನ ಅನುಭವದಲ್ಲಿ ಇದನ್ನು ಹೇಳಿದರೆ ತಪ್ಪಾಗುವುದಿಲ್ಲವೆಂದು ಭಾವನೆ. ನಾನು ಯಾವುದೇ ಪಕ್ಷದ ಸರ್ಕಾರವನ್ನು ಟೀಕಿಸುವುದಿಲ್ಲ. ಯಾವುದೇ ಪಕ್ಷದ ಸರ್ಕಾರ ಬಂದರೂ ಈ ದೇಶದಲ್ಲಿರತಕ್ಕ ನೌಕರರು ಮತ್ತು ಅಧಿಕಾರಶಾಹಿ ಇದಕ್ಕೆಲ್ಲ ಕಾರಣವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಸಚಿವಾಲಯದ ವಿಚಾರ ಪ್ರಸ್ತಾಪ ಮಾಡುತ್ತಾ ಇವತ್ತಿನ ದಿವಸ ಯಾವ ಯಾವ ಇಲಾಖೆಗಳಲ್ಲಿ ಎಷ್ಟೆಷ್ಟು ಕಡತಗಳು ವಿಲೇವಾರಿಯಾಗಿದೆ ಎಂದು ಹೇಳುವುದಕ್ಕೆ ಅಧಿಕಾರಿಗಳು ತಯಾರಿಲ್ಲ. ಅಂಥ ಅಂಕಿ ಅಂಶಗಳನ್ನು ಕೊಡುವುದಕ್ಕೆ ಯಾವುದೇ ಅಧಿಕಾರಿ ಇರಬಹುದು ಅವರ ಕೈಯಲ್ಲಿ ಅದು ಆಗುತ್ತಿದೆಯೆ? ಇಲ್ಲ. ಅಂಥ ವ್ಯವಸ್ಥೆ ನಡೆದುಕೊಂಡು ಬಂದಿದೆ. ಈ ಸಚಿವಾಲಯದಲ್ಲಿ ಎಷ್ಟು ಕಡತಗಳು ಇವೆ ಎಂದು ಇವತ್ತಿನವರೆಗೆ ನಿಖರವಾಗಿ ಹೇಳುವ ಪದ್ಧತಿಯನ್ನು ಯಾರೂ ಅನುಸರಿಸಿಲ್ಲ. ಅದರ ಜೊತೆಯಲ್ಲಿ ಕಡತಗಳ ವಿಲೇವಾರಿ ಎಷ್ಟಾಗಿದೆ ಎಂಬುದು ಗೊತ್ತಿಲ್ಲ. ಯಾವುದಾದರೂ ಒಂದು ಇಲಾಖೆಯಲ್ಲಿ ಎಷ್ಟು ಕಡತಗಳು ಇವೆ ಎಂದರೆ 1938 ಎಂದು ಹೇಳುವುದು. ಇದಕ್ಕೆ ಆಧಾರ ಏನೂ ಇಲ್ಲ. ಹಿರಿಯ ಸಹಾಯಕರನ್ನು ಕೇಳಿದರೆ ಒಬ್ಬರು 1938 ಅಂದರು ಮತ್ತೊಬ್ಬರು ಒಂದು ಸಾವಿರ ಅಂದರು; ಒಟ್ಟು 1938,ಏತಕ್ಕೋಸ್ಕರ ಇದನ್ನು ಹೇಳುತ್ತಿದ್ದೇನೆಂದರೆ ಯಾರೂ ಇದನ್ನು ವೆರಿಫೈ ಮಾಡುವುದಿಲ್ಲ. ಹುಡುಗರು ಕೇಳಿದಾಗ ಮಾಸ್ಟರು ಹೇಳುತ್ತಿದ್ದರಂತೆ ಕನ್ನಂಬಾಡಿ ಕಟ್ಟೆಯಿಂದ 2387 ಎಕರೆಗೆ ನೀರಾವರಿ ಆಗುತ್ತದೆಂದು ಹೇಳಿದರಂತೆ. ಹೀಗೆ ಅವರು ಹೇಳಿದ್ದೇ ಸರಿ. ಸಚಿವಾಲಯದ ಇಲಾಖೆ ತಾನು ಹೊಣೆಗಾರಿಕೆಯಿಂದ ಕೆಲಸ ಮಾಡುತ್ತಿಲ್ಲವೆಂದು ಹೇಳುತ್ತಿದ್ದೇನೆ. ಇವತ್ತಿನ ದಿವಸ ಯಾರೇ ಸಚಿವಾಲಯದ ಸಿಬ್ಬಂದಿ ಕೊಡುವ ಲೆಕ್ಕ ಕಡತಗಳ ವಿಲೇವಾರಿ ಬಗ್ಗೆ ಇರಬಹುದು ಮತ್ತೆ ಯಾವುದೇ ಇರಬಹುದು ಕರಾರುವಕ್ಕಾದ ಅಂಕಿ ಅಂಶಗಳನ್ನು ಕೊಡುವುದಿಲ್ಲ. ಸಚಿವಾಲಯದ ಕಛೇರಿಯ ನಿಯಮಗಳ ಪರಿಷ್ಕೃತ ಕೈಪಿಡಿ ಎಂದು ಇದೆ. ಆ ಕಛೇರಿ ಕೈಪಿಡಿ ಪ್ರಕಾರ ಏನೇನು ಕೆಲಸ ಮಾಡಬೇಕಾಗಿದೆ ಅಲ್ಲಿರತಕ್ಕ ಶಾಖಾಧಿಕಾರಿಗಳ ಅಧೀನ ಕಾರ್ಯದರ್ಶಿಗಳ ಉಪಕಾರ್ಯದರ್ಶಿಗಳ ಕೆಲಸ ಕಾರ್ಯಗಳನ್ನು ಕಾರ್ಯದರ್ಶಿಗಳು 3-6 ತಿಂಗಳಿಗೊಮ್ಮೆ ಪರಿವೀಕ್ಷಣೆ ಮಾಡಬೇಕೆಂದು ಇದೆ. ಆ ಪ್ರಕಾರ ಯಾರೂ ಮಾಡುವುದಿಲ್ಲ. ಐ.ಎ.ಎಸ್. ಅಧಿಕಾರಿಗಳು ಈ ದೇಶವನ್ನು ಚೆನ್ನಾಗಿ ನೋಡಿಕೊಳ್ಳುವಂತಹ ಹೊಣೆಗಾರಿಕೆ ಇರುವ ಜನ ಎಂದು ಏನು ಹೇಳುತ್ತಾರೆ ಅವರು ಏನು ಮಾಡಿದ್ದಾರೆ! ಅವರ ಕೈಕೆಳಗಿರುವ ಅಧಿಕಾರಿಗಳು ಏನು ಮಾಡಿದ್ದಾರೆಂದರೆ ಇವರು ಯಾರೂ ಕೈಪಿಡಿಯಲ್ಲಿರುವ ರೀತಿಯಲ್ಲಿ ಪರಿವೀಕ್ಷಣೆ ಮಾಡಿಲ್ಲ. ಅಷ್ಟೇ ಅಲ್ಲ ಪರಿವೀಕ್ಷಣೆ ಮಾಡಿ ಆಡಳಿತ ಸುಧಾರಣಾ ಇಲಾಖೆಗೆ ವರದಿಯನ್ನು ಕಳುಹಿಸಬೇಕಾಗಿದೆ. ಆ ಪ್ರಕಾರ ಕಳುಹಿಸುತ್ತಾರೆಯೇ ಅಂದರೆ ಇಲ್ಲ. ಎರಡು ವರ್ಷಗಳಿಗೊಂದು ಸಾರಿಯಾದರೂ ಆಡಳಿತ ಸುಧಾರಣಾ ಇಲಾಖೆ ಏನಿದೆ ತಾವು ಏನಾದರೂ ತಮ್ಮ ಇಲಾಖೆಗಳನ್ನು ಪರಿವೀಕ್ಷಣೆ ಮಾಡಿ ಸರಿಯಾಗಿದೆಯೇ ಎಂದು ನೋಡಿದ್ದಾರೆಯೇ ಇಲ್ಲ. ಈ ಮಾತನ್ನು ಏಕೆ ಹೇಳುತ್ತಿದ್ದೇನೆಂದರೆ ನನ್ನ ಅನುಭವವನ್ನು ಸಂಬಂಧಪಟ್ಟ ಮುಖ್ಯ ಕಾರ್ಯದರ್ಶಿಗಳ ಮತ್ತು ಕಾರ್ಯದರ್ಶಿಗಳ ಗಮನಕ್ಕೆ ತಂದರೂ ಈ ದೇಶದಲ್ಲಿ ಚಿಂತನೆ ಮಾಡುವ ಪ್ರವೃತ್ತಿ ಅಧಿಕಾರಶಾಹಿಯಲ್ಲಿ ಇಲ್ಲ. ಹೊಣೆಗಾರಿಕೆ ಎಂಬ ಪದದ ಅರ್ಥ ಇವರಲ್ಲಿ ಇಲ್ಲ. ಇವತ್ತಿನ ದಿವಸ ಅದಕ್ಷ ಸರ್ಕಾರ ಇದ್ದರೆ ಅದಕ್ಷ ಆಡಳಿತ ಇದ್ದರೆ ಅದಕ್ಕೆ ನೇರವಾಗಿ ಕಾರಣ ಮುಖ್ಯ ಮಂತ್ರಿಗಳು ಮತ್ತು ಅವರ ಕೈಕೆಳಗಿರುವ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಕಾರಣವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಒಂದು ಉದಾಹರಣೆ ಹೇಳುತ್ತೇನೆ. 1983ರಲ್ಲಿ ನಂಜೇಗೌಡರು ಒಂದು ಪತ್ರ ಬರೆಯುತ್ತಾರೆ ಅದರಲ್ಲಿ ಸಹಾಯಕ ನಿರ್ದೇಶಕರಿಂದ ವರದಿ ತರಿಸಬೇಕೆಂದು ಕೋರಿರುತ್ತಾರೆ. ಅವರ ಪತ್ರಕ್ಕೆ 1987ರ ಆಗಸ್ಟ್‌ವರೆಗೂ ಉತ್ತರ ಬರುವುದಿಲ್ಲ. ಇಂಥ ಅನೇಕ ಉದಾಹಣೆಗಳನ್ನು ಹೇಳುತ್ತೇನೆ. ಬಹುಶಃ ತಾವು ತಪ್ಪು ತಿಳಿಯುವುದಿಲ್ಲವೆಂದು ಭಾವಿಸಿದ್ದೇನೆ. 1979ರಲ್ಲಿ ಅಕೌಂಟೆಂಟ್ ಜನರಲ್ ಅವರು ಸೋರಾಪುರ ಟಿಎಪಿಸಿಎಂಎಸ್. ನಲ್ಲಿ 2 ಲಕ್ಷದ 25 ಸಾವಿರ ರೂಪಾಯಿ ಹಣ ದುರುಪಯೋಗವಾಗಿದೆ ಎಂದು ಹೇಳಿದರು. 1983ರ ಜೂನ್ 24ರಂದು

ಇದರ ಬಗ್ಗೆ ವರದಿಯನ್ನು ತರಿಸಿ ಕ್ರಮ ಕೈಗೊಳ್ಳಬೇಕೆಂದರೆ 4 ವರ್ಷಗಳ ಕಾಲ ಆ ಕಡತ ಕಾಣಲೇ ಇಲ್ಲ. ಈ ರೀತಿಯಾಗಿ ಕಡತವನ್ನು ಇಟ್ಟುಕೊಂಡಿದ್ದಾರಲ್ಲ ಎಂದು ಪುನಃ ನೋಡುವ ಪದ್ಧತಿಯೂ ಮೇಲಧಿಕಾರಿಗಳಲ್ಲಿ ಇಲ್ಲ. ಇಲಾಖೆಯ ಅಧಿಕಾರಿಗಳೆಲ್ಲಾ ನಾವು ಇಂತಿಷ್ಟು ಕಡತಗಳನ್ನು ವಿಲೇವಾರಿ ಮಾಡಿದ್ದೇವೆಂದು ಹೇಳಬಹುದು. ಆದರೆ ಅವರು ಅಷ್ಟು ವಿಲೇವಾರಿ ಮಾಡಿದ್ದೇವೆಂದರೆ ಅಷ್ಟು ವಿಲೇವಾರಿ ಆಗಿದೆ ಎಂದು ಅಲ್ಲ. ಸುಳ್ಳು ವರದಿ ಕೊಟ್ಟಿದ್ದಾರೆಂದು ಭಾವಿಸಬೇಕಾಗುತ್ತದೆ. ಈ ರೀತಿ ವರದಿ ಕೊಡುವ ಪದ್ಧತಿ ಎಲ್ಲಾ ಕಡೆ ಇದೆ. ಸಚಿವಾಲಯದ ಎಲ್ಲಾ ಇಲಾಖೆಯವರು ಈ ಪ್ರವೃತ್ತಿಯನ್ನು ಬೆಳೆಸಿಕೊಂಡಿದ್ದಾರೆ. ಆದಕ್ಕೆ ಕಾರಣ ಅಧಿಕಾರಿಗಳು ಮಂತ್ರಿಗಳು ಈ ಕಡೆ ಗಮನ ಕೊಡದೆ ಇರುವುದರಿಂದ ಈ ರೀತಿ ನಡೆಯುತ್ತಿದೆ. ಸಚಿವಾಲಯದಲ್ಲೇ ಇಂಥ ಪ್ರವೃತ್ತಿ ಇದ್ದರೆ ತಾಲ್ಲೂಕು ಕಛೇರಿ ಮತ್ತು ಜಿಲ್ಲಾ ಕಛೇರಿಗಳಲ್ಲಿ ಕೇಳುವವರು ಯಾರು? ಆಡಳಿತದಲ್ಲಿ ದಕ್ಷತೆ ಇಲ್ಲದಿರುವ ಕಾರಣ ಮತ್ತು ಸಚಿವಾಲಯದ ಹಿರಿಯ ಅಧಿಕಾರಿಗಳು ಏನಿದ್ದಾರೆ ಅವರೇ ಇದಕ್ಕೆ ಮುಖ್ಯ ಕಾರಣವೇ ಹೊರತು ಬೇರೆ ಅಲ್ಲವೆಂದು ಹೇಳುತ್ತೇನೆ. ಇದರ ಬಗ್ಗೆ ಇನ್ನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಇದನ್ನು ಸರಿಪಡಿಸುವ ಹೊಣೆಗಾರಿಕೆ ಮುಖ್ಯ ಮಂತ್ರಿಗಳದ್ದು. ಅವರು ಏತಕ್ಕೆ ಕ್ರಮ ತೆಗೆದುಕೊಂಡಿಲ್ಲವೆಂದು ಕೇಳುತ್ತೇನೆ. ಇನ್ನೂ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಬೇಕೆಂದು ಇದ್ದೆ. ಆದರೆ ಸಮಯಾಭಾವ. ಇನ್ನು ಭ್ರಷ್ಟಾಚಾರದ ಬಗ್ಗೆ ಹೇಳದೇ ಇರುವುದು ಉತ್ತಮ ಅನ್ನಿಸುತ್ತದೆ. ಏಕೆಂದರೆ ಭ್ರಷ್ಟಾಚಾರದ ಬಗ್ಗೆ ಎಲ್ಲರೂ ಮಾತನಾಡುತ್ತಾರೆ. ಭ್ರಷ್ಟಾಚಾರದ ಬಗ್ಗೆ ದೃಢವಾಗಿ ಕ್ರಮ ಕೈಗೊಳ್ಳಬೇಕೆಂಬ ಇಚ್ಛಾಶಕ್ತಿ ಯಾವ ಸರ್ಕಾರಕ್ಕೂ ಇಲ್ಲದಿದ್ದರೆ ಖಂಡಿತ ಭ್ರಷ್ಟಾಚಾರವನ್ನು ತಗ್ಗಿಸುವುದಕ್ಕೆ ಸಾಧ್ಯವಿಲ್ಲ. ಬಂಗಾರಪ್ಪನವರು ಏನೋ ಹೇಳುತ್ತಿದ್ದರು. ಬಂಗಾರಪ್ಪನವರ ಇಲಾಖೆ ಮಾತ್ರವಲ್ಲ, ಎಲ್ಲಾ ಇಲಾಖೆಗಳಲ್ಲೂ ಇದು ಇದ್ದೇ ಇದೆ. ಅಲ್ಲಿರತಕ್ಕ ಹುದ್ದೆಗಳು ಎಲ್ಲರಿಗೂ ಬೇಕು. ಸಾಯಿಲ್ ಕನ್‌ಸರ್ವೇಷನ್ ಇಲಾಖೆ ಇರಬಹುದು ಪೋಲೀಸ್ ಫಾರೆಸ್ಟ್ ಯಾವುದೇ ಇಲಾಖೆ ಇರಬಹುದು ಎಲ್ಲಿ ಹೆಚ್ಚು ಹಣ ಸಿಗುತ್ತದೆ ಎಲ್ಲಿ ಭ್ರಷ್ಟಾಚಾರ ಮಾಡಿ ಅನ್ಯಾಯ ಮಾರ್ಗದಲ್ಲಿ ಹಣ ಪಡೆಯಲಿಕ್ಕೆ ಸಾಧ್ಯತೆ ಇದೆ ಅಂಥ ಜಾಗದಲ್ಲಿ ಹೋಗುವುದಕ್ಕೆ ವಿಶೇಷವಾದ ಕಾಂಪಿಟಿಶನ್ ಇದೆ. ಇದಕ್ಕೆ ಜಾತಿಯ ಪ್ರಶ್ನೆ ಬರುತ್ತದೆ. ರಾಜಕೀಯ ಪಕ್ಷದ ಪ್ರಶ್ನೆ ಬರುತ್ತದೆ. ರಾಜಕೀಯ ಹಸ್ತಕ್ಷೇಪ ಏನಿದೆ ಅದು ಇಲ್ಲದೆ ಇದ್ದರೆ ಯಾವ ಯಾವ ಜಾತಿಯಲ್ಲಿ ಪ್ರಾಮಾಣಿಕ ಅಧಿಕಾರಿಗಳು ಇದ್ದಾರೆ ಆ ಎಲ್ಲಾ ಜಾತಿಯ ಅಧಿಕಾರಿಗಳನ್ನು ಈ ಇಲಾಖೆಗಳಲ್ಲಿ ಸೇರಿಸುವುದರ ಮೂಲಕ ಭ್ರಷ್ಟಾಚಾರವನ್ನು ತಡೆಯುವುದಕ್ಕೆ ಸಾಧ್ಯವಾಗುತ್ತದೆ. ಅವನು ಇಂಥ ಜಾತಿಗೆ ಸೇರಿದ್ದಾನೆಂದು ಪ್ರಾಮಾಣಿಕ ಅಧಿಕಾರಿಯನ್ನು ನಾವು ಅಲ್ಲಿ ಹಾಕದೆ ಭ್ರಷ್ಟ ಅಧಿಕಾರಿಗಳನ್ನು ಹಾಕಿದರೆ ಖಂಡಿತ ಭ್ರಷ್ಟಾಚಾರವನ್ನು ನಿವಾರಣೆ ಮಾಡುವುದಕ್ಕೆ ಸಾಧ್ಯವಿಲ್ಲ. ಇದರ ಬಗ್ಗೆ ಮುಖ್ಯ ಮಂತ್ರಿಗಳು ಆಲೋಚಿಸಬೇಕು. ಪೋಲೀಸ್ ಇಲಾಖೆಯ ಬಗ್ಗೆ ಹೇಳುವುದಾದರೆ ಇವತ್ತಿನ ದಿವಸ ಈ ಇಲಾಖೆಯ ಉದ್ದೇಶ ಜನರ ಆಸ್ತಿ ಮತ್ತು ಪ್ರಾಣವನ್ನು ಕಾಪಾಡಬೇಕು ಅಪರಾಧವನ್ನು ತಡೆಗಟ್ಟಬೇಕು ಎಂಬುದು ಏನಿದೆ ಆ ಪ್ರಕಾರ ಅದು ಉತ್ತಮವಾದ ಸ್ಥಿತಿಯಲ್ಲಿ ಕೆಲಸ ಮಾಡುತ್ತಿಲ್ಲ. ಇವತ್ತಿನ ದಿವಸ ಪೋಲೀಸರ ದೃಷ್ಟಿಕೋನ ಬದಲಾಗಬೇಕಾಗಿದೆ. ಕಳೆದ 6-7 ತಿಂಗಳಿಂದ ಅವರ ದೃಷ್ಟಿಕೋನವೆಲ್ಲಾ ಕೆಟ್ಟದ್ದರ ಕಡೆಗೆ ಬದಲಾಗುತ್ತಿದೆ.. ಒಳ್ಳೆಯದರ ಕಡೆಗೆ ಬದಲಾಗುವ ಸೂಚನೆ ಕಾಣುತ್ತಿಲ್ಲ. ಒಂದು ಉದಾಹರಣೆ ಹೇಳುತ್ತೇನೆ ಇದು ನಮ್ಮ ಊರಿಗೆ ಸಂಬಂಧಪಟ್ಟ ವಿಷಯ. ಎಸ್ ಎಸ್. ಸ್ಟೀಲ್ ಸೆಂಟರ್ ಎಂದು ಚಿತ್ರದುರ್ಗದಲ್ಲಿ ಬಂತು. ದಾವಣಗೆರೆ ಮೈಸೂರು ಮತ್ತು ಕೋಲಾರದಲ್ಲಿ ಈ ತರಹ ಇತ್ತು. ಅದು ಪತ್ರಿಕೆಯಲ್ಲೂ ಬಂದಿತ್ತು. ಆರು ಸಾವಿರ ರೂಪಾಯಿಗಳ ಸಾಮಾನುಗಳನ್ನು ಎರಡು ಸಾವಿರ ರೂಪಾಯಿಗಳಿಗೆ ಕೊಡುತ್ತೇವೆಂದು ವಂಚನೆ ಮಾಡಿ ಕೋಟ್ಯಾಂತರ ರೂಪಾಯಿಗಳನ್ನು ಲಪಟಾಯಿಸುವ ಜಾಲ ಇದೆ ಎಂದು ಕೇಳಿದ್ದೆ. ಮೊನ್ನೆ ಚುನಾವಣೆಯಾದ ಸ್ವಲ್ಪ ದಿವಸಗಳಲ್ಲಿ ಅದು ಚಿತ್ರದುರ್ಗಕ್ಕೆ ಬಂತು. ಎಸ್.ಪಿ. ಮತ್ತು ಡಿ.ಸಿ.ಗೆ ಈ ರೀತಿ ಅನ್ಯಾಯವಾಗುತ್ತಿದೆ, ವಿಚಾರಣೆ ಮಾಡಿ ಎಲ್ಲಿಯಾದರೂ ಆರು ಸಾವಿರ ರೂಪಾಯಿಗಳ ಸಾಮಾನನ್ನು ಎರಡು ಸಾವಿರ ರೂಪಾಯಿಗಳಿಗೆ ಕೊಡಲು ಸಾಧ್ಯವೇ ಎಂದರೆ ಕಾನೂನು ಪ್ರಕಾರ ಅದಕ್ಕೆ ಅವಕಾಶ ಇಲ್ಲ ಏನು ಮಾಡೋಣವೆಂದು ನನಗೆ ಉತ್ತರಿಸಿದರು. ನನಗೆ ಬೇಜಾರಾಯಿತು.

ಪುನಃ ಮರುದಿವಸ ಅರ್ಜಿ ಬರೆದೆ. ಅರ್ಜಿ ಬರೆದದ್ದು ಎಷ್ಟು ತಪ್ಪಾಯಿತು ಎಂಬುದಕ್ಕೆ ಹೇಳುತ್ತೇನೆ. ಅರ್ಜಿ ಆಧಾರದ ಮೇಲೆ ಕೇಸನ್ನು ರಿಜಿಸ್ಟರ್ ಮಾಡಿಕೊಂಡರು. ಅಷ್ಟು ಹೊತ್ತಿಗೆ ಹಲವಾರು ಲಕ್ಷ ರೂಪಾಯಿಗಳನ್ನು ಆ ಜಾಲದವರು ಸಂಪಾದನೆ ಮಾಡಿದ್ದರು. ನಾನು ಪೋಲೀಸರಿಗೆ ಹೇಳಿದೆ ನೀವು ಇದರಲ್ಲಿ ಶಾಮೀಲಾಗಿದ್ದೀರಿ ನೋಡಿ ಎಂದು ಹೇಳಿದೆ. ಈ ಮಾತನ್ನು ಕೇಳಿದ ಕಾರಣದಿಂದ ಹೇಳಿದರು ಎಂ.ಎಲ್.ಎ. ನಿಮಗೆ ತೊಂದರೆ ಕೊಡುವುದಕ್ಕೆ ನೋಡುತ್ತಿದ್ದಾನೆ ನೀವೆಲ್ಲ ಹೋಗಿ ಘೇರಾವು ಮಾಡಿ ಎಂದರು. ಅವರು ನಮ್ಮ ಮನೆಯ ಮುಂದೆ ಬಂದು ಘೇರಾವು ಮಾಡಿದರು. ನಾನು ಆಗ ಅಲ್ಲಿರಲಿಲ್ಲ ವಿಧಾನಸಭೆಯಲ್ಲಿದ್ದೆ. ಮನೆಗೆ ಹೋಗಿ ಬಾಯಿಗೆ ಬಂದಂತೆ ಬೈದರು. ಬೈಯಲಿ ಸಂತೋಷ. ಅಂದಾಗ ಪೋಲೀಸರು ಯಾವ ಮಟ್ಟದಲ್ಲಿದ್ದಾರೆಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಈ ರಾಜ್ಯದಲ್ಲಿರತಕ್ಕ ಪೋಲೀಸರನ್ನು ಬದಲಾಯಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ? ಇದಕ್ಕೆ ಸಂಬಂಧಪಟ್ಟ ಹಾಗೆ ಜಿಲ್ಲಾಧಿಕಾರಿಗಳಿಗೆ ಬರೆದರೆ ಅವರು ಏನೂ ಕ್ರಮ ಕೈಗೊಳ್ಳುವ ಹಾಗೆ ಇಲ್ಲ. ತಪ್ಪಿತಸ್ಥರನ್ನು ಅರೆಸ್ಟ್ ಮಾಡಿ ಕರೆದುಕೊಂಡು ಹೋದರೆ ಜೈಲಿಗೆ ಕೋರ್ಟಿಗೆ ಎಲ್ಲಾ ಬರುತ್ತಾರೆ. ನಂತರ ಅವರನ್ನು ಬಿಡುಗಡೆ ಮಾಡಿ ನಮ್ಮ ಮನೆಯ ಮುಂದೆ ಕರೆದುಕೊಂಡು ಹೋಗುವ ವ್ಯವಸ್ಥೆ ಆಯಿತು. ಇದಕ್ಕಿಂತ ನಾಚಿಕೆಗೇಡಿನ ವ್ಯವಸ್ಥೆ ಈ ದೇಶದಲ್ಲಿ ಇದೆಯೇ? ಇಂಥ ಹಲವಾರು ಉದಾಹರಣೆಗಳನ್ನು ನಾನು ಕೊಡಬಲ್ಲೆ. ಇತ್ತೀಚೆಗೆ ಹರಿಜನ ಯುವಕನೊಬ್ಬ ಕಂಪ್ಲೇಂಟ್ ಕೊಟ್ಟ. ಅವನು ಆ ಜಾತಿಗೆ ಸೇರಿದವನಾದ್ದರಿಂದ ಅವನ ಹೆಸರು ಹೇಳುವುದಕ್ಕೆ ಇಷ್ಟಪಡುತ್ತಿಲ್ಲ. ಎಲ್ಲರೂ ಸೇರಿ ಯಾರು ಅವನನ್ನು ಮಚ್ಚಿನಿಂದ ಹೊಡೆದಿದ್ದರು ಅವನನ್ನು ಕರೆದುಕೊಂಡು ಪೋಲೀಸ್ ಸ್ಟೇಷನ್ನಿಗೆ ಹೋಗಿಕೊಟ್ಟರು. ನಾವು ಕ್ರಮ ತೆಗೆದುಕೊಳ್ಳುತ್ತೇವೆ ನೀನು ಆಸ್ಪತ್ರೆಗೆ ಹೋಗು ಅಂದರು. ಆಸ್ಪತ್ರೆಗೆ ಹೋಗಿ ಬಂದ ಮೇಲೆ ಇವನ ಮೇಲೆಯೇ ಕೇಸ್ ರಿಜಿಸ್ಟರ್ ಮಾಡಿ ಇವನನ್ನೇ ಹೊಡೆದರು. ಈ ರೀತಿಯ ಪ್ರಕರಣಗಳಿಗೇನು ಕೊರತೆ ಇಲ್ಲ. ಇಂಥ ಪ್ರಕರಣಗಳಲ್ಲಿ ಪೋಲೀಸರ ದೃಷ್ಟಿಕೋನದಲ್ಲಿ ಅಥವಾ ಈ ಸರ್ಕಾರದ ದೃಷ್ಟಿಕೋನದಲ್ಲಿ ವ್ಯವಸ್ಥೆಯನ್ನು ಸರಿಪಡಿಸಬೇಕೆಂಬ ಭಾವನೆ ಇದ್ದರೆ ದೂರು ಕೊಟ್ಟಾಗ ಅದರ ಬಗ್ಗೆ ವಿಚಾರ ಮಾಡುವಂತಹ ಸೌಜನ್ಯ ಸರ್ಕಾರಕ್ಕೆ ಇಲ್ಲದಿದ್ದರೆ ಆ ಸರ್ಕಾರ ಶಾಮೀಲಾಗಿದೆ ಎಂದು ಭಾವಿಸಬೇಕೆ? ಅಥವಾ ಮತ್ತೇನಾದರೂ ಭಾವಿಸಬೇಕೆ? ಈ ರೀತಿ ಪೋಲೀಸರ ದೃಷ್ಟಿಕೋನ ಸರಿಯಾಗಿಲ್ಲವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದೇ ಸಂದರ್ಭದಲ್ಲಿ ಪೋಲೀಸರು ಹೇಳಿದ್ದಾರೆ ಪೋಲೀಸರಿಗೆ ವಸತಿ ಗೃಹಗಳ ಕೊರತೆ ಇದೆ ಎಂದು. 45 ಸಾವಿರ ಜನ ಪೋಲೀಸರಿಗೆ 35 ಸಾವಿರ ಮಾತ್ರ ವಸತಿ ಗೃಹಗಳಿವೆ ಎಂದು ಹೇಳಿದ್ದಾರೆ. ಅವರಿಗೆ ಸಾಕಷ್ಟು ವಸತಿ ಗೃಹಗಳನ್ನು ಮಾಡಿಕೊಡಬೇಕಾದುದು ಅವಶ್ಯಕ. ಈ ದೇಶದಲ್ಲಿ ದೊಡ್ಡವರು ಚೆನ್ನಾಗಿದ್ದಾರೆ ತೊಂದರೆ ಇಲ್ಲ. ನಿಜವಾಗಿ ಸಾಮಾನ್ಯ ಪೋಲೀಸ್ ಪೇದೆ ಏನಿದ್ದಾನೆ ಅವನಿಗೆ ಬೇಕಾದ ಸಹಾಯ ಮಾಡಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಕೃಷಿ ಇಲಾಖೆ ಬಗ್ಗೆ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಕೃಷಿ ಇಲಾಖೆ ಎಂದರೆ ಇದು ಬಹಳ ದೊಡ್ಡ ಇಲಾಖೆ. ಇಲ್ಲಿರುವಂತಹ ಭ್ರಷ್ಟಾಚಾರ ಇನ್ನೆಲ್ಲೂ ಇಲ್ಲ ಅನ್ನಿಸುತ್ತದೆ. ಸಾಯಿಲ್ ಕನ್‌ಸರ್ವೇಷನ್‌ಗೆ ನೂರಾರು ಲಕ್ಷ ರೂಪಾಯಿಗಳನ್ನು ಈ ಇಲಾಖೆಯವರು ಖರ್ಚು ಮಾಡಿದ್ದಾರೆ. ಈ ದೇಶದಲ್ಲಿ ಹೇಗೆ ಹಣ ಖರ್ಚಾಗುತ್ತಿದೆ ಎಂದರೆ ರಸ್ತೆ ಕೆಲಸ ಇರಬಹುದು ಜಲಾನಯನ ಪ್ರದೇಶದ ಅಭಿವೃದ್ಧಿ ಯೋಜನೆ ಇರಬಹುದು ರೋಜ್‌ಗಾರ್ ಯೋಜನೆ ಇರಬಹುದು ಡಿಪಿಎಪಿ. ಯೋಜನೆ ಇರಬಹುದು ಹೀಗೆ ಬೇರೆ ಬೇರೆ ಯೋಜನೆಗಳಿಗೆ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಈ ಇಲಾಖೆಯಲ್ಲಿ ಖರ್ಚು ಮಾಡಿದ ಹಣ ಏನಿದೆ ಕೆಳ ಹಂತದಲ್ಲಿರುವ ಅಸಿಸ್ಟೆಂಟ್ ಅಗ್ರಿಕಲ್ಚರಲ್ ಆಫೀಸರ್ ಏನಿದ್ದಾರೆ ಅವರು ಮಾಡಿದ ಕೆಲಸವನ್ನು ಚೆಕ್ ಮಾಡುವುದಕ್ಕೆ ಏನಾದರೂ ಕಾನೂನು ಇದೆಯೇ ಅಂದರೆ ಇದೆ. ಆದರೆ ಆ ಸುತ್ತೋಲೆಯ ಪ್ರಕಾರ ಎಷ್ಟು ಜನ ಅಸಿಸ್ಟೆಂಟ್ ಡೈರೆಕ್ಟರ್ ಜಾಯಿಂಟ್ ಡೈರೆಕ್ಟರ್, ಡೈರೆಕ್ಟರ್ ಪರಿವೀಕ್ಷಣೆ ಮಾಡಿದ್ದಾರೆ. ಸಾಯಿಲ್ ಕನ್ಸರ್ವೇಷನ್‌ಗೆ ಇರಬಹುದು ಜಲಾನಯನ ಪ್ರದೇಶದ ಅಭಿವೃದ್ಧಿ ಯೋಜನೆಗೆ ಇರಬಹುದು. ಹೀಗೆ ಬೇರೆ ಬೇರೆ ಯೋಜನೆಗಳಿಗೆ ಖರ್ಚು ಮಾಡುವ ಹಣವನ್ನು ಬಹಳ ಕಡಿಮೆ ಖರ್ಚು ಮಾಡಿ ಅತ್ಯಂತ ಕಳಪೆ

ಕೆಲಸ ಮಾಡಿ ಸಾಕಷ್ಟು ಹಣ ಲಪಟಾಯಿಸಿದ್ದಾರೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಸಚಿವರು ಯಾವುದೇ ಜಲಾನಯನ ಪ್ರದೇಶಕ್ಕೆ ಭೇಟಿ ಕೊಟ್ಟರೆ ಖಂಡಿತಾ ತಾವು ಈ ಅಭಿಪ್ರಾಯಕ್ಕೆ ಬರುತ್ತೀರಿ. ಬೇರೆ ಅಭಿಪ್ರಾಯಕ್ಕೆ ಬರಲು ಸಾಧ್ಯವಿಲ್ಲ. ಸುತ್ತೋಲೆ ಇಲಾಖೆಯಿಂದ ಹೋಗಿದೆ. ಇಂಥಿಂಥ ಅಧಿಕಾರಿಗಳು ಜಾಯಿಂಟ್ ಡೈರೆಕ್ಟರಿಂದ ಹಿಡಿದು ಕೆಳಮಟ್ಟದ ಅಧಿಕಾರಿಗಳವರೆಗೆ ಇಂತಿಷ್ಟು ಪ್ರಮಾಣದಲ್ಲಿ ಚೆಕ್ ಮಾಡಬೇಕೆಂದು ಇದೆ. ಇಂತಿಂಥ ಅಧಿಕಾರಿಗಳು ಜಾಯಿಂಟ್ ಡೈರೆಕ್ಟರ್ ಆಫ್ ಅಗ್ರಿಕಲ್ಚರಲ್‌ನಿಂದ ಹಿಡಿದು ಕೆಳಮಟ್ಟದ ಅಧಿಕಾರಿಗಳು ಇಂತಿಷ್ಟು ಪ್ರಮಾಣದಲ್ಲಿ ಚೆಕ್ ಮಾಡಬೇಕೆಂದು ಇದ್ದರೂ ಕೂಡ ಅವರು ಇಂದಿಗೂ ಹೋಗಿ ಚೆಕ್ ಮಾಡಿಲ್ಲ. ಒಂದು ಸಾರಿ ಹೋಗಿದ್ದರೆ ಬೇರೆ ಉದ್ದೇಶಕ್ಕಾಗಿ ಹೋಗಿದ್ದಾರೆ. ಈ ಒಂದು ಪರಿವೀಕ್ಷಣೆ ಕೆಲಸವನ್ನು ಮಾಡುವಂತಹ ಪ್ರವೃತ್ತಿಯನ್ನು ಅವರು ಬೆಳೆಸಿಕೊಂಡು ಬಂದಿಲ್ಲ. ಇನ್ನು ಕೆಲವು ಅಗ್ರಿಕಲ್ಚರಲ್ ಫಾರಂ ಮತ್ತು ತೋಟಗಾರಿಕೆ ಫಾರಂಗಳು ಇವೆ ಇದನ್ನು ಏನಾದರೂ ರೈತರು ನಂಬಿಕೊಂಡು ವ್ಯವಸಾಯ ಮಾಡಿದರೆ ಮೂರು ನಾಮ ಹಾಕಿಕೊಳ್ಳಬೇಕಾಗುತ್ತದೆ. ಒಂದು ಫಾರಂನಲ್ಲಿ ಒಂದು ಹೆಕ್ಟೇರಿಗೆ ಏಳೂವರೆ ಸಾವಿರ ಖರ್ಚು ಮಾಡಿದ್ದಾರೆ. ಮತ್ತೊಂದು ಫಾರಂನಲ್ಲಿ 5785 ರೂ. ಗಳನ್ನು ಖರ್ಚು ಮಾಡಿದ್ದಾರೆ. ಕಳೆದ ಆರು ವರ್ಷಗಳಲ್ಲಿ ಈ ಫಾರಂಗಳಲ್ಲಿ ಎಷ್ಟು ನಷ್ಟವಾಗಿದೆ ಎಂಬುದನ್ನು ಹೇಳುತ್ತೇನೆ. ನೀವು ನೌಕರರ ಸಂಬಳ ಎಲ್ಲವನ್ನು ಲೆಕ್ಕಹಾಕಿದರೆ ಇದರ ನಷ್ಟ ಬಹಳವಾಗುತ್ತದೆ. ಸುಮಾರು 53 ಲಕ್ಷ ರೂಪಾಯಿಗಳಷ್ಟು ನಷ್ಟ ಈ ಆರು ವರ್ಷಗಳಲ್ಲಿ ಫಾರಂಗಳಿಂದ ಆಗಿದೆ. ತಾವು ಎಲ್ಲರಿಗೂ ಮಾದರಿಯಾಗಿರಬೇಕು ಆದರೆ ನಿಮ್ಮ ರೀತಿಯಲ್ಲಿ ವ್ಯವಸಾಯ ಮಾಡಿದರೆ ರೈತ ತನ್ನಲ್ಲಿರುವ ಒಂದೆರಡು ಎಕರೆ ಭೂಮಿಯನ್ನು ಮಾರಿಕೊಂಡು ಹೋಗುವಂತೆ ಆಗುತ್ತದೆ. ಇವೊತ್ತು ನೀವು ಬೀಜೋತ್ಪಾದನಾ ಕೇಂದ್ರಗಳಲ್ಲಿ ಬೀಜಗಳನ್ನು ಬೆಳೆಯುತ್ತಿದ್ದೀರಿ ಅಗ್ರಿಕಲ್ಚರಲ್ ಯುನಿವರ್ಸಿಟಿಯವರು ಎಷ್ಟು ಬೆಳೆಯಬೇಕೆಂದು ಹೇಳುತ್ತಾರೆ ಅಷ್ಟನ್ನು ನೀವು ಬೆಳೆಯುತ್ತಿಲ್ಲ. ನಾವು ರೈತರು ಬೆಳೆಯುವಷ್ಟು ಕೂಡ ನೀವು ಬೆಳೆಯುವುದಿಲ್ಲ. ವ್ಯವಸಾಯ ಇಲಾಖೆ ಈ ಸ್ಥಿತಿಗೆ ಬಂದಿದೆ ಇದರಿಂದ ನನಗೆ ಬಹಳ ನೋವಾಗಿದೆ. ಇದೇ ರೀತಿಯಾಗಿ ತೋಟಗಾರಿಕೆ ಇಲಾಖೆಯರಲ್ಲಿರತಕ್ಕ ಫಾರಂಗಳಲ್ಲೂ ಕೂಡ ಬಹಳ ನಷ್ಟವಾಗಿದೆ. ನಿಮ್ಮಲ್ಲಿರತಕ್ಕ ಫಾರಂಗಳಿಗೆ ಎಷ್ಟು ಹಣವನ್ನು ಖರ್ಚು ಮಾಡಿದ್ದೀರಿ ಮಾರಾಟ ಮಾಡಿದ್ದರಿಂದ ಬಂದ ಹಣವೆಷ್ಟು ಎಲ್ಲವನ್ನು ಲೆಕ್ಕ ಹಾಕಿದರೆ ನಿಮಗೂ ಸಹ ತುಂಬಾ ನೋವಾಗುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ಇನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಈ ಗ್ರಾಮೀಣಾಭಿವೃದ್ಧಿ ಇಲಾಖೆ ಎಂದ ತಕ್ಷಣ ನಮಗೆ ಜ್ಞಾಪಕಕ್ಕೆ ಬರುವುದು ಕೇವಲ ಮಂಡಲ ಪಂಚಾಯತಿ ಮತ್ತು ಜಿಲ್ಲಾಪರಿಷತ್ತು ಈ ವಿಚಾರದಲ್ಲಿ ಅನೇಕ ವ್ಯಕ್ತಿಗಳು ಯಾವುದೇ ಪಕ್ಷದಲ್ಲಿದ್ದರೂ ಕೂಡ ತಮ್ಮದೇ ಆದಂತಹ ಅಭಿಪ್ರಾಯಗಳನ್ನು ಹೊಂದಲಿಕ್ಕೆ ಸಾಧ್ಯವಿದೆ. ಆದರೆ ನಾವೆಲ್ಲರೂ ಒಂದು ಮೂಲಭೂತ ತತ್ವವನ್ನು ಒಪ್ಪಿಕೊಂಡಿದ್ದೇವೆ. ಜನತಂತ್ರದ ವಿಕೇಂದ್ರೀಕರಣ ಆಗಬೇಕು ಎಂಬ ಮಾತನ್ನು ನಾವೆಲ್ಲ ಒಪ್ಪಿಕೊಂಡಿದ್ದೇವೆ. ಅದನ್ನು ಒಪ್ಪಿದ ಮೇಲೆ ಅದನ್ನು ಮೊಟಕುಗೊಳಿಸತಕ್ಕ ಪಟ್ಟಭದ್ರಹಿತಾಸಕ್ತಿಗಳನ್ನು ಖಂಡತುಂಡವಾಗಿ ಖಂಡನೆ ಮಾಡಬೇಕಾಗಿದೆ. ಜಿಲ್ಲಾಪರಿಷತ್ತಿನ ಅಧ್ಯಕ್ಷರಾಗಲಿ ಮಂಡಲ ಪಂಚಾಯತಿಯ ಪ್ರಧಾನರೇ ಆಗಲಿ ಭ್ರಷ್ಟಾಚಾರ ಮಾಡುತ್ತಿದ್ದಾರೆ ಎಂಬ ಮಾತನ್ನು ಹೇಳುತ್ತಿದ್ದೇವೆ. ಆದರೆ ನಾವು ನೀವು ಮಾಡಿದರೂ ಭ್ರಷ್ಟಾಚಾರ ಅಲ್ಲವೇ ಇವತ್ತು ನಾವು ಭ್ರಷ್ಟಾಚಾರ ಮಾಡಿದರೆ ಅದನ್ನು ವಿಚಾರಣೆ ಮಾಡಿ ಅಂತಹವರ ಮೇಲೆ ಕ್ರಮ ಕೈಗೊಳ್ಳಬೇಕೇ ಹೊರತು ಇಂತಹ ಒಂದು ಸಂಸ್ಥೆಯನ್ನೆ ತೆಗೆದುಹಾಕಬೇಕು ಎಂದು ಹೇಳುವುದು ಸರಿಯಲ್ಲ. ಕಾನೂನನ್ನು ಮೊಟಕು ಮಾಡುವಂತಹ ಪ್ರಯತ್ನ ಮಾಡುವುದು ಸರಿಯಲ್ಲ. ನೆಗಡಿಯಾದರೆ ಮೂಗನ್ನು ಕತ್ತರಿಸುವುದಿಲ್ಲ ಆ ನೆಗಡಿಯನ್ನು ಹೋಗಲಾಡಿಸಲು ಔಷಧಿಯನ್ನು ತೆಗೆದುಕೊಳ್ಳುತ್ತೇವೆ. ಅದೇ ರೀತಿ ಇವತ್ತಿನ ದಿವಸ ಮೂಲಭೂತವಾಗಿ ಜನತಂತ್ರದ ವಿಕೇಂದ್ರೀಕರಣದಲ್ಲಿ ನಂಬಿಕೆ ಇಟ್ಟುಕೊಂಡಿರುವುದರಿಂದ ನಾವು ಇಂತಹ ಸಂಸ್ಥೆಗಳ ಅಧಿಕಾರಿಗಳನ್ನು ಮೊಟಕುಗೊಳಿಸದೇ ಇವುಗಳ ಮುಖಾಂತರ ಹೊಸಹೊಸ ಯೋಜನೆಗಳನ್ನು ಜಾರಿಗೆ ತಂದು ಅವುಗಳ ಮೂಲಕ ಜನರನ್ನು ಅದರಲ್ಲಿ ಭಾಗವಹಿಸುವಂತೆ ಕ್ರಮ ಕೈಗೊಳ್ಳಬೇಕು. ಈ ದಿಸೆಯಲ್ಲಿ ನಾವು ಅವರಿಗೆ ಹೆಚ್ಚಿನ ಅಧಿಕಾರವನ್ನು ಕೊಡಬೇಕು. ಈ

ಚುನಾವಣೆಗಳ ಬಗ್ಗೆ ನನ್ನ ಸ್ನೇಹಿತರುಗಳು ಹೇಳುತ್ತಿದ್ದರು. ಅದೇನೆಂದರೆ ಜಿಲ್ಲಾ ಪರಿಷತ್ತು ಮತ್ತು ಮಂಡಲ್ ಪಂಚಾಯತಿಯ ಚುನಾವಣೆಗಳಲ್ಲಿ ಹೆಂಡದ ಹಾಗೂ ಹಣದ ಹೊಳೆ ಹರಿಯಿತೆಂದು. ನಮ್ಮ ನಿಮ್ಮ ಚುನಾವಣೆಗಳಲ್ಲಿ ಹೆಂಡದ ಹಾಗೂ ಹಣದ ಹೊಳೆ ಹರಿದಿಲ್ಲವೆ? ನಮ್ಮ ಚುನಾವಣೆಗಳಲ್ಲಿ ಹೆಂಡದ ಹಾಗೂ ಹಣದ ಹೊಳೆ ಹರಿಯಬಹುದು ಆದರೆ ಈ ಚುನಾವಣೆಗಳಲ್ಲಿ ಹರಿಯಾಬಾರದೇ? ಈ ಚುನಾವಣೆಗಳ ಬಗ್ಗೆ ಸುಧಾರಣೆಗಳನ್ನು ಮಾಡಬೇಕೆ ಹೊರತು ಈ ಒಂದು ಕಾರಣದಿಂದ ಜಿಲ್ಲಾಪರಿಷತ್ ಹಾಗೂ ಮಂಡಲ ಪಂಚಾಯತಿಗಳನ್ನು ನಾವು ತೆಗೆದುಹಾಕತಕ್ಕ ಪ್ರಯತ್ನವನ್ನಾಗಲೀ ಅಥವಾ ಅವುಗಳ ಬಗ್ಗೆ ಟೀಕೆ ಮಾಡುವುದಾಗಲಿ ಸರಿಯಲ್ಲ.

ಶ್ರೀ ಎಲ್.ಆರ್. ಶಿವರಾಮೇಗೌಡ:- ಎಲ್ಲಾ ಕಾಲದಲ್ಲೂ ಹೆಂಡದ ಹೊಳೆಯಿತ್ತು. ಆಗ ಬರೀ ಗಂಡಸರು ಕುಡಿಯುತ್ತಿದ್ದರು ಆದರೆ ನಿಮ್ಮ ಕಾಲದಲ್ಲಿ ಹೆಂಗಸರು ಕೂಡ ಕುಡಿಯುವ ಹಾಗೆ ಮಾಡಿದಿರಿ.

ಶ್ರೀಮತಿ ಚಂದ್ರಪ್ರಭಾ ಅರಸ್:- ಈಗ ಹೆಂಗಸರು ಗಂಡಸರು ವ್ಯತ್ಯಾಸ ಇಲ್ಲವೇ?

ಶ್ರೀ ಹೆಚ್. ಏಕಾಂತಯ್ಯ:- ಕುಡಿಯುವವರು ಹೆಂಗಸರಾದರೇನು ಗಂಡಸರಾದರೇನು ಏತಕ್ಕೆ ಈ ತಾರತಮ್ಯ.

ಶ್ರೀ ಎಂ.ಪಿ. ವೆಂಕಟೇಶ್:- ಇವರ ಕಾಲದಲ್ಲಿ ಸಣ್ಣ ಮಕ್ಕಳು ಶುರು ಮಾಡಿದ್ದಾರೆ.

ಶ್ರೀ ಎಲ್.ಆರ್. ಶಿವರಾಮೇಗೌಡ:- ಇತಿಹಾಸದಲ್ಲಿ ಇಲ್ಲದೆ ಇದ್ದಂತಹ ತೀರ್ಪನ್ನು ಜನ ಅದಕ್ಕೆ ಕೊಟ್ಟಿದ್ದಾರೆ.

ಶ್ರೀ ಸಿ. ಬೈರೇಗೌಡ:- ಗಂಡಸಾಗಲೀ ಹೆಂಗಸಾಗಲೀ ಕುಡಿಯದೇ ಇರುವವರು ಹೆಂಗಸರು ಕುಡಿಯುವವರೆಲ್ಲರೂ ಗಂಡಸರೇ.

ಶ್ರೀ ಹೆಚ್. ಏಕಾಂತಯ್ಯ:- ಅವರು ಹೇಳಿದ್ದಕ್ಕೋಸ್ಕರ ನಾನು ಹೇಳಬೇಕಾಗಿ ಬಂತು ಅಷ್ಟೇ. ಈ ದೇಶದಲ್ಲಿ ಏನಾದರೂ ಚುನಾವಣೆಯಲ್ಲಿ ಕುಡಿಯುವವರು ಕುಡಿಯುವವರಿಗೇ ಓಟು ಕೊಡಬೇಕೆಂದರೆ ನಾವು ಯಾರೂ ಗೆದ್ದು ಬರುವುದಕ್ಕಾಗುವುದಿಲ್ಲ. ಶಿವರಾಮೇಗೌಡರಿಗೆ ಇದ್ಯಾವುದೂ ಗೊತ್ತಿಲ್ಲ. ಈ ಒಂದು ಜನತಂತ್ರ ವ್ಯವಸ್ಥೆ ಈ ಚುನಾವಣಾ ಪದ್ಧತಿ ಎಲ್ಲಿಗೆ ಬಂದಿದೆ ಎಂದರೆ ಈ ದೇಶದಲ್ಲಿರುವ ಬಂಡವಾಳಶಾಹಿ ಚುನಾವಣೆ ಮಾಡಲು ನಿಲ್ಲಬೇಕಾಗಿದೆ. ಇವತ್ತು ಯಾರು ಶ್ರೀಮಂತರು ಇದ್ದಾರೆ ಅವರು ಚುನಾವಣೆಗೆ ನಿಲ್ಲುವ ಗತಿ ಬಂದಿದೆ. ಇಲದಿದ್ದರೆ ಲಾಬಿ ಮುಖಾಂತರ ಯಾವುದಾದರೂ ಬಂಡವಾಳಶಾಹೀ ಕೃಪಾಪೋಷಣೆಯಲ್ಲಿ ನಿಂತು ಚುನಾವಣೆಯಲ್ಲಿ ಗೆದ್ದು ಬರಬೇಕಾದ ಒಂದು ವ್ಯವಸ್ಥೆ ನಮ್ಮಲ್ಲಿ ಬಂದಿದೆ. ಇದನ್ನು ಹೋಗಲಾಡಿಸುವುದಕ್ಕೆ ಬೇಕಾದ ಕಾನೂನನ್ನು ಮಾಡುವುದಕ್ಕೆ ಚುನಾವಣಾ ಸುಧಾರಣೆ ಮಾಡುವುದಕ್ಕೆ ಒಂದು ಕಾನೂನನ್ನು ತರಬೇಕು. ಈ ಲೋಪದೋಷಗಳನ್ನು ತಿದ್ದುವುದಕ್ಕೆ ಪ್ರಯತ್ನ ಮಾಡದೇ ಇದಕ್ಕೋಸ್ಕರವೇ ಇಡೀ ಚುನಾವಣೆ ರದ್ದು ಮಾಡುತ್ತೇವೆನ್ನುವುದು ಸರಿಯಾದ ಕ್ರಮವಲ್ಲ ಮಂಡಲಪಂಚಾಯಿತಿ ಹಾಗೂ ಜಿಲ್ಲಾಪರಿಷತ್ ಜನತಾಂತ್ರಿಕ ಸಂಸ್ಥೆಗಳು ಏನಿವೆ ಅವನ್ನು ಉಳಿಸಿ ಬೆಳೆಸಬೇಕಾಗಿದೆ. ಇವುಗಳಲ್ಲಿ ಏನಾದರೂ ಲೋಪದೋಷಗಳು ಇದ್ದರೆ ಅವನ್ನು ತಿದ್ದುವುದಕ್ಕೆ ಪ್ರಯತ್ನ ಮಾಡೋಣ. ಇಡೀ ಇಂಡಿಯಾ ದೇಶದ 80 ಕೋಟಿ ಜನರನ್ನು ಏನು 5000 ಜನ ಪ್ರತಿನಿಧಿಸುತ್ತಿದ್ದಾರೆ ಅವರ ಕೈಯಲ್ಲಿ ಇರಬೇಕೆ ಅಥವಾ ಅದಕ್ಕೆ ಬದಲಾಗಿ ಪಂಚಾಯಿತಿ ರಾಜ್ ಮುಖಾಂತರ 20 ಲಕ್ಷ ಜನರಿಗೆ ಅಧಿಕಾರವನ್ನು ಏನು ಹಂಚುತ್ತಿದ್ದೇವೆ ಅದು ಇರಬೇಕೇ? ಹೀಗೆ ಹಂಚುವ ವ್ಯವಸ್ಥೆಯಲ್ಲಿ 40 ಸಾವಿರ ಜನ ಹರಿಜನವರ್ಗಕ್ಕೆ ಸೇರಿದವರಿಗೆ ಅಧಿಕಾರವನ್ನು ಕೊಟ್ಟಿದ್ದೇವೆ. ಇವತ್ತಿನ ದಿವಸ ಇವರಲ್ಲಿ ರಾಜಕೀಯ ಜಾಗೃತಿ ಇಲ್ಲದೆ ಇರಬಹುದು. ನಾಳೆ ದಿವಸ ಮುಂದೆ ನಾಲ್ಕಾರು ಚುನಾವಣೆಗಳು ಆದಮೇಲೆ ಇವರೂ ಜಾಗೃತರಾಗುತ್ತಾರೆ. ತಮ್ಮ ಹಕ್ಕುಗಳನ್ನು ಕಾದಿರಿಸುವುದಕ್ಕೆ ಬೇಕಾದಷ್ಟು ಪ್ರಯತ್ನ ಮಾಡುತ್ತಾರೆ. ಈ ದಿಸೆಯಲ್ಲಿ ಏನು ಕಾನೂನು ತಂದಿದ್ದೇವೆ ಅದು ಖಂಡಿತಾ ಉತ್ತಮವಾದುದು. ವಿಕೇಂದ್ರೀಕರಣ ಮುಖಾಂತರ ಹೆಚ್ಚು ಹೆಚ್ಚು ಜನರಿಗೆ ಅಧಿಕಾರ ಕೊಡುವ ರೀತಿಯಲ್ಲಿ ಆಗಬೇಕೆಂದು ನಾನು ಹೇಳುತ್ತೇನೆ. ಕೊನೆಯದಾಗಿ ಮಾನ್ಯ ಬಸವಲಿಂಗಪ್ಪನವರ ಬಗ್ಗೆ ಹೇಳದೇ ಇದ್ದರೆ ಮಾತು

ಪೂರೈಸಿದಂತಾಗುವುದಿಲ್ಲ. ದೊಡ್ಡ ಸ್ಕ್ಯಾಂಡಲ್ ಎಂದು ಹೇಳುತ್ತಾರೆ ಅದರ ಬಗ್ಗೆ ಹೇಳಬೇಕಾಗುತ್ತದೆ. ಇವತ್ತು ಲಕ್ಷಾಂತರ ರೂಪಾಯಿಗಳನ್ನು ನಾವು 10 ದಶಲಕ್ಷ ಬಾವಿ ಯೋಜನೆಯಲ್ಲಿ ಕೇಂದ್ರದ ಮೂಲಕ ಪಡೆಯುತ್ತಿದ್ದೇವೆ. ಮಿಲಿಯನ್ ವೆಲ್ಸ್ ಸ್ಕೀಮ್ ಈ ಯೋಜನೆಯ ಅಡಿಯಲ್ಲಿ ನಾವು ಹಲವಾರು ಕಾರ್ಯಕ್ರಮಗಳನ್ನು ಹಲವಾರು ಜಿಲ್ಲೆಯಲ್ಲಿ ತೆಗೆದುಕೊಂಡಿದ್ದು ಇದು ಚಿತ್ರದುರ್ಗ ಧಾರವಾಡದಲ್ಲೂ ಇದ್ದು ಬೇರೆ ಬೇರೆ ಜಿಲ್ಲೆಗಳಲ್ಲಿ ಈ ಕೆಲಸವನ್ನು ಮಾಡಿದ್ದೇವೆ. ಈ ಕೆಲಸವನ್ನು ಮಾಡುವುದು ಹೇಗೆ? ಅದಕ್ಕೆ ಕೇಂದ್ರ ಸರ್ಕಾರದ ಮಾರ್ಗದರ್ಶನ ಇದೆ. ಈ ಸರ್ಕಾರದಿಂದಲೂ ಸಹಾ ಮಾರ್ಗದರ್ಶನ ಸಂಬಂಧಪಟ್ಟ ಜಿಲ್ಲಾ ಪರಿಷತ್ತುಗಳಿಗೆ ಹೋಗಿದೆ. ಸೂಚನೆಯಲ್ಲಿ ಫಲಾನುಭವಿಗಳನ್ನು ಗುರುತಿಸುವುದಕ್ಕೆ ಕಮಿಟಿ ಮಾಡಬೇಕೆಂದು ಇದೆ. ಆ ಕಮಿಟಿಯನ್ನು ಮಾಡುವುದೇ ಇಲ್ಲ. ಹಾಗೂ ಫಲಾನುಭವಿಗಳಿಗೆ ಯಾವ ರೀತಿ ಹಣ ಕೊಡಬೇಕು ಎನ್ನುವ ಬಗ್ಗೆ ನಿಯಮ ಇದೆ. ಇದನ್ನೆಲ್ಲಾ ಹೇಳುವುದಕ್ಕೆ ತಡ ಆಗುತ್ತದೆ. ಆದ್ದರಿಂದ ಆ ಬಗ್ಗೆ ತಾವು ತಮ್ಮ ಇಲಾಖೆಯಲ್ಲಿರುವ ಸುತ್ತೋಲೆಗಳನ್ನು ತಾವು ನೋಡಬಹುದು. ಈ ಒಂದು ವಿಚಾರದಲ್ಲಿ ಲಕ್ಷಾಂತರ ರೂಪಾಯಿ ಮೋಸ ಆಗಿದೆ. ಈ ಒಂದು ವ್ಯವಸ್ಥೆಯಲ್ಲಿ ಯಾವ ಹರಿಜನ ಗಿರಿಜನರಿಗೆ ಈ ಹಣದಿಂದ ಉಪಯೋಗ ಮಾಡಬೇಕಾಗಿತ್ತೋ ಆ ಹಣಕ್ಕೆ ಆ ಜಾತಿ ಜನರಿಂದಲೇ ಮೋಸ ಆಗಿದೆ ಎಂದು ಹೇಳಿದ್ದೇವೆ. ಈ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ? ಕೇವಲ ಇದು ಧಾರವಾಡ ಅಥವಾ ಚಿತ್ರದುರ್ಗ ಜಿಲ್ಲೆಗೆ ಮಾತ್ರ ಸೀಮಿತ ಅಲ್ಲ. ಈ ವರ್ಷಕೂಡಾ ದಶಲಕ್ಷ ಬಾವಿ ಯೋಜನೆ ಅಡಿಯಲ್ಲಿ ಕೋಟ್ಯಾಂತರ ರೂಪಾಯಿ ಕೇಂದ್ರ ಕೊಡುವ ಸೂಚನೆ ಕೊಟ್ಟಿದೆ. ಏಕೆ ನಾನು ಹೇಳುತ್ತಿದ್ದೇನೆ ಎಂದರೆ ಈ ಒಂದು ಅವ್ಯವಹಾರ ಏನಿದೆ ಇದು ಚಿತ್ರದುರ್ಗ ಅಥವಾ ಧಾರವಾಡಕ್ಕೆ ಮಾತ್ರ ಸೀಮಿತಗೊಳಿಸದೇ ಬೇರೆ ಬೇರೆ ಕಡೆಯೂ ಅವ್ಯವಹಾರ ನಡೆದಿರಬಹುದಾಗಿದ್ದು ಈ ಬಗ್ಗೆ ಸಿ.ಓ.ಡಿ. ತನಿಖೆ ಮಾಡಬೇಕು. ಇದು ಹರಿಜನರಿಗೆ ಸೇರಿದ ಯೋಜನೆಯಾಗಿದ್ದು ಇದರಲ್ಲಿ ಶೋಷಣೆ ಮಾಡಿದ ಜನರು ಅನೇಕ ಸಂದರ್ಭದಲ್ಲಿ ಆ ವರ್ಗಕ್ಕೆ ಸೇರಿದ ಜನ ಅಧಿಕಾರಿಗಳೇ ಎಂದು ಹೇಳುವುದಕ್ಕೆ ವಿಷಾದವಾಗುತ್ತದೆ. ಇವತ್ತು ಆ ಜನರು ಮಾಡಿದ್ದಾರೆ ಎನ್ನುವ ಪ್ರಶ್ನೆ ಅಲ್ಲ. ಎಲ್ಲಾ ವರ್ಗದ ಜನರಲ್ಲೂ ತಿನ್ನುವ ಜನರು ಇದ್ದಾರೆ. ಯಾವುದೇ ಜಾತಿಯವರು ಮಾಡಿರಲಿ ಅಂತಹವರ ಮೇಲೆ ಕಠಿಣ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಅಧ್ಯಕ್ಷರೇ ಇನ್ನು ನಾನು ಪಶು ವೈದ್ಯ ಶಾಲೆ ಮತ್ತು ಅರಣ್ಯದ ಬಗ್ಗೆ ಒಂದೆರಡು ಮಾತನಾಡುತ್ತೇನೆ. ಇವತ್ತು ಪಶುವೈದ್ಯರು ಏನೂ ಕೆಲಸ ಮಾಡುತ್ತಿಲ್ಲ. 1386 ಪಶುವೈದ್ಯ ಶಾಲೆಗಳು ಇದ್ದು ಇದರಲ್ಲಿ 164 ಸಂಚಾರಿ ಆಸ್ಪತ್ರೆಗಳು ಇವೆ. ನಿಮ್ಮ ಸಂಚಾರಿ ಆಸ್ಪತ್ರೆಗಳು ನಮ್ಮ ಸಂಚಾರದಂತೆ ಆಗಿವೆ. ಅವುಗಳಿಗೆ ಯಾರೂ ಹೋಗುವುದಿಲ್ಲ. ಹೋಗೋಣವೆಂದರೆ ಡಾಕ್ಟರುಗಳು ಇದ್ದರೆ ಗಾಡಿಗಳು ಇರುವುದಿಲ್ಲ. ಗಾಡಿ ಇದ್ದರೆ ಡಾಕ್ಟರುಗಳು ಇರುವುದಿಲ್ಲ. ಈ ವ್ಯವಸ್ಥೆಯನ್ನು ಸರಿಪಡಿಸಬೇಕೆನ್ನುವ ಮಾತನ್ನು ಹೇಳುತ್ತೇನೆ. ಅದಕ್ಕಿಂತ ಹೆಚ್ಚಾಗಿ ಅನೇಕ ವರ್ಷಗಳಿಂದ ಅನೇಕ ಹಗರಣಗಳ ಮಾತು ಹೇಳುತ್ತೇವೆ. ಅದರ ಬಗ್ಗೆ ಆಮೇಲೆ ಹೇಳುತ್ತೇನೆ. ಜಾನುವಾರುಗಳ ಅಭಿವೃದ್ಧಿ ಬಗ್ಗೆ ಪಶುವೈದ್ಯ ಮೇವು ಅದರ ಬಗ್ಗೆ ಅನೇಕ ಯೋಜನೆಗಳನ್ನು ಮಾಡಿದ್ದೇವೆ. ಕುರಿ ಕೋಳಿ ಹಂದಿ ಇವುಗಳ ಹೊಸ ತಳಿಗಳನ್ನು ಅಭಿವೃದ್ಧಿ ಪಡಿಸುವುದಕ್ಕೆ ಯೋಜನೆಗಳನ್ನು ತೆಗೆದುಕೊಂಡು ಅವುಗಳನ್ನು ಎಷ್ಟರಮಟ್ಟಿಗೆ ಉತ್ತಮವಾದ ತಳಿಗಳನ್ನು ಕೊಡುವುದಕ್ಕೆ ಸಾಧ್ಯವಾಗುತ್ತಿದೆ ಅಂದರೆ ಅದು ಹೆಚ್ಚು ಅಭಿವೃದ್ಧಿಯಾಗಿಲ್ಲವೆನ್ನುವ ಮಾತನ್ನು ಹೇಳುತ್ತೇನೆ. ಇದು ಮಾನ್ಯ ಸಚಿವ ರಂಗನಾಥ್‌ರವರಿಗೆ ಗೊತ್ತಿದೆ. ಇದಕ್ಕೆ ಚಳ್ಳಕೆರೆಯಲ್ಲಿ ಕುರಿ ಫಾರಂ ಏನಿದೆ ಅದೇ ಸಾಕ್ಷಿ. ಈ ದೇಶದಲ್ಲಿ ಎಲ್ಲಾ ಫಾರಂಗಳು ಒಂದಲ್ಲಾ ಒಂದು ಉದ್ದೇಶದಿಂದ ಸ್ಥಾಪನೆಯಾಗಿವೆ. ಆ ಉದ್ದೇಶವನ್ನು ಬಿಟ್ಟು ಉಳಿದ ಕೆಲಸ ಮಾಡುವ ಫಾರಂಗಳಾಗಿ ಅವು ಪರಿವರ್ತನೆಯಾಗಿವೆ. ಅದರಲ್ಲಿ ಪ್ರಸಿದ್ಧಿಯಾಗಿದೆ ಅದರ ಬಗ್ಗೆ ಹೆಚ್ಚು ಹೇಳುವುದಕ್ಕೆ ನಾನು ಹೋಗುವುದಿಲ್ಲ. ಮಾನ್ಯ ಬಸವಲಿಂಗಪ್ಪನವರು ಹಿರಿಯ ಸಚಿವರು ಅವರ ಬಗ್ಗೆ ನಾನು ವೈಯಕ್ತಿಕವಾಗಿ ಹೇಳುವುದಕ್ಕೆ ಇಷ್ಟ ಪಡುವುದಿಲ್ಲ. ಆದರೂ ಒಂದು ವಿಷಯವನ್ನು ಅವರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಹಗರಣಗಳ ಮಾತು ಬಂದಾಗ ಆದರಿಂದ ಅವರು ದೂರವಿರ

ಬೇಕೆನ್ನುವ ಮಾತನ್ನು ನಾವು ಹೇಳುತ್ತೇವೆ. ಕೆಎಂಎಫ್‌ಗೆ ಸೇರಿದ 30 ಎಕರೆ ಭೂಮಿಯನ್ನು ಬೇರೆಯವರು ಲಪಟಾಯಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಆ ಜಮೀನಿನ ಬಗ್ಗೆ ಇವತ್ತಿನ ದಿವಸ ಯಾವ ಕ್ರಮವನ್ನು ತೆಗೆದುಕೊಳ್ಳುತ್ತೀರಿ? ಈಗಾಗಲೇ ಬೇರೆಯವರೂ ಸಹ ಹೇಳಿದ್ದಾರೆ. ಬೆಂಗಳೂರಿನ ಹತ್ತಿರವಿರುವ ಕೆ.ಎಂ.ಎಫ್.ಗೆ ಸೇರಿದಂತಹ 30 ಎಕರೆ ಏನಿದೆ ಅದನ್ನು ಬೇರೆಯವರು ಅನಧಿಕೃತವಾಗಿ ಉಳುಮೆ ಮಾಡಿ ಅಥವಾ ಮನೆಗಳನ್ನು ಕಟ್ಟುವ ಮುಖಾಂತರ ಅದನ್ನು ವಶಪಡಿಸಿಕೊಳ್ಳುವ ಪ್ರಯತ್ನ ಮಾಡಿದ್ದಾರೆ. ಆ ಪ್ರಯತ್ನವನ್ನು ನಿಮ್ಮ ಗಮನಕ್ಕೆ ತಂದಿದ್ದೇನೆ. ನಿಜ ನಿಮ್ಮ ಬಗ್ಗೆ ನಾವು ಸದಾಭಿಪ್ರಾಯವನ್ನು ಹೊಂದಿದ್ದೇವೆ. ಎಲ್ಲಿಯವರೆಗೆ ನಿಮ್ಮ ಬಗ್ಗೆ ಬೇರೆ ಅಭಿಪ್ರಾಯವನ್ನು ಹೊಂದುವ ಪ್ರಮೇಯ ಬರುವುದಿಲ್ಲವೋ ಅಲ್ಲಿಯವರೆಗೆ ನಿಮ್ಮ ಬಗ್ಗೆ ಸದಾಭಿಪ್ರಾಯವನ್ನು ಹೊಂದಿರುತ್ತೇವೆ. ಈ ಬಗ್ಗೆ ನಿಮ್ಮ ಗಮನಕ್ಕೆ ಈ ವಿಷಯವನ್ನು ತಂದಾಗ ನೀವಾಗಲೀ ನಿಮ್ಮ ಇಲಾಖೆಯಾಗಲೀ ಇದನ್ನು ಸರಿಪಡಿಸುವುದಕ್ಕೆ ಏನು ಕ್ರಮವನ್ನು ತೆಗೆದುಕೊಳ್ಳುತ್ತೀರಿ? ಇದುವರೆಗೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಅದನ್ನು ನಾವು ಕಾದು ನೋಡುತ್ತೇವೆ. ಈ ವ್ಯವಹಾರದಲ್ಲಿ ನಿಮ್ಮ ಮೇಲೆ ಏನು ಗೂಬೆ ಕೂರಿಸುವ ಪ್ರಯತ್ನ ನಡೆಯುತ್ತಿದೆ ಅದನ್ನು ನಿವಾರಣೆ ಮಾಡದಿದ್ದರೆ ಇದರ ಬಗ್ಗೆ ಕ್ರಮ ತೆಗೆದುಕೊಳ್ಳದಿದ್ದರೆ ಸರಿಯಾಗುವುದಿಲ್ಲ. ಆ ಬಗ್ಗೆ ನೀವು ತೀವ್ರವಾದ ತೀರ್ಮಾನವನ್ನು ತೆಗೆದುಕೊಳ್ಳಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಬಿ.ಬಸವಲಿಂಗಪ್ಪ:- ಸನ್ಮಾನ್ಯ ಏಕಾಂತಯ್ಯನವರು ಜವಾಬ್ದಾರಿಯಿಂದ ಮಾತನಾಡುತ್ತಾರೆಂದು ನಾನು ಭಾವಿಸುತ್ತೇನೆ. ಅದು ನನ್ನ ಕ್ಷೇತ್ರದಲ್ಲಿ ಬರುತ್ತದೆ. ನಾನು ಜಮೀನನ್ನು ನೋಡಿಲ್ಲ. ಯಾರ್‍ಯಾರು ಏನು ಮಾಡುತ್ತಾರೇಂದೂ ಸಹ ನೋಡಿಲ್ಲ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧಿಕಾರಿಗಳನ್ನು ಕೆಎಂಎಫ್ ಅಧಿಕಾರಿಗಳನ್ನು ಕರೆಯಿಸಿ ಏನು ಮಾಡಬೇಕು ಎನ್ನುವ ಬಗ್ಗೆ ವಿಚಾರ ಮಾಡಿದ್ದೇನೆ. ಆ ಜಮೀನಿಗೋಸ್ಕರ ಕೆಎಂಎಫ್‌ನವರು ದುಡ್ಡು ಕೊಟ್ಟಿದ್ದಾರೆ. ಅದರ ತೀರ್ಮಾನ ಏನೆಂದರೆ ಸುಮಾರು 2-3 ತಿಂಗಳಲ್ಲಿ ಆ ಭೂಮಿಯನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧಿಕಾರಿಗಳಿಗೆ ಕೊಟ್ಟು ಬಿಡಿಎನವರಿಂದ ಕೊಡಸಬೇಕು. ಏಜೆನ್ಸಿ ಮುಖಾಂತರ ಕೊಟ್ಟರೆ ಆಪಾದನೆ ಬರುತ್ತದೆ. ಅದು ವಾಸ್ತವ. ಅದರಲ್ಲಿ ವಿಶೇಷವಾಗಿ ನಾಗಶೆಟ್ಟಿಹಳ್ಳಿ ಹತ್ತಿರವಿರತಕ್ಕ ಜಮೀನು ಬಹಳ ಬೆಲೆ ಬಾಳತಕ್ಕದ್ದು ಇದೆ. ಆ ಜಮೀನಿನ ಬಗ್ಗೆ ನಾನು ಮಂತ್ರಿಯಾದ ಮೇಲೆ ವ್ಯವಹಾರ ಮಾಡಿದ್ದೇನೆ. ಇದು ಯಾವುದೋ ದೂರು ಯಾರೋ ಹೇಳಿದ್ದುದು ಬೀದಿ ಬೀದಿಯಲ್ಲಿ ಕೇಳಿದ್ದುದು ಅಂದರೆ ಸರಿಯಲ್ಲ. ನಾನು ಏಕಾಂಗಿಯಾಗಿ ನಿಂತಿದ್ದೇನೆ. ನೀವು ಏಕಾಂತಯ್ಯ ಆ ಹೆಸರು ಇಟ್ಟುಕೊಂಡಿದ್ದೀರಿ. ನನ್ನ ವಿರುದ್ಧವಾಗಿ ದೂರು ಮಾಡತಕ್ಕ ಸಾಹಸಿಗರು ಈ ಭೂಮಿಯಲ್ಲಿ ಹುಟ್ಟಿಲ್ಲ. ನೀವು ಮಾಡುವುದಕ್ಕೆ ಪ್ರಯತ್ನ ಮಾಡಬೇಡಿ.

ಶ್ರೀ ಹೆಚ್. ಏಕಾಂತಯ್ಯ:- ನಾನು ನಿಮ್ಮ ಬಗ್ಗೆ ಹೇಳಲಿಲ್ಲ. ಇಂತಹ ಆರೋಪಗಳು ಬಂದಿವೆಯೆಂದು ಹೇಳಿದ್ದೇನೆ. ಸಾರ್ವಜನಿಕವಾಗಿ ಬಂದ ದೂರುಗಳನ್ನು ನಿಮ್ಮ ಗಮನಕ್ಕೆ ತಂದಿದ್ದೇನೆ. ಇಂತಹ ಆರೋಪಗಳು ಇವೆಯೆಂದು ಕಾಗದಗಳಿವೆ ಬೇಕಾದರೆ ಕೊಡೋಣ.

ಶ್ರೀ ಬಿ. ಬಸವಲಿಂಗಪ್ಪ:- ಕೊಡಿ. ನೀವು ಹೇಳಿದ್ದುದು ನನ್ನ ಕಿವಿಯಲ್ಲಿ ಕೇಳಲಿಲ್ಲ. ನೀವು ಇಲ್ಲದಿರುವ ಆರೋಪ ಮಾಡಿ. ನಾನು ನೇರವಾಗಿ ಅಸೆಂಬ್ಲಿಯಲ್ಲೇ ಹೇಳಿದ್ದೇನೆ. I don't keep it secret.

ಶ್ರೀ ಹೆಚ್. ಏಕಾಂತಯ್ಯ:- ನಾನು ಆರೋಪ ಮಾಡುತ್ತಿಲ್ಲ.

SRI B. BASAVALINGAPPA:- All my acts as a Minister and as an M.L.A. are subject to public scrutiny. ಪಬ್ಲಿಕ್ ಸಿಕ್ರೇಟ್ ಇಲ್ಲಿ ಹೇಳಿದ್ದೀರಿ ದಯಮಾಡಿ ಇಲ್ಲಿ ಯಾವುದೂ ಮುಚ್ಚುಮರೆ ಇಲ್ಲ. ನೀವೂ ಏನಾದರೂ ಇದ್ದರೆ ಮಾಡಿ..

ಶ್ರೀ ಎಚ್. ಏಕಾಂತಯ್ಯ: ಯಾವುದೋ ಸಹಿ ಇಲ್ಲದ ಪತ್ರ ಬಂದಾಕ್ಷಣ ನಾನು ನಂಬುವುದಿಲ್ಲ ಎನ್ನುವ ಮಾತನ್ನು ಮೊದಲೇ ಹೇಳಿದ್ದೇನೆ. ಈ ವಿಚಾರವನ್ನು ತಮ್ಮ ಗಮನಕ್ಕೆ ತಂದಿದ್ದೇನೆ. ಇದರಲ್ಲಿ ಹೆಸರು ಎಳೆಯುವ ಪ್ರಯತ್ನ ಏನಿದೆ ಅದನ್ನು ಖಂಡಿಸುತ್ತೇನೆ ಎಂದು ಹೇಳಿದ್ದೇನೆ. ಈಗಾಗಲೇ ಈ

ಮನೆಯಲ್ಲಿ ಪ್ರಸ್ತಾಪ ಮಾಡಿದ್ದಾರೆ. ಆದ್ದರಿಂದ ಆ ಪ್ರಶ್ನೆ ಏಳಲಿಲ್ಲ. ಇಲ್ಲದಿದ್ದರೆ ನಾನು ತೋರಿಸುತ್ತಿದ್ದೆ. ಈ ಮನೆಯಲ್ಲಿ ಮೊನ್ನೆ ದಿವಸ ಶ್ರೀ ಚಂದ್ರೇಗೌಡರು ಹೇಳದೇ ಇದ್ದಿದ್ದರೆ ನಾನು ಆ ವಿಚಾರವನ್ನು ತಮ್ಮ ಹತ್ತಿರ ಹೇಳುತ್ತಲಿದ್ದೆ.....

ಅಧ್ಯಕ್ಷರು:- ಅವರು ಮೊನ್ನೇನೆ ಉತ್ತರ ಕೊಟ್ಟಿದ್ದಾರೆ. ನಾನು ಇದನ್ನೆಲ್ಲ ಖಾಲಿ ಮಾಡಿಸ್ತೀನಿ ಎಂದು

ಶ್ರೀ ಎಚ್. ಏಕಾಂತಯ್ಯ:- ಹೀಗೆ ಅದು ಬರಲಿಲ್ಲ. ಬಿ.ಡಿ.ಎ.ಗೆ ಕೊಡುವ ಮಾತು ಅದೇನೇ ಇರಲಿ.. I leave it to the Government and the Minister to take a decision. I am not interfering. ಇವತ್ತಿನ ದಿವಸ ಶ್ರೀ ಬಸವಲಿಂಗಪ್ಪನವರು ಬಹಳ ಪ್ರಗತಿಪರರಿದ್ದಾರೆ. ಕೆಲವು ನನ್ನ ಭಾವನೆಗಳನ್ನು ಅವರು ಒಪ್ಪುತ್ತಾರೆ. ಅವರದ್ದನ್ನು ನಾನು ಒಪ್ಪುತ್ತೇನೆ. ಆದರೆ ಈ ಪ್ರಗತಿಪರ ಭಾವನೆಯ ಹೆಸರಿನಲ್ಲಿ ನಾವು ಬ್ರಾಹ್ಮಣಿಕೆಯನ್ನು ವಿರೋಧ ಮಾಡಬಹುದು. ಆದರೆ ಇಡೀ ಬ್ರಾಹ್ಮಣ ಸಮೂಹವನ್ನು ವಿರೋಧ ಮಾಡಬೇಕಾದಂಥ ಅವಶ್ಯಕತೆ ಇಲ್ಲ. ಬೆಂಡಿಗೇರಿ ಸ್ವಾಮಿಯಂಥ ಹೊಲಸು ಸ್ವಾಮಿಯನ್ನು ವಿರೋಧ ಮಾಡಬಹುದೇ ಹೊರತು ಆ ವರ್ಗಕ್ಕೆ ಸೇರಿದ ಎಲ್ಲರನ್ನೂ ವಿರೋಧ ಮಾಡಬೇಕೆಂದು ಇಲ್ಲ. ಪ್ರಗತಿಪರ ಹೆಸರಿನಲ್ಲಿ ನವ್ಯ ಬ್ರಾಹ್ಮಣಿಕೆಯ ಪಂಥ ಏನಿದೆ ಅದರ ಬಗ್ಗೆ ಎಚ್ಚರವಾಗಿರಬೇಕು. ಅಂತಹವರನ್ನು ಗುರುತು ಮಾಡುವುದು ಅತ್ಯಂತ ಅವಶ್ಯಕ ಎಂಬ ಮಾತನ್ನು ಹೇಳಿದ್ದೇವೆ ಹೊರತು ಮತ್ತೊಂದು ದೃಷ್ಟಿಯಿಂದ ಅಲ್ಲ. ಸನ್ಮಾನ್ಯ ಬಸವಲಿಂಗಪ್ಪನವರು ಏನಿದ್ದಾರೆ ಅವರ ಪ್ರಗತಿಪರ ಭಾವನೆಗಳಿಗೆ ನಾನು ಮೊಟ್ಟಮೊದಲನೆಯದಾಗಿ ಬೆಂಬಲ ಕೊಡುತ್ತೇನೆ. ಆದರೆ ಅವರ ಹೆಸರಿನಲ್ಲಿ ಏನಾದರೂ ನಡೆದರೆ ಅದನ್ನು ಪ್ರಗತಿಪರ ಭಾವನೆ ಎಂದು ತಿಳಿದುಕೊಳ್ಳುವುದಕ್ಕೆ ಸಾಧ್ಯವಿಲ್ಲ ಎಂಬ ದೃಷ್ಟಿಯಿಂದ ಈ ಮಾತನ್ನು ಹೇಳಿದ್ದೇನೆ ಹೊರತು ಮತ್ತೊಂದು ದೃಷ್ಟಿಯಿಂದ ಅಲ್ಲವೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ:- ಈಗ ನಾನು ಅದನ್ನೇ ರಿಪೀಟ್ ಮಾಡುತ್ತಿದ್ದೇನೆ. ನೀವು ನನ್ನ ಸ್ನೇಹಿತರು, ನಿಮ್ಮ ಅಭಿಪ್ರಾಯಕ್ಕೆ ಮನ್ನಣೆ ಕೊಟ್ಟಿದ್ದೇನೆ, ಗೌರವಿಸಿದ್ದೇನೆ. ನೀವೇ ನನ್ನ ಹೆಸರಿನಲ್ಲಿ ಮಾಡಿರಪ್ಪ.

ಶ್ರೀ ಎಚ್. ಏಕಾಂತಯ್ಯ:- ತಮ್ಮ ಅಧಿಕಾರ ಏನಿದೆ, ಅದಕ್ಕೆ ಅಡ್ಡಿ ಉಂಟು ಮಾಡುವುದಕ್ಕೆ ನಾನು ಪ್ರಯತ್ನ ಮಾಡುವುದಿಲ್ಲ. ನನ್ನದೇನೂ ಅದರಲ್ಲಿ ಹಿತ ಇಲ್ಲವೆಂಬುದು ತಮಗೆ ಗೊತ್ತಿದೆ. ತಮ್ಮ ಬಗ್ಗೆ ಇರುವ ಸದ್ಭಾವನೆಯಿಂದ ಈ ಮಾತನ್ನು ಹೇಳಿದ್ದೇನೆ ಹೊರತು ಬೇರೆ ಭಾವನೆಯಿಂದ ಅಲ್ಲ. ಹೊರಗಡೆ ನಾವು ನೀವು ಮಾತನಾಡಿದರೆ ಅದು ಸರಿಯಾದ ರೀತಿಯಲ್ಲ. ಇವತ್ತಿನ ದಿವಸ ಏನೇ ಇದ್ದರೂ ಎದುರಿಗೆ, ಸಾರ್ವಜನಿಕವಾಗಿ ಚರ್ಚೆ ಮಾಡಬೇಕೇ ಹೊರತು ವೈಯಕ್ತಿಕವಾಗಿ ಚರ್ಚೆ ಮಾಡಬೇಕಾದ ಅಗತ್ಯವಿಲ್ಲವೆಂಬ ಭಾವನೆಯಿಂದ ಈ ಮಾತನ್ನು ಹೇಳಿದ್ದೇನೆ, ಹೊರತು ಬೇರೆ ದೃಷ್ಟಿಂದ ಅಲ್ಲ. ಇಷ್ಟು ತಡವಾಗಿಯಾದರೂ ತಾವು ಕೆಲವು ನಿಮಿಷಗಳನ್ನು ಕೊಟ್ಟು ಉಪಕಾರ ಮಾಡಿದ್ದೀರಿ ಎಂದು ಭಾವಿಸುತ್ತೇನೆ. ಅದಕ್ಕಾಗಿ ತಮ್ಮನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು:- ಈಗ ಪ್ರತಿಯೊಬ್ಬ ಸದಸ್ಯರೂ ಅವಕಾಶವನ್ನು ಕೇಳುತ್ತಿದ್ದಾರೆ. ಆದ್ದರಿಂದ ಐದೈದು ನಿಮಿಷ ಒಬ್ಬೊಬ್ಬರಿಗೆ ಕೊಡುತ್ತಿದ್ದೇನೆ. ಶ್ರೀ ಹರ್ಷಕುಮಾರಗೌಡ, ನೀವು ಬರೀ ಪಾಯಿಂಟ್ಸ್ ಮಾತ್ರ ಹೇಳಿ.

† ಶ್ರೀ ಕೆ. ಹರ್ಷಕುಮಾರಗೌಡ (ಚಾಮರಾಜ):- ಮಾನ್ಯ ಅಧ್ಯಕ್ಷರೇ, ಈಗ ಸನ್ಮಾನ್ಯ ಮಂತ್ರಿಗಳು ಯಾವ ಬೇಡಿಕೆಗಳನ್ನು ಸಭೆಯ ಮುಂದಿಟ್ಟಿದ್ದಾರೆ, ಇದನ್ನು ನಾನು ಅನುಮೋದಿಸುತ್ತಾ ನನ್ನ ಕೆಲವು ಅನಿಸಿಕೆಗಳನ್ನು ತಮ್ಮ ಮೂಲಕ ಈ ಸದನಕ್ಕೆ ವ್ಯಕ್ತಪಡಿಸುವುದಕ್ಕೆ ಇಚ್ಛೆಪಡುತ್ತೇನೆ. ಪ್ರಮುಖವಾಗಿ ನಮ್ಮ ಅರಣ್ಯ ಇಲಾಖೆಯ ನೀತಿ ಮತ್ತು ನಡವಳಿಕೆಗಳು ಯಾವ ದಿಕ್ಕಿನಲ್ಲಿ ಸಾಗುತ್ತಿವೆ ಎಂದು ಯೋಚನೆ ಮಾಡಿದಾಗ ದಿಗ್ಭ್ರಮೆಯಾಗುತ್ತದೆ. ಏತಕ್ಕೆಂದರೆ ಅರಣ್ಯ,

ಗ್ರಾಮ್ಯಭಾಷೆಯಲ್ಲಿ ನಮ್ಮ ಗ್ರಾಮಾಂತರ ಪ್ರದೇಶದ ಜನರು ಹೇಳುವುದೇನೆಂದರೆ ಅರಣ್ಯ ಸಂಪತ್ತಿಗೆ ಕಾಡು ಎಂದು ಅವರು ಹೇಳುತ್ತಾರೆ. ಯಾವ ಸಂಪತ್ತನ್ನು ರಕ್ಷಣೆ ಮಾಡಬೇಕಾದಂಥ ಇಲಾಖೆ ಇವತ್ತು ಈ ಸಂಪತ್ತಿನ ಸಂರಕ್ಷಣೆ ಹೆಸರಿನಲ್ಲಿ, ವನ್ಯ ಜೀವಿಗಳ ಸಂರಕ್ಷಣೆಯ ಹೆಸರಿನಲ್ಲಿ ಕರ್ನಾಟಕ ರಾಜ್ಯದ ಸುಮಾರು 38,646 ಚದರ ಕಿಲೋಮೀಟರ್ ಭೂಪ್ರದೇಶದ ಒಂದು ಆಡಳಿತಾಧಿಕಾರವನ್ನು ಪಡೆದುಕೊಂಡಂಥ ಒಂದು ಇಲಾಖೆ. ಈ ಇಲಾಖೆಯ ನೀತಿ, ನಡವಳಿಕೆಗಳನ್ನು ನೋಡಿದಾಗ ಇವತ್ತು ಹರಿಯಾಣ ಮುಖ್ಯಮಂತ್ರಿ ಚೌತಾಲ ತರಹ ಪ್ರತಿಸಾರಿಯೂ, ಎಲ್ಲಿ ಅವರನ್ನು ಹಾಕಿದರೂ ಅವರು ವಾಪಸ್ಸು ಬರುತ್ತಾರೆ. ಇಂತಹ ಒಂದು ಪರಿಸ್ಥಿತಿಯನ್ನು ನಾವು ಈ ರಾಜ್ಯದಲ್ಲಿ ನೋಡುತ್ತಿದ್ದೇವೆ.ಜೊತೆಗೆ ಯಾವ ಸ್ಥಿತಿಗತಿಯಲ್ಲಿ ತಮ್ಮ ಇಲಾಖೆ ಇದೆಯೆಂದು ಹೇಳಿದರೆ ಒಂದು ಕಡೆ ಸುಮಾರು ಎರಡು ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಜನಪರ ಕಾಡುಗಳನ್ನು ಬೆಳೆದಿದ್ದೀರಿ. ಅದರ ಜೊತೆಗೆ 1,30,930 ಹೆಕ್ಟೇರು ಪ್ರದೇಶದಲ್ಲಿ ನೀಲಗಿರಿ ಕಾಡನ್ನು ಬೆಳೆದಿದ್ದೀರಿ ಈ ನೀಲಗಿರಿ ನೆಡುವುದು ಜನವಿರೋಧಿ, ರಾಷ್ಟ್ರವಿರೋಧಿ, ಸಮಾಜವಿರೋಧಿ ಎಂದು ಹೇಳಬಹುದು. ಪರಿಸರ ತಜ್ಞರ ಹೇಳಿಕೆಗಳು ಇರಬಹುದು. ಅವರ ಸರ್ಟಿಫಿಕೇಟುಗಳು ಇರಬಹುದು. ಪರಿಸರ ತಜ್ಞರು ಎಂದು ಹೇಳಿದರೆ, ಮಾರ್ಕೆಟ್‌ನಲ್ಲಿ ಖರೀದಿಸುವ ವಸ್ತು ಎಂದು ಹೇಳಬೇಕಾಗುತ್ತದೆ. ಹಣ ಕೊಟ್ಟರೆ ಸರ್ಟಿಫಿಕೇಟ್ ಕೊಡುವಂಥ ವ್ಯವಸ್ಥೆಗೆ ಪರಿಸರ ತಜ್ಞರು ಇರಬೇಕಾದರೆ, ಈ ಸಮಾಜದಲ್ಲಿ ಬಂಡವಾಳಶಾಹಿಗಳಿಗೆ ಅವರು ಈಡಾಗಿ, ನೀಲಗಿರಿ ಮರದಿಂದ ಯಾವುದೇ ತೊಂದರೆ ಇಲ್ಲವೆಂದು ಹೇಳಿಕೆಗಳನ್ನು ಕೊಡುವುದರ ಮೂಲಕ, ಕರ್ನಾಟಕ ರಾಜ್ಯದಲ್ಲಿ ಬಂಡವಾಳಶಾಹಿಗಳಿಗೆ, ಕಳ್ಳ ವ್ಯಾಪಾರಸ್ಥರಿಗೆ, ಮೇಯುವಂತಹ ಹುಲ್ಲುಗಾವಲು ಆಗಿದೆ ಎಂದು ಹೇಳುವಂತಹ ಅರಣ್ಯಸಂಪತ್ತು ಎಂದು ಈ ಸಂದರ್ಭದಲ್ಲಿ ಹೇಳುತ್ತಾ, 80 ಸಾವಿರ ಮೆಟ್ರಿಕ್ ಟನ್ ಉತ್ಪಾದನೆ ಕರ್ನಾಟಕ ರಾಜ್ಯದಲ್ಲಿ ಈ ನೀಲಗಿರಿ ಮರ ಆಗುತ್ತಿದೆ. ಇದೇನು ರೈತನಿಗೆ ಮಾರಾಟವಾಗುತ್ತಿದೆಯೇ, ಈ ರಾಜ್ಯದ ಸಂಪತ್ತು ಯಾರಿಗೆ ಮಾರಾಟವಾಗುತ್ತಿದೆ? ಕೇವಲ ಬಂಡವಾಳಶಾಹಿಗಳಿಗೆ, ಉದ್ದಿಮೆದಾರರಿಗೆ ಅಲ್ಲದೆ ಮತ್ತೆ ಯಾರಿಗೆ ಮಾರಾಟವಾಗುತ್ತಿದೆ? ಇದರಿಂದ ಕರ್ನಾಟಕ ರಾಜ್ಯದ ರೈತರ ಶೋಷಣೆಯಾಗುತ್ತಿದೆ, ಇದನ್ನು ತಪ್ಪಿಸಬೇಕೆಂದು ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡುತ್ತೇನೆ. ಜೊತೆಗೆ ನೀಲಗಿರಿ ಮರದ ಕಾಡಿನಿಂದ ಏನು ಉತ್ಪಾದನೆಯಾಗುತ್ತದೆ, ಜನಸಮುದಾಯದ ಉತ್ಪಾದನೆಯಾಗಲೀ, ಮತ್ತು ವನ್ಯಸಂರಕ್ಷಣೆ, ಪ್ರಾಣಿ ಸಂಪತ್ತು, ಪಶುಪಕ್ಷಿಗಳು ಇರಬೇಕಾದರೆ, ಯಾವುದಕ್ಕೂ ಅವಕಾಶ, ಇಲ್ಲದೇ ಇರುವ ಈ ಕಾಡುಗಳನ್ನು ನಿರ್ಮಾಣ ಮಾಡಬಾರದು. ಈ ನೀಲಗಿರಿ ಮರಗಳನ್ನು ಬೆಳೆಸುವ ಉದ್ದೇಶ, ಬರೀ ಕಡಿಯುವುದಕ್ಕಾಗಿಯೇ. ಆದ್ದರಿಂದ ಇದನ್ನು ಸ್ಥಗಿತಗೊಳಿಸಬೇಕೆಂದು ಪ್ರಾರ್ಥನೆ ಮಾಡುತ್ತೇನೆ. ಅಧ್ಯಕ್ಷರು ಈಗಾಗಲೇ ಬೆಲ್ ಬಾರಿಸುತ್ತಿದ್ದಾರೆ. ಆದ್ದರಿಂದ ನಾನು ಈ ಸಂದರ್ಭದಲ್ಲಿ ಕಾಡಿನ ಬಗ್ಗೆ ಹೇಳುವುದನ್ನು ನಿಲ್ಲಿಸುತ್ತಾ, ಕೆ.ಪಿ.ಎಲ್. ಸಂಸ್ಥೆ ಇದೆ, ಇದು ಕರ್ನಾಟಕ ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್‌ನ ಕಾರ್ಪೊರೇಷನ್ಸ್ ಅಂಗಸಂಸ್ಥೆ. ಇದಕ್ಕೆ ಸುಪ್ರೀಂ ಕೋರ್ಟಿನಲ್ಲಿ 'ಸ್ಟೇ' ಕೊಟ್ಟಿದ್ದಾರೆ. ಪರಿಸರ ಸಮಾಜವಾದಿ ಸಂಘದ ಶಿವರಾಮಕಾರಂತರು ಸುಪ್ರೀಂಕೋರ್ಟಿಗೆ ಹೋದಾಗ, ಸ್ಟೇ ಕೊಟ್ಟಿದ್ದಾರೆ. ಆದರೆ ಕರ್ನಾಟಕ ಸರ್ಕಾರದ ಯಾವುದೇ ಅನುಮತಿ ಪಡೆಯದೇ, ಸಿ.ಸಿ.ಎಫ್.ರವರು ಮಂಜೂರಾತಿ ಕೊಟ್ಟಿದ್ದಾರೆ. ಐದು ಸಾರಿ ಮಂಜೂರಾತಿ ಮಾಡುವುದರ ಮೂಲಕ 10 ಸಾವಿರ ಹೆಕ್ಟೇರ್ ಪ್ರದೇಶವನ್ನು ಮಂಜೂರ್ಮಾಡಿದ್ದಾರೆ. ಆ ಮೂಲಕ, ಯಾವ ರಾಜ್ಯಸರ್ಕಾರದ ಪರವಾನಗಿಯನ್ನು ಪಡೆಯಬೇಕಾಗಿತ್ತೋ ಅದನ್ನು ಒಪ್ಪಿಗೆ ಪಡೆಯದೇ, ಕೇಂದ್ರಸರ್ಕಾರ, ರಾಜ್ಯದ ಶ್ರೇಷ್ಠನ್ಯಾಯಾಲಯ, ಕೇಂದ್ರಸರ್ಕಾರದ ಪರಿಸರ ಇಲಾಖೆ, ಈ ಯಾವುದೇ ಅನುಮತಿ ಇಲ್ಲದೆ, ಈ ಒಂದು ವ್ಯವಸ್ಥೆ ಆಗಿದೆ. ಇದನ್ನು ತಪ್ಪಿಸಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಪಂಚಾಯತ್ ರಾಜ್ ಬಗ್ಗೆ ಹೇಳುವುದಾದರೆ, ನಾನು ಒಬ್ಬ ನಗರಪ್ರದೇಶದಿಂದ ಬಂದವನು. ರಾಜ್ಯಮಂತ್ರಿಗಳೂ ಇದ್ದಾರೆ, ಅಧಿಕಾರದ ವಿಕೇಂದ್ರೀಕರಣದ ಹೆಸರಿನಲ್ಲಿ, ಜಿಲ್ಲಾಪರಿಷತ್ತುಗಳನ್ನು ಪ್ರಯೋಗ ಪಶುಗಳನ್ನಾಗಿ ಮಾಡುವ ವ್ಯವಸ್ಥೆ ನಿಲ್ಲಬೇಕು. ಹೊಸದಾಗಿ ಪ್ರಾರಂಭವಾದ ವ್ಯವಸ್ಥೆ, ಜಿಲ್ಲಾಪರಿಷತ್ ಮತ್ತು ಮಂಡಲ್ ಪಂಚಾಯ್ತಿಗಳೇನಿವೆ, ಇವು ಅಧಿಕಾರದ

ಭಾರವನ್ನು ಜವಾಬ್ದಾರಿಯಿಂದ ತಾಳಲಾರದೇ ತತ್ತರಿಸುತ್ತಿವೆ. ಜೊತೆಗೆ ಇವರಿಗೆ ಕೆಲವು ಅಧಿಕಾರಗಳನ್ನು ಕೊಟ್ಟಿದ್ದೀರಿ. ಅರಣ್ಯ ಇಲಾಖೆ, ನೀರಾವರಿ ಇಲಾಖೆ, ಪಶುಸಂಗೋಪನಾ ಇಲಾಖೆ ಇವುಗಳನ್ನು ಜೀರ್ಣಿಸಿಕೊಳ್ಳಲಾರದೇ, ರೋಗಪೀಡಿತವಾಗಿವೆ. ಇವುಗಳಿಗೆ ಸರಿಯಾದ ಔಷಧಿ ಕೊಡಬೇಕು. ಸರಿಯಾದ ಚಿಕಿತ್ಸೆ ಆಗಬೇಕೆಂದು ಪ್ರಾರ್ಥನೆ ಮಾಡುತ್ತೇನೆ, 120 ಕೋಟಿ ರೂಪಾಯಿಗಳ ಜವಹರ್ ರೋಜ್‌ಗಾರ್ ಯೋಜನೆ, ರಾಜೀವ್ ಗಾಂಧಿಯವರ ಕಾರ್ಯಕ್ರಮ. ಇದರ ಅನುಷ್ಠಾನಕ್ಕೆ ಇದರ ಉಸ್ತುವಾರಿಗಾಗಿ ಕರ್ನಾಟಕ ರಾಜ್ಯದಲ್ಲಿ ಒಂದು ಸಮಿತಿ ಇತ್ತು. ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ. ಈ ಸಮಿತಿ ಇದುವರೆಗೆ ಸಭೆ ಸೇರಿ, ಈ ಕಾರ್ಯಕ್ರಮದ ವೀಕ್ಷಣೆ ಮಾಡಿಲ್ಲ. ಈ ಸಮಿತಿಯ ಆದೇಶದ ಮೇರೆಗೆ 120 ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದೆಯೇ, ಇದರ ಬಗ್ಗೆ ಮಾನ್ಯಮಂತ್ರಿಗಳು ತಿಳಿಸಬೇಕೆಂದು ಪ್ರಾರ್ಥನೆ ಮಾಡುತ್ತೇನೆ. ಕೃಷಿ ಇಲಾಖೆ ಬಗ್ಗೆ ಹೇಳುವುದಾದರೆ, ಕರ್ನಾಟಕ ರಾಜ್ಯದ ಅನ್ನದಾತ ನೇಗಿಲಯೋಗಿ ಯಾರಿದ್ದಾನೆ ಅವನ ಹೆಸರಿನಲ್ಲಿ ಇಲ್ಲಿ ಕುಳಿತು ಅಧಿಕಾರ ನಡೆಸುವ ಆಶೀರ್ವಾದವನ್ನು ನಾವು ಪಡೆದಿದ್ದೇವೆ. ಅವನ ಪರವಾಗಿ ನಾವು ಕೆಲಸ ಮಾಡಬೇಕು. ಇವತ್ತು ನಗರ ಪ್ರದೇಶಗಳಲ್ಲಿ ನಿರುದ್ಯೋಗ, ಜನಸಾಂದ್ರತೆ ಏನು ಕಾಡುತ್ತಿದೆ ಇದನ್ನು ತಪ್ಪಿಸಲು, ಬಿ.ಎ., ಬಿ.ಎಸ್‌ಸಿ. ಓದಿ ಬೀದಿ ಪಾಲಾಗುವ ಬದಲು ಕೃಷಿ ಶಾಲೆಗಳನ್ನು, ಕೃಷಿ ಕಾಲೇಜುಗಳನ್ನು ತೆಗೆಯುವುದರ ಮೂಲಕ ಶೇಕಡಾ 80ರಷ್ಟು ಇರುವ ಗ್ರಾಮಾಂತರ ಪ್ರದೇಶಗಳ ರೈತರ ಮಕ್ಕಳಿಗೆ ಇವುಗಳಲ್ಲಿ ಓದಲು ಅವಕಾಶ ಮಾಡಿಕೊಟ್ಟು ಕೃಷಿಯ ಬಗ್ಗೆ ತಿಳುವಳಿಕೆ ಕೊಟ್ಟರೆ, ಆಹಾರದ ಬರ ಹಾಗೂ ಉದ್ಯೋಗದ ಬರ ನೀಗಬಹುದೆಂದು ಹೇಳುತ್ತೇನೆ.

ಗೃಹಖಾತೆಯ ಬಗ್ಗೆ ಹೇಳುತ್ತಾ, ಅಂಬೇಡ್ಕರ್ ಜನ್ಮ ಶತಾಬ್ದಿಯನ್ನು ನಾವು ಈ ವರ್ಷ ಆಚರಿಸುತ್ತಿದ್ದೇವೆ. ಪರಿಶಿಷ್ಟ ಜಾತಿಗೆ ಸೇರಿದ ಐ.ಪಿ. ಎಸ್. ಅಧಿಕಾರಿಗಳನ್ನೂ , ರಾಷ್ಟ್ರಪತಿ ಪ್ರಶಸ್ತಿಗೆ ರಾಜ್ಯ ಸರಕಾರದವರು ಶಿಫಾರಸ್ಸು ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಸಮಾಜದ ಶಾಂತಿ ಮತ್ತು ರಕ್ಷಣೆಯ ಜವಾಬ್ದಾರಿಯನ್ನು ಹೊತ್ತಂಥ ಈ ಒಂದು ಪ್ರಮುಖ ಇಲಾಖೆಯಲ್ಲಿ 1962ನೇ ಇಸವಿಯಿಂದಲೂ ಸಿಬ್ಬಂದಿವರ್ಗದ ಹೆಚ್ಚಳ ಆಗಿಲ್ಲ. ಇದನ್ನು ಹೆಚ್ಚಳ ಮಾಡಬೇಕು ಎಂದು ಹೇಳುತ್ತೇನೆ. ಗ್ರಾಮಾಂತರ ಪ್ರದೇಶಗಳಲ್ಲಿ ಒಂದು ಪೋಲೀಸ್ ಠಾಣೆಗೆ ಒಬ್ಬರೇ ಸಬ್‌ಇನ್ಸ್‌ಪೆಕ್ಟರ್ ಇದ್ದಾರೆ. ಅದಕ್ಕೆ ಬದಲು ಇಬ್ಬರು ಸಬ್ ಇನ್‌ಸ್ಪೆಕ್ಟರ್‌ಗಳನ್ನು ಹಾಕುವಂತಹ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಮೈಸೂರು ಜಿಲ್ಲೆಯಲ್ಲಿ ಜಿಲ್ಲಾ ಕೇಂದ್ರದಲ್ಲಿ ಮಾತ್ರ ಅಗ್ನಿಶಾಮಕದಳ ಇದೆ. ಕೊಳ್ಳೇಗಾಲದಲ್ಲಿ ಅಗ್ನಿ ಅನಾಹುತ ಆದರೆ ಮೈಸೂರಿನಿಂದ ಅಗ್ನಿಶಾಮಕದಳ ಹೋಗುವ ಹೊತ್ತಿಗೆ ಅಲ್ಲಿ ಎಲ್ಲಾ ನಾಶವಾಗಿರುವಂತಹ ವಿಪರ್ಯಾಸ ಇದೆ. ಇದನ್ನು ತಪ್ಪಿಸಬೇಕು. ಪ್ರತಿಯೊಂದು ತಾಲ್ಲೂಕು ಕೇಂದ್ರಗಳಲ್ಲೂ ಕೂಡಾ ಅಗ್ನಿಶಾಮಕದಳ ಆಗಬೇಕೆಂದು ಮುಖ್ಯ ಮಂತ್ರಿಗಳಲ್ಲಿ ಒತ್ತಾಯ ಮಾಡುತ್ತೇನೆ.

ಮಾನ್ಯ ಅಧ್ಯಕ್ಷರು ಕನಿಕರ ಇಟ್ಟು ಯುವಕರಾದ ನಮಗೆ ಹೆಚ್ಚು ಹೊತ್ತು ಮಾತನಾಡಲು ಅವಕಾಶ ಕೊಟ್ಟದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಗೋಪಿನಾಥ್ ಆರ್. ಸಾಂಡ್ರಾ (ಹುಬ್ಬಳ್ಳಿ ಗ್ರಾಮಾಂತರ) :- ಸನ್ಮಾನ್ಯ ಸಭಾಧ್ಯಕ್ಷರೇ, ಈ ದಿನ ನಮ್ಮ ಸರಕಾರದ ಮಾನ್ಯ ಮಂತ್ರಿಗಳು ಹಾಗೂ ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿರುವ ಬೇಡಿಕೆಗಳನ್ನು ಸ್ವಾಗತಿಸುತ್ತಾ ಕೆಲವು ಸಲಹೆಗಳನ್ನು ಕೊಡುವುದಕ್ಕೆ ಬಯಸುತ್ತೇನೆ. ಮೊದಲು ಜಿಲ್ಲಾ ಪರಿಷತ್ ಬಗ್ಗೆ ಒಂದೆರಡು ಮಾತುಗಳನ್ನಾಡುತ್ತೇನೆ.

ಸನ್ಮಾನ್ಯ ಮಂತ್ರಿಗಳು ಜಿಲ್ಲಾ ಪರಿಷತ್ ಆಕ್ಟ್‌ನ್ನು ಓದಬೇಕು. ಅದರಲ್ಲಿ ಸೆಕ್ಷನ್ 2(9) ಮತ್ತು 138 ಓದಿದರೆ ಗೊತ್ತಾಗುತ್ತದೆ. ಕಾರ್ಪೊರೇಷನ್, ಮುನಿಸಿಪಾಲಿಟಿ, ಸ್ಯಾನಿಟರಿ ಬೋರ್ಡ್ ಮತ್ತು ನೋಟಿಫೈಡ್ ಏರಿಯಾ ಇವು ಜಿಲ್ಲಾ ಪರಿಷತ್ ವ್ಯಾಪ್ತಿಯೊಳಗೆ ಬರುವುದಿಲ್ಲ. ದಯವಿಟ್ಟು ಅದನ್ನು ಓದಿ ನಮ್ಮ ಕಾರ್ಪೊರೇಷನ್ ಏರಿಯಾ, ಮುನಿಸಿಪಾಲಿಟಿ ಏರಿಯಾ ಮತ್ತು ನೋಟಿಫೈಡ್ ಏರಿಯಾಗಳಿಗೆ ಜಿಲ್ಲಾ ಪರಿಷತ್‌ನಿಂದ ಏನು ಅನ್ಯಾಯವಾಗುತ್ತಿದೆ ಆದರಿಂದ ದೂರ ಮಾಡಬೇಕೆಂದು ಅತ್ಯಂತ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. 184ನೇ ಸೆಕ್ಷನ್ ಓದಿದರೆ, ಜಿಲ್ಲಾಪರಿಷತ್

ನವರು ನಮ್ಮ ಮೇಲೆ ಯಾವುದೇ ರೀತಿಯ ಕಂಟ್ರೋಲ್ ಮಾಡಲು ಸಾಧ್ಯವಿಲ್ಲ. ದಯವಿಟ್ಟು ಆಕ್ಟ್ ಓದಿ ಪರಿಹಾರ ಮಾಡಿಕೊಡಿ ಎಂದು ವಿನಂತಿ ಮಾಡಿಕೊಳ್ಳುತ್ತೇನೆ.

ಎರಡನೆಯದಾಗಿ ಪೋಲೀಸ್ ಇಲಾಖೆಯ ಬಗ್ಗೆ ಒಂದೇ ಒಂದು ಪಾಯಿಂಟ್ ಹೇಳುತ್ತೇನೆ. ಹುಬ್ಬಳ್ಳಿ-ಧಾರವಾಡ ಮಹಾನಗರಕ್ಕೆ ಪೋಲೀಸ್ ಕಮಿಷನರ್ ಆಫೀಸ್ ಮಾಡಿದ್ದೀರಿ. ಹುಬ್ಬಳ್ಳಿ-ಧಾರವಾಡ ಮಹಾನಗರ ಜನತೆಯ ಪರವಾಗಿ, ಶಾಸಕರ ಪರವಾಗಿ ನಾನು ಅತ್ಯಂತ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಇಂಡಿಪೆಂಡೆಂಟ್ ಪೋಲೀಸ್ ಕಮಿಷನರ್ ಅಲ್ಲಿಗೆ ಬಂದಿದ್ದಾರೆ. ಹುಬ್ಬಳ್ಳಿ-ಧಾರವಾಡ ನಗರದಲ್ಲಿ ಇವತ್ತಿನ ಪರಿಸ್ಥಿತಿ ಏನಾಗಿದೆ ಎಂದರೆ, ಕಳವು ಹೆಚ್ಚಾಗಿದೆ, ದರೋಡೆಗಳು ಆಗುತ್ತಿವೆ, ಆದುದರಿಂದ ಕೇವಲ ಅಧಿಕಾರಿಗಳನ್ನು ಹಾಕುವುದರಿಂದ ಶಾಂತಿ ನೆಲೆಸುವುದಕ್ಕೆ ಸಾಧ್ಯವಿಲ್ಲ. ಅದಕ್ಕೆ ಬೇಕಾದಂಥ ಪೋಲೀಸ್ ಪೇದೆಗಳನ್ನು ಹಾಕಬೇಕು. ಅವರು ಬೇಕಾಗಿದ್ದಾರೆ. ಆದುದರಿಂದ ಮಾನ್ಯ ಮುಖ್ಯಮಂತ್ರಿಗಳು ಆದಷ್ಟು ಬೇಗ ಪೋಲೀಸ್ ಪೇದೆಗಳನ್ನು ನೇಮಕಾತಿ ಮಾಡಿ ಅಲ್ಲಿಗೆ ಕೊಡಬೇಕು. ಪೋಲೀಸರನ್ನು ನೇಮಕಾತಿ ಮಾಡಿ ಅಲ್ಲಿಗೆ ಕೊಡಬೇಕು. ಪೋಲೀಸರನ್ನು ನೇಮಕಾತಿ ಮಾಡುವಾಗ ರೆಕ್ರೂಟ್‌ಮೆಂಟ್ ಕಮಿಟಿ ಮಾಡಿ ಕೊಟ್ಟರೆ ಅತ್ಯಂತ ಉಪಕಾರವಾಗುತ್ತದೆಂದು ಹೇಳಬಯಸುತ್ತೇನೆ. ಮತ್ತೊಂದು ಮಾತು ಏನೆಂದರೆ ಹುಬ್ಬಳ್ಳಿ ಮತ್ತು ಧಾರವಾಡ ಮಹಾನಗರದಲ್ಲಿ ಬಡಾವಣೆಗಳು ಸಾಕಷ್ಟು ಇವೆ. ಈಗ ಇರತಕ್ಕಂಥ ಪೋಲೀಸ್ ಠಾಣೆಗಳನ್ನು ವಿಂಗಡಣೆ ಮಾಡಿದ್ದಾರೆ. ಅದು ಸರಿಯಾಗಿ ಇಲ್ಲ. ಆದ್ದರಿಂದ ನಮ್ಮ ಹುಬ್ಬಳ್ಳಿ ಮತ್ತು ಧಾರವಾಡ ಮಹಾನಗರಕ್ಕೆ ಇನ್ನೂ 3-4 ಪೋಲೀಸ್ ಠಾಣೆಗಳು ಬೇಕಾಗುತ್ತವೆ. ಆ ಪೋಲೀಸ್ ಠಾಣೆಗಳನ್ನು ಮಂಜೂರು ಮಾಡಬೇಕೆಂದು ನಾನು ಮಾನ್ಯ ಸಚಿವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇನ್ನು ಫಾರೆಸ್ಟ್ ಖಾತೆ ಬಗ್ಗೆ ಒಂದೆರಡು ಮಾತುಗಳನ್ನು ನಾನು ಹೇಳುತ್ತೇನೆ. ಫಾರೆಸ್ಟ್ ಖಾತೆಯಲ್ಲಿ ಎಲ್ಲಾ ಅಧಿಕಾರ ಒಂದೇ ಕಡೆ ಕೇಂದ್ರೀಕೃತವಾಗಿದೆ. ಪೋಲೀಸ್ ಖಾತೆಯಲ್ಲಿ ಐ.ಜಿ. ಹೇಗೆ ಇದೆಯೋ ಹಾಗೆ ಈ ಫಾರೆಸ್ಟ್ ಖಾತೆಯಲ್ಲೂ 3-4 ವಿಭಾಗಗಳನ್ನು ಮಾಡಿದರೆ ಆಡಳಿತ ಇನ್ನೂ ಚುರುಕುಗೊಳ್ಳುತ್ತದೆ ಎನ್ನುವ ಮಾತನ್ನು ನಾನು ಹೇಳುತ್ತೇನೆ. ಇಷ್ಟು ಮಾತ್ರ ನಾನು ಹೇಳುತ್ತೇನೆ ಕಾರಣವೇನೆಂದರೆ ಸಮಯ ಇಲ್ಲದೆ ಇರುವ ಸಲುವಾಗಿ ನಾನು ಮಾನ್ಯ ಮಂತ್ರಿಗಳಿಗೆ ಬರೀ ಪಾಯಿಂಟ್ಸ್ ಮಾತ್ರ ಹೇಳಿದ್ದೇನೆ. ಮಾನ್ಯ ಅಧ್ಯಕ್ಷರ ಅಪ್ಪಣೆ ಮೇರೆಗೆ ನಾನು ಹೆಚ್ಚಿನ ವೇಳೆ ತೆಗೆದುಕೊಳ್ಳದೆ ಒಂದೆರಡು ಮಾತುಗಳನ್ನು ಮಾತ್ರ ನಾನು ಹೇಳಿದ್ದೇನೆ. ನನಗನ್ನಿಸುತ್ತದೆ ನಮ್ಮ ಮಾನ್ಯ ಮಂತ್ರಿಗಳು ಒಂದು ಎಳೆ ಸಿಕ್ಕಿದರೆ ಸಾಕು ಪೂರ್ತಿ ನುಂಗುವ ಶಕ್ತಿಯುಳ್ಳವರಾಗಿದ್ದಾರೆ. ನಾನು ಏನೇನು ಸಲಹೆಗಳನ್ನು ಮಾನ್ಯ ಮಂತ್ರಿಗಳಿಗೆ ಕೊಟ್ಟಿದ್ದೇನೋ ಅವುಗಳೆಲ್ಲವನ್ನೂ ಕಾರ್ಯರೂಪಕ್ಕೆ ತರುವುದಕ್ಕೆ ಪ್ರಯತ್ನ ಮಾಡಿ ಎಂದು ಹೇಳಿ ನನಗೆ ಇಷ್ಟು ಮಾತನಾಡಲು ಅವಕಾಶವನ್ನು ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ..

† ಡಾ. ಜಿ. ಪರಮೇಶ್ವರ್ (ಮಧುಗಿರಿ):- ಮಾನ್ಯ ಅಧ್ಯಕ್ಷರೇ, ಕಾಲಾವಕಾಶ ಬಹಳ ಕಡಿಮೆ ಇದೆ ಎಂದು ತಾವು ಆಗಲೇ ಆದೇಶ ಕೊಟ್ಟಿದ್ದೀರಿ. ಅದಕ್ಕೆ ನಾನು ಕೃಷಿ ಇಲಾಖೆ ಬೇಡಿಕೆಗಳನ್ನು ಸ್ವಾಗತ ಮಾಡುತ್ತಾ ಕೆಲವು ಸಲಹೆಗಳನ್ನು ಮಾತ್ರ ಮಾನ್ಯ ಮಂತ್ರಿಗಳಿಗೆ ತಮ್ಮ ಮೂಲಕ ಕೊಡುವುದಕ್ಕೆ ಇಷ್ಟಪಡುತ್ತೇನೆ. ಮೊದಲನೆಯದಾಗಿ ಈ ವಾರ್ಷಿಕ ವರದಿಯಲ್ಲಿ ಏನು ಕೊಟ್ಟಿದ್ದಾರೆ ಎಂದರೆ ಪ್ರೊಡಕ್ಷನ್ ಬಗ್ಗೆ ನೋಡುವುದಾದರೆ ಮಾನ್ಯ ಅಧ್ಯಕ್ಷರೇ ಕಳೆದ 10 ವರ್ಷಗಳಿಂದ ಯಾವುದೇ ರೀತಿಯ ಇಂಪ್ರೂವ್‌ಮೆಂಟ್ ಪ್ರೊಡಕ್ಷನ್‌ನಲ್ಲಿ ಆಗಿಲ್ಲವೆಂದು ನಾನು ಮಾನ್ಯ ಮಂತ್ರಿಗಳಿಗೆ ತಮ್ಮ ಮೂಲಕ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಅದಕ್ಕೆ ಏನೂ ಎಕ್ಸ್‌ಪ್ಲನೇಶನ್ಸ್ ಕೊಡುವುದಕ್ಕೆ ಆಗುವುದಿಲ್ಲ. ಮಾನ್ಯ ಮಂತ್ರಿಗಳು ಇಲಾಖೆ ಜೊತೆ ಚರ್ಚೆ ಮಾಡಿ ಇದಕ್ಕೆ ಏನಾದರೂ ಒಂದು ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಹೇಳುತ್ತೇನೆ. ಎರಡನೆಯದಾಗಿ ಈ ಸಾಯಿಲ್ ಕನ್‌ಸರ್‌ವೇಷನ್ ಬಗ್ಗೆ ಅನೇಕ ಜನ ಮಾನ್ಯ ಸ್ನೇಹಿತರು ಈ ಬಗ್ಗೆ ಮಾತನಾಡಿದ್ದಾರೆ. ಮಾನ್ಯ ಸದಸ್ಯರಾದ ಹರ್ಷಕುಮಾರ ಗೌಡರು ಮತ್ತು ಶ್ರೀಮಾನ್ ಬನ್ನಿಕೋಡ್‌ರವರು ಮಾತನಾಡುತ್ತಾ ಹೇಳುತ್ತಿದ್ದರು – ಯಾರ್ಯಾರು ಅಲ್ಲಿಗೆ ಬರುತ್ತಾರೆಂದು. ಅನೇಕ ಜನ ಅಧಿಕಾರಿಗಳು ಎಷ್ಟೋ ಸಾರಿ ನಾನು ಕಂಡಿದ್ದೇನೆ. ಇದ್ದವರೇ

ಅಲ್ಲಿಗೆ ಮತ್ತೆ ಮತ್ತೆ ಬರುತ್ತಾರೆ. ಮಾನ್ಯ ಅಧ್ಯಕ್ಷರೇ ಈ ಹಿಂದೆ ಯಾರು ಸಾಯಿಲ್ ಕನ್‌ಸರ್ ವೇಶನ್‌ನಲ್ಲಿ ಕೆಲಸ ಮಾಡುತ್ತಿದ್ದರೋ ಅವರು ಮತ್ತೆ ಅಲ್ಲಿಗೆ ಬರುತ್ತಾರೆ. ಮಾನ್ಯ ಕೃಷಿ ಸಚಿವರು ಈ ಕಡೆ ಸ್ವಲ್ಪ ಗಮನಹರಿಸಬೇಕು. ಇದನ್ನು ತಾವು ಗಮನದಲ್ಲಿಟ್ಟುಕೊಂಡು ಬದಲಾವಣೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇನ್ನು ಡ್ರೈ ಲ್ಯಾಂಡ್ ಡೆವಲಪ್‌ಮೆಂಟ್ ಬೋರ್ಡ್ ಇದೆ. ಸ್ವಾಮಿ, ಅಲ್ಲಿ ಇರತಕ್ಕಂಥ ಸಿಬ್ಬಂದಿಗೆ ಕಂಪೇರ್ ಮಾಡಿ ನೋಡಿದರೆ ಅಲ್ಲಿ ಇರತಕ್ಕಂಥ ಡೈರೆಕ್ಟರ್‌ಗೆ ಕಾರು ಬಂಗಲೆ ಅನೇಕ ಸೌಲಭ್ಯಗಳು ಇವೆ. ಅಲ್ಲಿ ಎ.ಸಿ.ಎಫ್.ಆರ್.ಒ. ಮುಂತಾದ ಅಧಿಕಾರಿಗಳು ಇದ್ದಾರೆ. ಇಷ್ಟು ಜನ ಅಧಿಕಾರಿಗಳು ಮಾಡುವ ಕೆಲಸ ಬರೀ ಮೂರು ಸಾವಿರ ಹೆಕ್ಟೇರ್ ಜಮೀನನ್ನು ಮಾತ್ರ ನೋಡಿಕೊಳ್ಳುವುದು. ಇದಕ್ಕೆ ಇಷ್ಟೊಂದು ಸಿಬ್ಬಂದಿ ಬೇಕೆ? ಬೇಡವೇ ಎನ್ನುವುದನ್ನು ಮಾನ್ಯ ಸಚಿವರು ಗಮನ ಹರಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಅಲ್ಲಿ ಇರತಕ್ಕಂಥ ಸಿಬ್ಬಂದಿಯನ್ನು ಕಡಿಮೆ ಮಾಡಿ, ಮುಖ್ಯವಾದ ಇಲಾಖೆಗೆ ಇವರನ್ನು ತೆಗೆದುಕೊಳ್ಳಬೇಕೆಂದು ನಾನು ಸಲಹೆ ಮಾಡುತ್ತೇನೆ. ಇನ್ನು ಮಾನ್ಯ ಅಧ್ಯಕ್ಷರೇ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ನನಗೆ ತಿಳಿದ ಮಟ್ಟಿಗೆ ಗ್ರಾಮಾಂತರ ಪ್ರದೇಶದಲ್ಲಿ ಅಗ್ರಿಕಲ್ಚರ್ ಬೇಸ್ಡ್ ಇಂಡಸ್ಟ್ರೀಸ್ ಮಾಡಬೇಕೆನ್ನುವ ಉದ್ದೇಶ ಇಟ್ಟುಕೊಂಡು ಮಾಡಿದರು. ಅದು ಇವತ್ತು ಆಗಲಿಲ್ಲವೆಂದು ನನಗನ್ನಿಸುತ್ತದೆ.. ಅದು ಸರಿಯಾಗಿ ಆಗಲಿಲ್ಲ. ಇದರಿಂದ ಪ್ರತಿಯೊಂದು ಜಿಲ್ಲೆಯಲ್ಲೂ ಅಲ್ಲಿ ಸಿಗತಕ್ಕಂಥ ರಿಸೋರ್ಸ್‌ನ್ನು ಉಪಯೋಗಿಸಿಕೊಂಡು ಆಗ್ರೋ ಬೇಸ್ಡ್ ಇಂಡಸ್ಟ್ರೀಸ್ ಮಾಡಬೇಕೆಂದು ನಾನು ಹೇಳುತ್ತೇನೆ. ಈ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ಮಾನ್ಯ ಮಂತ್ರಿಗಳಿಗೆ ಹೇಳುತ್ತೇನೆ. ಇನ್ನು ಮತ್ತೊಂದು ಮಾತು, ಸೀಡ್ಸ್ ಆಕ್ಟ್ ಏನು ಇದೆ ಅದಕ್ಕೆ ಅಮೆಂಡ್‌ಮೆಂಟ್ ಮಾಡಬೇಕು. ಈ ಸೀಡ್ಸ್ ಆಕ್ಟ್‌ನ್ನು ವಯಲೇಟ್ ಮಾಡಿದರೆ ಅವರಿಗೆ ಇರುವಂತಹ ಶಿಕ್ಷೆಯನ್ನು ನೋಡಿದರೆ ನನಗೆ ನಗು ಬರುತ್ತದೆ. ಅವರಿಗೆ ನೂರು ರೂಪಾಯಿಗಳಿಂದ ಮುನ್ನೂರು ರೂಪಾಯಿಗಳವರೆಗೆ ಫೈನ್ ಹಾಕುವುದು. ಆದರೆ ಇದರಿಂದ ನಷ್ಟ ಎಷ್ಟು ಆಗುತ್ತದೆ ಎನ್ನುವುದನ್ನು ನೋಡಿದರೆ ನೂರಾರು ಎಕರೆ, ಸಾವಿರಾರು ಎಕರೆ ಜಮೀನಿನಲ್ಲಿ ರೈತರಿಗೆ ನಷ್ಟವಾಗುತ್ತದೆ. ಈ ನಷ್ಟಕ್ಕೆ ಬರೀ ನೂರು ರೂಪಾಯಿಯಿಂದ ಮುನ್ನೂರು ರೂಪಾಯಿ ಫೈನ್ ಹಾಕಿದರೆ ಸಾಕೇ? ಆದ್ದರಿಂದ ಈ ಸೀಡ್ಸ್ ಆಕ್ಟ್‌ಗೆ ತಿದ್ದುಪಡಿ ತರಬೇಕೆಂದು ನಾನು ಮಾನ್ಯಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಇನ್ನು ಕೃಷಿ ವಿಶ್ವವಿದ್ಯಾನಿಲಯಗಳ ಬಗ್ಗೆ ನಾನು ಹೇಳುವುದಾದರೆ ನಮ್ಮ ರಾಜ್ಯದಲ್ಲಿ ಎರಡು ಕೃಷಿ ವಿಶ್ವವಿದ್ಯಾನಿಲಯಗಳು ಇವೆ. ಇಲ್ಲಿ ಟೀಚಿಂಗ್ ಮತ್ತು ರೀಸರ್ಚ್ ಮಾಡತಕ್ಕಂಥಾದ್ದರಲ್ಲಿ ಹೆಚ್ಚು ಮಾಡಬೇಕೆಂದು ನನಗನ್ನಿಸುತ್ತದೆ. ನಾನೂ ಸಹ ಕೃಷಿ ವಿಶ್ವವಿದ್ಯಾನಿಲಯದಲ್ಲಿ ಒಬ್ಬ ಸದಸ್ಯನಾಗಿ ಕೆಲವು ದಿವಸ ಕೆಲಸ ಮಾಡಿದ್ದೇನೆ. ಕಳೆದ ನಾಲ್ಕೂವರೆ ವರ್ಷಗಳಿಂದ ಅಲ್ಲಿ ಆಗತಕ್ಕಂಥ ರೀಸರ್ಚ್ ಬಗ್ಗೆ ಮತ್ತು ಟೀಚಿಂಗ್ ಬಗ್ಗೆ ನೋಡಿದರೆ ನಿಜವಾಗಿಯೂ ಬಹಳ ನೋವು ಆಗುತ್ತದೆ. ರೈತರಿಗೆ ಅನುಕೂಲವಾಗಬೇಕೆಂಬ ಉದ್ದೇಶವನ್ನು ಇಟ್ಟುಕೊಂಡು ನಾವು ವಿಶ್ವವಿದ್ಯಾನಿಲಯಗಳನ್ನು ಮಾಡಿದ್ದೇವೆ. ನಮ್ಮ ರೈತರುಗಳಿಗೆ ಇದರಿಂದ ಅನುಕೂಲವಾಗಬೇಕು. ನಮ್ಮ ಅಗ್ರಿಕಲ್ಚರಲ್ ಎಕಾನಮಿ ಇಂಪ್ರೂವ್ ಆಗಬೇಕೆಂಬ ಉದ್ದೇಶ ಇಟ್ಟುಕೊಂಡು ಏನು ಮಾಡಿದ್ದೇವೆಯೋ ಅದು ಸರಿಯಾಗಿ ಆಗುತ್ತಿಲ್ಲ. ಇದರ ಜೊತೆಗೆ ಮಾನ್ಯ ಮಂತ್ರಿಗಳು ಪ್ರೋ. ಚಾನ್ಸಲರ್ ಆಗಿದ್ದಾರೆ. ಮಾನ್ಯ ಮಂತ್ರಿಗಳು ಇದರ ಕಡೆ ಗಮನ ಹರಿಸಬೇಕು. ಈ ಕೃಷಿ ವಿಶ್ವವಿದ್ಯಾನಿಲಯದ ಕೆಲಸಗಳು ಏನು ಇವೆಯೋ ಅದನ್ನು ದಯಮಾಡಿ ರಿವ್ಯೂ ಮಾಡಬೇಕು. ಕಾಲಕಾಲಕ್ಕೆ ರಿವ್ಯೂ ಮಾಡಿ ನಾವು ಅವರಿಂದ ಏನು ಎಕ್ಸ್‌ಪೆಕ್ಟ್ ಮಾಡುತ್ತೇವೆಯೋ ಅದನ್ನು ಮಾಡಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನೂ ಒಂದು, ಕೃಷಿ ವಿಶ್ವವಿದ್ಯಾನಿಲಯದ ವಿಚಾರದಲ್ಲಿ, ಕಳೆದ ಸರ್ಕಾರದವರು ಕರ್ನಾಟಕ ಅಗ್ರಿಕಲ್ಚರಲ್ ಯೂನಿವರ್ಸಿಟಿ ಆಕ್ಟ್ ಎಂದು ಮಾಡಿ ಅದಕ್ಕೆ ಒಂದು ಅಮೆಂಡ್‌ಮೆಂಟ್ ತಂದಿದ್ದಾರೆ. ಸನ್ಮಾನ್ಯ ಅಧ್ಯಕ್ಷರೇ, ಹಿಂದೆ ಇದ್ದ ಆಕ್ಟ್ ಪ್ರಕಾರ ಅಗ್ರಿಕಲ್ಚರಲ್ ಯೂನಿವರ್ಸಿಟಿಯಲ್ಲಿ ಲೇಜಿಸ್ಲೇಚರ್ ರೆಪ್ರೆಸೆಂಟೆಟೀವ್ ಇರುತ್ತಿದ್ದರು.. ಈ ಆಕ್ಟ್‌ಗೆ ಹೊಸದಾಗಿ ಅಮೆಂಡ್‌ಮೆಂಟ್ ತಂದಾಗ ಲೆಜಿಸ್ಲೇಟರ್ಸ್‌ನ್ನು ತೆಗೆದುಬಿಟ್ಟಿದ್ದಾರೆ. ಇನ್ನೂ ಒಂದು ಆಶ್ಚರ್ಯದ ಸಂಗತಿ ಎಂದರೆ, ಹಾರ್ಟಿಕಲ್ಚರ್ ಡಿಪಾರ್ಟ್‌ಮೆಂಟಿನ ಡೈರೆಕ್ಟರ್ ಮತ್ತು ಅಗ್ರಿಕಲ್ಚರಲ್

ಡಿಪಾರ್ಟ್‌ಮೆಂಟಿನ ಡೈರೆಕ್ಟರ್‌ಗಳನ್ನು ಸಹ ತೆಗೆದು ಬಿಟ್ಟಿದ್ದಾರೆ. ಇವರುಗಳೆಲ್ಲರೂ ಅಗ್ರಿಕಲ್ಚರಲ್ ಯೂನಿವರ್ಸಿಟಿಯಲ್ಲಿ ರೆಪ್ರೆಸೆಂಟೆಟೀವ್ ಗಳಾಗಿರುವುದು ಬಹಳ ಸೂಕ್ತವಾಗಿದೆ. ಆಮೇಲೆ, ಪರಿಶಿಷ್ಟ ಜನಾಂಗದವರಿಂದ ಒಬ್ಬೊಬ್ಬರನ್ನು ಪ್ರತಿನಿಧಿಗಳನ್ನಾಗಿ ಮಾಡಿದ್ದಾರೆ. ಇದು ನನಗೆ ಅರ್ಥವಾಗುತ್ತಿಲ್ಲ. ಪುನಃ ಈ ಕೃಷಿ ವಿಶ್ವವಿದ್ಯಾನಿಲಯದ ಆಕ್ಟ್‌ಗೆ ಅಮೆಂಡ್‌ಮೆಂಟ್ ತರಬೇಕೆಂದು ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಆಮೇಲೆ, ಇನ್ನೂ 4-5 ಕೃಷಿ ಕಾಲೇಜುಗಳನ್ನು ಕೊಡುತ್ತೇವೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ನಾನು ಇದನ್ನು ಸ್ವಾಗತ ಮಾಡುತ್ತೇನೆ. ನಾನು ಒಂದು ಪ್ರಶ್ನೆ ಕೇಳುವುದೇನೆಂದರೆ, ಈಗಾಗಲೇ ಇದತಕ್ಕಂಥ ಕಾಲೇಜುಗಳಿಗೆ ಮತ್ತು ವಿಶ್ವವಿದ್ಯಾನಿಲಯಗಳಿಗೆ ಸರಿಯಾಗಿ ಹಣವನ್ನು ಕೊಡುತ್ತಿಲ್ಲ. ಪ್ರತಿ ತಿಂಗಳು ಅಲ್ಲಿನ ನೌಕರರುಗಳು ಸ್ಯಾಲರಿಯನ್ನು ತೆಗೆದುಕೊಳ್ಳಬೇಕಾದರೆ 8ನೇ ತಾರೀಖಾಗುತ್ತದೆ. ಗ್ರ್ಯಾಂಟ್ ಮೇಲೆ ಇವರೆಲ್ಲಾ ಸ್ಯಾಲರಿ ತೆಗೆದುಕೊಳ್ಳುತ್ತಿರುವುದರಿಂದ ಇದು ಬಹಳ ಕಷ್ಟವಾಗಿದೆ. ಆದುದರಿಂದ, ಇನ್ನು ಮುಂದೆ, ಕಾಲೇಜು ಗಳಿಗೆ ಮತ್ತು ವಿಶ್ವವಿದ್ಯಾನಿಲಯಗಳಿಗೆ ಕೊಡಬೇಕಾದ ಹಣವನ್ನು ಬಜೆಟ್‌ನಲ್ಲಿ ಸೇರಿಸಿ ಅವುಗಳಿಗೆ ಬೇಕಾದಷ್ಟು ಹಣವನ್ನು ಸೂಕ್ತರೀತಿಯಲ್ಲಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನೂ ಒಂದು, ಮಾನ್ಯ ದೇವರಾಜ್ ಅರಸರ ಸರ್ಕಾರ ಇದ್ದಾಗ ಒಂದು ಕಾರ್ಯಕ್ರಮವನ್ನು ಮಾಡಿದ್ದರು. ಏನೆಂದರೆ, ಸೆಲ್ಫ್ ಎಂಪ್ಲಾಯ್‌ಮೆಂಟ್ ಸ್ಕೀಮ್ ಮಾಡಬೇಕೆಂದು, ಕೃಷಿ ಪದವೀಧರರಾಗಿರುವವರಿಗೆ, 10 ಎಕರೆ ಜಮೀನು ಕೊಟ್ಟು ವ್ಯವಸಾಯಕ್ಕೆ ಪ್ರೋತ್ಸಾಹ ಕೊಡಬೇಕೆಂದು ಮಾಡಿದ್ದರು. ಅದು ಅಲ್ಲಿಗೆ ನಿಂತು ಹೋಯಿತು. ಪುನಃ ಆ ಸ್ಕೀಮ್‌ನ್ನು ಮಾಡಿ ಅನ್‌ಎಂಪ್ಲಾಯ್ಡ್ ಗ್ರ್ಯಾಜುಯೇಟ್ಸ್ ಯಾರು ಇರುತ್ತಾರೋ ಅವರುಗಳಿಗೆ 10 ಎಕರೆ ಜಮೀನು ಕೊಟ್ಟು ಅವರ ಮೂಲಕ ಕೃಷಿ ಅಭಿವೃದ್ಧಿ ಮಾಡಿಸಬೇಕು. ಈ ರೀತಿ ಮಾಡುವುದರಿಂದ ಹಳ್ಳಿಗಾಡು ಪ್ರದೇಶಗಳಲ್ಲಿ ಕೃಷಿ ಅಭಿವೃದ್ಧಿಯಾಗುವುದಕ್ಕೆ ಕಾರಣವಾಗುತ್ತದೆ. ಇದನ್ನು ಮಾನ್ಯ ಮಂತ್ರಿಗಳು ಪರಿಶೀಲನೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇಷ್ಟು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಜಿ.ಎಸ್. ಆಚಾರ್ (ಬೈಂದೂರ್):- ಮಾನ್ಯ ಅಧ್ಯಕ್ಷರೇ, ಸದನದಲ್ಲಿ ಮಂಡಿಸಿರುವ ವಿವಿಧ ಸಚಿವರ ವಿವಿಧ ಇಲಾಖೆಗಳ, ವಿವಿಧ ಅಭಿಯಾಚನೆಗಳ ಮೇಲೆ ಕೆಲವೇ ಪಾಯಿಂಟ್‌ಗಳನ್ನು ಸೂಚಿಸಲಿಕ್ಕೆ ನಾನು ಬಯಸುತ್ತೇನೆ. ಮೊದಲನೆಯದಾಗಿ ಪ್ರವಾಸೋದ್ಯಮ.

ಅಧ್ಯಕ್ಷರು:- ಅದು ಇಲ್ಲ.

ಶ್ರೀ ಜಿ. ಎಸ್ ಆಚಾರ್:- ಆದರೂ ಹೇಳಿಬಿಡುತ್ತೇನೆ. ಪ್ರವಾಸೋದ್ಯಮದಲ್ಲಿ 1990-91ನೇ ಇಸವಿಯಲ್ಲಿ ಕಾಮಗಾರಿಗಳನ್ನು ಮಾಡುವುದಕ್ಕಾಗಿ ಕೇಂದ್ರಕ್ಕೆ ಸೂಚನೆ ಮಾಡಿದ್ದು 15 ಯೋಜನೆಗಳು. ಬಹಳ ಸುಂದರವಾಗಿ, ಒಂದು ಕಡೆ ಹೊಳೆ, ಒಂದು ಕಡೆ ಸಮುದ್ರ ಇರುವ ಜಗತ್ತಿನಲ್ಲಿ ಎಲ್ಲೂ ಕಾಣುವುದಕ್ಕೆ ಸಿಗದೇ ಇರುವ ಕಡಲ ತೀರ ನನ್ನ ಕ್ಷೇತ್ರದಲ್ಲಿ ಇದೆ. ಹಿಂದೆ ಎಲ್ಲಾ ಮಂತ್ರಿಗಳು ಆಶ್ವಾಸನೆ ಕೊಟ್ಟಿದ್ದಾರೆ - ಅಲ್ಲಿ ಪ್ರವಾಸೋದ್ಯಮ ಕುರಿತಾಗಿ ಒಂದು ಕಾಟೇಜ್ ಮಾಡಲಿಕ್ಕೆ ಸರ್ಕಾರ ಯೋಚನೆ ಮಾಡಬೇಕು.

ಇನ್ನು ಗ್ರಾಮೀಣಾಭಿವೃದ್ಧಿ. ಇದು ತುಳಿತಕ್ಕೊಳಗಾದವರ ಕೈಗೆ ಭವಿಷ್ಯದ ನಿರ್ಣಯದ ಹಕ್ಕು ಕೊಡುತ್ತೇನೆಂದು ಹೇಳಿದ್ದುದು. ಆದರೆ ಇವತ್ತು ಆ ಶಕ್ತಿ ಬಂದದ್ದು ಪಾಳೇಗಾರರಿಗೆ ಪ್ರಬಲರ ಕೈಗೆ. ಇದಕ್ಕೆ ಒಳ್ಳೆಯ ಕಾನೂನುಗಳನ್ನು ತರಬೇಕು. ಗ್ರಾಮಸಭೆ ಇಡೀ ಮಸೂದೆಯ ಕೇಂದ್ರ ಬಿಂದುವೆಂದು ಅವತ್ತು ಮಂತ್ರಿಗಳು ಹೇಳಿದ್ದರು. ಇವತ್ತು ಅದು ನಿಷ್ಕ್ರೀಯ. ಅದನ್ನು ಸಕ್ರಿಯ ಮಾಡಬೇಕು. ಆ ಮೇಲೆ ಸಾಮಾಜಿಕ ನ್ಯಾಯ, ಬಡತನದ ನಿವಾರಣೆ ಇವುಗಳಿಗೆ ಅಲ್ಲಿ ಆದ್ಯತೆ ಇರಬೇಕಾಗಿತ್ತು. ಗ್ರಾಮಸಭೆಗಳು ಬರೀ ಅರ್ಜಿ ಕೊಡುವ ಸಭೆಗಳಾಗಿವೆ. ಅನುಷ್ಠಾನದಲ್ಲಿ ನಮಗೆ ಅದು ಗೊತ್ತಾಗುತ್ತದೆ. ಬಡವರ ಕಾರ್ಯಕ್ರಮಗಳು ಅನುಷ್ಠಾನಕ್ಕೆ ಬರುತ್ತಿಲ್ಲ ಎನ್ನುವುದಕ್ಕೆ ಕಳೆದ ವರ್ಷ ಐಆರ್‌ಡಿಪಿ ನೂರು ಬಾವಿ ಕಾರ್ಯಕ್ರಮ, ಜೀತವಿಮುಕ್ತಿ, ಅಂತ್ಯೋದಯ, ಪಶ್ಚಿಮಘಟ್ಟ ಕಾರ್ಯಕ್ರಮ, ಕೊಳವೆಬಾವಿ, ಕಿರುನೀರು ಸರಬರಾಜು, ಗ್ರಾಮೀಣ ನಿರ್ಮಲೀಕರಣ ಇಷ್ಟೂ ಸೇರಿ 993 ಲಕ್ಷ.

ಇದು ಗುರಿಗಿಂತ ಕಡಿಮೆಯಾಗಿದೆ ಎಂದು ನಮಗೆ ಅರ್ಥವಾಗುತ್ತದೆ. ಇದನ್ನು ಸರಿಪಡಿಸಬೇಕು. ಆಮೇಲೆ ಕೆಲವು ಜಿಲ್ಲಾ ಪರಿಷತ್‌ಗಳು ಸರ್ಕಾರದ ಅನುದಾನ ಸಾಕಾಗುತ್ತಿಲ್ಲವೆಂದು ಅವರೇ ಯೋಜನೆ ರೂಪಿಸುತ್ತಾರೆ. ಉದಾಹರಣೆಗೆ ದಕ್ಷಿಣ ಕನ್ನಡದ ಜಿಲ್ಲೆಯಲ್ಲಿ ಬ್ಯಾಂಕಿನಿಂದ 10 ಕೋಟಿ ಸಾಲ ಪಡೆದು ಉತ್ಪಾದನೆ ಮಾಡುವಂತಹ ಕೆಲವು ಯೋಜನೆಗಳು, ಸೇತುವೆ, ಮಿನಿ ವಿದ್ಯುತ್ ಸ್ಥಾವರಗಳು. ಇವೆಲ್ಲ ಲಾಭ ಪಡೆಯುವಂತಹ ಯೋಜನೆಗಳು. ಸಾಲ ಪಡೆಯಲು ಪರ್ಮಿಷನ್ ಕೇಳಿದರೂ ಆ ಅರ್ಜಿ ಸರ್ಕಾರಕ್ಕೆ ಬಂದು ಮೂರು ವರ್ಷವಾಯಿತು. ಇನ್ನೂ ಆಗಿಲ್ಲ. ಹಿಂದಿನ ವರ್ಷ ಬರೀ ದಕ್ಷಿಣ ಕನ್ನಡ ಏಕೆ ಇಡೀ ಕರ್ನಾಟಕಕ್ಕೆ ನೋಡೋಣ ಎಂದು ಹೇಳಿದ್ದರು. ಸ್ಯಾಂಪಲಾಗಿ ಪ್ರಯತ್ನ ಮಾಡಿ, ಆಮೇಲೆ ಕರ್ನಾಟಕದಲ್ಲಿ ನೋಡೋಣ. ಆದ್ದರಿಂದ ಅದಕ್ಕೆ ಮಂಜೂರಾತಿ ಕೊಡಿ. ಇನ್ನು ಅರಣ್ಯ – ಕಾಡು ಉತ್ಪತ್ತಿ ಎಂದು ಸರ್ಕಾರ ರಬ್ಬರು ಬೆಳೆಯಬೇಕೆಂದು ಘೋಷಣೆ ಮಾಡಿಬಿಟ್ಟರು. ಆದರೆ ರೈತರು ಬೆಳೆಯುವುದು ಕಾಡು ಉತ್ಪತ್ತಿಯಾದ್ದರಿಂದ ಅದನ್ನು ಗೇಟ್‌ನಲ್ಲಿ ಹಿಡಿಯಲು ಶುರು ಮಾಡಿದರು. ಈ ಬಗ್ಗೆ ನಮ್ಮ ಸದಸ್ಯರೊಬ್ಬರು ಪ್ರಶ್ನೆ ಹಾಕಿದಾಗ ಕಾನೂನಿನಲ್ಲಿ ಹಾಗಿದೆ ಎಂದು ಹೇಳಿದರು. ಆದ್ದರಿಂದ ಇದರಿಂದ ರೈತರಿಗೆ ಆಗಿರುವ ತೊಂದರೆಯನ್ನು ನಿವಾರಿಸಿ ಇದನ್ನು ಕೃಷಿ ಉತ್ಪನ್ನ ಎಂದು ಅಮೆಂಡ್‌ಮೆಂಟ್ ತರಬೇಕು. ಆ ಮೇಲೆ ಕರ್ನಾಟಕ ಗೇರು ಅಭಿವೃದ್ಧಿ ನಿಗಮದಿಂದ ಒಂದು ಫ್ಯಾಕ್ಟರಿ ಆಗಿದೆ ನನ್ನ ಕ್ಷೇತ್ರದಲ್ಲಿ. ಆದರೆ ಇನ್ನೂ ಅದು ಚೆನ್ನಾಗಿ ನಡೆಯಬೇಕು. ಆ ಮೇಲೆ ಪಶು ಸಂಗೋಪನೆ, ಕೃಷಿ ಮತ್ತು ತೋಟಗಾರಿಕೆಗಳ ಬಗ್ಗೆ ಆಗಿರುವ ವೈಜ್ಞಾನಿಕ ಸಂಶೋಧನೆಯ ಲಾಭ ಹಳ್ಳಿಗಳಿಗೆ ಸಿಗಬೇಕು. ರೈತರಿಗೆ ಅವು ಮಾರ್ಗದರ್ಶಕವಾಗಿರಬೇಕು. ಇದಕ್ಕೆ ಇಲಾಖೆಗೆ ಹೆಚ್ಚು ಹಣ ಒದಗಿಸಬೇಕು. ಇನ್ನೊಂದೇನೆಂದರೆ ಡಿಸೆಂಬರ್ ಅಂತ್ಯದಲ್ಲಿ ನೋಡಿದರೆ ಬಜೆಟ್‌ನಲ್ಲಿ ಇಟ್ಟ ಹಣದಲ್ಲಿ ಅರ್ಧವಾದರೂ ಖರ್ಚಾಗಿಲ್ಲ. ಇದು ಎಲ್ಲಾ ಇಲಾಖೆಗಳಿಗೂ ಅನ್ವಯಿಸುತ್ತದೆ. ಕೊನೆಯ ಮೂರು ತಿಂಗಳಿನಲ್ಲಿ ತರಾತುರಿಯಲ್ಲಿ ಖರ್ಚು ಮಾಡಿ ಕೆಲವು ಸಲ ಲ್ಯಾಪ್ಸಾಗುತ್ತದೆ. ಆಡಳಿತದಲ್ಲಿ ಹೀಗೆ ಕೊನೆ ಸಮಯದಲ್ಲಿ ಹಣ ಖರ್ಚು ಮಾಡುವ ಪರಿಸ್ಥಿತಿ ಹೋಗಬೇಕು ಮತ್ತು ರೈತರಿಗೆ ಕೆಲವು ಮಧ್ಯವರ್ತಿಗಳಿಂದ ಮಾರುಕಟ್ಟೆ ಸೌಲಭ್ಯ ಸಿಗದೆ ಆಗುವ ಶೋಷಣೆಯನ್ನು ತಪ್ಪಿಸಬೇಕು. ಕರಾವಳಿ ಜಿಲ್ಲೆಗಳಲ್ಲಿ ಹವಾಮಾನವೇ ಬೇರೆ, ಕೃಷಿ ವಿಧಾನವೇ ಬೇರೆ. ಅದಕ್ಕಾಗಿ ಅಲ್ಲಿಗೆ ಒಂದು ಪ್ರತ್ಯೇಕ ಕೃಷಿ ವಿಶ್ವವಿದ್ಯಾಲಯ ಬೇಕೆಂದು ನಾನು ಒತ್ತಾಯ ಮಾಡುತ್ತೇನೆ ಮತ್ತು ಕೃಷಿ ಸಹಾಯಕರ ತರಬೇತಿ ಕೇಂದ್ರವನ್ನು ಅಲ್ಲಿ ತೆರೆಯಬೇಕು. ಉದಾಹರಣೆಗೆ ನಮ್ಮ ಕಡೆ ಕೃಷಿ ಸಹಾಯಕರಾಗಿ ಬಂದಿರುವವರು ಹೆಚ್ಚಾಗಿ ಧಾರವಾಡ ಮತ್ತು ಬಿಜಾಪುರದವರು. ಅವರಿಗೆ ಜೋಳ, ನೆಲಗಡಲೆ ಬೆಳೆಯುವ ಪದ್ಧತಿ ಗೊತ್ತಿದೆ ಮತ್ತೆ ಬೇರೆ ಗೊತ್ತಿಲ್ಲ. ಆದ್ದರಿಂದ ಒಂದು ಕೇಂದ್ರ ಮಾಡಿ ಎಂದು ಹೇಳುತ್ತೇನೆ. ಅನಂತರ ಬೆಳೆ ವಿಮಾ ಯೋಜನೆ ಲಾಭ ಎಲ್ಲರಿಗೂ ಸಿಗುವಂತಾಗಬೇಕು. ತೋಟಗಾರಿಕೆಯಲ್ಲಿ ಒಂದು ವಿಷಯ ಹೇಳುತ್ತೇನೆ. ಅಧಿಕಾರಿಗಳು ಸೂಕ್ತ ಮಾರ್ಗದರ್ಶನ ಮಾಡಿದರೂ ಕೂಡ 10 ಅಡಿ ದೂರದಲ್ಲಿ ತೆಂಗಿನ ಗಿಡ ನೆಡುತ್ತಿದ್ದಾರೆ. ಆದರೆ ಸಂಶೋಧನೆ ಪ್ರಕಾರ 25-30 ಅಡಿ ಅಂತರ ಇರಬೇಕು. ಈಗ ಮರ ಕಡಿಯುವುದು ಅಪರಾಧ. ಅದೇ ರೀತಿ ಸರಿಯಾಗಿ ನೆಡದಿದ್ದರೆ ಅದೂ ಅಪರಾಧವೆಂದು ಮಾಡಬೇಕು. ಕಾನೂನು ರಚಿಸಿ ಇದಕ್ಕೆ.

ಇನ್ನು ಪೋಲೀಸ್ ಇಲಾಖೆಯಲ್ಲಿ ರಾಜಕೀಯ, ಮತೀಯವಾದ, ಜಾತೀಯ ತುಳಿತ ಧಮನದ ಅಪರಾಧಗಳು ಆಗುತ್ತಿರುತ್ತವೆ. ಆಗ ದೂರು ಬರುತ್ತದೆ. ತುಂಬಾ ಸೆನ್ಸಿಟೀವ್ ಇಷ್ಯೂ ಇದು ಎಲ್ಲಾ ಸಂದರ್ಭದಲ್ಲೂ ಪೋಲೀಸ್‌ರ ಮೇಲೆ ಬರುತ್ತದೆ. ನನಗೆ ಅನಿಸಿದಂತೆ ಅವರಿಗೆ ವಿಶೇಷ ತರಬೇತಿ ಕೊಡಬೇಕು. ಶಾಂತಿಪಾಲನೆಯ ಜೊತೆಗೆ ಮನಃಪರಿವರ್ತನೆಯಾಗುವಂತಾಗಬೇಕು. ಇದರ ಬಗ್ಗೆ ಸಂಶೋಧನೆ ನಡೆಯಬೇಕು. ಧಾರ್ಮಿಕ ಪೀಠಗಳು ಈ ಕೆಲಸ ಮಾಡದೆ ತನ್ನ ಗಮನವನ್ನೆಲ್ಲ ಸೀಟುಶುಲ್ಕದ ಕಡೆ ಇಟ್ಟಿರುವುದರಿಂದ ಬೇರೆ ಯಾವುದಾದರೂ ವ್ಯವಸ್ಥೆ ಮಾಡಬೇಕು. ಕೊನೆಯದಾಗಿ ಅನುಭವಿಗಳೂ, ದಕ್ಷರೂ ತುಂಬಿರುವ ಸಚಿವ ಸಂಪುಟದಿಂದ ಜನತೆಯ ಆಶೋತ್ತರಗಳಿಗೆ ಸ್ಪಂದಿಸುವ ಕೆಲಸ ಆಗಲಿ ಎಂದು ಕೇಳಿಕೊಳ್ಳುತ್ತೇನೆ.

† ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ) :- ಅಧ್ಯಕ್ಷರೇ, ಮುಖ್ಯಮಂತ್ರಿಗಳೂ ಸೇರಿ ನಾಲ್ಕು ಜನ ಮಂತ್ರಿಗಳು ಮಂಡಿಸಿರುವ ಬೇಡಿಕೆಗಳನ್ನು ಬೆಂಬಲಿಸಿ ನನಗೆ ನೀವು ಕೊಟ್ಟಿರುವ 10 ನಿಮಿಷಗಳಲ್ಲಿ ನನ್ನ ಮಾತು ಮುಗಿಸಲು ಪ್ರಯತ್ನಿಸುತ್ತೇನೆ. ರೈತನ ಕಷ್ಟ ಅಷ್ಟಿಷ್ಟಲ್ಲ. ಯಾವುದೇ ಸರ್ಕಾರ ಆಗಲಿ, ಎಷ್ಟೇ ಸದಸ್ಯಬಲವಿರಲಿ ಎಲ್ಲರೂ ಸಹ ರೈತನ ಹೆಸರು ಹೇಳಿಕೊಂಡೇ ಬರುತ್ತೇವೆ. ಆದರೆ ಇಲ್ಲಿಗೆ ಬಂದ ಮೇಲೆ ಅವನನ್ನು ಮರೆಯುತ್ತೇವೆ. ಬಹುಶಃ ಅವನು ಪಡೆದುಕೊಂಡು ಬಂದದ್ದೇ ಅಷ್ಟಿರಬೇಕು. ತೋಟಗಾರಿಕೆಯಲ್ಲಿ ಏನಾಗಿದೆ ಎಂದರೆ ಹತ್ತಾರು ಎಕರೆ ಜಮೀನು ಇಟ್ಟುಕೊಂಡಿದ್ದರೂ ಮಳೆಬೆಳೆ ಬಂದಿದ್ದರೂ ಸಹ ಹಳ್ಳಿಗಳಲ್ಲಿ ನೀರು ಹರಿಯುವಂತಹ ಕಡೆ ಏತ ಹಾಕಿಕೊಂಡು ತರಕಾರಿ ಬೆಳೆಯುವ ವ್ಯವಸ್ಥೆ ರೂಪಿಸಿಕೊಂಡಿದ್ದರೂ ಸಹ ಮಾರುಕಟ್ಟೆ ಸೌಲಭ್ಯ ಇಲ್ಲದೆ ರೈತ ತೊಳಲಾಡುವ ಪರಿಸ್ಥಿತಿಯನ್ನು ನೋಡಿದ್ದೇವೆ. 21ನೇ ಶತಮಾನಕ್ಕೆ ಹೋಗಬೇಕೆನ್ನುತ್ತೇವೆ. ಆದಕ್ಕಾಗಿ ಕೋಟ್ಯಾಂತರ ರೂಪಾಯಿ ಖರ್ಚು ಮಾಡಿದರೂ ಆಗುವುದಿಲ್ಲವೆಂದು ಕಾಣುತ್ತದೆ. ಮೊನ್ನೆ ನಾನು ಲಾಲ್‌ಬಾಗ್‌ಗೆ ಹೋಗಿದ್ದೆ. ಅಧಿಕಾರಿಗಳು ಅಲ್ಲಿ ಚೆನ್ನಾಗಿ ವ್ಯವಸ್ಥೆ ಮಾಡಿದ್ದಾರೆ. ಈಗ ಹಣ್ಣಿನ ಸೊಸೈಟಿಗಳನ್ನು ಮಾಡುತ್ತಿದ್ದಾರೆ. ಬೆಂಗಳೂರು ನಗರದಲ್ಲಿ ಸುಮಾರು 100-120 ಹಣ್ಣಿನ ಅಂಗಡಿಗಳನ್ನು ಮಾಡಿ, ಈ ತರಕಾರಿ ಹಣ್ಣು ಹಂಪಲುಗಳನ್ನು ಏನು ರೈತರು ಬೆಳೆಯುತ್ತಾರೆ, ಅದನ್ನು ನೇರವಾಗಿ ಈ ಸ್ಟಾಲ್‌ಗಳ ಮೂಲಕ ವಿತರಣೆ ಮಾಡತಕ್ಕಂಥ ಕೆಲಸವನ್ನು ಬಹಳ ವ್ಯವಸ್ಥಿತವಾಗಿ ಮಾಡುತ್ತಿದ್ದಾರೆ. ಇದನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಒಂದನ್ನು ನಾನು ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುವುದೇನೆಂದರೆ ಆದರಲ್ಲಿಯೂ ಸಹಿತ ಕೃಷಿ ಸಚಿವರು ರೈತಾಪಿ ವರ್ಗದಿಂದ ಬಂದಿರತಕ್ಕಂಥವರು, ರೈತರ ಮೇಲೆ ಬಹಳ ಕೃಪೆ ಇರತಕ್ಕಂಥವರು. ಆದುದರಿಂದ ಈ ಸಂದರ್ಭದಲ್ಲಿ ರೈತರ ಬೆಳೆಗೆ ಏನು ಸ್ಟಾಲ್‌ಗಳು ಇದೆ, ಅದನ್ನು ವ್ಯವಸ್ಥಿತವಾಗಿ ಮಾಡಬೇಕು. ಉದಾಹರಣೆಗೆ ಹೇಳುವುದಾದರೆ ಲಾರಿಗಟ್ಟಲೆ ನಾಗಮಂಗಲದಿಂದ ಹೂಕೋಸು, ಎಲೆಕೋಸು ದಿವಸಕ್ಕೆ 25 ಲಾರಿ ಹೋಗುತ್ತದೆ, ಎಲ್ಲಿಗೆ ಹೋಗುತ್ತದೆ ಎಂದರೆ ನಿಜವಾಗಿ ಅವರುಗಳಿಗೆ ಮಾರುಕಟ್ಟೆ ಇಲ್ಲದೆ ತಮಿಳುನಾಡಿಗೆ ಹೋಗಿ ಇವತ್ತು ತಲೆಯನ್ನು ಕೊಡುತ್ತಿದ್ದಾರೆ. ನಮ್ಮ ರೈತರ ಜುಟ್ಟು ತಮಿಳುನಾಡಿನ ದಳ್ಳಾಳಿಗಳ ಕೈಯಲ್ಲಿ ಇದೆ. ಇಲ್ಲಿ ರೈತ ಬೆಳೆಯತಕ್ಕಂಥದ್ದಕ್ಕೆ ಹಣ ಇಲ್ಲ, ತಿನ್ನುವ ಹಾಗೂ ಇಲ್ಲ. ಮಧ್ಯವರ್ತಿಗಳು ಇದರಿಂದ ಹಣವನ್ನು ಮಾಡುತ್ತಿದ್ದಾರೆ. ಆದುದರಿಂದ ಇದಕ್ಕೆ ವ್ಯವಸ್ಥಿತವಾದಂಥ ಮಾರುಕಟ್ಟೆಯನ್ನು ತಮ್ಮ ಕಾಲದಲ್ಲಿ ಆಗಬೇಕು. ಈ ರೀತಿ ಸ್ಟಾಲ್‌ಗಳನ್ನು ಹೆಚ್ಚು ಮಾಡಬೇಕು, ಇಡೀ ರಾಜ್ಯದಲ್ಲಿ ಅಲ್ಲ, ಜಿಲ್ಲಾ ಕೇಂದ್ರಗಳಲ್ಲಿ, ತಾಲ್ಲೂಕು ಕೇಂದ್ರಗಳಲ್ಲಿ ಈ ರೀತಿ ಸ್ಟಾಲ್‌ಗಳನ್ನು ಮಾಡಿ ಸ್ಟಾಲ್‌ಗಳ ಮೂಲಕ ವಿತರಣೆ ಆಗತಕ್ಕಂಥದ್ದಕ್ಕೆ ವ್ಯವಸ್ಥೆ ಮಾಡಬೇಕು ಎಂದು ಹೇಳಿ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಅಧ್ಯಕ್ಷರು ತಾವು ಟೈಮ್ ಜಾಸ್ತಿ ಕೊಡುವುದಿಲ್ಲ ಎಂದು ಹೇಳಿದ್ದೀರಿ. ಈಗ ತೆಂಗಿನ ಕಾಯಿ ವಿಚಾರ, ಅಧ್ಯಕ್ಷರೇ, ಕೊಬ್ಬರಿ ವಿಚಾರಕ್ಕೆ ಬರುತ್ತಿದ್ದೇನೆ. ಕೊಬ್ಬರಿ ವಿಚಾರದಲ್ಲಿ ಸದನ ಪ್ರಾರಂಭವಾದಂಥ ಸಂದರ್ಭದಲ್ಲಿ ಕೆಲವು ಸ್ನೇಹಿತರುಗಳು ಈ ವಿಚಾರವನ್ನು ಸದನದಲ್ಲಿ ಪ್ರಸ್ತಾಪ ಮಾಡಿದಾಗ 3500 ರೂಪಾಯಿ ಇದ್ದಂಥ ಒಂದು ಕ್ವಿಂಟಾಲ್ ಕೊಬ್ಬರಿ ಇವತ್ತು ಒಂದೇ ಸಾರಿ 1300 ರೂಪಾಯಿಯಿಂದ ಹಿಡಿದು 1500 ರೂಪಾಯಿಗಳಿಗೆ ಬರಬೇಕಾದರೆ ಏನು ಕಾರಣ ಎನ್ನತಕ್ಕಂಥದ್ದನ್ನು ತಮ್ಮ ಬಳಿ ಪ್ರಸ್ತಾಪ ಮಾಡಿದ್ದೇವೆ. ಇದು ಆದ ಮೇಲೆ ಸಭೆಯನ್ನು ಕರೆದುಸಭೆಯಲ್ಲಿ ಕೂಡಾ ಪ್ರಸ್ತಾಪ ಮಾಡಿದೆವು. ಇದಕ್ಕೆ ಏನಾಗಿದೆ ಎಂದರೆ ಮಾರುಕಟ್ಟೆ ಅಧಿಕಾರಿಗಳು, ಸೇಲ್ಸ್‌ಟ್ಯಾಕ್ಸ್, ಇನ್‌ಕಂ ಟ್ಯಾಕ್ಸ್ ಅಧಿಕಾರಿಗಳು ಶಾಮಿಲಾಗಿ ತಿಪಟೂರು ಅರಸೀಕೆರೆ ಮಾರುಕಟ್ಟೆಯಲ್ಲಿ ಇವತ್ತು ರೈತರನ್ನು ಹಗಲು ದರೋಡೆ ಮಾಡತಕ್ಕಂಥ ರೀತಿಯಲ್ಲಿ ವರ್ತಕರು ಮಾಡುತ್ತಿದ್ದಾರೆ, ರೈತರನ್ನು ಸಂಪೂರ್ಣವಾಗಿ ಮುಗಿಸುವುದಕ್ಕೆ ವ್ಯವಸ್ಥಿತವಾದ ಒಂದು ಸಂಚು ನಡೆಯುತ್ತಿದೆ ಎಂದು ಹೇಳಿದರೆ ತಪ್ಪಾಗುವುದಿಲ್ಲ. ತಾವು ಕೂಡ ಈ ಸದನದಲ್ಲಿ ಭರವಸೆಯನ್ನು ಕೊಟ್ಟಿದ್ದಿರಿ. ಕೊಬ್ಬರಿಗೆ ಎರಡು ಸಾವಿರದ ಐದು ನೂರು ರೂಪಾಯಿ ಬೆಂಬಲ ಬೆಲೆಯನ್ನು ತಾವು ಘೋಷಣೆ ಮಾಡಿದಿರಿ. ಸಿರಿಕಲ್ಚರ್ ಬಗ್ಗೆ ನಮ್ಮ ರಾಜ್ಯದಲ್ಲಿ ಹೆಚ್ಚು ಸಿರಿಕಲ್ಚರನ್ನು ಬೆಳೆಯುತ್ತಿದ್ದೇವೆ. ಅದಕ್ಕೂ ಸಹಿತ ತಾವು ಒಂದು ಇಲಾಖೆಯನ್ನು ಮಾಡಿ ಅದಕ್ಕೆ ಒಂದು ಖಾತೆಯನ್ನೇ ಮಾಡಿದ್ದೀರಿ. ತೆಂಗಿಗೂ ಸಹಿತ ಒಂದು ಅಭಿವೃದ್ಧಿ ಮಂಡಲಿಯನ್ನು ಕೇಂದ್ರ ಸರ್ಕಾರದಿಂದ ಅಲ್ಲ,

ರಾಜ್ಯಸರ್ಕಾರದಲ್ಲಿಯೂ ಒಂದು ಅಭಿವೃದ್ಧಿ ಮಂಡಲಿಯನ್ನು ಮಾಡಬೇಕು ಎಂದು ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇದಾದ ಮೇಲೆ ಇಲ್ಲಿ ನಮ್ಮ ಸಚಿವಾಲಯ ಮತ್ತು ಆಡಳಿತದಲ್ಲಿ ಬರತಕ್ಕಂಥ ವಿಚಾರದಲ್ಲಿ ಕರ್ನಾಟಕ ಭವನ ದೆಹಲಿಯಲ್ಲಿದೆ. ಈ ಕರ್ನಾಟಕ ಭವನದಲ್ಲಿ ಅದರ ಬಗ್ಗೆ ಎರಡು ಮಾತುಗಳನ್ನು ತಮ್ಮ ಮುಂದೆ ನಿವೇದನೆ ಮಾಡಿಕೊಳ್ಳಬೇಕು ಎಂದು ಇದ್ದೇನೆ. ಕರ್ನಾಟಕ ಭವನ ದೆಹಲಿಯಲ್ಲಿದೆ. ಸರ್ಕಾರವನ್ನು ಏನು ನಡೆಸುತ್ತಿದ್ದಾರೆ, ಅವರೆಲ್ಲಾ ದೆಹಲಿಗೆ ಹೋಗಬೇಕಾಗುತ್ತದೆ. ಅಲ್ಲಿಯೇ ಉಳಿದುಕೊಳ್ಳಬೇಕಾಗುತ್ತದೆ. ಆದರೆ ಎಷ್ಟು ಜನ ದೆಹಲಿಯಲ್ಲಿ ನಮ್ಮ ಕರ್ನಾಟಕದ ಭವನದಲ್ಲಿ ಕನ್ನಡದ ಅಧಿಕಾರಿಗಳಿದ್ದಾರೆ? ಕನ್ನಡದ ಮಣ್ಣಿನ ಮಕ್ಕಳಿಗೆ ದೆಹಲಿಯಲ್ಲಿರತಕ್ಕಂಥ ಎಷ್ಟು ಜನರಿಗೆ ಕೆಲಸವನ್ನು ಕೊಟ್ಟಿದ್ದಾರೆ ಎನ್ನತಕ್ಕಂಥದ್ದು ನನ್ನ ಪ್ರಶ್ನೆ. ಇವತ್ತು ಅಲ್ಲಿರತಕ್ಕಂಥ ಏನು ಒಬ್ಬ ದೊಡ್ಡ ಅಧಿಕಾರಿಯಿದ್ದಾರೆ, ಅವರು ಕರ್ನಾಟಕದವರಲ್ಲ. ಪಂಜಾಬ್‌ನವರು. ಇವತ್ತು ಏನು ಉನ್ನತ ಅಧಿಕಾರಿಗಳಿದ್ದಾರೆ, ಕರ್ನಾಟಕ ಭವನದಲ್ಲಿ, ನೀವುಗಳೆಲ್ಲಾ ಹೋದಾಗಲೆಲ್ಲಾ, ಮಂತ್ರಿವರ್ಯರು, ಶಾಸಕರುಗಳು ಹೋದಾಗ, ಅಧಿಕಾರಿಗಳು ಹೋದಾಗ ಸುರಕ್ಷಿತವಾಗಿ ದೆಹಲಿಯಲ್ಲಿ ಇಟ್ಟುಕೊಂಡು ಕಳುಹಿಸುತ್ತಾರೆ. ಅವರು ನಮ್ಮ ರಾಜ್ಯದವರಲ್ಲ, ಪಂಜಾಬ್‌ನವರು, ಅಸ್ಸಾಂನವರು ಅಲ್ಲಿ ರಾಜ್ಯಭಾರವನ್ನು ಮಾಡುತ್ತಿದ್ದಾರೆ, ಯಾರಿಗೆ ನಾಲ್ಕು ಕೆಲಸಗಳನ್ನು ಕೊಡಬೇಕು ಎಂದು ಹೇಳುತ್ತೇವೆ, ಕರ್ನಾಟಕದವರಿಗೆ ಕೆಲಸ ಕೊಡಲಿಕ್ಕೆ ಇಚ್ಛೆ ಇಲ್ಲ, ಇವತ್ತು ಎಲ್ಲಾ ಕೆಲಸವನ್ನು ಕೊಡತಕ್ಕಂಥದ್ದು ನೂರಕ್ಕೆ ಅರವತ್ತು ಭಾಗ ಕೆಲಸವನ್ನು ಕೊಡುತ್ತಿರತಕ್ಕಂಥದ್ದು ಪಂಜಾಬ್‌ನವರಿಗೆ, ಅಸ್ಸಾಂನವರಿಗೆ, ಉತ್ತರ ಇಂಡಿಯಾದವರಿಗೆ ಕೆಲಸಗಳನ್ನು ಕೊಡುತ್ತಿದ್ದಾರೆ. ಇವತ್ತು ನಮ್ಮವರು ಹೀಗೆ ಒಂದು ಕೆಲಸ ತೆಗೆದುಕೊಳ್ಳುವುದಕ್ಕೆ ಯೋಗ್ಯತೆ ಇಲ್ಲದೇ ಇರತಕ್ಕಂಥ ಪರಿಸ್ಥಿತಿಯಲ್ಲಿ ನಮ್ಮವರಿಗೆ ಕೆಲಸವನ್ನು ಕೊಡದೇ ಅವರಿಗೆ ಕೊಡುತ್ತಿರತಕ್ಕಂಥದ್ದು ಇದು ಖಂಡನೀಯ. ಕನ್ನಡದ ಮಕ್ಕಳಿಗೆ ಕೆಲಸವನ್ನು ಕೊಡತಕ್ಕಂಥ ವಿಚಾರದಲ್ಲಿ ತಾವು ತೀವ್ರವಾಗಿ ಯೋಚನೆ ಮಾಡಬೇಕು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ನಮ್ಮ ಸರ್ಕಾರ, ವೀರೇಂದ್ರ ಪಾಟೀಲರ ಸರ್ಕಾರ ಎಕ್ಸೈಜ್ ಲಾಬಿಗೆ ಬೀಳಲಿಲ್ಲ ಯಾವುದೇ ಒಂದು ಲಾಬಿಗೆ ಬೀಳಲಿಲ್ಲ.

ಶ್ರೀ ರಮಾನಾಥ ರೈ:- ಕರ್ನಾಟಕದಿಂದ ಹೋದ ಶಾಸಕರುಗಳಿಗೆ ರೂಮನ್ನು ಕೊಡಲಿಕ್ಕೆ ಕಷ್ಟ ಇದೆ, ಅವರು ಕೆಲಸವನ್ನು ಎಲ್ಲಿ ಕೊಡುತ್ತಾರೆ?

ಶ್ರೀ ಎಲ್.ಆರ್. ಶಿವರಾಮೇಗೌಡ:- ಈ ಒಂದು ಸರ್ಕಾರ ಎಕ್ಸೈಜ್ ಲಾಬಿಗೆ ಬೀಳಲಿಲ್ಲ, ಹಣದ ಲಾಬಿಗೆ ಬೀಳಲಿಲ್ಲ,*** ಯಾವ ಒಂದು ಲಾಬಿಗೂ ಬೀಳಲಿಲ್ಲ. ಆದರೂ ಸಹಿತ ಐ.ಎ.ಎಸ್ ಅಧಿಕಾರಿಗಳ ಲಾಬಿಗೆ ಬಿದ್ದು ನಮ್ಮ ಸರ್ಕಾರ ಚೆಲ್ಲಾಡಿ ಹೋಗಿದೆ.

ಶ್ರೀ ವಾಟಾಳ್ ನಾಗರಾಜ್:- ಒಂದು ವಿಚಾರ ಮಾನ್ಯ ಅಧ್ಯಕ್ಷರೇ.

ಶ್ರೀ ಎಲ್.ಆರ್. ಶಿವರಾಮೇಗೌಡ:- ನಾನು ಯೀಲ್ಡ್ ಆಗಿಲ್ಲ ಎಂದೆ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೇ *** ಅಂದರೆ ಅದು ಇರಬಹುದು. ಗೋಪ್ಯವಾಗಿ ಇರಬಹುದು. ಈ ಸಭೆಯಲ್ಲಿ ಹೆಂಗಸರ ಲಾಬಿ ಅಂದರೆ, ಆ ತರಹ ಮಾತನಾಡುವುದು ಬೇಡ...

ಅಧ್ಯಕ್ಷರು:- ಸಭೆಯಲ್ಲಿ ಹಾಗೆಲ್ಲಾ ಮಾತನಾಡಬಾರದು.

ಶ್ರೀ ಎಲ್.ಆರ್. ಶಿವರಾಮೇಗೌಡ:- ತಪ್ಪು ಆಗಿದ್ದರೆ ನಾನು ವಾಪಸ್ ತೆಗೆದುಕೊಳ್ಳುತ್ತೇನೆ. ಕೆಲವು ಲಾಬಿಗಳು ಇದ್ದಾವೆ..

ಅಧ್ಯಕ್ಷರು:- ಬಾಕಿ ಎಲ್ಲಾ ಲಾಬಿಗಳು ಇರಲಿ, ಹೆಂಗಸು ಎನ್ನುವುದು ಬೇಡ.

ಶ್ರೀ ಎಲ್.ಆರ್. ಶಿವರಾಮೇಗೌಡ:- ನಾನು ವಾಪಸ್ ತೆಗೆದುಕೊಳ್ಳುತ್ತೇನೆ. ನಾನು ಯಾಕೆ ಇದನ್ನು ಹೇಳಿದ್ದೇನೆ ಅಂದರೆ ನಾನು ಎಲ್ಲಾ ಕಡೆ ಇವರ ಚಿತಾವಣೆ ನೋಡಿದ್ದೇನೆ..

ಅಧ್ಯಕ್ಷರು:- ಕೊಬ್ಬರಿ ಬೆಲೆಗೂ ಐ.ಎ.ಎಸ್ ಆಫೀಸರ್‌ಗೂ ಏನು ಕೆಲಸ..

*** ಅಧ್ಯಕ್ಷರ ಆದೇಶದ ಮೇರೆಗೆ ತೆಗೆದುಹಾಕಲಾಗಿದೆ

ಶ್ರೀ ಎಲ್.ಆರ್. ಶಿವರಾಮೇಗೌಡ:- ನಾನು ಕರ್ನಾಟಕ ಭವನದ ವಿಚಾರದಲ್ಲಿ ಹೇಳುತ್ತಿದ್ದೇನೆ. ಏಕೆ ಈ ಮಾತನ್ನು ಹೇಳಿದ್ದೇನೆ ಅಂದರೆ ಐಎಎಸ್ ಆಫೀಸರ್ ಬಹಳ ವ್ಯವಸ್ಥಿತವಾಗಿ ಕಂಟ್ರೋಲ್ ಮಾಡುತ್ತಾರೆ. ಗುಲ್ಬರ್ಗಾ ಜಿಲ್ಲಾ ಪರಿಷತ್‌ನಲ್ಲಿ ಕಳೆದ ಎಂಟು ದಿವಸಗಳ ಹಿಂದೆ ಗ್ರಾಮೀಣಾಭಿವೃದ್ಧಿ ಸಚಿವರನ್ನು ನಮ್ಮ ಪಕ್ಷದ ಸದಸ್ಯರೇ ತರಾಟೆಗೆ ತೆಗೆದುಕೊಂಡಿರುವುದನ್ನು ನಾವೆಲ್ಲಾ ನೋಡಿದ್ದೇವೆ. ಗುಲ್ಬರ್ಗಾ ಜಿಲ್ಲಾ ಪರಿಷತ್‌ನಲ್ಲಿ ಒಂದೂವರೆ ಕೋಟಿ ರೂಪಾಯಿ ಭ್ರಷ್ಟಾಚಾರ ನಡೆದಿರತಕ್ಕದ್ದನ್ನು ನೇರವಾಗಿ ಆಪಾದನೆ ಒಳಗಾಗಿರತಕ್ಕ ಒಬ್ಬ ಅಧಿಕಾರಿಯನ್ನು ಯಾವುದೇ ಕಾರೂ, ಭೇರೂ ಇಲ್ಲದೆ ಜಾಗಕ್ಕೆ ಹಾಕಬೇಕು. ನೀವು ಅವನಿಗೆ ಪ್ರೊಮೋಷನ್ ಕೊಟ್ಟು ದೇಶದ ಕೇಂದ್ರ ಪ್ರದೇಶವಾದ ದೆಹಲಿಯಲ್ಲಿ ಅವನಿಗೆ ಅವಕಾಶ ಕೊಟ್ಟಿದ್ದೀರಿ, ಇದು ಸರಿಯಲ್ಲ. ಇದು ನಡೆದಿದೆ. ಇಂತಹ ಭ್ರಷ್ಟ ಅಧಿಕಾರಿಗಳು ಏನು ಇದ್ದಾರೆ, ನಾನು ಎಲ್ಲರೂ ಭ್ರಷ್ಟರು ಎಂದು ಹೇಳುವುದನ್ನು ಒಪ್ಪುವುದಿಲ್ಲ. ಬಹಳ ಪ್ರಾಮಾಣಿಕರೂ ಇದ್ದಾರೆ. ಜನರ ಸಂಕಷ್ಟಗಳನ್ನು ಅರಿತಿರತಕ್ಕವರೂ ಇದ್ದಾರೆ. ಅಷ್ಟೇ ಬಹಳ ಭ್ರಷ್ಟರೂ ಇದ್ದಾರೆ. ಅಂತಹವರ ಬಗ್ಗೆ ನೀವು ಯಾರಿಗೂ ಹೆದರಬೇಕಾದ ಅವಶ್ಯಕತೆ ಇಲ್ಲ. ಸಿಂಧ್ಯಾರವರೆ, ಚಂದ್ರೇಗೌಡರೆ, ಅವರು ಏನು ಮಾಡಿದರೂ ಈ ಸರ್ಕಾರವನ್ನು ಅಲ್ಲಾಡಿಸುವುದಕ್ಕೆ ಆಗುವುದಿಲ್ಲ. ಆದ್ದರಿಂದ ನೀವು ಬಲವಾಗಿ ಈ ಲಾಬಿಯನ್ನು ಹೋಗಲಾಡಿಸಿ... ತಾವು ನನ್ನ ಬಗ್ಗೆ ಅನುಕಂಪ ತೋರಿಸಿ..

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಸದಸ್ಯರು ಸಿಂಧ್ಯಾರವರು, ಚಂದ್ರೇಗೌಡರು ಎಂದು ಹೇಳುತ್ತಿದ್ದಾರೆ. ಅವರದ್ದು ಯಾವ ಸರ್ಕಾರ ಇದೆ ಎಂದು ಹೇಳುತ್ತಿದ್ದಾರೆ. ಇವರಿಗೆ ಯಾವಾಗಲೂ ಸಹ ಅವರನ್ನು ಬಯ್ಯುವುದೇ ಅಭ್ಯಾಸ ಆಗಿದೆ..

ಶ್ರೀ ಎಲ್.ಆರ್. ಶಿವರಾಮೇಗೌಡ:- ಅವರೇ ಸುಮ್ಮನೇ ಕುಳಿತಿದ್ದಾರೆ. ನೀವು ಏಕೆ ಅವರಿಂದ ಪವರ್ ಆಫ್ ಅಟಾರ್ನಿ ತೆಗೆದುಕೊಳ್ಳುತ್ತೀರಿ... ಇನ್ನು ಒಂದೇ ಅಕ್ಷರ ಹೇಳಿಬಿಡುತ್ತೇನೆ.

ಅಧ್ಯಕ್ಷರು:- ನೀವು ಅನುಕಂಪ ತೋರಿಸಿದ್ದಾಯಿತು. ಅದಕ್ಕಾಗಿ ಧನ್ಯವಾದಗಳನ್ನು ಸಲ್ಲಿಸಿದ್ದು ಆಯಿತು. ವಂದನಾರ್ಪಣೆ ಆದ ಮೇಲೆ ಮತ್ತೆ ಮಾತನಾಡುವುದು ಬೇಡ...

ಶ್ರೀ ಎಲ್.ಆರ್. ಶಿವರಾಮೇಗೌಡ:- ಇನ್ನು ಒಂದೇ ಒಂದು ವಿಷಯ ಹೇಳುತ್ತೇನೆ...

ಅಧ್ಯಕ್ಷರು:- ನಾನು ಅಗ್ರಿಕಲ್ಚರ್ ಮಿನಿಸ್ಟರ್ ಅವರನ್ನು ಕರೆಯುವುದಕ್ಕೆ ಮುನ್ನ ಅವರು ರಿಪ್ಲೈ ಪ್ರಾರಂಭ ಮಾಡುವುದಕ್ಕೆ ಮುನ್ನ ಒಂದು ರೂಲಿಂಗ್ ಕೊಡುತ್ತೇನೆ. ಕ್ಷಮಿಸಬೇಕು. ಇದನ್ನು ಕನ್ನಡಕ್ಕೆ ಭಾಷಾಂತರ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಈ ರಿಪೋರ್ಟ್ ನನ್ನ ಕೈಗೆ 11 ಗಂಟೆಗೆ ಕೈಸೇರಿತು. ಆದ್ದರಿಂದ ರೂಲಿಂಗ್ ಇಂಗ್ಲೀಷ್‌ನಲ್ಲಿದೆ.

Ruling by the Chair

Some of the Hon'ble Members have given notice under Rule 68 of Rules of Procedure and Conduct of Business in the Legislative Assembly for raising discussion for short duration on urgent matter of public importance viz., situation araising out of the Report submitted by Justice Kuldeep Singh Commission in respect of allotment of 110 acres of land situated in Hosur sarjapur Road by Bangalore Development Authority. Justice Kuldeep Singh was appointed a Commission by the Central Government under Section 3 of the Commission of Enquiries Act 1952 by Notification dated 28.6.1989. The Commission has submitted an elaborate Report on 22nd June 1990. It may be noted that various issues referred to that Commission are also raised by some of the Members of the 8th Assembly.